ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಗೆಲುವಿನ ರಕ್ತಸಿಕ್ತ ಅಧ್ಯಾಯ
ಈ ವರ್ಷ ಬಾಕ್ಸ್ ಆಫೀಸ್‌ನಲ್ಲಿ
ಭರ್ಜರಿ ಗೆಲುವು ಕಂಡ
ಸಿನಿಮಾಗಳ ಜಾಯಮಾನದತ್ತ
ಒಂದು ನೋಟ...



ಆಳ-ಅಗಲ
ರೈಟ್ ಆಫ್ ಆದ ₹14.56 ಲಕ್ಷ ಕೋಟಿ ಸಾಲ ಏನಾಯಿತು?

ಪ್ರಧಾನಿ ಭೇಟಿಯಾದ ಜೆಡಿಎಸ್ 'ಕುಟುಂಬ' 13

ಸಾಯಿಕೃಷ್ಣ: ತೀವ್ರ ವಿಚಾರಣೆ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
70,865 ▲	21,255 ▲	₹62,480 (ಬೆಂಗಳೂರು) ▼	₹75,100 (ಬೆಂಗಳೂರು) ▼	83.27 ▼

ಗೆರಿಲ್ಲಾ ಯುದ್ಧತಂತ್ರಗಳ ತರಬೇತಿ ಪಡೆದ ಭಯೋತ್ಪಾದಕರಿಂದ ಕೃತ್ಯ • ಪೂಂಛ್ ಬಳಿ ಅಟ್ಟಹಾಸ

ಉಗ್ರರ ದಾಳಿ: 5 ಯೋಧರು ಹುತಾತ್ಮ

ಪ್ರಜಾವಾಣಿ ವಾರ್ತೆ/ ಪಿಟಿಐ

ಪೂಂಛ್/ಜಮ್ಮು: ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಎರಡು ಸೇನಾ ವಾಹನಗಳ ಮೇಲೆ ಭಯೋತ್ಪಾದಕರು ಗುರುವಾರ ಹಠಾತ್ ದಾಳಿ ನಡೆಸಿದ್ದು, ಐವರು ಯೋಧರು ಹುತಾತ್ಮರಾಗಿದ್ದಾರೆ. ಇಬ್ಬರು ಯೋಧರಿಗೆ ಗಾಯಗಳಾಗಿವೆ. ಡೇರಾ ಕಿ ಗಲಿ ಮತ್ತು ಬುಫ್ಲಿಯಾಜ್ ನಡುವೆ ಧಾತ್ಯರ್ ಮೋರ್‌ನಲ್ಲಿ 3.45ರ ಸುಮಾರಿಗೆ ದಾಳಿ ನಡೆದಿದೆ.

ಭಯೋತ್ಪಾದಕರ ಏಕಾಏಕಿ ದಾಳಿಗೆ ಯೋಧರು ತಕ್ಷಣವೇ ಪ್ರತ್ಯುತ್ತರ ನೀಡಿದರು. ಆಗ ನಡೆದ ಚಕಮಕಿಯಲ್ಲಿ ಐದು ಮಂದಿ ಯೋಧರು ಪ್ರಾಣ ಕಳೆದುಕೊಂಡು, ಇಬ್ಬರು ಗಾಯಗೊಂಡರು ಎಂದು ಸೇನಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸ್ಥಳದಲ್ಲಿ ಕಾರ್ಯಾಚರಣೆ ಮುಂದುವರಿದಿದೆ ಎಂದು ಅವರು ಹೇಳಿದ್ದಾರೆ.

ದಾಳಿ ನಡೆದ ಪ್ರದೇಶವನ್ನು ಸೇನೆಯ ಯೋಧರು ಸುತ್ತುವರಿದಿದ್ದಾರೆ, ಭಯೋತ್ಪಾದಕರನ್ನು ಮಣಿಸಲು ಹೆಚ್ಚುವರಿಯಾಗಿ ಯೋಧರನ್ನು ಕಳುಹಿಸಲಾಗಿದೆ ಎಂದು ವರದಿಗಳು ಹೇಳಿವೆ.

ಭಯೋತ್ಪಾದಕ ಸಂಘಟನೆಗಳನ್ನು ಸೇರಿರುವ ಸ್ಥಳೀಯರು ಹಾಗೂ ಬಾಡಿಗೆ ಸೈನಿಕರು ಗೆರಿಲ್ಲಾ ಯುದ್ಧತಂತ್ರಗಳ ತರಬೇತಿ ಪಡೆದುಕೊಂಡಿದ್ದಾರೆ. ಇವರು ಸ್ಥಳೀಯ ಭೌಗೋಳಿಕ ಪ್ರದೇಶವನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಇಲ್ಲಿನ ಭೌಗೋಳಿಕ ಸ್ವರೂಪದ ಬಗ್ಗೆ ಬಹಳ ತಿಳಿವಳಿಕೆ ಇರುವ ಶತ್ರುವನ್ನು ಸೇನಾ ಸಿಬ್ಬಂದಿ ಎದುರಿಸಬೇಕಾಗಿದೆ. ಇಲ್ಲಿನ ಪ್ರದೇಶವು ಶತ್ರುವಿಗೆ ಚೆನ್ನಾಗಿ ತಿಳಿದಿದೆ. ದಟ್ಟ ಅಡವಿಯು ಅವರ ಪಾಲಿಗೆ ಕೋಟೆಯಂತೆ ಆಗಿದೆ' ಎಂದು ಹೇಳಿದರು.



ಬಡಿದಾಡಿರುವ ಸಾಧ್ಯತೆ

ಯೋಧರು ಹಾಗೂ ಭಯೋತ್ಪಾದಕರ ನಡುವೆ ಕೈಕೈ ಮಿಲಾಯಿಸಿ ಬಡಿದಾಟ ನಡೆದಿರುವ ಸಾಧ್ಯತೆಯೂ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭಯೋತ್ಪಾದಕರು ತಾವು ಗುರಿಯಾಗಿಸಿಕೊಂಡಿದ್ದ ಯೋಧರಿಂದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ದಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

- ಭಯೋತ್ಪಾದಕರು ಭಾರಿ ಪ್ರಮಾಣದಲ್ಲಿ ಶಸ್ತ್ರಸಜ್ಜಿತರಾಗಿದ್ದರು. ಭಯೋತ್ಪಾದಕರ ಇರುವಿಕೆಯ ಬಗ್ಗೆ ಖಚಿತ ಮಾಹಿತಿ ಸಿಕ್ಕ ಕಾರಣದಿಂದಾಗಿ ಸೇನೆಯು ಡೇರಾ ಕಿ ಗಲಿ ಪ್ರದೇಶದಲ್ಲಿ ಬುಧವಾರ ರಾತ್ರಿಯಿಂದಲೇ ಕಾರ್ಯಾಚರಣೆ ನಡೆಸುತ್ತಿತ್ತು
- ಅಲ್ಲಿ ಯೋಧರು ಮತ್ತು ಭಯೋತ್ಪಾದಕರ ನಡುವೆ ಎನ್‌ಕೌಂಟರ್ ಕೂಡ ನಡೆದಿತ್ತು. ಹೆಚ್ಚುವರಿ ಸೇನಾ ಸಿಬ್ಬಂದಿ ಆ ಜಾಗಕ್ಕೆ ಒಂದು ಜಿಪ್ಸಿ ಹಾಗೂ ಒಂದು ಟ್ರಕ್‌ನಲ್ಲಿ ತೆರಳುತ್ತಿದ್ದರು
- ಮುಂದಿನಿಂದ ಯಾವ ವಾಹನ ಬರುತ್ತಿದೆ ಎಂಬುದು ಸರಿಯಾಗಿ ಗೊತ್ತಾಗದ ತಿರುವೊಂದರಲ್ಲಿ (ಬ್ಲೈಂಡ್‌ಕರ್ವ್) ವಾಹನಗಳು ಸಾಗುತ್ತಿದ್ದಾಗ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದರು

ಕನಿಷ್ಠ 20ರಿಂದ 25 ಮಂದಿ ಭಯೋತ್ಪಾದಕರು ಸಕ್ರಿಯರಾಗಿದ್ದರು

ಅಡಗುದಾಣ

ಶ್ರೀನಗರ: ರಜೌರಿ–ಪೂಂಛ್ ಪ್ರದೇಶವು 2021ರಿಂದಲೂ ಭಯೋತ್ಪಾದಕ ಚಟುವಟಿಕೆಗಳ ಕೇಂದ್ರವಾಗಿ ಪರಿವರ್ತನೆ ಆಗಿದೆ. ಇಲ್ಲಿ ಸೇನಾ ಯೋಧರ ಮೇಲೆ ದೊಡ್ಡ ಮಟ್ಟದ ದಾಳಿಗಳೂ ನಡೆದಿವೆ. ಕಳೆದ ತಿಂಗಳಲ್ಲಿ ನಡೆದ ಕಾರ್ಯಾಚರಣೆಯೊಂದರಲ್ಲಿ ಐವರು ಯೋಧರನ್ನು ಭಯೋತ್ಪಾದಕರು ಹತ್ಯೆ ಮಾಡಿದ್ದರು. ಪ್ರಾಣ ಕಳೆದುಕೊಂಡ ಯೋಧರಲ್ಲಿ ಇಬ್ಬರು ಕ್ಯಾಪ್ಟನ್‌ಗಳು ಕೂಡ ಸೇರಿದ್ದರು.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನಡೆದ ಎರಡು ದಾಳಿಗಳಲ್ಲಿ ಒಟ್ಟು ಹತ್ತು ಮಂದಿ ಸೈನಿಕರು ಸಾವನ್ನಪ್ಪಿದ್ದರು. ರಜೌರಿ–ಪೂಂಛ್ ಪ್ರದೇಶದಲ್ಲಿ ಕನಿಷ್ಠ 20ರಿಂದ 25 ಮಂದಿ ಭಯೋತ್ಪಾದಕರು ಸಕ್ರಿಯರಾಗಿದ್ದಾರೆ ಎಂದು ಸೇನೆಯ ಉತ್ತರ ವಲಯದ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ ಅವರು ತಿಳಿಸಿದ್ದರು.

ಇಲ್ಲಿ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ನಾಶಪಡಿಸಲು ಸೇನೆಗೆ ಕನಿಷ್ಠ ಒಂದು ವರ್ಷ ಬೇಕಾಗುತ್ತದೆ ಎಂದಿದ್ದರು.





ಪತ್ರಿಕಾಗೋಷ್ಠಿಯಲ್ಲಿ ಕಣ್ಣೀರು ಹಾಕಿದ ವಿನೇಶಾ ಫೋಗಟ್ (ಎಡಚಿತ್ರ) ಕುಸ್ತಿ ಬೂಟುಗಳನ್ನು ಪ್ರದರ್ಶಿಸಿ ವಿದಾಯ ಘೋಷಿಸಿದ ಸಾಕ್ಷಿ ಮಲಿಕ್ –ಪಿಟಿಐ ಚಿತ್ರಗಳು

ಬ್ರಿಜ್‌ಭೂಷಣ್ ಬಣದ ಮೇಲುಗೈಗೆ ಅಸಮಾಧಾನ

ಸಾಕ್ಷಿಯ ವಿದಾಯ ಪ್ರತಿಭಟನೆ

ನವದೆಹಲಿ (ಪಿಟಿಐ): ರಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಕುಸ್ತಿಪಟು ಸಾಕ್ಷಿ ಮಲಿಕ್ ಗುರುವಾರ ಕುಸ್ತಿ ಕ್ರೀಡೆಗೆ ಕಣ್ಣೀರ ವಿದಾಯ ಘೋಷಿಸಿದರು.

ಭಾರತ ಕುಸ್ತಿ ಫೆಡರೇಷನ್‌ಗೆ (ಡಬ್ಲ್ಯುಎಫ್‌ಐ) ಗುರುವಾರ ನಡೆದ ಚುನಾವಣೆಯಲ್ಲಿ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಆಪ್ತ ಸಂಜಯ್ ಕುಮಾರ್ ಸಿಂಗ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದನ್ನು ವಿರೋಧಿಸಿದ ಸಾಕ್ಷಿ ಈ ನಿರ್ಧಾರ ಪ್ರಕಟಿಸಿದರು. ಪತ್ರಿಕಾಗೋಷ್ಠಿ ನಡೆದಿರುವಾಗಲೇ ತಮ್ಮ ಕುಸ್ತಿ ಬೂಟುಗಳನ್ನು ಎತ್ತಿ ಮೇಜಿನ ಮೇಲಿಟ್ಟರು.

ಈ ಸಂದರ್ಭದಲ್ಲಿ ಅವರೊಂದಿಗೆ ಒಲಿಂಪಿಕ್ಸ್ ಪದಕ ವಿಜೇತ ಬಜರಂಗ್ ಪೂನಿಯಾ ಮತ್ತು ಏಷ್ಯನ್ ಗೇಮ್ಸ್ ಪದಕ ಜಯಿಸಿರುವ ವಿನೇಶಾ ಫೋಗಟ್ ಕೂಡ ಹತಾಶರಾಗಿ ಕುಳಿತಿದ್ದರು.

ಡಬ್ಲ್ಯುಎಫ್‌ಐ ಅಧ್ಯಕ್ಷರಾಗಿದ್ದ ಬ್ರಿಜ್ ಭೂಷಣ್ ಅವರು ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ, ಕಳೆದ ಜನವರಿಯಲ್ಲಿ ಆರಂಭವಾಗಿದ್ದ ಪ್ರತಿಭಟನೆಯಲ್ಲಿ ಈ ಮೂವರೂ ಮುಂಚೂಣಿಯಲ್ಲಿದ್ದರು.

15 ನೇ ಪುಟ ನೋಡಿ

ಸಂಜಯ್ ಸಿಂಗ್ ಅಧ್ಯಕ್ಷ

ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ನಿಕಟವರ್ತಿ ಸಂಜಯ್ ಕುಮಾರ್ ಸಿಂಗ್ ಡಬ್ಲ್ಯುಎಫ್‌ಐ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಈ ಮೂಲಕ ಬ್ರಿಜ್ ಭೂಷಣ್ ಮತ್ತೆ ಫೆಡರೇಷನ್ ಮೇಲೆ ಹಿಡಿತ ಸಾಧಿಸಿದಂತಾಗಿದೆ.



ಬ್ರಿಜ್‌ಭೂಷಣ್ ಶರಣ್ ಸಿಂಗ್ (ಎಡ) ಮತ್ತು ಸಂಜಯ್ ಕುಮಾರ್ ಸಿಂಗ್ –ಪಿಟಿಐ ಚಿತ್ರ

ಗುರುವಾರ ನಡೆದ ಮತದಾನದಲ್ಲಿ ಉತ್ತರಪ್ರದೇಶ ಕುಸ್ತಿ ಸಂಸ್ಥೆಯ ಉಪಾಧ್ಯಕ್ಷರಾಗಿರುವ ಸಂಜಯ್ ಸಿಂಗ್ 40 ಮತಗಳನ್ನು ಪಡೆದರೆ, ಅವರ ಪ್ರತಿಸ್ಪರ್ಧಿಯಾಗಿದ್ದ, 2010ರ ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತ ಕುಸ್ತಿಪಟು ಅನಿತಾ ಶೆರಾನ್ 7 ಮತಗಳನ್ನು ಪಡೆದು ಪರಾಭವಗೊಂಡರು. ಆದರೆ, ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಅನಿತಾ ಬಣದಿಂದ ಸ್ಪರ್ಧಿಸಿದ್ದ ಪ್ರೇಮ ಚಂದ್ ಲೋಚಬ್ ಜಯ ಸಾಧಿಸಿದ್ದಾರೆ. ಅವರು ಬ್ರಿಜ್ ಭೂಷಣ್ ಬಣದವರಾದ ಚಂಡೀಗಢ ಕುಸ್ತಿ ಸಂಸ್ಥೆಯ ದರ್ಶನ್ ಲಾಲ್ ಅವರನ್ನು ಮಣಿಸಿದರು.

> **ಬ್ರಿಜ್ ಭೂಷಣ್ ಅವರ ಆಪ್ತ ಡಬ್ಲ್ಯುಎಫ್‌ಐ ಅಧ್ಯಕ್ಷರಾಗಿ ಆಯ್ಕೆ ಆಗಿರುವುದರಿಂದ, ನಾನು ಕುಸ್ತಿ ತ್ಯಜಿಸುತ್ತೇನೆ. ಇಂದಿನಿಂದ ನೀವು ನನ್ನನ್ನು ಕುಸ್ತಿ ಕಣದಲ್ಲಿ ನೋಡುವುದಿಲ್ಲ**
> **ಸಾಕ್ಷಿ ಮಲಿಕ್, (ಪತ್ರಿಕಾಗೋಷ್ಠಿಯಲ್ಲಿ ಗಳಗಳನೇ ಅಳುತ್ತಾ)**

ಅವಧಿಗೆ ಮೊದಲೇ ಅಧಿವೇಶನ ಅಂತ್ಯ

ನವದೆಹಲಿ (ಪಿಟಿಐ): ಸಂಸತ್ತಿನ ಚಳಿಗಾಲದ ಅಧಿವೇಶನವು ನಿಗದಿತ ಅವಧಿಗಿಂತ ಒಂದು ದಿನ ಮೊದಲೇ ಕೊನೆಗೊಂಡಿದ್ದು ಉಭಯ ಸದನಗಳ ಕಲಾಪವನ್ನು ಗುರುವಾರ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

ಈ ಬಾರಿಯ ಅಧಿವೇಶನವು ಗಂಭೀರ ಭದ್ರತಾ ಲೋಪ, 146 ಸಂಸದರ ಅಮಾನತು, ಪ್ರಶ್ನೆ ಕೇಳಲು ಲಂಚ ಪಡೆದ ಪ್ರಕರಣದಲ್ಲಿ ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಅವರ ಉಚ್ಚಾಟನೆಯಂತಹ ಘಟನೆಗಳಿಗೆ ಸಾಕ್ಷಿಯಾಯಿತು.

ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದ ಕಾನೂನುಗಳಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರುವ ಉದ್ದೇಶದಿಂದ ಭಾರತೀಯ ದಂಡ ಸಂಹಿತೆ (ಐಪಿಸಿ), ಅಪರಾಧ ದಂಡಪ್ರಕ್ರಿಯಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯನ್ನು ಬದಲು ಮಾಡುವ ಮೂರು ಮಸೂದೆಗಳನ್ನು ರಾಜ್ಯಸಭೆ ಗುರುವಾರ ಅಂಗೀಕರಿಸಿತು. ಆ ಬಳಿಕ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ಚಳಿಗಾಲದ ಅಧಿವೇಶನವು ಇದೇ 4ರಂದು ಆರಂಭಗೊಂಡಿದ್ದು 22ರವರೆಗೆ (ಶುಕ್ರವಾರದವರೆಗೆ) ನಿಗದಿಯಾಗಿತ್ತು.

ಲೋಕಸಭೆಯಲ್ಲಿ ಗುರುವಾರ ಮತ್ತೆ ಮೂರು ಸಂಸದರನ್ನು ಅಮಾನತು ಮಾಡಲಾಗಿದ್ದು ಸಂಸತ್ತಿನ ಕೆಳಮನೆಯಲ್ಲಿ ಅಮಾನತುಗೊಂಡ ಸದಸ್ಯರ ಸಂಖ್ಯೆ ದಾಖಲೆಯ 100ಕ್ಕೆ ತಲುಪಿತು. ಲೋಕಸಭೆಯಲ್ಲಿ 97 ಸಂಸದರನ್ನು ಅಮಾನತು ಮಾಡಲಾಗಿದ್ದು, ಮೂವರನ್ನು ಹಕ್ಕುಬಾಧ್ಯತಾ ಸಮಿತಿ ವರದಿ ಸಲ್ಲಿಕೆಯಾಗುವವರೆಗೆ ಸದನದಿಂದ ಹೊರಹಾಕಲಾಗಿದೆ.

ಲೋಕಸಭೆಯಲ್ಲಿ ಕಾಂಗ್ರೆಸ್ ಸಂಸದರಾದ ಡಿ.ಕೆ. ಸುರೇಶ್, ದೀಪಕ್ ಬೈಜ್ ಮತ್ತು ನಕುಲ್ ನಾಥ್ ಅವರನ್ನು ಅನುಚಿತ ನಡವಳಿಕೆಗಾಗಿ ಅಮಾನತು ಮಾಡಲಾಯಿತು. ಸದನದಲ್ಲಿ ಪ್ರತಿಭಟನೆ ನಡೆಸುವುದರ ವಿರುದ್ಧ ಕಲಾಪದ ಆರಂಭದಲ್ಲಿ ಸ್ಪೀಕರ್ ಓಂ ಬಿರ್ಲಾ ಅವರು ಈ ಮೂವರಿಗೆ ಎಚ್ಚರಿಕೆಯನ್ನೂ ನೀಡಿದ್ದರು.

14 ನೇ ಪುಟ ನೋಡಿ

ಹೊರ ಗುತ್ತಿಗೆಯಲ್ಲೂ ಮೀಸಲಾತಿ: ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವಿವಿಧ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವಾಗ ಮೀಸಲಾತಿ ಜಾರಿ ಮಾಡುವ ಮಹತ್ವದ ತೀರ್ಮಾನವನ್ನು ಗುರುವಾರ ನಡೆದ ಸಚಿವ ಸಂಪುಟ ಸಭೆ ತೆಗೆದುಕೊಂಡಿದೆ.

ಮೊದಲ ಹಂತದಲ್ಲಿ, ಕಾಲೇಜು ಶಿಕ್ಷಣ ಇಲಾಖೆ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ 449 ಸಿಬ್ಬಂದಿಯ ಹೊರಗುತ್ತಿಗೆ ನೇಮಕದಲ್ಲಿ ಇದು ಅನ್ವಯ ಆಗಲಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಅವರು ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರೋಸ್ಟರ್ ಅನ್ವಯವೇ ನೇಮಕ ಮಾಡಲಾಗುವುದು. ಇದರಲ್ಲಿ ಹೈದರಾಬಾದ್ ಕಲ್ಯಾಣ ಮೀಸಲಾತಿಯೂ ಸೇರಿದೆ. ಕಾಲೇಜುಗಳಿಗೆ ಅಗತ್ಯವಿರುವ 449 ಹುದ್ದೆಗಳ ಸೇವೆ ಪಡೆಯಲು ₹11.30 ಕೋಟಿ ಅಗತ್ಯವಿದೆ. ಇದಕ್ಕೆ ಸಂಪುಟ ಒಪ್ಪಿಗೆ ನೀಡಿದೆ ಎಂದರು.

12ನೇ ಪುಟ ನೋಡಿ

1.80 ಲಕ್ಷ ಮನೆಗಳಿಗೆ ₹6,170 ಕೋಟಿ

ಪಿಎಂ ಆವಾಸ್ ಯೋಜನೆಯಡಿ ಕೊಳೆಗೇರಿ ನಿವಾಸಿಗಳಿಗೆ 1,80,253 ಮನೆಗಳ ನಿರ್ಮಾಣ ಯೋಜನೆಗೆ ಫಲಾನುಭವಿಗಳ ವಂತಿಗೆಯಾಗಿ ₹6,170 ಕೋಟಿಯನ್ನು ಪಾವತಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಮೊದಲ ಕಂತಿನಲ್ಲಿ ₹745 ಕೋಟಿ ನೀಡಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಇದರಿಂದ ಫಲಾನುಭವಿಗಳು ₹4 ಲಕ್ಷದ ಬದಲಿಗೆ ₹1 ಲಕ್ಷ ಪಾವತಿಸಿದರೆ ಸಾಕು. ಉಳಿದ ಮೊತ್ತವನ್ನು ಸರ್ಕಾರವೇ ಭರಿಸಲಿದೆ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

'ನನೆಗುದಿಗೆ ಬಿದ್ದಿದ್ದ ಈ ಯೋಜನೆಯನ್ನು ಅನುಷ್ಠಾನ ಮಾಡುವ ಸಲುವಾಗಿ 50ಕ್ಕೂ ಹೆಚ್ಚು ಸಭೆ ನಡೆಸಿ ಪರಿಶೀಲನೆ ನಡೆಸಿದ್ದೆ. ಮುಖ್ಯಮಂತ್ರಿಯವರ ಮನವೊಲಿಸಿ, ಅನುದಾನ ಬಿಡುಗಡೆ ಮಾಡಿಸಿದೆ' ಎಂದು ಹೇಳಿದರು.

ಆದಾಯ ಮೀರಿ ಆಸ್ತಿ: ಪೊನ್ಮುಡಿಗೆ 3 ವರ್ಷ ಸಜೆ

ಚೆನ್ನೈ: ಆದಾಯ ಮೀರಿ ಆಸ್ತಿ ಗಳಿಸಿದ ಪ್ರಕರಣದಲ್ಲಿ ತಮಿಳುನಾಡು ಉನ್ನತ ಶಿಕ್ಷಣ ಸಚಿವರಾಗಿದ್ದ ಕೆ. ಪೊನ್ಮುಡಿ ಅವರಿಗೆ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಮೂರು ವರ್ಷಗಳ ಜೈಲು ಶಿಕ್ಷೆಯನ್ನು ಮದ್ರಾಸ್ ಹೈಕೋರ್ಟ್ ಗುರುವಾರ ವಿಧಿಸಿದೆ. 14

ವಿಚ್ಛೇದನಕ್ಕೆ ಅರ್ಜಿ: ಕೋರ್ಟ್ ಎದುರೇ ಥಳಿತ

ಪ್ರಜಾವಾಣಿ ವಾರ್ತೆ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ವಿವಾಹ ವಿಚ್ಛೇದನ ಪ್ರಕರಣದ ವಿಚಾರಣೆಗೆ ಬುಧವಾರ ಹಾಜರಾಗಿದ್ದ ವ್ಯಕ್ತಿಯನ್ನು ಆತನ ಪತ್ನಿಯ ಕುಟುಂಬದವರು ಕೋರ್ಟ್ ಗೇಟ್ ಎದುರಿನ ವಿದ್ಯುತ್ ಕಂಬಕ್ಕೆ ಕಟ್ಟಿ ಥಳಿಸಿದ್ದಾರೆ.

ಮುದ್ದೇಬಿಹಾಳ ತಾಲ್ಲೂಕಿನ ಬೇರೆ ಬೇರೆ ಗ್ರಾಮದ ಇಬ್ಬರ ನಡುವೆ ವಿವಾಹವಾಗಿತ್ತು. ಆದರೆ, ಮದುವೆ ಆದ ಕೆಲ ದಿನಗಳಲ್ಲೇ ತನ್ನ ಪತ್ನಿ ಏಳು ತಿಂಗಳ ಗರ್ಭಿಣಿಯಾಗಿದ್ದಳು ಎಂದು ವ್ಯಕ್ತಿಯು ದೂರಿದರು. ಆಕೆಯನ್ನು ತವರು ಮನೆಗೆ ಕಳುಹಿಸಿ, ವಿವಾಹ ವಿಚ್ಛೇದನಕ್ಕೆ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದರು.

ವಿಚ್ಛೇದನ ಪ್ರಕರಣಕ್ಕೆ ಸಂಬಂಧಿಸಿದಂತೆ ವ್ಯಕ್ತಿಯು ಕೋರ್ಟ್‌ಗೆ ಬಂದ ಸಂದರ್ಭದಲ್ಲಿ ಪತ್ನಿ ಸೇರಿದಂತೆ ನಾಲ್ವರು ಅವಾಚ್ಯ ಪದಗಳಿಂದ ನಿಂದಿಸಿದರು. ನಂತರ ಕೋರ್ಟ್ ಮುಂದಿನ ಗೇಟ್ ಬಳಿ ಇದ್ದ ವಿದ್ಯುತ್ ಕಂಬಕ್ಕೆ ಕಟ್ಟಿ ಹಗ್ಗದಿಂದ ಥಳಿಸಿದರು. ವಿಷಯ ಗೊತ್ತಾದ ಕೂಡಲೇ ಸ್ನೇಹಿತರು ವ್ಯಕ್ತಿಯನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು. ಥಳಿತಕ್ಕೆ ಒಳಗಾದ ವ್ಯಕ್ತಿಯ ದೂರಿನ ಆಧಾರದ ಮೇಲೆ ನಾಲ್ವರನ್ನು ಬಂಧಿಸಲಾಗಿದೆ ಎಂದು ಮುದ್ದೇಬಿಹಾಳ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಒಳ ಪುಟ



ಸಂಸದರ ಅಮಾನತು ವಿರುದ್ಧ ಪ್ರತಿಭಟನೆ 14

ಚಿನಕುರುಳಿ

ಪ್ರಕಾಶ್ ಶೆಟ್ಟಿ



ವಂಚಕರ ಹೊಸ ಮಾರ್ಗ • ತಿಂಗಳಲ್ಲೇ 560 ಪ್ರಕರಣ

ಹಣ ದೋಚಲು 'ಎ.ಐ ಕರೆ'

• ಸಂತೋಷ ಜಿಗಳಿಕೊಪ್ಪ



ಬೆಂಗಳೂರು: ಹಣ ದೋಚಲು ನಾನಾ ರೀತಿಯ ತಂತ್ರಗಳನ್ನು ಹೆಣೆಯುತ್ತಿರುವ ಸೈಬರ್ ವಂಚಕರು, 'ಕೃತಕ ಬುದ್ಧಿಮತ್ತೆ (ಎ.ಐ) ಮಿಮಿಕ್ರಿ ಕರೆ' ಎಂಬ ಹೊಸ ಅಸ್ತ್ರ ಬಳಸಲಾರಂಭಿಸಿದ್ದಾರೆ.

ಕುಟುಂಬಸ್ಥರು, ಸಂಬಂಧಿಕರು ಹಾಗೂ ಸ್ನೇಹಿತರ ಧ್ವನಿಯನ್ನು ಅನುಕರಿಸಿ 'ಕೃತಕ ಬುದ್ಧಿಮತ್ತೆ ಮಿಮಿಕ್ರಿ ಕರೆ' ಮಾಡುತ್ತಿರುವ ವಂಚಕರು, ತುರ್ತು ಕಾರಣಗಳನ್ನು ನೀಡಿ ಹಣ ದೋಚುತ್ತಿದ್ದಾರೆ. ತಮ್ಮ ಕುಟುಂಬದವರು, ಸಂಬಂಧಿಕರು ಹಾಗೂ ಸ್ನೇಹಿತರೇ ಕರೆ ಮಾಡಿದ್ದಾರೆಂದು ನಂಬಿ ಕೇಳಿದಷ್ಟು ಹಣ ಕೊಟ್ಟು ವಂಚನೆಗೆ ಒಳಗಾಗುತ್ತಿರುವ ಜನ, ಠಾಣೆ ಮೆಟ್ಟಿಲೇರುತ್ತಿದ್ದಾರೆ.

'ಒಎಲ್‌ಎಕ್ಸ್, ಬ್ಯಾಂಕ್ ವಹಿವಾಟಿನ ಒನ್ ಟೈಂ ಪಾಸ್‌ವರ್ಡ್ (ಒಟಿಪಿ), ಸಾಮಾಜಿಕ ಮಾಧ್ಯಮ, ಬೆತ್ತಲೆ ಬ್ಲ್ಯಾಕ್‌ಮೇಲ್, ಉಡುಗೊರೆ ಆಮಿಷದಂತಹ ವಿವಿಧ ರೀತಿಗಳಲ್ಲಿ ಜನರನ್ನು ವಂಚಿಸಲಾಗುತ್ತಿತ್ತು. ಈಗ ಹೊಸ ಹಾದಿ ಹಿಡಿದಿರುವ ಸೈಬರ್ ವಂಚಕರು ಕೃತಕ ಬುದ್ಧಿಮತ್ತೆ ಬಳಸಿಕೊಂಡು ಮಿಮಿಕ್ರಿ ಕರೆ ಮಾಡಿ ಜನರಿಂದ ಹಣ ಕೀಳುತ್ತಿದ್ದಾರೆ' ಎಂದು ಬೆಂಗಳೂರು ಸೈಬರ್ ಕ್ರೈಂ ಠಾಣೆಯೊಂದರ ಇನ್‌ಸ್ಪೆಕ್ಟರ್ 'ಪ್ರಜಾವಾಣಿ'ಗೆ ತಿಳಿಸಿದರು.

ಏನಿದು ಎಐ ಮಿಮಿಕ್ರಿ ಕರೆ: 'ವ್ಯಕ್ತಿಯೊಬ್ಬರ ವೈಯಕ್ತಿಕ ಮಾಹಿತಿ ಕಲೆ ಹಾಕುವ ಸೈಬರ್ ವಂಚಕರು, ಅವರ ಕುಟುಂಬಸ್ಥರು, ಸಂಬಂಧಿಕರು ಹಾಗೂ ಸ್ನೇಹಿತರ ಮೊಬೈಲ್ ಸಂಖ್ಯೆ ಸಂಗ್ರಹಿಸುತ್ತಾರೆ. ಬ್ಯಾಂಕ್ ಹಾಗೂ ವಿವಿಧ ಕಂಪನಿ ಪ್ರತಿನಿಧಿಗಳ ಹೆಸರಿನಲ್ಲಿ ಕರೆ ಮಾಡಿ, ಎಲ್ಲರ ಧ್ವನಿಗಳನ್ನು ರೆಕಾರ್ಡ್ ಮಾಡಿಟ್ಟುಕೊಳ್ಳುತ್ತಾರೆ. ಈ ದತ್ತಾಂಶ ಬಳಸಿಕೊಂಡು ವಂಚನೆ ಎಸಗುತ್ತಾರೆ' ಎಂದು ಇನ್‌ಸ್ಪೆಕ್ಟರ್ ಹೇಳಿದರು.

'ಧ್ವನಿ ಮುದ್ರಣವನ್ನು ಎಐ ಸಹಾಯದಿಂದ, ತಮಗೆ ಬೇಕಾದಂತೆ ಮಾರ್ಪಾಡು ಮಾಡಿಕೊಳ್ಳುತ್ತಾರೆ. ಎಐ ತಂತ್ರಜ್ಞಾನ ಬಳಸಿ ವ್ಯಕ್ತಿಯ ಆಪ್ತರಿಗೆ ಕರೆ ಮಾಡುತ್ತಾರೆ. ಎದುರಿನ ವ್ಯಕ್ತಿಗಳ ಜೊತೆ ಎಐ ಮೂಲಕವೇ ಸಂಭಾಷಣೆ ನಡೆಯುತ್ತದೆ.

ಪ್ರಜಾವಾಣಿ ವಿಶೇಷ

12 ನೇ ಪುಟ ನೋಡಿ

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ (ರಿ.)







ಡಾ. ಶಾಮನೂರು ಶಿವಶಂಕರಪ್ಪ ಶಾಸಕರು
ಅಧ್ಯಕ್ಷರು
ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾ (ರಿ.),
ಬೆಂಗಳೂರು

ಅಧ್ಯಕ್ಷರ ಮೆರವಣಿಗೆ

ದಿನಾಂಕ: 23-12-2023ರ ಶನಿವಾರ ಬೆಳಿಗ್ಗೆ 10.35

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆಯ ಅಧ್ಯಕ್ಷರನ್ನು ನಂದಿಧ್ವಜ, ಜಾನಪದ ಕಲಾ ತಂಡಗಳು ಮತ್ತು ಮಂಗಳವಾದ್ಯಗಳೊಂದಿಗೆ ದಾವಣಗೆರೆಯ ಶ್ರೀ ರೇಣುಕಾ ಮಂದಿರದಿಂದ ಪ್ರಾರಂಭಿಸಿ ಮಹಾ ಅಧಿವೇಶನ ನಡೆಯುವ ಎಂಬಿಎ ಕಾಲೇಜು ಮೈದಾನದ ಸಿರಿಗೆರೆ ಲಿಂ. ಶ್ರೀ ಶಿವಕುಮಾರ ಮಹಾಮಂಟಪಕ್ಕೆ ಮೆರವಣಿಗೆಯೊಂದಿಗೆ ಕರೆತರಲಾಗುವುದು.



24ನೇ ಮಹಾಧಿವೇಶನ

23 ಮತ್ತು 24 ಡಿಸೆಂಬರ್ 2023

ಬಾಪೂಜಿ ಎಂ.ಬಿ.ಎ. ಕಾಲೇಜು ಮೈದಾನ,
ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಹಿಂಭಾಗ,
ದಾವಣಗೆರೆ.

ಸ್ವಾಗತ ಸಮಿತಿ ದಾವಣಗೆರೆ ಜಿಲ್ಲಾ ಘಟಕ

ಉದ್ಘಾಟನಾ ಸಮಾರಂಭ
ಎಸ್. ನಿಜಲಿಂಗಪ್ಪ ವೇದಿಕೆ
23, ಡಿಸೆಂಬರ್ 2023, ಶನಿವಾರ
ಮಧ್ಯಾಹ್ನ 12.30 ರಿಂದ

ಕೃಷಿ ಮತ್ತು ಕೈಗಾರಿಕಾ ಅಧಿವೇಶನ
ಎಸ್. ನಿಜಲಿಂಗಪ್ಪ ವೇದಿಕೆ
23, ಡಿಸೆಂಬರ್ 2023, ಶನಿವಾರ
ಮಧ್ಯಾಹ್ನ 3.00 ರಿಂದ

ಶೈಕ್ಷಣಿಕ ಅಧಿವೇಶನ
ಜೆ.ಹೆಚ್. ಪಟೇಲ್ ವೇದಿಕೆ
23, ಡಿಸೆಂಬರ್ 2023, ಶನಿವಾರ
ಮಧ್ಯಾಹ್ನ 3.30 ರಿಂದ

ಸಾಂಸ್ಕೃತಿಕ ಕಾರ್ಯಕ್ರಮಗಳು
ಎಸ್. ನಿಜಲಿಂಗಪ್ಪ ವೇದಿಕೆ
23, ಡಿಸೆಂಬರ್ 2023
ಶನಿವಾರ
ಸಂಜೆ 6.30 ರಿಂದ

ಧಾರ್ಮಿಕ ಅಧಿವೇಶನ
ಎಸ್. ನಿಜಲಿಂಗಪ್ಪ ವೇದಿಕೆ
24, ಡಿಸೆಂಬರ್ 2023, ರವಿವಾರ
ಬೆಳಿಗ್ಗೆ 9.30 ರಿಂದ

ಬಹಿರಂಗ ಅಧಿವೇಶನ ನಿರ್ಣಯಗಳ ಮಂಡನೆ
ಎಸ್. ನಿಜಲಿಂಗಪ್ಪ ವೇದಿಕೆ
ಡಾ. ಶಾಮನೂರು ಶಿವಶಂಕರಪ್ಪ ಶಾಸಕರು
ಅಧ್ಯಕ್ಷರು, ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾ (ರಿ.), ಬೆಂಗಳೂರು
24, ಡಿಸೆಂಬರ್ 2023, ರವಿವಾರ, ಮಧ್ಯಾಹ್ನ 3.00

ಮಹಿಳಾ ಮತ್ತು ಯುವ ಅಧಿವೇಶನ
ಜೆ.ಹೆಚ್. ಪಟೇಲ್ ವೇದಿಕೆ
24, ಡಿಸೆಂಬರ್ 2023, ರವಿವಾರ
ಬೆಳಿಗ್ಗೆ 9.30 ರಿಂದ

ನೌಕರರ ಅಧಿವೇಶನ
ಎಸ್. ನಿಜಲಿಂಗಪ್ಪ ವೇದಿಕೆ
24, ಡಿಸೆಂಬರ್ 2023, ರವಿವಾರ
ಮಧ್ಯಾಹ್ನ 12.15 ರಿಂದ

ಸಾಹಿತಿಗಳ ಅಧಿವೇಶನ
ಜೆ.ಹೆಚ್. ಪಟೇಲ್ ವೇದಿಕೆ
24, ಡಿಸೆಂಬರ್ 2023, ರವಿವಾರ
ಮಧ್ಯಾಹ್ನ 12.15 ರಿಂದ

ಸಮಾರೋಪ ಸಮಾರಂಭ
ಎಸ್. ನಿಜಲಿಂಗಪ್ಪ ವೇದಿಕೆ
24, ಡಿಸೆಂಬರ್ 2023, ರವಿವಾರ
ಮಧ್ಯಾಹ್ನ 3.30

ಸ್ವಾಗತ ಕೋರುವವರು: ಶರಣರ ಬರವೆಮಗೆ ಪ್ರಾಣ ಜೀವಾಳವಯ್ಯ



ಡಾ. ಅಥಣಿ ವೀರಣ್ಣ	ಡಾ. ಎಸ್. ಎಸ್. ಗಣೇಶ್	ಅಣಬೇರು ರಾಜಣ್ಣ	ಎಸ್. ಎಸ್. ಮಲ್ಲಿಕಾರ್ಜುನ್	ಹೆಚ್.ಎಂ. ರೇಣುಕಾ ಪ್ರಸನ್ನ	ದೇವರಮನಿ ಶಿವಕುಮಾರ್
ರಾಷ್ಟ್ರೀಯ ಉಪಾಧ್ಯಕ್ಷರು	ರಾಷ್ಟ್ರೀಯ ಉಪಾಧ್ಯಕ್ಷರು	ರಾಷ್ಟ್ರೀಯ ಉಪಾಧ್ಯಕ್ಷರು	ಜಿಲ್ಲಾ ಮಂತ್ರಿಗಳು	ರಾಷ್ಟ್ರೀಯ ಕಾರ್ಯದರ್ಶಿ	ಜಿಲ್ಲಾಧ್ಯಕ್ಷರು

ಇದನ್ನೇ ಖುದ್ದು ಆಮಂತ್ರಣ ಎಂದು ಪರಿಗಣಿಸಿ ಸಮಾಜದ ಸಮಸ್ತ ಬಾಂಧವರು ಆಗಮಿಸಿ ಮಹಾಧಿವೇಶನ ಯಶಸ್ವಿಗೊಳಿಸಲು ಕೋರುತ್ತೇವೆ.

ಸ್ವಾಗತ ಸಮಿತಿ – ದಾವಣಗೆರೆ ಜಿಲ್ಲಾ ಘಟಕ

ಇಂದು ಬೀದಿ ನಾಟಕ

ಬೆಂಗಳೂರು: ಅಂಚೆ ಇಲಾಖೆ ವತಿಯಿಂದ ಚರ್ಚ್ ಸ್ಟ್ರೀಟ್ ಮೆಟ್ರೊ ನಿಲ್ದಾಣದ ಬಳಿ ಡಿ.22ರಂದು ಸಂಜೆ 5ಕ್ಕೆ ಬೀದಿ ನಾಟಕ ಹಮ್ಮಿಕೊಳ್ಳಲಾಗಿದೆ.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ಜನವರಿ 5ರಿಂದ 8ರ ವರೆಗೆ ನಡೆಯಲಿರುವ 'ಕರ್ನಾಪೆಕ್ಸ್-2024' ರಾಜ್ಯ ಮಟ್ಟದ ಬೃಹತ್ ಅಂಚೆ ಚೀಟಿ ಸಂಗ್ರಹ ಮತ್ತು ಪ್ರದರ್ಶನ ಕಾರ್ಯಕ್ರಮದ ಬಗ್ಗೆ ಅರಿವು ಮೂಡಿಸಲು ಈ ಬೀದಿನಾಟಕವನ್ನು ಅಂಚೆ ಇಲಾಖೆಯ ಸಿಬ್ಬಂದಿ ಪ್ರದರ್ಶಿಸಲಿದ್ದಾರೆ ಎಂದು ಅಂಚೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಅಪಾರ್ಟ್‌ಮೆಂಟ್ ಮಾರಾಟ: ಶೇ 20ರಷ್ಟು ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): ಬೆಂಗಳೂರು ಸೇರಿದಂತೆ ದೇಶದ ಪ್ರಮುಖ ಏಳು ನಗರಗಳಲ್ಲಿ ಪ್ರಸಕ್ತ ವರ್ಷ ಅಪಾರ್ಟ್‌ಮೆಂಟ್‌ಗಳ ಮಾರಾಟವು ಶೇ 20ರಷ್ಟು ಹೆಚ್ಚಳವಾಗುವ ನಿರೀಕ್ಷೆಯಿದೆ ಎಂದು ಆಸ್ತಿ ಸಲಹಾ ಸಂಸ್ಥೆಯಾದ ಜೆಎಲ್‌ಎಲ್ ಇಂಡಿಯಾ ವರದಿ ಹೇಳಿದೆ.



ದೆಹಲಿ, ಮುಂಬೈ, ಚೆನ್ನೈ, ಕೋಲ್ಕತ್ತ, ಹೈದರಾಬಾದ್, ಬೆಂಗಳೂರು ಹಾಗೂ ಪುಣೆಯಲ್ಲಿ ಅಪಾರ್ಟ್‌ಮೆಂಟ್‌ಗಳಿಗೆ ಬೇಡಿಕೆ ಹೆಚ್ಚಲಿದೆ. ಸುಮಾರು 2.6 ಲಕ್ಷ ಮನೆಗಳು ಮಾರಾಟವಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

ಈ ನಗರಗಳಲ್ಲಿ ಕಳೆದ ವರ್ಷ 2,15,621 ಮನೆಗಳು ಮಾರಾಟವಾಗಿದ್ದವು. ಈ ವರ್ಷದ ಜನವರಿಯಿಂದ ಸೆಪ್ಟೆಂಬರ್ ವರೆಗೆ 1,96,227 ಮನೆಗಳು ಮಾರಾಟವಾಗಿವೆ. ಕಳೆದ ವರ್ಷ ಇದೇ ಅವಧಿಯಲ್ಲಿ 1,61,575 ಮನೆಗಳು ಮಾರಾಟವಾಗಿದ್ದವು.

ವರದಿಯಲ್ಲಿ ಕಚ್ಚಾ ಮನೆ, ವಿಲ್ಲಾ ಸೇರಿದಂತೆ ನಿರ್ಮಾಣ ಹಂತದ ಮನೆಗಳನ್ನು ಪರಿಗಣಿಸಲಾಗಿಲ್ಲ. ಗೃಹ ಸಾಲದ ಬಡ್ಡಿದರ ಹೆಚ್ಚಳ ಹಾಗೂ ಬೆಲೆ ಏರಿಕೆಯ ನಡುವೆಯೂ ದೇಶೀಯ ಮಾರುಕಟ್ಟೆಯಲ್ಲಿ ಮನೆಗಳ ಖರೀದಿ ವಹಿವಾಟು ಸಕಾರಾತ್ಮಕವಾಗಿಯೇ ಇದೆ. ಖರೀದಿದಾರರ ಉತ್ಸಾಹ ಕಡಿಮೆಯಾಗಿಲ್ಲ ಎಂದು ವರದಿ ವಿವರಿಸಿದೆ.

ಮುಂದುವರಿದ ಚುಮು ಚುಮು ಚಳಿ

ಬೆಂಗಳೂರು: ನಗರದಲ್ಲಿ ಬೆಳಗಿನ ಜಾವ ಮಂಜು ಮುಸುಕಿದ ವಾತಾವರಣ ಇರಲಿದ್ದು, ಚಳಿ ಮುಂದುವರಿಯಲಿದೆ.

ರಾಜ್ಯದಾದ್ಯಂತ ಸಾಮಾನ್ಯವಾಗಿ ಮೋಡ ಮುಸುಕಿದ ವಾತಾವರಣ ಮತ್ತು ಒಣ ಹವೆ ಮುಂದುವರಿಯಲಿದೆ. ಕನಿಷ್ಠ ಉಷ್ಣಾಂಶ 17 ಡಿಗ್ರಿ ಸೆಲ್ಸಿಯಸ್ ಇರಲಿದೆ. ಮುಂದಿನ 48 ಗಂಟೆಗಳು ಇದೇ ವಾತಾವರಣ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.





ಕುಸಿದು ಬಿದ್ದ ಮನೆ ಮೇಲ್ಚಾವಣಿ: ಆರು ಮಂದಿಗೆ ಗಾಯ

ಮುಳಬಾಗಿಲು (ಕೋಲಾರ): ತಾಲ್ಲೂಕಿನ ಅಂಬ್ಲಿಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೂಜಾರ ಹಳ್ಳಿಯಲ್ಲಿ ಗುರುವಾರ ಬೆಳಗಿನ ಜಾವ ಮನೆಯಲ್ಲಿ ಮಲಗಿದ್ದವರ ಮೇಲೆ ಮೇಲ್ಚಾವಣಿಯ ಚಪ್ಪಡಿ ಕಲ್ಲುಗಳು ಕುಸಿದು ಬಿದ್ದು ಆರು ಮಂದಿ ಗಾಯಗೊಂಡಿದ್ದಾರೆ. ಇದರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ.

ಬೆಳಗಿನ ಜಾವ 4.30ರ ವೇಳೆ ಹಠಾತ್ತಾಗಿ ಚಪ್ಪಡಿ ಕಲ್ಲುಗಳ ಮನೆ ಕುಸಿದಿದೆ. ವೆಂಕಟರಾಮಪ್ಪ (60), ಚಿನ್ನ ಪಾಪಮ್ಮ (55), ಹರೀಶ್ (30), ಪ್ರಮೀಳಾ (26), ಮೂರು ವರ್ಷದ ತೇಜಸ್ ಮತ್ತು ಒಂದು ವರ್ಷದ ಅಮ್ಮು ಗಾಯಗೊಂಡಿದ್ದಾರೆ. ಪ್ರಮೀಳಾ ಮತ್ತು ಚಿನ್ನ ಪಾಪಮ್ಮ ತೀವ್ರವಾಗಿ ಗಾಯಗೊಂಡಿದ್ದು, ಸ್ಥಿತಿ ಚಿಂತಾಜನಕ-ವಾಗಿದೆ.

ಸಕ್ರೆಬೈಲು: ವಾಟರ್ ಬೋಟಿಂಗ್‌ಗೆ ಆಕ್ಷೇಪ – ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ ಜಿಲ್ಲೆ ಗಾಜನೂರಿನ ಸಕ್ರೆಬೈಲು ಆನೆ ಶಿಬಿರದ ಬಳಿಯ ತುಂಗಾಭದ್ರಾ ಜಲಾಶಯದ ಹಿನ್ನೀರಿನಲ್ಲಿ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ ಲಿಮಿಟೆಡ್‌ನವರು 'ವಾಟರ್ ಬೋಟಿಂಗ್' ನಡೆಸುತ್ತಿರುವುದನ್ನು ಆಕ್ಷೇಪಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಗಾಜನೂರಿನ ಅಗ್ರಹಾರದ ಗಂಗಾ ಪರಮೇಶ್ವರಿ ಮೀನುಗಾರರ ಸಂಘ ನಿಯಮಿತದ ಅಧ್ಯಕ್ಷ ಅರಸಯ್ಯ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಿಗೆ ಶೋಕಾಸ್ ನೋಟಿಸ್

[ಎಸ್‌ಸಿಆರ್, ಆರ್ಡರ್ 22]

ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ

ಕ್ರಿಮಿನಲ್ ಅಪೆಲ್ಲೇಟ್ ಜುರಿಸ್ಡಿಕ್ಷನ್

ಪಿಟಿಷನ್ ಫಾರ್ ಸ್ಪೆಷಲ್ ಲೀವ್ ಪಿಟಿಷನ್ (ಕ್ರಿಮಿನಲ್) ನಂ. 838–842/2022

ಜೊತೆಗೆ

ಐ.ಎ. ನಂ. 14234/2022–ಅಪ್ಲಿಕೇಶನ್ ಫಾರ್ ಎಕ್ಸೆಂಪ್ಷನ್ ಫ್ರಂ ಫೈಲಿಂಗ್ ಸಿ/ಸಿ ಆಫ್ ದಿ ಇಂಪ್ಯೂನ್ಡ್ ಜಡ್ಜ್‌ಮೆಂಟ್

ಮತ್ತು

ಐ.ಎ. ನಂ. 132126/2023–ಅಪ್ಲಿಕೇಶನ್ ಫಾರ್ ಸಬ್‌ಸ್ಟಿಟ್ಯೂಟೆಡ್ ಸರ್ವೀಸ್

ರಾಷ್ಟ್ರೀಯ ತನಿಖಾ ಸಂಸ್ಥೆ ...

ಅರ್ಜಿದಾರರು/ಅಪೆಲ್ಲಂಟ್ಸ್

ವಿರುದ್ಧ

ಮುಜಮ್ಮಿಲ್ ಪಾಷಾ ಮತ್ತು ಇತರರರು ...ಪ್ರತಿವಾದಿಗಳು

ಗೆ,

1	ಇರ್ಷಾದ್ ಹುಸೇನ್ ಬಿನ್ ಅಲ್ತಾಫ್ ಹುಸೇನ್, ವಿಳಾಸ ನಂ. 57, 11ನೇ ಅಡ್ಡರಸ್ತೆ, ಕೆ.ಜಿ.ಹಳ್ಳಿ, 11ನೇ ಕ್ರಾಸ್, ಬೆಂಗಳೂರು 560045., ಬೆಂಗಳೂರು ಜಿಲ್ಲೆ, ಕರ್ನಾಟಕ 560045	**ಪಿಐಡಿ: 239155/2023 ಫಾರ್ ಆರ್[2] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
2	ಮೊಹಮ್ಮದ್ ಹನೀಫ್ ಬಿನ್ ಕಮಾಲ್ ಪಾಷಾ ವಿಳಾಸ ವೆಂಕಟೇಶಪುರಂ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ 560045	**ಪಿಐಡಿ: 239156/2023 ಫಾರ್ ಆರ್[3] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
3	ಫಿರೋಜ್ ಅಹ್ಮದ್ ಬಿನ್ ನಿಸಾರ್ ಅಹ್ಮದ್, ವಿಳಾಸ ನಂ. 3, 6ನೇ ಕ್ರಾಸ್, ವಿನೋಭನಗರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ 560045	**ಪಿಐಡಿ: 239157/2023 ಫಾರ್ ಆರ್[4] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 838/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
4	ಸೈಯದ್ ಝುಕೀರ್ ಬಿನ್ ಸೈಯದ್ ಮಜ್ಹರ್, ವಿಳಾಸ ನಂ. 12/48/2, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ವೆಂಕಟೇಶಪುರಂ, ಟೋಟಲ್ ಗ್ಯಾಸ್ ಹತ್ತಿರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239158/2023 ಫಾರ್ ಆರ್[6] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
5	ಕಲೀಮ್ ಪಾಷಾ ಬಿನ್ ಮೊಹಮ್ಮದ್ ಇಸ್ಮಾಯಿಲ್, ವಿಳಾಸ ಹೆಚ್‌ಬಿಆರ್ ಲೇಔಟ್, ಬೆಂಗಳೂರು 560043, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239159/2023 ಫಾರ್ ಆರ್[9] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
6	ಮೊಹಮ್ಮದ್ ಹನೀಫ್ ಬಿನ್ ಕಮಾಲ್ ಪಾಷಾ, ವಿಳಾಸ ವೆಂಕಟೇಶಪುರಂ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239160/2023 ಫಾರ್ ಆರ್[10] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
7	ಫೈರೋಜ್ ಅಹ್ಮದ್ ಬಿನ್ ನಿಸಾರ್ ಅಹ್ಮದ್, ವಿಳಾಸ ನಂ. 3, 6ನೇ ಕ್ರಾಸ್, ವಿನೋಭನಗರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239161/2023 ಫಾರ್ ಆರ್[12] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
8	ಸಮೀರ್ ಖಾನ್ ಬಿನ್ ರಿಯಾಜ್ ಅಹ್ಮದ್, ವಿಳಾಸ ನಂ. 65, 9ನೇ ಕ್ರಾಸ್, ವಿನೋಭನಗರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239162/2023 ಫಾರ್ ಆರ್[14] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
9	ಅಮೀನ್ ಬಿನ್ ಮಸೀರ್ ರಹಮಾನ್, ವಿಳಾಸ ನಂ. 11/19, ಬಿ.ಎಂ.ಲೇಔಟ್, ವೆಂಕಟೇಶಪುರಂ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239163/2023 ಫಾರ್ ಆರ್[15] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
10	ಕಮಾಲ್ ಬಾಷಾ ಬಿನ್ ಮಹಬೂಬ್ ಷರೀಫ್, ವಿಳಾಸ 2ನೇ ಮುಖ್ಯರಸ್ತೆ, ವಿನೋಭನಗರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239164/2023 ಫಾರ್ ಆರ್[17] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
11	ಮೊಹಮ್ಮದ್ ಜಬಿವುಲ್ಲಾ ಬಿನ್ ಅಸ್ಲಮ್ ಪಾಷಾ, ವಿಳಾಸ ನಂ. 280, ಮಸ್ಜಿದ್ ಎ ಖೈರ್ ಹತ್ತಿರ, ಬಿ.ಎಂ.ಲೇಔಟ್, ವೆಂಕಟೇಶಪುರಂ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239165/2023 ಫಾರ್ ಆರ್[12] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
12	ಸೈಯದ್ ನವಾಜ್ ಬಿನ್ ಸೈಯದ್ ರಿಯಾಜ್, ವಿಳಾಸ ನಂ. 64, 9ನೇ ಕ್ರಾಸ್, ವಿನೋಭನಗರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239166/2023 ಫಾರ್ ಆರ್[19] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
13	ಏಜಾಜ್ ಬಿನ್ ಅಹ್ಮದ್ ಷರೀಫ್, ವಿಳಾಸ ನಂ. 32, 1ನೇ ಕ್ರಾಸ್, ಬಿ.ಎಂ.ಲೇಔಟ್, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239167/2023 ಫಾರ್ ಆರ್[21] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
14	ಚಾಂದ್ ಪಾಷಾ ಬಿನ್ ಶಂಶುದ್ದೀನ್, ವಿಳಾಸ ನಂ. 41, 1ನೇ ಕ್ರಾಸ್, ಬಿಇಎಆರ್ ಲೇಔಟ್, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239168/2023 ಫಾರ್ ಆರ್[23] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
15	ಸೈಯದ್ ಅಸ್ಗರ್ ಪಾಷಾ ಬಿನ್ ಸೈಯದ್ ಅಬ್ದುಲ್, ವಿಳಾಸ ನಂ. 43, 13ನೇ ಕ್ರಾಸ್, ಕುಶಾಲ್‌ನಗರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239169/2023 ಫಾರ್ ಆರ್[24] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
16	ಮಹೊಮ್ಮದ್ ಮುಜಾಹಿದ್ ಬಿನ್ ಖಲೀಲ್ ಪಾಷಾ, ವಿಳಾಸ ಮಕ್ಕಾ ಮಸೀದಿ ಹಿಂಭಾಗ, 1ನೇ ಕ್ರಾಸ್, ಕುಶಾಲ್‌ನಗರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239170/2023 ಫಾರ್ ಆರ್[25] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
17	ಮಹೊಮ್ಮದ್ ಸಮೀರ್ ಬಿನ್ ರಹಮತ್‌ವುಲ್ಲಾ, ವಿಳಾಸ ಫ್ಲ್ಯಾಟ್ ನಂ. 05, 2ನೇ ಕ್ರಾಸ್, 2ನೇ ಮೇನ್, ಕುಶಾಲ್‌ನಗರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239171/2023 ಫಾರ್ ಆರ್[26] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
18	ಸಿರಾಜ್ ರಹಮಾನ್, ವಿಳಾಸ ನಂ. 05, 2ನೇ ಮೇನ್, ರಂಗಪ್ಪ ಸ್ಟ್ರೀಟ್, ಕುಶಾಲ್‌ನಗರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239172/2023 ಫಾರ್ ಆರ್[27] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
19.	ಆಮೀರ್ ಅಹ್ಮದ್ ಬಿನ್ ಅಬ್ದುಲ್ ರಶೀದ್, ವಿಳಾಸ ನಂ. 05, 2ನೇ ಮೇನ್, ರಂಗಪ್ಪ ಸ್ಟ್ರೀಟ್, ಕುಶಾಲ್‌ನಗರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239173/2023 ಫಾರ್ ಆರ್[28] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
20.	ಸಿಕಂದರ್ ಖಾನ್ ಬಿನ್ ಶ್ಯಾಮ ನವಾಜ್ ಖಾನ್, ವಿಳಾಸ 2ನೇ ಕ್ರಾಸ್, ಕುಶಾಲ್‌ನಗರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239174/2023 ಫಾರ್ ಆರ್[29] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
21.	ಮೊಹಮ್ಮದ್ ಸಮೀರ್ @ ಸಮೀರುದ್ದೀನ್ ಬಿನ್ ರಹಮತವುಲ್ಲಾ, ವಿಳಾಸ ನಂ. 05, 2ನೇ ಮೇನ್, 2ನೇ ಕ್ರಾಸ್, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239175/2023 ಫಾರ್ ಆರ್[30] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
22.	ಸೈಯದ್ ಅಬ್ಲ್ ಬಿನ್ ಸೈಯದ್ ಅಬ್ದುರಶೀದ್, ವಿಳಾಸ 1ನೇ ಕ್ರಾಸ್, 2ನೇ ಮೇನ್, ಕುಶಾಲ್‌ನಗರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239176/2023 ಫಾರ್ ಆರ್[31] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
23.	ಅಬ್ದುಲ್ ಹಫೀಜ್ ಜುನೇದ್ ಬಿನ್ ಅಬ್ದುಲ್ ರಶೀದ್, ವಿಳಾಸ 1ನೇ ಕ್ರಾಸ್, 2ನೇ ಮೇನ್, ಕುಶಾಲ್‌ನಗರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239177/2023 ಫಾರ್ ಆರ್[32] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
24.	ಮೊಹಮ್ಮದ್ ದಸ್ತಗೀರ್ ಬಿನ್ ಜಬ್ಬಾರ್, ವಿಳಾಸ 2ನೇ ಕ್ರಾಸ್, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239178/2023 ಫಾರ್ ಆರ್[33] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
25.	ಮೊಹಮ್ಮದ್ ಮುಸ್ತಫ್ ಬಿನ್ ಅಮೀರ್ ಜಾನ್, ವಿಳಾಸ 4ನೇ ಕ್ರಾಸ್, ಅಮೀರ್ ಹಾಲ್, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239179/2023 ಫಾರ್ ಆರ್[36] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
26.	ಅಲಿ ಅಹ್ಮದ್ ಬಿನ್ ಅಬ್ದುಲ್ ಖಾದಿರ್, ವಿಳಾಸ 2ನೇ ಕ್ರಾಸ್, ಜಫರ್‌ವುಲ್ಲಾ ಲೇಔಟ್, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239180/2023 ಫಾರ್ ಆರ್[37] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
27.	ಶಹೀದುಲ್ ಇಸ್ಲಾಂ ಬಿನ್ ಖಲೀಮುದ್ದೀನ್, ವಿಳಾಸ 1ನೇ ಕ್ರಾಸ್, ಜಫರ್‌ವುಲ್ಲಾ ಲೇಔಟ್, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239181/2023 ಫಾರ್ ಆರ್[38] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
28.	ಮೊಹಮ್ಮದ್ ನಾಸಿರ್ ಬಿನ್ ಮೊಹಮ್ಮದ್ ತ್ರಾಫಿಲ್, ವಿಳಾಸ ನಂ. 27, 1ನೇ ಕ್ರಾಸ್, ಜಫರ್‌ವುಲ್ಲಾ ಲೇಔಟ್, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239182/2023 ಫಾರ್ ಆರ್[40] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
29.	ಸೈಯದ್ ಹುಸೇನ್ @ ಹುಸೇನ್ ಬಿನ್ ಸೈಯದ್ ಖಾದಿರ್, ವಿಳಾಸ ನಂ. 74, 1ನೇ ಕ್ರಾಸ್, ಜಫರ್‌ವುಲ್ಲಾ ಲೇಔಟ್, ಗೋವಿಂದಪುರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239183/2023 ಫಾರ್ ಆರ್[44] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
30.	ಮೊಹಮ್ಮದ್ ಸಾದಿಕ್ ಬಿನ್ ಜಬೀದುಲ್ಲಾಮ್, ವಿಳಾಸ ನಂ. 80, 1ನೇ ಕ್ರಾಸ್, ಜಫರ್‌ವುಲ್ಲಾ ಲೇಔಟ್, ಗೋವಿಂದಪುರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239184/2023 ಫಾರ್ ಆರ್[46] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
31.	ಮೊಹಮ್ಮದ್ ಜುನೈದ್ ಬಿನ್ ಮೊಹಮ್ಮದ್ ಜಾಫರ್, ವಿಳಾಸ ನಂ. 11, 1ನೇ ಕ್ರಾಸ್, ಜಫರ್‌ವುಲ್ಲಾ ಲೇಔಟ್, ಈರಣ್ಣಪಾಳ್ಯ, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239185/2023 ಫಾರ್ ಆರ್[49] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
32.	ಮೊಹಮ್ಮದ್ ಜಫರುಲ್ಲಾ ಷರೀಫ್ @ ಮೊಹಮ್ಮದ್ ನಾಸರುಲ್ಲಾ ಷರೀಫ್ ಬಿನ್ ಯುಸೂಫ್ ಷರೀಫ್, ವಿಳಾಸ ನಂ. 10, 1ನೇ ಕ್ರಾಸ್, ಜಫರ್‌ವುಲ್ಲಾ ಲೇಔಟ್, ಗೋವಿಂದಪುರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239186/2023 ಫಾರ್ ಆರ್[50] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
33.	ಸೈಯದ್ ಶಹಬಾಜ್ ಬಿನ್ ಸೈಯದ್ ಝುಕೀರ್, ವಿಳಾಸ ನಂ. 96/2, 5ನೇ ಕ್ರಾಸ್, ಸೀನಾ ಲೇಔಟ್, ರಶದ್‌ನಗರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239187/2023 ಫಾರ್ ಆರ್[51] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
34.	ಅಲ್ತಾಫ್ ಪಾಷಾ ಬಿನ್ ಅಬ್ದುಲ್ ಸಾಬ್, ವಿಳಾಸ ನಂ. 11, 1ನೇ ಕ್ರಾಸ್, ಜಫರ್‌ವುಲ್ಲಾ ಲೇಔಟ್, ಗೋವಿಂದಪುರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239188/2023 ಫಾರ್ ಆರ್[52] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
35.	ಮೊಹಮ್ಮದ್ ಆಸೀಫ್ ಬಿನ್ ಶೇಕ್ ಪ್ಯಾರೇಜಾನ್, ವಿಳಾಸ ನಂ. 6, 1ನೇ ಕ್ರಾಸ್, ಜಫರ್‌ವುಲ್ಲಾ ಲೇಔಟ್, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239189/2023 ಫಾರ್ ಆರ್[53] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
36.	ಅಬ್ದುಲ್ ಮಜೀದ್ ಬಿನ್ ಖಾಜಾ, ವಿಳಾಸ 2ನೇ ಕ್ರಾಸ್, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239190/2023 ಫಾರ್ ಆರ್[54] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
37.	ಅರ್ಫತ್ ಷರೀಫ್ ಬಿನ್ ಅಸ್ಗರ್ ಷರೀಫ್, ವಿಳಾಸ 1ನೇ ಕ್ರಾಸ್, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239191/2023 ಫಾರ್ ಆರ್[55] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
38.	ಜಬಿವುಲ್ಲಾ ಬಿನ್ ಅಬ್ದುಲ್ ಸತ್ತಾರ್, ವಿಳಾಸ ನಂ. 218, ರಾಮಸ್ವಾಮಿಯಪಾಳ್ಯ, ಕಮ್ಮನಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239192/2023 ಫಾರ್ ಆರ್[56] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
39.	ಮುಬಾರಕ್ ಪಾಷಾ ಬಿನ್ ಮೊಹಮ್ಮದ್ ಅಕ್ರಂ, ವಿಳಾಸ 14ನೇ ಕ್ರಾಸ್, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239193/2023 ಫಾರ್ ಆರ್[57] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
40.	ನಯಾಜುಲ್ಲಾ ಬಿನ್ ಅತಾವುಲ್ಲಾ, ವಿಳಾಸ 14ನೇ ಕ್ರಾಸ್, ಹೆಚ್‌ಬಿಆರ್ 2ನೇ ಸ್ಟೇಜ್, ಇನಾಮ್ ಮಸೀದಿ ಹತ್ತಿರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239194/2023 ಫಾರ್ ಆರ್[58] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
41.	ಸಮೀರ ಉಲ್ಲಾ ಬಿನ್ ಅತಾವುಲ್ಲಾ, ವಿಳಾಸ 14ನೇ ಕ್ರಾಸ್, ಹೆಚ್‌ಬಿಆರ್ 2ನೇ ಸ್ಟೇಜ್, ಇನಾಮ್ ಮಸೀದಿ ಹತ್ತಿರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239195/2023 ಫಾರ್ ಆರ್[59] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
42.	ಅಬಿದ್ ಅಲಿ ಬಿನ್ ಅಲುದ್ ಅಲಿ, ವಿಳಾಸ ನಂ. 46, 13ನೇ ಕ್ರಾಸ್, ಫರಿದಾ ಶೂ ಫ್ಯಾಕ್ಟರಿ ಹಿಂಭಾಗ, ಗೋವಿಂದಪುರ, ಬೆಂಗಳೂರು., ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239196/2023 ಫಾರ್ ಆರ್[60] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
43.	ತೌಫೀಕ್ ಅಹ್ಮದ್ ಬಿನ್ ಇಮ್ತಿಯಾಜ್, ವಿಳಾಸ ನಂ. 753, ನೆಲಮಹಡಿ, 3ನೇ ಬ್ಲಾಕ್, 10ನೇ ಕ್ರಾಸ್, 1ನೇ ಸ್ಟೇಜ್, ಹೆಚ್‌ಬಿಆರ್ ಲೇಔಟ್, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239197/2023 ಫಾರ್ ಆರ್[61] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
44.	ಮುಜೀಬ್ ಪಾಷಾ ಬಿನ್ ಮೊಹಮ್ಮದ್ ಇಸ್ಮಾಯಿಲ್, ವಿಳಾಸ ನಂ. 201/8, 6ನೇ ಮೇನ್, 10ನೇ ಕ್ರಾಸ್, 1ನೇ ಸ್ಟೇಜ್, ಹೆಚ್‌ಬಿಆರ್ ಲೇಔಟ್, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239198/2023 ಫಾರ್ ಆರ್[62] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
45.	ಸೈಯದ್ ಫರ್ದೀನ್ ಬಿನ್ ಸೈಯದ್ ಅಕ್ಮಲ್, ವಿಳಾಸ ನಂ. 308, 17ನೇ ಕ್ರಾಸ್, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239199/2023 ಫಾರ್ ಆರ್[63] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
46.	ಜುಬೇರ್ ಬಿನ್ ರಫೀಕ್, ವಿಳಾಸ ನಂ. 23, 15ನೇ ಕ್ರಾಸ್, ಉಮರ್‌ನಗರ, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239200/2023 ಫಾರ್ ಆರ್[64] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
47.	ಶಾಬಾಜ್ ಬಿನ್ ಅಫ್ಜಲ್, ವಿಳಾಸ ನಂ. 3, 14ನೇ ಕ್ರಾಸ್, ಗೋವಿಂದಪುರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239201/2023 ಫಾರ್ ಆರ್[65] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
48.	ಸೈಯದ್ ಶೊಹಿಬ್ ಬಿನ್ ಸೈಯದ್ ಮತೀನ್, ವಿಳಾಸ ನಂ. 6, 2ನೇ ಮೇನ್, ಅಂಬೇಡ್ಕರ್ ನಗರ, ಲೊರಿಟಾ ಸ್ಕೂಲ್ ಹತ್ತಿರ, ಕಾಫೀ ಬೋರ್ಡ್ ಕಾಲೊನಿ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239202/2023 ಫಾರ್ ಆರ್[67] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 839/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
49.	ಸಾವೂದ್ ಖುರೇಶಿ ಬಿನ್ ಲೇಟ್ ಲಾಲ್ ಖುರೇಶಿ, ವಿಳಾಸ ಬೇಕರಿ ಹತ್ತಿರ, ದುಬೈ ಲೇಔಟ್, ಮೋದಿ ರೋಡ್, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239203/2023 ಫಾರ್ ಆರ್[68] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
50.	ಜುಬೇರುಲ್ಲಾ ಖಾನ್ @ ಜುಬೇರ್ ಬಿನ್ ಅಯೂಬ್, ವಿಳಾಸ ಡಿ.ಜೆ.ಹಳ್ಳಿ ಪೊಲೀಸ್ ಠಾಣೆ ಎದುರು, ಮೋದಿ ರೋಡ್, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239204/2023 ಫಾರ್ ಆರ್[70] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
51.	ಸೈಯದ್ ಅರ್ಫಾತ್ @ ಅರ್ಫಾತ್ ಬಿನ್ ನಜೀರ್, ವಿಳಾಸ ನಂ. 7, 7ನೇ ಕ್ರಾಸ್, ಮುಲ್ಲಾ ಟೀ ಹೊಟೇಲ್ ಹತ್ತಿರ, ಮೋದಿ ರೋಡ್, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239205/2023 ಫಾರ್ ಆರ್[71] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
52.	ಸೈಯದ್ ಶಾಬಾಜ್ ಬಿನ್ ನವಾಜ್, ವಿಳಾಸ ಅಮೀನ್ ಮಸೀದಿ ಹತ್ತಿರ, ಅನ್ವರ್ ಲೇಔಟ್, ಟ್ಯಾನರಿ ರೋಡ್, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239206/2023 ಫಾರ್ ಆರ್[72] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
53.	ಅರ್ಫಾತ್ ಪಾಷಾ ಬಿನ್ ಎಂ. ಬಾಬು, ವಿಳಾಸ ನಂ. 388, ಎಸ್.ಆರ್.ಬ್ಲಾಕ್, 1ನೇ ಕ್ರಾಸ್, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239207/2023 ಫಾರ್ ಆರ್[74] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
54.	ಫಯಾಜ್ ಬಿನ್ ಶೇಕ್ ಹುಸೇನ್, ವಿಳಾಸ ನಂ. 43, 7ನೇ ಕ್ರಾಸ್, ಪಾರಿಜಾತ ಹೈ ಸ್ಕೂಲ್, ವೆಂಕಟೇಶಪುರ, ಟ್ಯಾನರಿ ರೋಡ್, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239208/2023 ಫಾರ್ ಆರ್[75] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
55.	ಸೈಯದ್ ಇಮ್ತಿಯಾಜ್ ಅಹ್ಮದ್ ಬಿನ್ ಸೈಯದ್ ಜಾಫರ್, ವಿಳಾಸ 3ನೇ ಕ್ರಾಸ್, ಪಿಳ್ಳಣ್ಣ ಗಾರ್ಡನ್, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239209/2023 ಫಾರ್ ಆರ್[78] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
56.	ಮೊಹಮ್ಮದ್ ಇರ್ಫಾನ್ ಬಿನ್ ಮೊಹಮ್ಮದ್ ಅಸ್ಲಾಮ್, ವಿಳಾಸ ನಂ. 22, 3ನೇ ಕ್ರಾಸ್, 10ನೇ ಮೇನ್, ಕೆಹೆಚ್‌ಬಿ ಕಾವಲ್ ಬೈರಸಂದ್ರ, ಬೆಂಗಳೂರು 560032, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239210/2023 ಫಾರ್ ಆರ್[80] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
57.	ಸೈಯದ್ ಜಿಬ್ರಾನ್ ಬಿನ್ ಅಮ್ಜದ್, ವಿಳಾಸ ತುರಾ ಮಾಸ್ಕ್ ಹತ್ತಿರ, ಶಾಮಪುರ ಮೇನ್ ರೋಡ್, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239211/2023 ಫಾರ್ ಆರ್[82] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
58.	ಸೈಯದ್ ಸಫೀರ್ ಅಹ್ಮದ್ ಬಿನ್ ಸೈಯದ್ ಇಮ್ರಾನ್, ವಿಳಾಸ ನಂ. 11/2, ಆರ್.ಕೆ.ಹೆರಿಟೇಜ್ ಅಪಾರ್ಟ್‌ಮೆಂಟ್, ಶಾಮಪುರ, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239212/2023 ಫಾರ್ ಆರ್[83] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
59.	ಸೈಯದ್ ಜಮೀರ್ ಅಹ್ಮದ್ ಬಿನ್ ಸೈಯದ್ ಇಮ್ರಾನ್, ವಿಳಾಸ ನಂ. 11/2, ಆರ್.ಕೆ.ಹೆರಿಟೇಜ್ ಅಪಾರ್ಟ್‌ಮೆಂಟ್, ಶಾಮಪುರ, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239213/2023 ಫಾರ್ ಆರ್[84] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
60.	ಅರ್ಬಾಜ್ ಖಾನ್ ಬಿನ್ ಶಫಿ ಖಾನ್, ವಿಳಾಸ ನಂ. 3, 6ನೇ ಮಹಡಿ, ಆರ್.ಕೆ.ಹೆರಿಟೇಜ್ ಅಪಾರ್ಟ್‌ಮೆಂಟ್, ಶಾಮಪುರ, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239214/2023 ಫಾರ್ ಆರ್[85] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
61.	ಸಮೀರ್ ಬಿನ್ ಅಬ್ದುಲ್ ಸತ್ತಾರ್, ವಿಳಾಸ ನಂ. 6, 14ನೇ ಕ್ರಾಸ್, ಗೋವಿಂದಪುರ, ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239215/2023 ಫಾರ್ ಆರ್[86] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
62.	ಮೊಹಮ್ಮದ್ ಅರ್ಷದ್ ಬಿನ್ ಮೊಹಮ್ಮದ್ ಇಶಾಕ್, ವಿಳಾಸ ನಂ. 1049, 6ನೇ ಕ್ರಾಸ್, ಆರ್.ಕೆ.ಹೆಗಡೆ ನಗರ, ಥಣಿಸಂದ್ರ ಮುಖ್ಯರಸ್ತೆ, ಬೆಂಗಳೂರು 560077, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239216/2023 ಫಾರ್ ಆರ್[88] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
63.	ಮೊಹಮ್ಮದ್ ಮುದಾಸೀರ್ ಬಿನ್ ಅಬ್ದುಲ್ ಮಜಿದ್, ವಿಳಾಸ ನಂ. 1412, 12ನೇ ಕ್ರಾಸ್, ಆರ್.ಕೆ.ಹೆಗಡೆ ನಗರ, ಥಣಿಸಂದ್ರ ಮುಖ್ಯರಸ್ತೆ, ಬೆಂಗಳೂರು 560077, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239217/2023 ಫಾರ್ ಆರ್[90] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
64.	ಶೇಕ್ ಅಮೀನ್ ಬಿನ್ ಸೈಯದ್ ಅರೀಫ್ @ ಸೈಯದ್ ಸಾದಿಕ್, ವಿಳಾಸ, 5ನೇ ಕ್ರಾಸ್, 5ನೇ ಮೇನ್, ಅಲಿ ಮಸೀದಿ ಹತ್ತಿರ, ಥಣಿಸಂದ್ರ, ಬೆಂಗಳೂರು 560077, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239218/2023 ಫಾರ್ ಆರ್[91] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
65.	ಮೊಹಮ್ಮದ್ ಅಜರ್ ಬಿನ್ ಬಾಬು, ವಿಳಾಸ ನಂ. 07, ಅಮರಜೀತ್ ಲೇಔಟ್, ಥಣಿಸಂದ್ರ, ಬೆಂಗಳೂರು 560077, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239219/2023 ಫಾರ್ ಆರ್[92] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
66.	ಜಾವೀದ್ ಷರೀಫ್ ಬಿನ್ ಮಹಬೂಬ ಷರೀಫ್, ವಿಳಾಸ ನಂ. 148, ಸೊಲ್ಲಪುರದಮ್ಮ ಟೆಂಪಲ್, ಸೋಪ್ ಫ್ಯಾಕ್ಟರಿ, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239220/2023 ಫಾರ್ ಆರ್[93] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
67.	ಮೊಹಮ್ಮದ್ ಸಿದ್ದಿಕ್ ಬಿನ್ ಮೊಹಮ್ಮದ್ ಮುಖ್ತಿಯಾರ್, ವಿಳಾಸ ನಂ. 144, 1ನೇ ಕ್ರಾಸ್, ರಾಜಪ್ಪ ಬ್ಲಾಕ್, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239221/2023 ಫಾರ್ ಆರ್[96] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
68.	ಸೈಯದ್ ನವಾಜ್ ಬಿನ್ ಗುಲಾಬ್ ಜಾನ್, ವಿಳಾಸ 2ನೇ ಕ್ರಾಸ್, ಶಾದಾಬ್‌ನಗರ, ಕಾವಲ್ ಬೈರಸಂಸಂದ್ರ, ಆರ್.ಟಿ.ನಗರ, ಬೆಂಗಳೂರು 560032, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239222/2023 ಫಾರ್ ಆರ್[97] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
69.	ಮೊಹಮ್ಮದ್ ಉಮರ್ ಫಾರೂಕ್ ಬಿನ್ ಅಲೀಂ, ವಿಳಾಸ ನಂ. 3284, 30ನೇ ಕ್ರಾಸ್, ನಾಗಮ್ಮ ಲೇಔಟ್, ಕಾವಲ್ ಬೈರಸಂದ್ರ, ಆರ್.ಟಿ.ನಗರ ಅಂಚೆ, ಬೆಂಗಳೂರು 560032, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239223/2023 ಫಾರ್ ಆರ್[98] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
70.	ಸೈಯದ್ ಶಬ್ಬೀರ್ ಬಿನ್ ಲೇಟ್ ಶಫೀಕ್, ವಿಳಾಸ ಎಸ್.ಆರ್.ಬ್ಲಾಕ್, 1ನೇ ಕ್ರಾಸ್, ಶಾಮಪುರ ಮುಖ್ಯರಸ್ತೆ, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239224/2023 ಫಾರ್ ಆರ್[101] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
71.	ಶಾಬಾಜ್ ಬಿನ್ ನವಾಜ್, ವಿಳಾಸ ಅಮೀನ್ ಮಸೀದಿ ಹತ್ತಿರ, ಅನ್ವರ್ ಲೇಔಟ್, ಟ್ಯಾನರಿ ರೋಡ್, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239225/2023 ಫಾರ್ ಆರ್[102] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 840/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
72.	ಸೈಯದ್ ಪಾಷಾ ಬಿನ್ ಅಬ್ದುಲ್ ರಜಾಕ್, ವಿಳಾಸ ನಂ. 36, 1ನೇ ಕ್ರಾಸ್, ಶಾಮಪುರ ಮುಖ್ಯರಸ್ತೆ, ಡಿ.ಜೆ. ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239226/2023 ಫಾರ್ ಆರ್[103] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 841/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
73.	ಅಬ್ದುಲ್ ರಹಮಾನ್ ಬಿನ್ ಅನ್ವರ್ ಬಾಷಾ, ವಿಳಾಸ 2ನೇ ಕ್ರಾಸ್, ಬಿಲಾಲ್ ಮಸೀದಿ ಹತ್ತಿರ, ಟ್ಯಾನರಿ ರೋಡ್, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239227/2023 ಫಾರ್ ಆರ್[104] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 841/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
74.	ಹುಸೇನ್ ಷರೀಫ್ ಬಿನ್ ಲೇಟ್ ಅಜ್ಗರ್ ಷರೀಫ್, ವಿಳಾಸ ನಂ. 331/22,ಓಲ್ಡ್ ಮದ್ರಾಸ್ ಸೋಪ್ ಫ್ಯಾಕ್ಟರಿ, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239228/2023 ಫಾರ್ ಆರ್[105] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 841/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
75.	ತುಫೈಲ್ ಅಹ್ಮದ್ ಬಿನ್ ಇರ್ಷಾದ್ ಅಹ್ಮದ್, ವಿಳಾಸ ನಂ. 11/2, ಶಾಮಪುರ ಮುಖ್ಯರಸ್ತೆ, ಆರ್.ಕೆ.ಹೆರಿಟೇಜ್ ಅಪಾರ್ಟ್‌ಮೆಂಟ್ ಪಕ್ಕ, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239229/2023 ಫಾರ್ ಆರ್[106] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 841/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
76.	ಸೈಯದ್ ಸಫೀರ್ ಅಹ್ಮದ್ ಬಿನ್ ಸೈಯದ್ ಇಮ್ರಾನ್, ವಿಳಾಸ ಆರ್‌ಕೆ ಹೆರಿಟೇಜ್ ಅಪಾರ್ಟ್‌ಮೆಂಟ್, ಶಾಮಪುರ, ಡಿ.ಜೆ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239230/2023 ಫಾರ್ ಆರ್[108] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 841/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
77.	ಮೊಹಮ್ಮದ್ ಅರ್ಷದ್ ಬಿನ್ ಮೊಹಮ್ಮದ್ ಇಷಾಕ್, ವಿಳಾಸ ನಂ. 1049, 6ನೇ ಕ್ರಾಸ್, ಆರ್‌ಕೆ ಹೆಗ್ಗಡೆ ನಗರ, ಥಣಿಸಂದ್ರ ಮುಖ್ಯರಸ್ತೆ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239231/2023 ಫಾರ್ ಆರ್[109] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 841/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
78.	ಅಯಾಜುದ್ದೀನ್ ಬಿನ್ ತಾಜುದ್ದೀನ್, ವಿಳಾಸ ನಂ. 8, 5ನೇ ಕ್ರಾಸ್, 5ನೇ ಮೇನ್, ರಾಚೇನಹಳ್ಳಿ, ಥಣಿಸಂದ್ರ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239232/2023 ಫಾರ್ ಆರ್[110] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 841/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
79.	ಸೈಯದ್ ಮುಜಾಹಿದ್ ಬಿನ್ ಸೈಯದ್ ನವಾಬ್, ವಿಳಾಸ 7ನೇ ಕ್ರಾಸ್, ಮುಸ್ಲಿಂ ಕಾಲೋನಿ, ಎಸಿ ಪೋಸ್ಟ್ ಕೆ.ಜಿ.ಹಳ್ಳಿ, ಬೆಂಗಳೂರು 560045, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239233/2023 ಫಾರ್ ಆರ್[112] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 841/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
80.	ಅಬ್ದುಲ್ ರಹಮಾನ್ ಬಿನ್ ಅನ್ವರ್ ಬಾಷಾ, ವಿಳಾಸ 2ನೇ ಕ್ರಾಸ್, ಬಿಲಾಲ್ ಮಸೀದಿ ಹತ್ತಿರ, ಟ್ಯಾನರಿ ರೋಡ್, ಬೆಂಗಳೂರು 560032, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239234/2023 ಫಾರ್ ಆರ್[113] ಇನ್ ಎಸ್‌ಎಲ್‌ಪಿ(ಸಿಆರ್‌ಎಲ್) ನಂ. 841/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**
81.	ಸಬಿಲ್ ಅಹ್ಮದ್ ಬಿನ್ ಮಕಬೂಲ್ ಅಹ್ಮದ್, ವಿಳಾಸ ನಂ. 1981, 26ನೇ ಕ್ರಾಸ್, ಬನಶಂಕರಿ, 2ನೇ ಸ್ಟೇಜ್, ಬೆಂಗಳೂರು 560070, ಬೆಂಗಳೂರು ಜಿಲ್ಲೆ, ಕರ್ನಾಟಕ	**ಪಿಐಡಿ: 239235/2023 ಫಾರ್ ಆರ್[124] ಇನ್ ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 841/2022ಎಸ್‌ಎಲ್‌ಪಿ (ಸಿಆರ್‌ಎಲ್) ನಂ. 838–842/2022 (ಸೆಕ್ 2–ಸಿ)**

ಮೇಲ್ಕಂಡ ಸ್ಪೆಷಲ್ ಲೀವ್ ಪಿಟಿಷನ್ (ಕ್ರಿಮಿನಲ್) ಅರ್ಜಿಯು, ಮೇಲೆ ಹೆಸರಿಸಲಾಗಿರುವ ಪಿಟಿಷನ್‌ದಾರರ ಪರವಾಗಿ ವಕೀಲರಾದ ಶ್ರೀ. ಅರವಿಂದ ಕುಮಾರ್ ಶರ್ಮಾ ಇವರಿಂದ ರಿಜಿಸ್ಟ್ರಿಯಲ್ಲಿ ಆನ್ ರೆಕಾರ್ಡ್ ಸಲ್ಲಿಕೆಯಾಗಿದ್ದು (ಪ್ರತಿ ಲಗತ್ತಿಸಲಾಗಿದೆ), 28ನೇ ಫೆಬ್ರವರಿ, 2022 ರಂದು ನ್ಯಾಯಾಲಯದ ಎದುರು ವಿಚಾರಣೆಗೆ ನಿಗದಿಯಾಗಿತ್ತು ಮತ್ತು ನ್ಯಾಯಾಲಯವು ಈ ಕೆಳಗಿನಂತೆ ಆದೇಶ ನೀಡಿರುತ್ತದೆ:–

"**ಶ್ರೀ. ಕೆ.ಎಂ.ನಟರಾಜ್,** ಪಿಟಿಷನ್‌ದಾರರ ಪರ ಎಎಸ್‌ಜಿ ರವರು ಉಚ್ಚ ನ್ಯಾಯಾಲಯದ ಏಕ ಸದಸ್ಯ ಪೀಠವು ರಿಟ್ ಜುರಿಸ್ಡಿಕ್ಷನ್ ಚಲಾವಣೆಯ ಮೇರೆಗೆ ಹೊರಡಿಸಿದ ದಿನಾಂಕ 10.06.2021ರ ಆಕ್ಷೇಪಾರ್ಹ ಆದೇಶವು, ಕೆಳಗಿನ ಎರಡು ಮೂಲ ಕಾರಣಗಳಿಂದಾಗಿ ಪ್ರಶ್ನಾರ್ಥಕವಾಗಿರುತ್ತದೆ ಎಂದು ತಿಳಿಸಿರುತ್ತಾರೆ:

ಮೊದಲ ಕಾರಣ: ಇನ್ವೆಸ್ಟಿಗೇಟಿಂಗ್ ಏಜೆನ್ಸಿ ಆಕ್ಟ್, 2008ರ ದಿನಾಂಕ 2022.03.02ರ ರಜನಿ ಮುಖಿ ರವರಿಂದ ನ್ಯಾಷನಲ್ ಡಿಜಿಟಲಿ ಸಹಿ ಹಾಕಲಾಗಿರುವ ಸೆಕ್ಷನ್ 21ರ ಪ್ರಕಾರ, ವಿಶೇಷ ನ್ಯಾಯಾಲಯ ಹೊರಡಿಸಿರುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿತ್ತು ಮತ್ತು ಆ ಮೇಲ್ಮನವಿಯ ವಿಚಾರಣೆಯು ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠದಿಂದ ನಡೆಯಬೇಕಾಗಿತ್ತು.

ಎರಡನೇ ಕಾರಣ: ಅನ್‌ಲಾಫುಲ್ ಆಕ್ಟಿವಿಟೀಸ್ (ಪ್ರಿವೆನ್ಷನ್) ಆಕ್ಟ್, 1967ರ ಸೆಕ್ಷನ್ 43–ಡಿ(2)(ಬಿ) ಪ್ರಕಾರ ಕಾಲಾವಧಿ ವಿಸ್ತರಣೆಯ ಶಾಸನಬದ್ಧ ಅಗತ್ಯತೆಗಳು ಕೇವಲ ಪಬ್ಲಿಕ್ ಪ್ರಾಸಿಕ್ಯೂಟರ್‌ರ ವರದಿಗೆ ನ್ಯಾಯಾಲಯ ತೃಪ್ತಿಯಾಗುವಂತಿರುವುದಿಲ್ಲ ಮತ್ತು ಅಂತಹ ಅಗತ್ಯತೆಗಳು ಆರೋಪಿತರ ವಿಚಾರಣೆಯ ಅವಕಾಶ ವಿಸ್ತಾರಗೊಳಿಸುವುದಿಲ್ಲ.

ಮೂರು ವಾರಗಳಲ್ಲಿ ಹಿಂದಿರುಗುವ ನೋಟಿಸ್ ಹೊರಡಿಸುವಿಕೆ.

ಟ್ರಯಲ್ ಕೋರ್ಟ್‌ಗಳ ಮೂಲಕ ಪ್ರತಿವಾದಿಗಳ ಸರ್ವೀಸ್‌ಗೆ ಅವಕಾಶವಿದೆ.

ಮತ್ತು ಅದಾಗ್ಯೂ, ಶೋಕಾಸ್ ನೋಟಿಸ್ ಸರ್ವೀಸ್, ಸರ್ವ್ ಆಗದಿರುವ ಪ್ರತಿವಾದಿಗಳ ಮೇಲೆ ಪರಿಣಾಮ ಬೀರುವುದಿಲ್ಲ ಮತ್ತು ಮೇಲ್ಕಂಡ ವಿಷಯವು ಮಾನ್ಯ ನ್ಯಾಯಾಲಯದ (ಇನ್ ಚೇಂಬರ್ಸ್) 03ನೇ ನವಂಬರ್, 2023 ರಂದು ನಿಗದಿಯಾಗಿತ್ತು ಹಾಗೂ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ:

ಐ.ಎ. ನಂ. 132126/2023

1. **ಪಿಟಿಷನ್‌ದಾರರ ಮಾನ್ಯ ವಕೀಲರು, ಶೋಕಾಸ್ ಸರ್ವ್ ಆಗದಿರುವ ಇನ್ನುಳಿದ 76 ಪ್ರತಿವಾದಿಗಳಿಗೆ ಪರಿಣಾಮಕಾರಿಯಾಗಿ ಪೂರಕ ಶೋಕಾಸ್ ಸರ್ವೀಸ್ ನೀಡುವುದಕ್ಕಾಗಿ ಐ.ಎ. ನಂ. 132126/2023 ಸಲ್ಲಿಸಿರುತ್ತಾರೆ.**
2. **ಪಿಟಿಷನರ್‌ವರ ಮಾನ್ಯ ವಕೀಲರನ್ನು ಆಲಿಸಲಾಯಿತು, ಮನವಿಗೆ ಅವಕಾಶ ನೀಡಲಾಯಿತು.**
3. **ಪಿಟಿಷನರ್ ಪರ ಮಾನ್ಯ ವಕೀಲರಿಗೆ ಪ್ರಕಟಣೆ ಸಮನ್ಸ್ ಹೊರಡಿಸುವ ಮೂಲಕ ರಿಜಿಸ್ಟ್ರಿ ತನ್ನ ಪ್ರಕ್ರಿಯೆ ಮುಂದುವರಿಸಿತು.**
4. **ಸದರಿ ಚಲಾವಣೆಯನ್ನು ನಾಲ್ಕು ವಾರಗಳನ್ನು ಪೂರ್ಣಗೊಳಿಸುವುದು.**
5. **ದಿನಪತ್ರಿಕೆಗಳಲ್ಲಿ ಪ್ರಕಟಣೆ ಉಲ್ಲೇಖಿಸಿದ ಮುಚ್ಚಳಿಕೆಯನ್ನು ನಿಗದಿತ ಅವಧಿಯೊಳಗೆ ಪಿಟಿಷನರ್‌ರಿಂದ ಸಲ್ಲಿಸಲಾಯಿತು, ವಿಷಯವನ್ನು ಪರಿಗಣನೆಗಾಗಿ ಪಟ್ಟಿ ಮಾಡಲಾಯಿತು.**

ಆದ್ದರಿಂದ, ಇದೀಗ, ಗಮನಿಸಿ ಮೇಲ್ಕಂಡ ವಿಷಯವನ್ನು ನಿಗದಿತ ಅವಧಿಯೊಳಗೆ ನ್ಯಾಯಾಲಯದ ಎದುರು ಹಾಜರುಪಡಿಸಲಾಗುತ್ತದೆ, ನೋಟಿಸ್ ಸರ್ವ್ ದಿನಾಂಕದಿಂದ ಮೂವತ್ತು ದಿನಗಳೊಳಗೆ ಅಥವಾ ಆ ಸಮಯದಲ್ಲಿ ನೀವು ಖುದ್ದಾಗಿಯಾಗಲಿ ಅಥವಾ ನಿಮ್ಮ ಪರವಾಗಿ ನಿಯೋಜಿತ ಆನ್–ರೆಕಾರ್ಡ್ ವಕೀಲರ ಮುಖಾಂತರವಾಗಿ ಈ ನ್ಯಾಯಾಲಯಕ್ಕೆ ಹಾಜರಾಗಬೇಕು. ನಂತರ, ಕೋರಿಕೆಯ ಪ್ರಕಾರ ಏಕೆ ಸ್ಪೆಷಲ್ ಲೀವ್ ಮತುತ ಮಧ್ಯಂತರ ಪರಿಹಾರ ನೀಡಬಾರದು ಮತ್ತು ಫಲಿತ ಮೇಲ್ಮನವಿಗೆ ಏಕೆ ಅವಕಾಶ ನೀಡಬಾರದು ಎಂಬುದಕ್ಕೆ ನೀವು ಶೋಕಾಸ್ ನೀಡಬೇಕು.

ನೀವು, ಆದೇಶ 22, ಎಸ್‌ಸಿಆರ್ 2013ರ ಅಡಿಯಲ್ಲಿ ನೀಡಲಾಗಿರುವ ಪಿಟಿಷನ್‌ಗೆ ವಿರುದ್ಧವಾಗಿ, ನೋಟಿಸ್ ಸ್ವೀಕೃತ ದಿನಾಂಕದಿಂದ ಮೂವತ್ತು ದಿನಗಳೊಳಗೆ ಅಥವಾ ವಿಚಾರಣೆಗೆ ನಿಗದಿತ ದಿನಾಂಕಕ್ಕೆ ಎರಡು ವಾರ ಮುಂಚಿತವಾಗಿ, ಯಾವುದು ಮೊದಲೊ ಆ ಅವಧಿಯೊಳಗೆ, ನಿಮ್ಮ ವಿರೋಧದ ಅಫಿಡವಿಟ್‌ನ್ನು ಸಲ್ಲಿಸಬೇಕು, ಆದರೆ ಇದನ್ನು ನ್ಯಾಯದ ಪ್ರಶ್ನೆಗಳಿಗೆ ವಿರೋಧದ ಹಿನ್ನಲೆಗಳಲ್ಲಿ ರೂಪಗೊಂಡಿರುವ ಅಥವಾ ಸ್ಪೆಷಲ್ ಲೀವ್ ಪಿಟಿಷನ್ (ಕ್ರಿಮಿನಲ್) ಹಿನ್ನಲೆಗಳಲ್ಲಿ ಮಾತ್ರ ರೂಪಗೊಂಡಿರಬೇಕು ಮತ್ತು ಯಾರ ಸ್ಪೆಷಲ್ ಲೀವ್ ಪಿಟಿಷನ್ (ಕ್ರಿಮಿನಲ್) ವಿರುದ್ಧ ನ್ಯಾಯಲಯದ ಎದುರು ಪ್ಲೀಡಿಂಗ್ ಮತ್ತು ಡಾಕ್ಯೂಮೆಂಟ್ ಫೈಲಿಂಗ್‌ಗೆ ಮುಂದುವರಿಯುವುದು ಹಾಗೂ ಅದಾಗಲೇ ಮಧ್ಯಂತರ ಆದೇಶ ಅಥವಾ ಮಧ್ಯಂತರ ಆದೇಶ ವೆಕೇಟಿಂಗ್‌ಗಾಗಿ ಈಗಾಗಲೇ ಆದೇಶವಾಗಿದ್ದಲ್ಲಿ, ಆದೇಶ ಗ್ರಾಂಟ್ ಮಾಡದಿರುವಂತೆ ಹಿನ್ನಲೆಗಳನ್ನು ಕೂಡ ರೂಪಿಸುವುದು.

ಗಮನಿಸಬೇಕು, ಮುಂದುವರಿದಂತೆ ಮೇಲ್ಕಂಡ ವಿಷಯಕ್ಕೆ ಸಬಂಧಿಸಿದಂತೆ ನ್ಯಾಯಾಲಯಕ್ಕೆ ನೀವು ಹಾಜರಾಗದಿದ್ದಲ್ಲಿ, ರಿಸಲ್ಟಂಟ್ ಅಪೀಲ್ ವಿಚಾರಣೆಗಾಗಿ ಸ್ಪೆಷಲ್ ಲೀವ್ ಗ್ರಾಂಟ್ ನಂತರವೂ ನಿಮಗೆ ಯಾವುದೇ ಹೆಚ್ಚಿನ ನೋಟಿಸ್ ನೀಡಲಾಗುವುದಿಲ್ಲ ಮತ್ತು ಮೇಲ್ಕಂಡ ವಿಷಯವನ್ನು ನಿಮ್ಮ ಅನುಪಸ್ಥಿತಿಯಲ್ಲಿಯೇ ಇತ್ಯರ್ಥಪಡಿಸಲಾಗುತ್ತದೆ.

ದಿನಾಂಕ: 28ನೇ ನವಂಬರ್, 2023

ಸಹಿ/– ಅಸಿಸ್ಟಂಟ್ ರಿಜಿಸ್ಟ್ರಾರ್

ಪ್ರತಿ:–

ಶ್ರೀ. ಅರವಿಂದ್ ಕುಮಾರ್ ಶರ್ಮಾ (ವಕೀಲರು)

ಬಿ ಫೇಸ್ 2 ಪಾಕೆಟ್ ಎ ಮಯೂರ್ ವಿಹಾರ್ ದೆಹಲಿ–91 ನವದೆಹಲಿ, ದೆಹಲಿ

ಶ್ರೀ. ಮೆಹಮೂದ್ ಉಮರ್ ಫಾರೂಕಿ (ವಕೀಲರು)

402, ಪ್ಲಾಟ್ ನಂ. ಎ–226, ಠೋಕರ್ ನಂ. 7, ಶಾಹೀನ್ ಬಾಗ್, ಜಾಮಿಯಾನಗರ, ಓಖ್ಲಾ, ನವದೆಹಲಿ–25

ಸಹಿ/– ಅಸಿಸ್ಟಂಟ್ ರಿಜಿಸ್ಟ್ರಾರ್

ಸೂಚನೆ:

1. **ಕಾನೂನು ನೆರವು:** ಅರ್ಹ ದಾವೆದಾರರು, ಸರ್ವೋಚ್ಚ ನ್ಯಾಯಾಲಯ ಕಾನೂನು ಸೇವೆಗಳ ಸಮಿತಿ ಮತ್ತು ಸರ್ವೋಚ್ಚ ನ್ಯಾಯಾಲಯ ಮಿಡಲ್ ಇನ್ಕಮ್ ಗ್ರೂಪ್ ಕಾನೂನು ನೆರವುಗಳ ಸೊಸೈಟಿ ಇವರಿಂದ ಕಾನೂನು ಸೇವೆಗಳಿಗಾಗಿ ಒಬ್ಬ ವಕೀಲರನ್ನು ಪಡೆದುಕೊಳ್ಳಬಹುದು.

   ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಸರ್ವೋಚ್ಚ ನ್ಯಾಯಾಲಯ ಕಾನೂನು ಸೇವೆಗಳ ಸಮಿತಿಯ ಕಾರ್ಯದರ್ಶಿ ಇವರನ್ನು ಅಥವಾ ಸದಸ್ಯ ಕಾರ್ಯದರ್ಶಿ, ಸರ್ವೋಚ್ಚ ನ್ಯಾಯಾಲಯ ಮಿಡಲ್ ಇನ್ಕಮ್ ಗ್ರೂಪ್ ಕಾನೂನು ನೆರವು ಸೊಸೈಟಿ, 107–108, ಲಾಯರ್ಸ್ ಚೇಂಬರ್ಸ್, ಆರ್.ಕೆ.ಜೈನ್ ಬ್ಲಾಕ್, ಪೊಲೀಸ್ ಠಾಣೆ ಹತ್ತಿರ, ಸರ್ವೋಚ್ಚ ನ್ಯಾಯಾಲಯದ ಆವರಣ, ತಿಲಕ ಮಾರ್ಗ, ನವದೆಹಲಿ–110001 ಇವರನ್ನು ಸಂಪರ್ಕಿಸಿರಿ [ದೂರವಾಣಿ ಸಂ. 011–23116353, 23116354 (ಅಡಿಷನಲ್ ಬಿಲ್ಡಿಂಗ್ ಕಾಂಪ್ಲೆಕ್ಸ್) ಮತ್ತು 011–23381257 (ಫ್ರಂಟ್ ಆಫೀಸ್)]

2) **ಮಧ್ಯಸ್ಥಿಕೆ:** ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ತರಬೇತಿ ಪಡೆದ ಮಧ್ಯಸ್ಥರಿಂದ ವಿವಾದಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸುವ ಸೌಲಭ್ಯವು ಸುಪ್ರೀಂ ಕೋರ್ಟ್‌ನಲ್ಲಿ ಲಭ್ಯವಿದೆ.

   ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಕೋ–ಆರ್ಡಿನೇಟರ್ ಸರ್ವೋಚ್ಚ ನ್ಯಾಯಾಲಯದ ಮಧ್ಯಸ್ಥರ ಕೇಂದ್ರವನ್ನು ಸಂಪರ್ಕಿಸಿ: 109, ವಕೀಲರ ಕೋಣೆಗಳು ಆರ್.ಕೆ ಜೈನ್ ಬ್ಲಾಕ್ – ಪೋಸ್ಟ್ ಆಫೀಸರ್ ಹತ್ತಿರ, ಸುಪ್ರೀಂ ಕೋರ್ಟ್ ಕಾಂಪೌಂಡ್ ತಿಲಕ್ ಮಾರ್ಗ್, ನವದೆಹಲಿ–110001 ದೂರವಾಣಿ ಸಂಖ್ಯೆ 011–2307432

CBC 19133/11/0090/2324

ಸರ್ಕಾರದ ತೆರಿಗೆ ಬಾಕಿ: ಎಚ್‌ಎಎಲ್‌ನಿಂದ ₹91.50 ಕೋಟಿ ಸಂಗ್ರಹ

ವಸೂಲಿ: 6 ತಿಂಗಳು ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಸ್ತಿಗಳಿಂದ ಬಿಬಿಎಂಪಿಗೆ ಬಾಕಿ ಇರುವ ತೆರಿಗೆಯನ್ನು ಒಂದು ಬಾರಿ ತೀರುವಳಿ ಯೋಜನೆಯಡಿ ವಸೂಲಿ ಮಾಡುವ ಅವಧಿಯನ್ನು 6 ತಿಂಗಳು ಅವಧಿಗೆ ವಿಸ್ತರಿಸಲು ಗುರುವಾರ ನಡೆದ ಸಚಿವ ಸಂಪುಟ ಒಪ್ಪಿಗೆ ನೀಡಿದೆ.


ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು.

ಎಚ್‌ಎಎಲ್‌ನಿಂದ ₹91.50 ಕೋಟಿ, ಎಚ್‌ಎಂಟಿಯಿಂದ ₹3.79 ಕೋಟಿ ಬಾಕಿ ಸಂಗ್ರಹಿಸಲಾಗಿದೆ. ಇದೇ ರೀತಿ ಹಲವು ಸರ್ಕಾರಿ ಸಂಸ್ಥೆಗಳ ಸ್ವತ್ತುಗಳಿಂದ ಬಾಕಿ ಉಳಿದಿದೆ. ಇದರ ಮೊತ್ತ ಸಾವಿರಾರು ಕೋಟಿ ಆಗಬಹುದು. 2024 ರ ಜೂನ್ 30 ರವರೆಗೆ ಒಂದು ಬಾರಿ ಪರಿಹಾರ ಯೋಜನೆ ವಿಸ್ತರಿಸಲಾಗಿದೆ ಎಂದರು.

136 ಸಂಚಾರಿ ಸಿಗ್ನಲ್ ಉನ್ನತೀಕರಣ: ಬೆಂಗಳೂರು ನಗರ ಸಂಚಾರ ವಿಭಾಗ ವ್ಯಾಪ್ತಿಯಲ್ಲಿರುವ 136 ಸಂಚಾರಿ ಸಿಗ್ನಲ್ ವ್ಯವಸ್ಥೆಗಳನ್ನು ಉನ್ನತೀಕರಿಸಲು ಮತ್ತು ಅಡಾಪ್ಟಿವ್ ಸಂಚಾರ ವ್ಯವಸ್ಥೆ ನಿಯಂತ್ರಣಕ್ಕೆ ಸಿಂಕ್ರೊನೈಸೇಶನ್ ಮಾಡಲು ಸಂಪುಟ ಒಪ್ಪಿಗೆ ನೀಡಿದೆ.

29 ಸ್ಥಳಗಳಲ್ಲಿ ಹೊಸ ಅಡಾಪ್ಟಿವ್ ಸಂಚಾರ ವ್ಯವಸ್ಥೆ ನಿಯಂತ್ರಣ ಘಟಕಗಳು 5 ವರ್ಷಗಳ ಅವಧಿಗೆ ನಿರ್ವಹಿಸಲಿವೆ. ಇದಕ್ಕೆ ₹58.54 ಕೋಟಿ ವೆಚ್ಚವಾಗಲಿದೆ. ಇಂಟರ್ ಸೆಕ್ಷನ್‌ಗಳಲ್ಲಿ ವಾಹನಗಳ ಚಾಲನೆ ಸುಗಮವಾಗಲಿದೆ. ದಟ್ಟಣೆ ಕಡಿಮೆಗೊಳಿಸಲು ಸಹಾಯಕ ಆಗಲಿದೆ ಎಂದರು.

ಬಿಎಂಟಿಸಿಗೆ 20 ವಿದ್ಯುತ್ ಚಾಲಿತ ಬಸ್‌ಗಳನ್ನು ಜಿಸಿಸಿ ಆಧಾರದ ಮೇಲೆ ಕಾರ್ಯಾಚರಣೆ ನಡೆಸಲು ಸಂಪುಟ ಒಪ್ಪಿಗೆ ನೀಡಿದೆ.



ಎಚ್.ಕೆ.ಪಾಟೀಲ

ಕೆಂಪೇಗೌಡ ವಿಮಾನ ನಿಲ್ದಾಣ ಬಳಿ 2 ಇಂದಿರಾ ಕ್ಯಾಂಟೀನ್

ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸೂಕ್ತ ಸ್ಥಳ ಗುರುತಿಸಿ ಎರಡು ಇಂದಿರಾ ಕ್ಯಾಂಟೀನ್ ನಿರ್ಮಿಸಲು ಸಂಪುಟ ಒಪ್ಪಿಗೆ ನೀಡಿದೆ. ವಿಮಾನ ನಿಲ್ದಾಣಕ್ಕೆ ಪ್ರಯಾಣಿಕರನ್ನು ಕರೆದೊಯ್ಯುವ, ವಾಪಸ್ ಕರೆತರುವ ಕ್ಯಾಬ್‌ಗಳ ಚಾಲಕರು, ಅಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರು ಮತ್ತು ಸಾರ್ವಜನಿಕರಿಗೆ ಇದರಿಂದ ಅನುಕೂಲವಾಗಲಿದೆ.

ಟರ್ಮಿನಲ್–1 ರ ಮುಂಭಾಗದಲ್ಲಿ ಪಿ 7 ಎಂದು ಗುರುತಿಸಲಾಗಿರುವ ವಾಹನ ಪಾರ್ಕಿಂಗ್ ಪ್ರದೇಶದಲ್ಲಿ ಅಡುಗೆ ಕೋಣೆ ಸಹಿತ ಕ್ಯಾಂಟೀನ್ (₹87 ಲಕ್ಷ) ಮತ್ತು ಇನ್ನೊಂದು ಕ್ಯಾಂಟೀನ್(₹48 ಲಕ್ಷ) ಸ್ಥಾಪಿಸಲು ಅನುಮೋದನೆ ನೀಡಲಾಗಿದೆ ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಮೂರು ಬಸ್‌ಗಳ ಮೇಲೆ ಕಲ್ಲು ತೂರಿದ ಕಿಡಿಗೇಡಿಗಳು

ಯಮಕನಮರಡಿ (ಬೆಳಗಾವಿ ಜಿಲ್ಲೆ): ಮೂರು ಬಸ್‌ಗಳ ಮೇಲೆ ಕಿಡಿಗೇಡಿಗಳು ಕಲ್ಲು ತೂರಿದ್ದರಿಂದ ಪ್ರಯಾಣಿಕರೊಬ್ಬರು ಗಾಯಗೊಂಡ ಘಟನೆ ಹುಕ್ಕೇರಿ ತಾಲ್ಲೂಕಿನ ಬೆನಕನಹೊಳಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ರಾತ್ರಿ ನಡೆದಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಒಂದು ಹಾಗೂ ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎರಡು ಬಸ್‌ಗಳ ಮೇಲೆ ಕಲ್ಲು ತೂರಲಾಗಿದೆ. ಈ ಪೈಕಿ ಕರ್ನಾಟಕದ ಬಸ್‌ನಲ್ಲಿದ್ದ ವ್ಯಕ್ತಿಯೊಬ್ಬರಿಗೆ ಗಾಯವಾಗಿದೆ.



ರಾಜ ಕಾಲುವೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ನಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ತೀರಾ ಹದಗೆಟ್ಟ ರಾಜಕಾಲುವೆಗಳ ಸ್ವಚ್ಛತೆ, ತಡೆಗೋಡೆ ನಿರ್ಮಾಣ, ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಅಧಿಕಾರಿಗಳೊಂದಿಗೆ ಎಲ್ಲಾ ಕಡೆ ಹೋಗಿ ಎಲ್ಲೆಲ್ಲಿ ಜರೂರಾಗಿ ಕೆಲಸ ಆಗಬೇಕು. ಎಲ್ಲೆಲ್ಲಿ ಬಾಕಿ ಇದೆ ಎಂದು ಪರಿಶೀಲಿಸುತ್ತಿದ್ದೇವೆ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಶೆಟ್ಟಿಹಳ್ಳಿ ವ್ಯಾಪ್ತಿಯ ಎನ್.ಆರ್.ಆರ್ ಕಾಲೇಜು ಹತ್ತಿರ, ಕಮ್ಮಗೊಂಡನಹಳ್ಳಿಯಲ್ಲಿ ರಾಜಕಾಲುವೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

'ಹಲವು ಭಾಗಗಳಲ್ಲಿ ಚರಂಡಿ ಮತ್ತು ರಾಜಕಾಲುವೆಗಳಲ್ಲಿ ಗಿಡಗಳು ಬೆಳೆದು ನೀರು ಸರಾಗವಾಗಿ ಹರಿಯಲು ಜಾಗವಿಲ್ಲದೆ ದುರ್ನಾತ ಬೀರುತ್ತಿತ್ತು. ಇದರಿಂದ ಸೊಳ್ಳೆಗಳು ಉತ್ಪತ್ತಿಯಾಗಿ ಅನೇಕ ಮಾರಣಾಂತಿಕ ಮತ್ತು ಸಾಂಕ್ರಾಮಿಕ ಕಾಯಿಲೆಗಳು ಹರಡುತ್ತವೆ. ಆದ್ದರಿಂದ ಅಂತಹ ಚರಂಡಿ ಮತ್ತು ರಾಜಕಾಲುವೆ ದುರಸ್ತಿ ಕಾರ್ಯ ಅಚ್ಚುಕಟ್ಟಾಗಿ ಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದರು.

'ಮಳೆಗಾಲದಲ್ಲಿ ರಾಜ ಕಾಲುವೆಗಳಲ್ಲಿ ನೀರು ಹರಿಯದೆ ತಗ್ಗು ಪ್ರದೇಶದ ಮನೆಗಳಿಗೆ ನುಗ್ಗಿ ಜಲಾವೃತ ಆಗುವ ಸಂಭವವಿತ್ತು. ಅಂತಹ ರಾಜಕಾಲುವೆಗಳ ದುರಸ್ತಿ ಕಾರ್ಯ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ದಾಸರಹಳ್ಳಿ ಮಂಡಲ ಅಧ್ಯಕ್ಷ ಸೋಮಶೇಖರ್, ಹನಶ್ರೀ ಮಂಜುನಾಥ್, ರಮೇಶ್ ಯಾದವ್, ಜಬ್ಬಾರ್ ಉಪಸ್ಥಿತರಿದ್ದರು.



ಕಮ್ಮಗೊಂಡನಹಳ್ಳಿಯಲ್ಲಿ ರಾಜಕಾಲುವೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್. ಮುನಿರಾಜು ಚಾಲನೆ ನೀಡಿದರು. ದಾಸರಹಳ್ಳಿ ಮಂಡಲ ಅಧ್ಯಕ್ಷ ಸೋಮಶೇಖರ್, ಹನಶ್ರೀ ಮಂಜುನಾಥ್, ರಮೇಶ್ ಯಾದವ್, ಜಬ್ಬಾರ್ ಪಾಲ್ಗೊಂಡಿದ್ದರು.

ಮತದಾರರ ಪಟ್ಟಿ ಪರಿಷ್ಕರಣೆಯ ಪರಿಶೀಲನೆ

ಬೆಂಗಳೂರು: ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ನಗರದ ವಿವಿಧ ಬಡಾವಣೆಗಳ ಮನೆಗಳಿಗೆ ಭೇಟಿ ನೀಡಿ, ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಪರಿಶೀಲಿಸಿದರು.



ತುಷಾರ್ ಗಿರಿನಾಥ್

ಕೇಂದ್ರ ಚುನಾವಣೆ ಆಯೋಗದ ನಿರ್ದೇಶನದಂತೆ ಅಧಿಕಾರಿಗಳು ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಸಮರ್ಪಕವಾಗಿ ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಲು (ಸೂಪರ್ ಚೆಕ್ಕಿಂಗ್) ಗುರುವಾರ ನಗರದ ವಿವಿಧೆಡೆ ಸಂಚರಿಸಿದರು.

ನವೆಂಬರ್ 27ರಂದು ಮತದಾರರ ಕರಡು ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಡಿಸೆಂಬರ್ 9ರವರೆಗೆ ಆಕ್ಷೇಪಣೆ, ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿತ್ತು. ಇದಾದ ನಂತರ ಬಿಎಲ್‌ಒ ಮತ್ತು ಮೇಲ್ವಿಚಾರಕರು ಮತದಾರರ ಪಟ್ಟಿ ಪರಿಷ್ಕರಿಸುವ ಕಾರ್ಯ ಮಾಡಿದ್ದಾರೆ. ಕೆಲ ಮನೆಗಳಿಗೆ ಭೇಟಿ ನೀಡಿದ ಜಿಲ್ಲಾ ಚುನಾವಣಾಧಿಕಾರಿ, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಅವರು ಪರಿಷ್ಕರಿಸಿರುವ ಪಟ್ಟಿಯನ್ನು 'ಸೂಪರ್ ಚೆಕ್ಕಿಂಗ್' ಮಾಡಿದರು.

ಶಾಂತಿನಗರ ಹಾಗೂ ಶಿವಾಜಿನಗರದ ವಿಧಾನಸಭೆ ಕ್ಷೇತ್ರದಲ್ಲಿ ನಮೂನೆ-6, ನಮೂನೆ-7 ಹಾಗೂ ನಮೂನೆ-8 ಅನ್ನು ಪರಿಶೀಲಿಸಿ ಅಧಿಕಾರಿಗಳು ಕೈಗೊಂಡ ಕ್ರಮದ ಕುರಿತು ಅರ್ಜಿದಾರರಿಗೆ ಮಾರ್ಗದರ್ಶನ ನೀಡಲು ತುಷಾರ್ ಗಿರಿನಾಥ್ ಸೂಚಿಸಿದರು.

ಹೆಬ್ಬಾಳ ವಿಧಾನಸಭೆ ಕ್ಷೇತ್ರದ ಸಂಜಯನಗರ, ನಾಗಶೆಟ್ಟಿಹಳ್ಳಿಯ ಟೀಚರ್ಸ್ ಕಾಲೊನಿ, ಯಲಹಂಕ ವಿಧಾನ ಸಭೆ ಕ್ಷೇತ್ರದ ಪೂರ್ವಾಂಕರ ಅಪಾರ್ಟ್‌ಮೆಂಟ್, ಯಲಹಂಕದ ರೈಲ್ವೆ ವೀಲ್ ಫ್ಯಾಕ್ಟರಿ ಕ್ವಾರ್ಟಸ್‌ಗಳಲ್ಲಿ ಕೆಲವು ಮನೆಗಳಿಗೆ ಭೇಟಿ ನೀಡಿ, ಪರಿಷ್ಕೃತ ಪಟ್ಟಿಯನ್ನು ಪರಿಶೀಲಿಸಿದರು.

'ಸೂಪರ್ ಚೆಕ್ಕಿಂಗ್ ಮಾಡಿ ಎಲ್ಲವೂ ಸರಿಯಿದ್ದು, ನಮೂನೆಗಳಿಗೆ ಮನೆಯವರ ಹೆಸರು, ವಿಳಾಸ, ಸಹಿ ಪರಿಶೀಲನೆಯ ಜೊತೆಗೆ ಎರಡು ಕಡೆ ಹೆಸರಿದ್ದಲ್ಲಿ ಅದನ್ನು ಸಂಬಂಧಪಟ್ಟ ಅಧಿಕಾರಿಯ ಜೊತೆ ಮಾತನಾಡಿ, ಒಂದು ಕಡೆ ಹೆಸರನ್ನು ತೆಗೆಸಬೇಕು' ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಚುನಾವಣಾ ವಿಭಾಗದ ವಿಶೇಷ ಆಯುಕ್ತ ಆರ್. ರಾಮಚಂದ್ರನ್, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ (ಉತ್ತರ) ಸ್ನೇಹಲ್ ಉಪಸ್ಥಿತರಿದ್ದರು.

ನೆಟ್ಟಿಗೆರೆ: 25ರಂದು ಎಸ್‌ವಿಎನ್ ಜನ್ಮಶತಮಾನೋತ್ಸವ ಸಮಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್ ಇದೇ 25ರಂದು ಬೆಳಿಗ್ಗೆ 9.30ಕ್ಕೆ ಕನಕಪುರ ರಸ್ತೆಯ ನೆಟ್ಟಿಗೆರೆ ಗ್ರಾಮದ ಎಸ್.ವಿ. ನಾರಾಯಣಸ್ವಾಮಿ ರಾವ್ ಮೆಮೊರಿಯಲ್ ಹಾಲ್‌ನಲ್ಲಿ ಎಸ್.ವಿ. ನಾರಾಯಣಸ್ವಾಮಿ ರಾವ್ ಅವರ ಜನ್ಮಶತಮಾನೋತ್ಸವ ಸಮಾರಂಭ ಹಮ್ಮಿಕೊಂಡಿದೆ.

ಎಸ್.ವಿ. ನಾರಾಯಣಸ್ವಾಮಿ ರಾವ್ ಅವರು ಟ್ರಸ್ಟ್‌ನ ಸಂಸ್ಥಾಪಕರಾಗಿದ್ದಾರೆ. ಮೇಲುಕೋಟೆಯ ಯತಿರಾಜ ಮಠದ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಲಿದ್ದಾರೆ. ಮೃದಂಗ ವಾದಕ ಟಿ.ವಿ. ಗೋಪಾಲಕೃಷ್ಣನ್, ಉತ್ತರಾದಿ ಮಠದ ಜಯತೀರ್ಥ ವಿದ್ಯಾಪೀಠದ ಆಡಳಿತಾಧಿಕಾರಿ ಸತ್ಯಧ್ಯಾನಾಚಾರ್ ಕಟ್ಟಿ, ವಿದ್ವಾಂಸ ಅರಳುಮಲ್ಲಿಗೆ ಪಾರ್ಥಸಾರಥಿ, ಸಂಗೀತ ವಿದ್ವಾಂಸರಾದ ಎ.ವಿ.ಆನಂದ್, ವಿದ್ಯಾಭೂಷಣ, ಸಿಎಂಆರ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ.ರಾಮಮೂರ್ತಿ, ರಮಣ ಮಹರ್ಷಿ ಹೆರಿಟೇಜ್ ಸೆಂಟರ್‌ನ ಶಾರದಾ ನಟರಾಜನ್, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್, ಪತ್ರಕರ್ತೆ ಆರ್. ಪೂರ್ಣಿಮಾ ಹಾಗೂ 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರಭಟ್ಟ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ 9.30ರಿಂದ 11 ಗಂಟೆಯ ವರೆಗೆ ರಾಘವೇಂದ್ರ ಜಿ. ಶ್ರೀರಂಗಪಟ್ಟಣ ಮತ್ತು ವಿದ್ಯಾಧರ, ಮಂಜುನಾಥ್ ಕೆ.ವಿ. ಮತ್ತು ಥಾವಿಲ್ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ. ಬಳಿಕ ಉದ್ಘಾಟನೆ ಸಮಾರಂಭ ಹಮ್ಮಿಕೊಳ್ಳಲಾಗಿದ್ದು, ಟ್ರಸ್ಟ್‌ನ ಅಧ್ಯಕ್ಷರೂ ಆಗಿರುವ ನಿವೃತ್ತ ಐಎಎಸ್ ಅಧಿಕಾರಿ ಎ. ರವೀಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ರಕ್ತದಾನ ಶಿಬಿರ

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಐಟಿ) ಸ್ಥಾಪಕ ಅಧ್ಯಕ್ಷ ದಿ. ಎಂ.ಎಸ್.ರಾಮಯ್ಯ ಸ್ಮರಣಾರ್ಥ ಗುರುವಾರ ಆರ್‌ಐಟಿಯ ರಾಷ್ಟ್ರೀಯ ಸೇವಾ ಯೋಜನೆ ವಿಭಾಗದಿಂದ ಆಯೋಜಿಸಲಾಗಿದ್ದ 25ನೇ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ವಿದ್ಯಾರ್ಥಿಗಳು ರಕ್ತದಾನ ಮಾಡಿದರು. ಆರ್‌ಐಟಿ ನಿರ್ದೇಶಕ ಎಂ.ಆರ್.ಸೀತಾರಾಂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಒಂದೇ ಠಾಣೆಯಲ್ಲಿ ಕೆಲಸ ಮಾಡುವಾಗ ಪರಿಚಯ, ಸಲುಗೆ • ಕೃತ್ಯ ಎಸಗಿದ್ದ ಆರೋಪದಡಿ ಗೃಹ ರಕ್ಷಕಿ ಬಂಧನ

ಮೊಬೈಲ್ ಕರೆ ಗಲಾಟೆ: ಕಾನ್‌ಸ್ಟೆಬಲ್ ಕೊಲೆ

ಪ್ರಜಾವಾಣಿ ವಾರ್ತೆ



ಸಂಜಯ್

ಬೆಂಗಳೂರು: ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ವಿಶೇಷ ಭದ್ರತೆ ಕರ್ತವ್ಯದಲ್ಲಿದ್ದ ಕಾನ್‌ಸ್ಟೆಬಲ್ ಸಂಜಯ್ (30) ಅವರನ್ನು ಬೆಂಕಿ ಹಚ್ಚಿ ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಗೃಹ ರಕ್ಷಕಿ ರಾಣಿ ಅವರನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯದ ಸಂಜಯ್, ಬಸವನಗುಡಿ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು. ಮೂರು ತಿಂಗಳಿನಿಂದ ಅವರನ್ನು ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ವಿಶೇಷ ಭದ್ರತೆ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಡಿ. 6ರಂದು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಸಂಜಯ್ ಕೊಲೆಗೆ ಯತ್ನಿಸಲಾಗಿತ್ತು. ತೀವ್ರ ಗಾಯಗೊಂಡಿದ್ದ ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಬುಧವಾರ ರಾತ್ರಿ ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಗಾಯಾಳು ಸಂಜಯ್ ಹೇಳಿಕೆ ಆಧರಿಸಿ ಕೊಲೆ ಯತ್ನ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಸಂಜಯ್ ಮೃತಪಟ್ಟಿದ್ದರಿಂದ ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದರು ಎನ್ನಲಾದ ಆರೋಪಿ ರಾಣಿಯನ್ನು ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು' ಎಂದು ತಿಳಿಸಿದರು.

ಐದು ವರ್ಷಗಳ ಪರಿಚಯ: 'ಸಂಜಯ್ ಅವರು 2018ರಲ್ಲಿ ಬಸವನಗುಡಿ ಠಾಣೆಯಲ್ಲಿ ಕಾನ್‌ಸ್ಟೆಬಲ್ ಆಗಿ ವೃತ್ತಿ ಆರಂಭಿಸಿದ್ದರು. ಮಂಡ್ಯದ ರಾಣಿ ಸಹ ಅದೇ ಠಾಣೆಯಲ್ಲಿ ಗೃಹ ರಕ್ಷಕಿ ಆಗಿದ್ದರು. ವಿವಾಹಿತೆಯಾಗಿದ್ದ ಅವರಿಗೆ ಇಬ್ಬರು ಮಕ್ಕಳಿದ್ದರು. ಅಷ್ಟಲಕ್ಷ್ಮಿ ಬಡಾವಣೆಯಲ್ಲಿ ವಾಸವಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೊಲೆಯಲ್ಲಿ ಅನುಮಾನ'

'ಸಂಜಯ್ ಅವರನ್ನು ರಾಣಿ ಕೊಲೆ ಮಾಡಿದ್ದಾರೆಂಬ ಆರೋಪದಲ್ಲಿ ಸಾಕಷ್ಟು ಅನುಮಾನಗಳಿವೆ. ಸಂಜಯ್ ಅವರೇ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಾರೆಯೇ? ಅಥವಾ ರಾಣಿ ಅವರು ಬೆಂಕಿ ಹಚ್ಚಿದ್ದಾರೆಯೇ? ಎಂಬುದು ಸ್ಪಷ್ಟವಾಗಿ ಗೊತ್ತಾಗಿಲ್ಲ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ನಿಖರ ಮಾಹಿತಿ ತಿಳಿಯಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲಸದ ಸ್ಥಳದಲ್ಲಿಯೇ ಸಂಜಯ್ ಹಾಗೂ ರಾಣಿ ನಡುವೆ ಸ್ನೇಹ ಏರ್ಪಟ್ಟಿತ್ತು. 2020ರಿಂದ ಇಬ್ಬರ ನಡುವೆ ಸಲುಗೆಯೂ ಇತ್ತು. ಆಗಾಗ ಇಬ್ಬರೂ ಸುತ್ತಾಡುತ್ತಿದ್ದರು. ಪತಿ ಇಲ್ಲದ ಸಮಯದಲ್ಲಿ ಸಂಜಯ್, ರಾಣಿ ಮನೆಗೂ ಹೋಗಿ ಬರುತ್ತಿದ್ದ' ಎಂದು ಮೂಲಗಳು ತಿಳಿಸಿವೆ.

ಕೊಲೆಗೆ ಕಾರಣವಾದ ಮೊಬೈಲ್ ಕರೆ: ರಾಣಿ, ಗೃಹ ರಕ್ಷಕಿಯಾಗಿದ್ದುಕೊಂಡೇ ಬೆಳ್ಳಂದೂರಿನ ಕಂಪನಿಯೊಂದರಲ್ಲೂ ಭದ್ರತಾ ಸಿಬ್ಬಂದಿ ಆಗಿ ಕೆಲಸ ಮಾಡುತ್ತಿದ್ದರು. ಸಂಜಯ್ ಜೊತೆ ಮೊಬೈಲ್‌ನಲ್ಲಿ ಹೆಚ್ಚು ಮಾತನಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಂಜಯ್, ಡಿ. 6ರಂದು ಕೆಲಸ ಮುಗಿಸಿ ತ್ಯಾಗರಾಜನಗರದಲ್ಲಿರುವ ತಮ್ಮ ಮನೆಗೆ ಹೋಗಿದ್ದರು. ಸಂಜೆ 6 ಗಂಟೆಗೆ ಅವರಿಗೆ ಕರೆ ಮಾಡಿದ್ದ ರಾಣಿ, ತಮ್ಮ ಮನೆಗೆ ಬರುವಂತೆ ಹೇಳಿದ್ದರು. ಮನೆಗೆ ಬಂದಿದ್ದ ಸಂಜಯ್ ಹಾಗೂ ರಾಣಿ, ಖಾಸಗಿ ಕ್ಷಣಗಳನ್ನು ಕಳೆದಿದ್ದರು.'

'ರಾಣಿ ಮೊಬೈಲ್‌ಗೆ ಯುವಕರೊಬ್ಬರ ಕರೆ ಬಂದಿತ್ತು. ಅವರ ಜೊತೆ ರಾಣಿ ಸಲುಗೆಯಿಂದ ಮಾತನಾಡಿದ್ದರು. ಯುವಕ ಯಾರು ಎಂದು ಪ್ರಶ್ನಿಸಿದ್ದ ಸಂಜಯ್, 'ನೀನು ಯಾರೊಂದಿಗೂ ಮಾತನಾಡಬಾರದು. ನನ್ನ ಜೊತೆ ಮಾತ್ರ ಮಾತನಾಡಬೇಕು' ಎಂದು ತಾಕೀತು ಮಾಡಿದ್ದರು. ಈ ಕರೆ ವಿಚಾರಕ್ಕೆ ಇಬ್ಬರ ನಡುವೆ ಗಲಾಟೆ ಶುರುವಾಗಿತ್ತೆಂದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನನ್ನ ಮೊಬೈಲ್. ನನ್ನ ಇಷ್ಟ. ಅದನ್ನು ಪ್ರಶ್ನಿಸಿದರೆ, ನಿನ್ನ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚುತ್ತೇನೆ' ಎಂದು ರಾಣಿ ಬೆದರಿಸಿದ್ದರು. ಕೋಪಗೊಂಡಿದ್ದ ಸಂಜಯ್, ಸಮೀಪದ ಬಂಕ್‌ಗೆ ಹೋಗಿ ಬಾಟಲಿಯಲ್ಲಿ 1 ಲೀಟರ್ ಪೆಟ್ರೋಲ್ ತಂದಿದ್ದರು. 'ಪೆಟ್ರೋಲ್ ಸುರಿದು ಬೆಂಕಿ ಹಚ್ಚೇಬಿಡು ನೋಡೋಣ' ಎಂದಿದ್ದರು. ಬಾಟಲಿ ಕಸಿದುಕೊಂಡಿದ್ದ ರಾಣಿ, ಸಂಜಯ್ ಮೈ ಮೇಲೆ ಪೆಟ್ರೋಲ್ ಸುರಿದು ಕಡ್ಡಿ ಗೀರಿ ಬೆಂಕಿ ಹಚ್ಚಿದ್ದರೆಂದು ಹೇಳಲಾಗುತ್ತಿದೆ. ಕ್ಷಣಮಾತ್ರದಲ್ಲಿ ಸಂಜಯ್ ದೇಹಕ್ಕೆ ಬೆಂಕಿ ಹೊತ್ತಿಕೊಂಡು ಉರಿಯಲಾರಂಭಿಸಿತ್ತು. ಸಂಜಯ್ ಚೀರಾಡುತ್ತಿದ್ದರು. ರಕ್ಷಣೆಗೆ ಹೋಗಿದ್ದ ರಾಣಿ ಅವರು ನೀರು ಹಾಕಿ ಬೆಂಕಿ ನಂದಿಸಿದ್ದರು. ನಂತರ, ದ್ವಿಚಕ್ರ ವಾಹನದಲ್ಲಿ ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆಕಸ್ಮಿಕವೆಂದಿದ್ದ ಸಂಜಯ್: 'ಡಿ. 7ರಂದು ಆಸ್ಪತ್ರೆಗೆ ಪೊಲೀಸರು ಭೇಟಿ ನೀಡಿದ್ದರು. 'ಈ ಘಟನೆ ಆಕಸ್ಮಿಕ' ಎಂದು ಸಂಜಯ್ ಹೇಳಿಕೆ ನೀಡಿದ್ದರು. ಡಿ. 19ರಂದು ಪುನಃ ಹೇಳಿಕೆ ನೀಡಿದ್ದ ಸಂಜಯ್, 'ರಾಣಿ ಬೆದರಿಕೆ ಹಾಕಿದ್ದರಿಂದ, ಇದು ಆಕಸ್ಮಿಕ ಘಟನೆ ಎಂಬುದಾಗಿ ಸುಳ್ಳು ಹೇಳಿದ್ದೆ' ಎಂಬುದಾಗಿ ತಿಳಿಸಿದ್ದರು. ಈ ಸಂಗತಿಯನ್ನು ತಾಯಿ ಬಳಿಯೇ ಹೇಳಿಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

'ಘಟನೆ ಸಂಬಂಧ ಹನುಮಂತನಗರ ಠಾಣೆಯಲ್ಲಿ ಮೊದಲಿಗೆ ಎಫ್‌ಐಆರ್ ದಾಖಲಾಗಿತ್ತು. ಘಟನೆ ನಡೆದ ಸ್ಥಳದ ಆಧಾರದಲ್ಲಿ ಪ್ರಕರಣವನ್ನು ಪುಟ್ಟೇನಹಳ್ಳಿ ಠಾಣೆಗೆ ವರ್ಗಾಯಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೊಬೈಲ್‌ನಲ್ಲಿ ಮಾತು: ಪ್ರಶ್ನಿಸಿದ್ದ ಪತಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇರೆ ಪುರುಷನ ಜೊತೆ ಮೊಬೈಲ್‌ನಲ್ಲಿ ಮಾತನಾಡಿದ್ದನ್ನು ಪ್ರಶ್ನಿಸಿದರೆಂಬ ಕಾರಣಕ್ಕೆ ಉಮೇಶ್ ದಾವಿ (30) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ ಆರೋಪದಡಿ ಪತ್ನಿ ಮನಿಷಾ (28) ಅವರನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನೇಪಾಳದ ಉಮೇಶ್ ಹಾಗೂ ಮನಿಷಾ, ಆರು ವರ್ಷಗಳ ಹಿಂದೆ ಪ್ರೀತಿಸಿ ಮದುವೆಯಾಗಿದ್ದರು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ದಂಪತಿಗೆ ಮಗು ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಉಮೇಶ್ ಅವರು ಅಕ್ಷಯ ನಗರದ ಕಾಲೇಜೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು. ಅದೇ ಕಾಲೇಜಿನಲ್ಲಿ ಮನಿಷಾ, ಸ್ವಚ್ಛತೆ ಕೆಲಸದಲ್ಲಿದ್ದರು. ಕಾಲೇಜು ಕಟ್ಟಡದ ಆವರಣದಲ್ಲಿದ್ದ ಕೊಠಡಿಯಲ್ಲಿ ದಂಪತಿ ನೆಲೆಸಿದ್ದರು. ಉಮೇಶ್ ಮದ್ಯವ್ಯಸನಿ. ನಿತ್ಯವೂ ಕುಡಿದು ಬಂದು ಮನೆಯಲ್ಲಿ ಗಲಾಟೆ ಮಾಡುತ್ತಿದ್ದರು' ಎಂದು ತಿಳಿಸಿವೆ.

ಎದೆಗೆ ಚಾಕುವಿನಿಂದ ಇರಿದಿದ್ದರು: 'ಬುಧವಾರ ರಾತ್ರಿ ಸ್ನೇಹಿತರೊಬ್ಬರ ಜನ್ಮದಿನದ ಪಾರ್ಟಿಗೆ ಹೋಗಿದ್ದ ಉಮೇಶ್, ಮದ್ಯ ಕುಡಿದು ಮನೆಗೆ ಬಂದಿದ್ದರು. ಅದೇ ಸಂದರ್ಭದಲ್ಲಿ ಮನಿಷಾ, ಬೇರೆ ಪುರುಷನ ಜೊತೆ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದರು. ಅದನ್ನು ಪ್ರಶ್ನಿಸಿದ್ದ ಪತಿ, ಮೊಬೈಲ್‌ನಲ್ಲಿ ಮಾತನಾಡದಂತೆ ತಾಕೀತು ಮಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪತಿ ಹಾಗೂ ಪತ್ನಿ ನಡುವೆ ಗಲಾಟೆ ಶುರುವಾಗಿ, ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಆರೋಪಿ ಮನಿಷಾ, ಚಾಕುವಿನಿಂದ ಪತಿ ಉಮೇಶ್ ಅವರ ಎದೆಗೆ ಇರಿದಿದ್ದರು. ತೀವ್ರ ಗಾಯಗೊಂಡು ಉಮೇಶ್ ಸ್ಥಳದಲ್ಲೇ ಮೃತಪಟ್ಟಿದ್ದರು' ಎಂದು ಮೂಲಗಳು ತಿಳಿಸಿವೆ.

ಸುಳ್ಳು ಹೇಳಿದ್ದ ಪತ್ನಿ: 'ಉಮೇಶ್ ಸಾವಿನ ಬಗ್ಗೆ ಮಾಹಿತಿ ತಿಳಿದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಪತಿಯೇ ಕುಡಿದ ಅಮಲಿನಲ್ಲಿ ಚಾಕುವಿನಿಂದ ಇರಿದುಕೊಂಡು ಮೃತಪಟ್ಟಿದ್ದಾರೆಂದು ಪತ್ನಿ ಮನಿಷಾ ಸುಳ್ಳು ಹೇಳಿದ್ದರು. ಪುರಾವೆಗಳನ್ನು ಆಧರಿಸಿ ವಿಚಾರಣೆ ನಡೆಸಿದಾಗ, ತಪ್ಪೊಪ್ಪಿಕೊಂಡರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕಳವು: ಆರೋಪಿಯ ಬೆನ್ನಟ್ಟಿ ಹಿಡಿದ ಜನ

ಕೆ.ಆರ್.ಪುರ: ಹಳೇಮದ್ರಾಸ್‌ರಸ್ತೆಯಲ್ಲಿರುವ ಮಳಿಗೆಯೊಂದಕ್ಕೆ ನುಗ್ಗಿ ನಕಲಿ ಗನ್ ತೋರಿಸಿ ಚಿನ್ನಾಭರಣ ದೋಚಿ ಪರಾರಿಯಾಗುತ್ತಿದ್ದ ಆರೋಪಿ ಪ್ರತೀಕ್ (23) ಎಂಬಾತನನ್ನು ಜನರೇ ಬೆನ್ನಟ್ಟಿ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

'ಉತ್ತರ ಪ್ರದೇಶದ ಪ್ರತೀಕ್, ನಗರದ ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿ. ಚಿನ್ನಾಭರಣ ಕಳ್ಳತನ ಸಂಬಂಧ ಈತನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೆಚ್ಚು ಹಣ ಸಂಪಾದಿಸುವ ಆಸೆಯಿಂದ ಪ್ರತೀಕ್, ಷೇರು ಮಾರುಕಟ್ಟೆಯಲ್ಲಿ ಹಂತ ಹಂತವಾಗಿ ₹ 30 ಲಕ್ಷ ಹೂಡಿಕೆ ಮಾಡಿದ್ದರು. ಇದಕ್ಕಾಗಿ ಹಲವರ ಬಳಿ ಸಾಲ ಪಡೆದುಕೊಂಡಿದ್ದರು. ಕ್ರಮೇಣ ನಷ್ಟ ಉಂಟಾಗಿ, ಹೂಡಿಕೆಯ ಎಲ್ಲ ಹಣ ಕಳೆದುಕೊಂಡಿದ್ದರು. ಸಾಲ ವಾಪಸು ನೀಡುವಂತೆ ಹಲವರು ಕೇಳಲಾರಂಭಿಸಿದ್ದರು.'

'ಕಳ್ಳತನ ಮಾಡಿ ಸಾಲ ತೀರಿಸಲು ಆರೋಪಿ ಸಂಚು ರೂಪಿಸಿದ್ದ. ಚಿನ್ನಾಭರಣ ಮಳಿಗೆಗೆ ಬುಧವಾರ ರಾತ್ರಿ ಗ್ರಾಹಕರ ಸೋಗಿನಲ್ಲಿ ನುಗ್ಗಿದ್ದ. ಚಿನ್ನಾಭರಣ ತೋರಿಸುವಂತೆ ಸಿಬ್ಬಂದಿಗೆ ಹೇಳಿದ್ದ. ಸಿಬ್ಬಂದಿ, ಹಲವು ಚಿನ್ನಾಭರಣಗಳನ್ನು ಟೇಬಲ್ ಮೇಲೆ ತಂದಿಟ್ಟಿದ್ದರು. ಆರೋಪಿ ಚಿನ್ನಾಭರಣಗಳನ್ನು ದೋಚಿಕೊಂಡು ಓಡಿ ಹೋಗುತ್ತಿದ್ದ. ಆಗ ಮಳಿಗೆಯ ಸಿಬ್ಬಂದಿ ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದರು. ಆಗ ತನ್ನಲ್ಲಿದ್ದ ನಕಲಿ ಗನ್ ತೋರಿಸಿ ಬೆದರಿಸಿ ಚಿನ್ನಾಭರಣಗಳೊಂದಿಗೆ ಓಡಲು ಮುಂದಾದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸಿಬ್ಬಂದಿ ಹಾಗೂ ಸ್ಥಳೀಯರು, ಆರೋಪಿಯನ್ನು ಬೆನ್ನಟ್ಟಿದ್ದರು. ಮಾರ್ಗಮಧ್ಯೆಯೇ ಆರೋಪಿಯನ್ನು ಹಿಡಿದು ಥಳಿಸಿದ್ದರು. 'ಹೆಚ್ಚು ಸಾಲ ಮಾಡಿದ್ದೇನೆ. ಅದನ್ನು ತೀರಿಸಲು ಚಿನ್ನಾಭರಣ ಕದಿಯಲು ಬಂದಿದ್ದೆ' ಎಂಬುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ' ಎಂದು ಮೂಲಗಳು ಹೇಳಿವೆ.

ಅಪಘಾತ: ಬೈಕ್ ಸವಾರ ಸಾವು

ಬೆಂಗಳೂರು: ಜಯನಗರ ಅಶೋಕ ಸ್ತಂಭದ ಬಳಿ ಕಾರು ಹಾಗೂ ಬಿಎಂಡಬ್ಲ್ಯು ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಸವಾರ ಶೇಖ್ ನೌಶೀರ್ ಅಹಮ್ಮದ್ (34) ಮೃತಪಟ್ಟಿದ್ದಾರೆ.

'ಡೇರಿ ವೃತ್ತದ ನಿವಾಸಿ ಶೇಖ್ ನೌಶೀರ್ ಅಹಮ್ಮದ್, ಹಳೇ ಬೈಕ್ ಮಾರಾಟದ ಡೀಲರ್ ಆಗಿದ್ದರು. ಬಿಎಂಡಬ್ಲ್ಯು ಬೈಕ್ ಖರೀದಿಸಲು ಮುಂದಾಗಿದ್ದ ಅವರು, ಅತೀ ವೇಗದಲ್ಲಿ ಟೆಸ್ಟ್ ಡ್ರೈವ್ ಮಾಡುವ ವೇಳೆ ಈ ಅಪಘಾತ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಸ್ಥಳೀಯ ನಿವಾಸಿ ಮುದಾಸೀರ್, ತಮ್ಮ ಬಿಎಂಡಬ್ಲ್ಯು ಬೈಕ್ ಮಾರಾಟಕ್ಕೆ ಇರಿಸಿದ್ದರು. ಬೈಕ್ ಪರಿಶೀಲಿಸಲೆಂದು ನೌಶೀರ್ ಬುಧವಾರ ರಾತ್ರಿ ಮುದಾಸೀರ್ ಬಳಿ ಬಂದಿದ್ದರು. ಬೈಕ್ ಚಲಾಯಿಸಿಕೊಂಡು ಮಾಧವನ್ ಪಾರ್ಕ್ ಕಡೆಯಿಂದ ಅಶೋಕ ಸ್ತಂಭದ ಕಡೆಗೆ ಹೊರಟಿದ್ದರು. ಅತೀ ವೇಗದಲ್ಲಿ ಬೈಕ್ ಚಲಾಯಿಸಿದ್ದರು. ಹಿಂಬದಿಯಲ್ಲಿ ಮುದಾಸೀರ್ ಕುಳಿತಿದ್ದರು.'

'ಕನಕಪಾಳ್ಯ ಕಡೆಯಿಂದ ಬರುತ್ತಿದ್ದ ಕಾರು ಹಾಗೂ ಬೈಕ್ ನಡುವೆ ಡಿಕ್ಕಿಯಾಗಿತ್ತು. ತಲೆಗೆ ತೀವ್ರ ಪೆಟ್ಟು ಬಿದ್ದು ನೌಶೀರ್ ಮೃತಪಟ್ಟಿದ್ದಾರೆ. ಅಪಘಾತದಲ್ಲಿ ಮುದಾಸೀರ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಿರ್ಲಕ್ಷ್ಯದ ಚಾಲನೆ ಆರೋಪದಡಿ ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

ಸಂಪ್‌ಗೆ ಬಿದ್ದು ಬಾಲಕಿ ಸಾವು

ಬೆಂಗಳೂರು: ಮನೆ ಬಳಿಯ ನೀರಿನ ಸಂಪ್‌ನಲ್ಲಿ ಬಿದ್ದು ಐದು ವರ್ಷದ ಬಾಲಕಿ ಸೈಯಿದಾ (5) ಮೃತಪಟ್ಟಿದ್ದು, ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸೈಯಿದಾ ತಂದೆ–ತಾಯಿ ಚಿತ್ರದುರ್ಗದವರು. ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದಾರೆ. ಗಾರೆ ಕೆಲಸ ಮಾಡಿ, ಜೀವನ ಸಾಗಿಸುತ್ತಿದ್ದರು. ಮಲ್ಲಸಂದ್ರದಲ್ಲಿರುವ ಮನೆಯಲ್ಲಿ ನೆಲೆಸಿದ್ದಾರೆ' ಎಂದು ಪೊಲೀಸರು ಹೇಳಿದರು.

'ಬುಧವಾರ ಸಂಜೆ ಸೈಯಿದಾ ಮನೆ ಬಳಿ ಆಟವಾಡುತ್ತಿದ್ದಳು. ಮನೆ ಬಳಿಯ ನೀರಿನ ಸಂಪಿನ ಮುಚ್ಚಳ ತೆರೆಯಲಾಗಿತ್ತು. ಆಟವಾಡುತ್ತ ಸಂಪಿನ ಬಳಿ ಹೋಗಿದ್ದ ಬಾಲಕಿ, ಅದರೊಳಗೆ ಬಿದ್ದಿದ್ದಳು. ರಾತ್ರಿಯಾದರೂ ಬಾಲಕಿ ಪತ್ತೆಯಾಗಿರಲಿಲ್ಲ. ಪೋಷಕರು, ಹಲವೆಡೆ ಹುಡುಕಾಡಿದರೂ ಸುಳಿವು ಸಿಕ್ಕಿರಲಿಲ್ಲ.'

'ಮುಚ್ಚಳ ತೆರೆದಿದ್ದರಿಂದ ನೀರಿನ ಸಂಪನ್ನು ಪರಿಶೀಲಿಸಲಾಗಿತ್ತು. ಅಲ್ಲಿಯೇ ಮಗುವಿನ ಮೃತದೇಹ ಪತ್ತೆಯಾಯಿತು. ಪೋಷಕರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಸಿಲಿಂಡರ್ ಸ್ಫೋಟ ತಂದೆ, ಮಗಳಿಗೆ ಗಾಯ



ನೆಲಮಂಗಲ: ನಗರದ ಶೇಷು ಬಡಾವಣೆಯಲ್ಲಿ ಸಿಲಿಂಡರ್‌ನಿಂದ ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟಗೊಂಡು ತಂದೆ ಮತ್ತು ಮಗಳು ಗಂಭೀರವಾಗಿ ಗಾಯಗೊಂಡಿದ್ದಾರೆ.

ಸಂಜಯ್(40), ಪುತ್ರಿ ಲೇಖನಶ್ರೀ (5) ಗಾಯಗೊಂಡವರು.

ಟಿ. ದಾಸರಹಳ್ಳಿಯವರಾದ ಸಂಜಯ್ ಚಿಕ್ಕಬಾಣಾವರದ ಬೆಸ್ಕಾಂನಲ್ಲಿ ಲೈನ್‌ಮ್ಯಾನ್ ಆಗಿದ್ದಾರೆ. 8 ವರ್ಷಗಳಿಂದ ಶೇಷು ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ.

ಗುರುವಾರ ಮಧ್ಯಾಹ್ನ ಮನೆಯಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿದ್ದು, ಮನೆಯಲ್ಲಿದ್ದ ವಸ್ತುಗಳು ಸುಟ್ಟು ಹೋಗಿವೆ. ಬೆಂಕಿಯಲ್ಲಿ ಸಿಲುಕಿದ್ದ ಸಂಜಯ್ ಮತ್ತು ಪುತ್ರಿ ಲೇಖನಶ್ರೀ ಅವರನ್ನು ಸ್ಥಳೀಯರು ರಕ್ಷಿಸಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು. ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪೊಲೀಸ್ ಠಾಣೆ ಹಾಗೂ ಅಗ್ನಿಶಾಮಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಗ್ನಿಶಾಮಕ ಠಾಣಾಧಿಕಾರಿ ಹೊನ್ನಸಿದ್ದಪ್ಪ ಅವರ ನೇತೃತ್ವದಲ್ಲಿ ಸಿಬ್ಬಂದಿ ಒಂದು ತಾಸು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಬೆಂಕಿ ನಂದಿಸುವ ವೇಳೆ ಇನ್ನೊಂದು ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಸ್ಫೋಟಗೊಂಡಿತು. ಅದೃಷ್ಟವಶಾತ್ ಸಿಬ್ಬಂದಿಗೆ ಯಾವುದೇ ಹಾನಿ ಆಗಿಲ್ಲ.

ನಿಧನ ವಾರ್ತೆ

ಲಕ್ಷ್ಮಮ್ಮ



ಪೀಣ್ಯ ದಾಸರಹಳ್ಳಿ: ಬಿಜೆಪಿಯ ಶೆಟ್ಟಿಹಳ್ಳಿ ವಾರ್ಡ್ ಘಟಕದ ಮಾಜಿ ಅಧ್ಯಕ್ಷ ಕೆ.ವಿ. ರಮೇಶ್ ಅವರ ತಾಯಿ, ಕಮ್ಮಗೊಂಡನಹಳ್ಳಿಯ ನಿವಾಸಿ ಲಕ್ಷ್ಮಮ್ಮ (86) ಬುಧವಾರ ನಿಧನರಾದರು.

ಅವರಿಗೆ ಮೂವರು ಪುತ್ರರು ಇದ್ದಾರೆ. ಗುರುವಾರ ಕಮ್ಮಗೊಂಡನಹಳ್ಳಿಯ ಅವರ ಜಮೀನಿನಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ನಗರದಲ್ಲಿ ಇಂದು

'ನಾವೀನ್ಯತೆ ಮತ್ತು ಉದ್ಯಮಶೀಲತೆ' ಬಗ್ಗೆ ರಾಷ್ಟ್ರೀಯ ಸಮ್ಮೇಳನ: ಮುಖ್ಯ ಅತಿಥಿ: ಕೆ.ನಾರಾಯಣ ಪ್ರಸನ್ನ, ಅಧ್ಯಕ್ಷತೆ: ಪಿ.ವಿ. ಪದ್ಮಜ, ಆಯೋಜನೆ ಹಾಗೂ ಸ್ಥಳ: ಅಕಾಡೆಮಿ ಆಫ್ ಹೈಯರ್ ಲರ್ನಿಂಗ್, ಮಲ್ಲೇಶ್ವರ, ಬೆಳಿಗ್ಗೆ 10

ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಗಾಂಧೀವಾದ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ: ಉದ್ಘಾಟನೆ: ಎಸ್.ಎನ್. ಶ್ರೀಧರ, ಆಶಯ ಭಾಷಣ, ನಟರಾಜ್ ಹುಳಿಯಾರ್, ಮುಖ್ಯ ಅತಿಥಿ: ವೈ. ವೆಂಕಟೇಶಪ್ಪ, ಅಧ್ಯಕ್ಷತೆ: ಶ್ರೀಕೀರ್ತಿ ಬಿ.ಎನ್., ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ ಕಾಲೇಜು ಕನ್ನಡ ಅಧ್ಯಾಪಕರ ಸಂಘ, ಸ್ಥಳ: ಗಾಂಧಿ ಭವನ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30

ರಾಷ್ಟ್ರೀಯ ಗಣಿತ ದಿನ: ಮುಖ್ಯ ಅತಿಥಿ: ಎಂ.ಸಿ. ಮಹೇಶ್ ಕುಮಾರ್, ಅಧ್ಯಕ್ಷತೆ: ವೈ. ವೆಂಕಟೇಶಪ್ಪ, ಆಯೋಜನೆ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸ್ಥಳ: ಕುವೆಂಪು ಕಲಾಕ್ಷೇತ್ರ, ಶಂಕರಪುರ, ಬೆಳಿಗ್ಗೆ 10.30

ಪೌರಕಾರ್ಮಿಕರಿಗೆ ಕನ್ನಡಕ ವಿತರಣೆ: ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಆಯೋಜನೆ: ಪಾಸಿಟಿವ್ ಪಲ್ಸ್ ಫೌಂಡೇಷನ್, ಸ್ಥಳ: ಡಾ ಬಿ.ಆರ್. ಅಂಬೇಡ್ಕರ್ ಸಭಾ ಭವನ, ಕೆಂಗೇರಿ, ಬೆಳಿಗ್ಗೆ 10.30

ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ಸಮ್ಮೇಳನ: ಉದ್ಘಾಟನೆ: ಮಧು ಬಂಗಾರಪ್ಪ, ಉಪಸ್ಥಿತಿ: ಬಸವರಾಜ ಹೊರಟ್ಟಿ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಗ್ರೇಡ್–2 ದೈಹಿಕ ಶಿಕ್ಷಣ ಶಿಕ್ಷಕರ ಸಂಘ, ಸ್ಥಳ: ಶಿಕ್ಷಕರ ಸದನ, ಬೆಳಿಗ್ಗೆ 10.30

ಸುಮಂಗಲಿ ಪೂಜೆ: ಅತಿಥಿಗಳು: ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅರಳು ಮಲ್ಲಿಗೆ ಪಾರ್ಥಸಾರಥಿ, ಡಾ.ಸಿ. ಎನ್.ಅಶ್ವತ್ಥನಾರಾಯಣ, ಆಯೋಜನೆ: ಪಾಂಡುರಂಗ ವಿಷ್ಣುಸಹಸ್ರನಾಮ ಮಂಡಳಿ, ಸ್ಥಳ: ಮಲ್ಲೇಶ್ವರ ಆಟದ ಮೈದಾನದ ಎದುರು. ಸಂಜೆ 5

'ಮಾತಿನ ಮುತ್ತು 314, ಜೀವನವೆಂದರೆ ಹೀಗೇನೇ?': ಪ್ರಸ್ತುತಿ: ಬಿ.ಎನ್. ಅಶೋಕ ಕುಮಾರ್, ಅಧ್ಯಕ್ಷತೆ: ಎಂ.ಸಿ. ಪೂಣಚ್ಚ, ಆಯೋಜನೆ ಹಾಗೂ ಸ್ಥಳ: ವಿದ್ಯಾರಣ್ಯಪುರ ಹಿರಿಯ ನಾಗರಿಕರ ವೇದಿಕೆ, ವಿದ್ಯಾರಣ್ಯಪುರ, ಸಂಜೆ 6

ಚೈತನ್ಯ ಸಂಜೆ 889: 'ಶರಣೆ ಮೋಳಿಗೆ ಮಹಾದೇವಿ' ಉಪನ್ಯಾಸ: ಮಂಜುಳಾ ಸೋಮಶೇಖರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಪ್ರೇಮಾ ಸೋಮಸುಂದರ್, ಪ್ರಮೀಳಾ ಗರಡಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಜೆ.ಎಸ್.ಎಸ್. ಕಾಲೇಜು ಸಭಾಂಗಣ, 1ನೇ ಮುಖ್ಯರಸ್ತೆ, ಜಯನಗರ, ಸಂಜೆ 5.30

'ಸಿದ್ಧತೆ' ನಾಟಕ ಪ್ರದರ್ಶನ: ನಿರ್ದೇಶನ: ಜೀವನ್ ಶಿವಕುಮಾರ್, ಆಯೋಜನೆ: ರಂಗಾಸ್ಮಿತ ಕಲಾತಂಡ, ಸ್ಥಳ: ಸುಚಿತ್ರಾ ಸಿನಿಮಾ ಆ್ಯಂಡ್ ಕಲ್ಚರಲ್ ಅಕಾಡೆಮಿ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಬೊಜ್ಜು ಕರಗಿಸಲೂ ನೆರವು • ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಪ್ರಯೋಗ

ಮಧುಮೇಹಿಗಳಿಗಾಗಿ ಹೊಸ ತಳಿ ಅಕ್ಕಿ

• ಕೆ.ಜೆ. ಮರಿಯಪ್ಪ

ತುಮಕೂರು: ಬಿಳಿ ಅಕ್ಕಿ ಅನ್ನ ಕಂಡರೆ ಭಯಬೀಳುವ ಮಧುಮೇಹಿಗಳಿಗಾಗಿ ಸಕ್ಕರೆ ಅಂಶ ಕಡಿಮೆ ಇರುವ ಭತ್ತವನ್ನು ಈಗ ರಾಜ್ಯದ ರೈತರು ಬೆಳೆಯಲು ಆರಂಭಿಸಿದ್ದಾರೆ.

ರಾಜ್ಯದಲ್ಲಿ ಇದೇ ಮೊದಲ ಬಾರಿಗೆ 'ಆರ್‌ಎನ್‌ಆರ್–15048' ಎಂಬ ಭತ್ತದ ತಳಿಯನ್ನು ಪರಿಚಯಿಸಲಾಗಿದೆ. ಸೋನಾ ಮಸೂರಿ ಸೇರಿದಂತೆ ಇತರೆ ಅಕ್ಕಿಗಳಿಗೆ ಹೋಲಿಸಿದರೆ ಈ ಅಕ್ಕಿ ಕಡಿಮೆ 'ಗ್ಲೈಸಿಮಿಕ್ ಇಂಡೆಕ್ಸ್' (ಜಿ.ಐ–ಕಾರ್ಬೋಹೈಡ್ರೇಟ್ ಹೊಂದಿರುವ ಆಹಾರಗಳಿಗೆ ರೇಟಿಂಗ್) ಹೊಂದಿದೆ. ಇತರ ತಳಿಯ ಅಕ್ಕಿ ಸಾಮಾನ್ಯವಾಗಿ ಶೇ 56.5ರಷ್ಟು ಜಿ.ಐ ಹೊಂದಿದ್ದರೆ, ಈ ತಳಿಯ ಅಕ್ಕಿ ಶೇ 51.5ರಷ್ಟು ಹೊಂದಿದೆ.

ರಾಗಿ ಹಾಗೂ ಸಿರಿ ಧಾನ್ಯಗಳ ರೀತಿಯಲ್ಲಿಯೇ ಆರ್‌ಎನ್‌ಆರ್–15048 ಭತ್ತದ ತಳಿಯ ಅಕ್ಕಿಯು ನಿಧಾನವಾಗಿ ದೇಹಕ್ಕೆ ಸಕ್ಕರೆ ಅಂಶ ಬಿಡುಗಡೆ ಮಾಡುವ ವಿಶೇಷ ಗುಣ ಹೊಂದಿದೆ.

ಆರ್‌ಎನ್‌ಆರ್ ತಳಿಯ ಭತ್ತದಿಂದ ತಯಾರಿಸಿದ ಅಕ್ಕಿಯು ಸೋನಾ ಮಸೂರಿಯಂತೆ ಗಾತ್ರದಲ್ಲಿ ಸಣ್ಣ ಹಾಗೂ ರುಚಿ, ಸ್ವಾದ ಹೊಂದಿದೆ. ಮಧುಮೇಹಿಗಳಿಗೆ ಅನುಕೂಲ ಕರವಾಗುವುದರ ಜೊತೆಗೆ, ಬೊಜ್ಜು ಕರಗಿಸಲೂ ಸಹಕಾರಿಯಾಗಲಿದೆ. ರಾಗಿ, ಇತರ ಕಿರುಧಾನ್ಯಗಳ ಆಹಾರ ಬಳಸಿದಂತೆ ಈ ಅಕ್ಕಿಯಿಂದ ತಯಾರಿಸಿದ ಅನ್ನ ಸೇವಿಸಬಹುದು.

ಅಕ್ಕಿಯಲ್ಲಿರುವ ಪೋಷಕಾಂಶಗಳ ವಿವರ (100 ಗ್ರಾಂಗೆ)

ಅಕ್ಕಿ	ಪ್ರೋಟಿನ್	ಕೊಬ್ಬು	ಶರ್ಕರ ಪಿಷ್ಟ
ಆರ್‌ಎನ್‌ಆರ್	8.76	2.0	76.89
ಬಿಳಿ ಅಕ್ಕಿ	7.94	0.52	78.24
ಕೆಂಪು ಅಕ್ಕಿ	9.16	1.24	74.8





> **ಕುಣಿಗಲ್ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಹೊಸ ತಳಿಯ ಭತ್ತ ಬೆಳೆಸಲಾಗಿದೆ. ನಮ್ಮಲ್ಲಿಯ ಹವಾಮಾನಕ್ಕೆ ಹೊಂದಿಕೊಳ್ಳುವ ಗುಣ ಹೊಂದಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಪ್ರದೇಶಗಳಿಗೆ ವಿಸ್ತರಣೆ ಮಾಡುವ ಗುರಿ ಇದೆ**
> **ವಿ.ಗೋವಿಂದೇಗೌಡ,** ಮುಖ್ಯಸ್ಥ, ಕೃಷಿ ವಿಜ್ಞಾನ ಕೇಂದ್ರ, ಕೊನೆಹಳ್ಳಿ, ತಿಪಟೂರು ತಾಲ್ಲೂಕು

> **ವಿವಿಧ ಮಾದರಿಯ ಅಕ್ಕಿಗಳಿಗೆ ಹೋಲಿಸಿದರೆ ಹೊಸ ತಳಿಯ ಅಕ್ಕಿಯಲ್ಲಿ ಸಕ್ಕರೆ ಅಂಶ ಕಡಿಮೆ ಇದ್ದು, ಮಧುಮೇಹಿಗಳು ಬಳಸಬಹುದು. ಜನರು ಬಳಸಲು ಆರಂಭಿಸಿದರೆ, ಸಹಜವಾಗಿ ಬೆಳೆಯುವ ಪ್ರದೇಶವೂ ವಿಸ್ತರಣೆಯಾಗಲಿದೆ**
> **ಎಂ.ಪದ್ಮನಾಭನ್,** ವಿಜ್ಞಾನಿ, ಕೃಷಿ ವಿಜ್ಞಾನ ಕೇಂದ್ರ, ಕೊನೆಹಳ್ಳಿ, ತಿಪಟೂರು ತಾಲ್ಲೂಕು

ತಿಪಟೂರು ತಾಲ್ಲೂಕು ಕೊನೆಹಳ್ಳಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ರಾಜ್ಯದಲ್ಲಿ ಈ ಭತ್ತದ ತಳಿಯನ್ನು ಪರಿಚಯಿಸಿದ್ದು, ಕುಣಿಗಲ್ ತಾಲ್ಲೂಕಿನ ರೈತರು ಬೆಳೆದಿದ್ದಾರೆ. ಮಧುಮೇಹ ಇರುವವರಿಗಾಗಿಯೇ ಹೊಸ ತಳಿಯ ಭತ್ತವನ್ನು ಸಂಶೋಧಿಸಲಾಗಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ.

ತೆಲಂಗಾಣ ರಾಜ್ಯದಲ್ಲಿ ಈ ಭತ್ತದ ತಳಿಯನ್ನು (ತೆಲಂಗಾಣ ಸೋನಾ) ಮೊದಲಿಗೆ ಪರಿಚಯಿಸಲಾಗಿತ್ತು. ತುಮಕೂರು ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಬೆಳೆಸಲಾಗಿದೆ. ಕುಣಿಗಲ್ ಭಾಗದ 15 ಎಕರೆ ಪ್ರದೇಶದಲ್ಲಿ ಭತ್ತ ಬೆಳೆದಿದ್ದು, ಈಗ ಕಟಾವು ಮಾಡಲಾಗಿದೆ.

ಹೊಸ ತಳಿಯ ಭತ್ತ ಅಲ್ಪಾವಧಿ ಬೆಳೆಯಾಗಿದ್ದು, 125 ದಿನಗಳಿಗೆ ಕೊಯ್ಲು ಮಾಡಬಹುದು. ಇದು ಬೆಂಕಿರೋಗ ನಿರೋಧಕ ಶಕ್ತಿ ಹೊಂದಿದ್ದು, ನೀರಾವರಿ, ಅರೆ ನೀರಾವರಿ ಪ್ರದೇಶದಲ್ಲಿ ಬೆಳೆಸಬಹುದಾಗಿದೆ. ಏರೋಬಿಕ್ ಪದ್ಧತಿಯಲ್ಲೂ (ವಾರದಲ್ಲಿ ಒಂದೆರಡು ದಿನ ನೀರು ಹಾಯಿಸುವುದು) ಬೆಳೆ ಬೆಳೆಯಲು ಸಾಧ್ಯವಿದೆ. ಎಕರೆಗೆ 26ರಿಂದ 28 ಕ್ವಿಂಟಲ್ ಇಳುವರಿ ಬರುತ್ತದೆ. ಒಂದು ಕ್ವಿಂಟಲ್ ಭತ್ತಕ್ಕೆ 68ರಿಂದ 70 ಕೆ.ಜಿ ಅಕ್ಕಿ ಲಭ್ಯವಾಗುತ್ತದೆ.

‘ಪ್ರತಿಷ್ಠಿತ ರಸ್ತೆ’ಯೆಂಬ ಟ್ಯಾಗ್‌ಲೈನ್; ಕಲ್ಲು ಕಿತ್ತುಬಂದಿರುವುದು, ಒಣಗಿದ ಗಿಡಗಳ ‘ಆಕರ್ಷಣೆ’

ಚರ್ಚ್ ಸ್ಟ್ರೀಟ್: ಗುಂಡಿಗಳ ಆಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೆಂಡರ್ ಶ್ಯೂರ್ ಯೋಜನೆಯಡಿ ₹18 ಕೋಟಿಗೂ ಹೆಚ್ಚು ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ ನಗರದ ಪ್ರತಿಷ್ಠಿತ ಚರ್ಚ್ ಸ್ಟ್ರೀಟ್ ರಸ್ತೆಯಲ್ಲಿ ಕಲ್ಲುಗಳು ಕಿತ್ತುಬಂದು ಗುಂಡಿಗಳಾಗಿವೆ.

ಹತ್ತಾರು ವರ್ಷ ಬಾಳಿಕೆ ಬರುತ್ತವೆ ಎಂಬ ಕಾರಣಕ್ಕೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಟೆಂಡರ್ ಶ್ಯೂರ್ ರಸ್ತೆಗಳನ್ನು ಮಾಡಲಾಗಿದೆ. ವಿಶೇಷವಾಗಿ ಚರ್ಚ್‌ಸ್ಟ್ರೀಟ್‌ಗೆ ಇತರೆ ರಸ್ತೆಗಳಿಗಿಂತ ತುಸು ಹೆಚ್ಚೇ ವೆಚ್ಚ ಮಾಡಲಾಗಿದೆ. ಇಷ್ಟೆಲ್ಲ ಖರ್ಚು ಮಾಡಿರುವ 750 ಮೀಟರ್ ಉದ್ದದ ರಸ್ತೆಯಲ್ಲಿ ಹತ್ತಾರು ಕಡೆ ಕಲ್ಲುಗಳು ಕಿತ್ತುಬಂದಿವೆ. ಎರಡು ವರ್ಷಗಳಿಂದ ಈ ಸಮಸ್ಯೆ ಕಾಣಿಸಿಕೊಳ್ಳುತ್ತಲೇ ಇದೆ.

ಕಲ್ಲುಗಳು ಕಿತ್ತು ಬಂದಾಗಲೆಲ್ಲ, ಸಿಮೆಂಟ್ ಹಾಕಿ ದುರಸ್ತಿಪಡಿಸಲಾಗುತ್ತದೆ. ಇತ್ತೀಚೆಗೆ ಕಲ್ಲುಗಳು ಹೊರಬಂದು ರಸ್ತೆಯ ಕೆಲವೆಡೆ ಗುಂಡಿಗಳಾಗಿವೆ ಎಂದು ಸ್ಥಳೀಯ ವ್ಯಾಪಾರಿಗಳು ದೂರಿದರು.

ರಸ್ತೆಯ ಬದಿಯಲ್ಲಿ ಹಾಕಿರುವ ಅಲಂಕಾರಿಕ ಗಿಡಗಳು ಒಣಗಿವೆ. ಕೆಲವು ಕಡೆ ಗಿಡಗಳೇ ಇಲ್ಲ. ಇರುವ ಗಿಡಗಳಿಗೂ ನೀರು ಹಾಕುವವರಿಲ್ಲ. ಗಿಡಗಳಿದ್ದ ಜಾಗವೀಗ ತ್ಯಾಜ್ಯದ ತಾಣವಾಗುತ್ತಿದೆ. ಅದೇ ಸ್ಥಳಗಳಲ್ಲೇ ವಾಹನಗಳ ನಿಲುಗಡೆಯಾಗುತ್ತಿದೆ. ಕೋಟ್ಯಂತರ ವೆಚ್ಚ ಮಾಡಿ ಕಲ್ಪಿಸಿದ್ದ ಸೌಲಭ್ಯಗಳೂ ಹಾಳಾಗುತ್ತಿವೆ.

‘ಈಗಾಗಲೇ ಒಂದು ವರ್ಷದಿಂದ ರಸ್ತೆಯಲ್ಲಿದ್ದ ಸೌಲಭ್ಯಗಳು ಹಾಳಾಗುತ್ತಿವೆ. ಗಿಡಗಳು ಒಣಗಿವೆ. ಕಿತ್ತು ಹೊರಬಂದಿರುವ ಕಲ್ಲುಗಳನ್ನು ಸರಿಪಡಿಸಲು ಬಿಬಿಎಂಪಿ ಮುಂದಾಗುತ್ತಿಲ್ಲ. ರಸ್ತೆ ಹೀಗಿರುವುದರಿಂದ ಹಲವು ದ್ವಿಚಕ್ರ ವಾಹನ ಸವಾರರು ಬಿದ್ದಿದ್ದಾರೆ. ಬಿಬಿಎಂಪಿ ಸಹಾಯವಾಣಿಗೆ ದೂರು ನೀಡಿದ್ದರೂ ಎಂಜಿನಿಯರ್‌ಗಳು ಇತ್ತ ಸುಳಿಯುತ್ತಿಲ್ಲ’ ಎಂದು ವ್ಯಾಪಾರಿ ಮನೋಜ್ ಹೇಳಿದರು.

‘ಕೋಟ್ಯಂತರ ವೆಚ್ಚ ಮಾಡಲೆಂದೆ ಹಲವು ರೀತಿಯ ಆಕರ್ಷಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅವುಗಳ ನಿರ್ವಹಣೆ ಬಗ್ಗೆ ಯೋಜನೆಯೇ ಇಲ್ಲ. ಇಷ್ಟೆಲ್ಲ ವೆಚ್ಚ ಮಾಡಿ ಅಭಿವೃದ್ಧಿಪಡಿಸಿರುವ ಈ ಚಿಕ್ಕ ರಸ್ತೆಯ ನಿರ್ವಹಣೆಯನ್ನು ಗುತ್ತಿಗೆ ನೀಡಬೇಕಾಗಿತ್ತು. ಪ್ರತಿಷ್ಠಿತ ರಸ್ತೆ, ಚರ್ಚ್ ಸ್ಟ್ರೀಟ್‌ನಂತಹ ರಸ್ತೆಯೇ ಇಲ್ಲ ಎಂದು ಹೊರ ದೇಶದ ಗಣ್ಯರನ್ನು ಇಲ್ಲಿಗೆ ಕರೆತರುತ್ತಾರೆ. ಅವರು ಬಂದಾಗ ಕೆಂಪುಹಾಸು ಹಾಕಿ, ರಸ್ತೆಯಲ್ಲಿರುವ ಹುಳುಕನ್ನು ಮುಚ್ಚುತ್ತಾರೆ. ಇದು ಬಿಬಿಎಂಪಿಯ ‘ಪ್ರತಿಷ್ಠಿತ ಕೆಲಸ’ ಎಂದು ವ್ಯಾಪಾರಿ ರಾಮ್‌ಮೋಹನ್ ದೂರಿದರು.



ಚರ್ಚ್ ಸ್ಟ್ರೀಟ್‌ನಲ್ಲಿ ಕಲ್ಲುಗಳು ಕಿತ್ತು ಹೋಗಿರುವುದು
–ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್



ಚರ್ಚ್ ಸ್ಟ್ರೀಟ್‌ನಲ್ಲಿ ಕಲ್ಲುಗಳು ಕಿತ್ತು ಹೋಗಿರುವುದು



ಚರ್ಚ್ ಸ್ಟ್ರೀಟ್‌ನಲ್ಲಿ ನಡೆಲಾಗಿದ್ದ ಆಲಂಕಾರಿಕ ಗಿಡಗಳು ಒಣಗಿವೆ

‘ಸಿಎಸ್‌ಆರ್ ನಿಧಿಯಲ್ಲಿ ನಿರ್ವಹಣೆ’

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿಗೊಳಿಸಲಾಗಿರುವ ರಸ್ತೆಗಳನ್ನು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಲ್ಲಿ ನಿರ್ವಹಿಸಲು ನಿರ್ಧರಿಸಲಾಗಿದೆ. ಇನ್ನು ಮುಂದೆ ಈ ರಸ್ತೆಗಳ ನಿರ್ವಹಣೆಗೆ ಬಿಬಿಎಂಪಿ ಒಂದು ರೂಪಾಯಿಯೂ ವೆಚ್ಚ ಮಾಡುವುದಿಲ್ಲ. ಜ.1ರಿಂದ ಈ ಯೋಜನೆ ಜಾರಿಗೆ ಬರುತ್ತದೆ’ ಎಂದು ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.
‘ಚರ್ಚ್ ಸ್ಟ್ರೀಟ್‌ನಲ್ಲಿ ಕಾಂಕ್ರೀಟ್ ಲಾರಿಗಳು, 10 ಸಾವಿರ ಲೀಟರ್ ಸಾಮರ್ಥ್ಯದ ನೀರಿನ ಟ್ಯಾಂಕರ್‌ಗಳು ಹೆಚ್ಚು ಚಲಿಸುತ್ತಿರುವುದರಿಂದ ಗ್ರಾನೈಟ್ ಕಲ್ಲುಗಳ ಮೇಲೆ ಹೆಚ್ಚಿನ ಹೊರೆ ಬಿದ್ದು ಹೊರಬರುತ್ತಿವೆ. ಭಾರಿ ವಾಹನಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುತ್ತದೆ. ರಸ್ತೆ ಬದಿ ಗಿಡಗಳ ನಿರ್ವಹಣೆಯನ್ನೂ ಮಾಡಲಾಗುತ್ತದೆ’ ಎಂದರು.

ರಸ್ತೆ ಸರಿಪಡಿಸಿದ ಜಲ ಮಂಡಳಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ನಾಗಸಂದ್ರ ಮೆಟ್ರೊ ಸ್ಟೇಷನ್ ಪ್ರವೇಶ ದ್ವಾರದ ಬಳಿ ಕುಸಿದಿದ್ದ ರಸ್ತೆಯನ್ನು ಜಲಮಂಡಳಿ ಅಧಿಕಾರಿಗಳು ಗುರುವಾರ ಸರಿಪಡಿಸಿದ್ದಾರೆ.

ಮೆಟ್ರೊ ಸ್ಟೇಷನ್ ಪ್ರವೇಶ ದ್ವಾರದ ಬಳಿ ಮಂಜುನಾಥ ನಗರದ ಕಡೆ ಹೋಗುವ ರಸ್ತೆಯಲ್ಲಿ 5 ದಿನಗಳ ಹಿಂದೆ ಭಾರಿ ವಾಹನವೊಂದು ಚಲಿಸಿದ್ದರಿಂದ ರಸ್ತೆ ಕುಸಿದಿತ್ತು. ನೀರಿನ ಸಂಪರ್ಕಕ್ಕಾಗಿ ಪೈಪ್ ಅಳವಡಿಸಲು ಜಲಮಂಡಳಿ ಗುಂಡಿ ತೆಗೆದಿತ್ತು. ಕಾಮಗಾರಿ ಮುಗಿದ ಮೇಲೆ ಸಮರ್ಪಕವಾಗಿ ಮುಚ್ಚದೇ ಇರುವುದು ರಸ್ತೆ ಕುಸಿಯಲು ಕಾರಣವಾಗಿತ್ತು. ಮೆಟ್ರೊ ರೈಲು ನಿಲ್ದಾಣಕ್ಕೆ ಬಂದು ಹೋಗುವವರಿಗೆ ಇದರಿಂದ ತೊಂದರೆಯಾಗುತ್ತಿತ್ತು.

ಈ ಸಮಸ್ಯೆಯ ಬಗ್ಗೆ ಬುಧವಾರ ‘ಪ್ರಜಾವಾಣಿ’ ವರದಿ ಪ್ರಕಟಿಸಿತ್ತು. ಎಚ್ಚೆತ್ತ ಜಲ ಮಂಡಳಿ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲಿಸಿ, ಕುಸಿದಿದ್ದ ಗುಂಡಿಯನ್ನು ಮುಚ್ಚಿಸಿ ಅದರ ಮೇಲೆ ಜಲ್ಲಿಕಲ್ಲು ಹಾಕಿಸಿದ್ದಾರೆ.

‘ನೀರಿನ ಪೈಪ್ ನೇರ ಸಂಪರ್ಕ ಕಲ್ಪಿಸಿ ಗುಂಡಿಯನ್ನು ಮುಚ್ಚಿದ್ದೇವೆ. ಒಂದೆರಡು ದಿನಗಳ ನಂತರ ಕಾಂಕ್ರೀಟ್ ಹಾಕಲಾಗುತ್ತದೆ’ ಎಂದು ಜಲಮಂಡಳಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ನಾಗರಾಜು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.





ನಾಗಸಂದ್ರ ಮೆಟ್ರೊ ಸ್ಟೇಷನ್ ಬಳಿ ಕುಸಿದಿದ್ದ ಗುಂಡಿ (ಎಡ ಚಿತ್ರ). ಕುಸಿದಿದ್ದ ಗುಂಡಿ ಮುಚ್ಚಿರುವುದು

ವರದಿ ಪರಿಣಾಮ

ಬೆಂಗಳೂರು ರೇಸ್

ಸ್ಟ್ರಾವಿನ್‌ಸ್ಕಿ ಗೆಲ್ಲುವ ನಿರೀಕ್ಷೆ

ಜೆ.ಬಿ.ಮಲ್ಲಾರಾಧ್ಯಮೆಮೋರಿಯಲ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಟ್ರಾವಿನ್‌ಸ್ಕಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:35ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ

1ನೇ ರೇಸ್: ಸಿಲ್ವರ್ ಟೋಕನ್ 1, ಸಿಂಕೊ ಡೆ ಮಾಯೊ 3, ಅಲ್ಟಿಮೇಟ್ ಚಾಯ್ಸ್ 3
2ನೇ ರೇಸ್: ರೀಗಲ್ ಅರಿಸ್ಟೊಕ್ರಸಿ 4, ಸೈಗಾನ್ 2, ಸನ್‌ಲಿಟ್ ಪಾಥ್ 5
3ನೇ ರೇಸ್: ನೆವರ್ ಗೀವ್ ಇನ್ 1, ವ್ಯಾಸ 4, ಸಮಾಚಾರ್ 12
4ನೇ ರೇಸ್: ವಿವಾಲ್ಡೊ 11. ಪ್ರೈಮ್ ಅಬ್ಬೆಸ್ 4, ಪ್ರಾಮಿಸ್ ಕೆಪ್ಟ್ 8
5ನೇ ರೇಸ್: ನಾಟಿ ಲೆಜೆಂಡ್ 4, ಕ್ರಿಸ್ಟಲ್ಲಾಸ್ 5, ಲಾ ಮೆಕ್ವೀನ್ 6
6ನೇ ರೇಸ್: ಸ್ಟ್ರಾವಿನ್‌ಸ್ಕಿ 6, ಸ್ಪ್ಲೆಂಡಿಡೊ 1, ಅಮೇಜಿಂಗ್ ಅಟ್ಯಾಕ್ಸನ್ 3
7ನೇ ರೇಸ್: ಹೈ ಒಪಿನಿಯನ್ 10, ಗೋಲ್ಡನ್ ಟೈಮ್ 3, ಕ್ಲಾಸಿಕ್ ಚಾರ್ಮ್ 6

ಉತ್ತಮ ಬೆಟ್: ನಾಟಿ ಲೆಜೆಂಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ 23ರಿಂದ ಗೀತೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾವಿ ಪರ್ಯಾಯ ಶ್ರೀ ಪುತ್ತಿಗೆ ಮಠ– ಉಡುಪಿ’ ಆಶ್ರಯದಲ್ಲಿ ‘ಕೋಟಿ ಗೀತಾ ಲೇಖನ ಯಜ್ಞ ಸಮಿತಿ’ ವತಿಯಿಂದ ನಗರದಲ್ಲಿ ಡಿ.23ರಿಂದ ಎರಡು ದಿನ ‘ಗೀತೋತ್ಸವ’ ಆಯೋಜಿಸಲಾಗಿದೆ.

ರಾಜ್ಯ ಮತ್ತು ದೇಶದ ಹಲವು ಭಾಗಗಳಲ್ಲಿರುವ ಒಂದು ಕೋಟಿಗೂ ಹೆಚ್ಚು ಜನರಿಂದ ಭಗವದ್ಗೀತೆ ಬರೆಸುವ ಅಭಿಯಾನ ಎರಡು ತಿಂಗಳಿಂದ ನಡೆಯುತ್ತಿದೆ. ಇದರ ಅಂಗವಾಗಿ ಗೀತೋತ್ಸವ ಆಯೋಜಿಸಲಾಗಿದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಹಾಗೂ ಆಹಾರ ತಜ್ಞೆ ಡಾ. ಎಚ್.ಎಸ್. ಪ್ರೇಮಾ ಅವರು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

ಬಸವನಗುಡಿಯ ನ್ಯಾಷನಲ್ ಕಾಲೇಜು ಆಟದ ಮೈದಾನದಲ್ಲಿ ಗೀತೋತ್ಸವ ನಡೆಯಲಿದೆ. ಪುತ್ತಿಗೆ ಮಠದ ಸುಗುಣೇಂದ್ರತೀರ್ಥ ಅವರ ಸಾನ್ನಿಧ್ಯದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಚಲನಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್‌ರಾಜ್‌ಕುಮಾರ್ ಅವರು ಶನಿವಾರ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು. ಡಿ.23ರಂದು ಬೆಳಿಗ್ಗೆ ಭಗವದ್ಗೀತಾ ಶೋಭಾಯಾತ್ರೆ ನಡೆಯಲಿದೆ. ಸಾಮೂಹಿಕ ಅಖಂಡ ಭಗವದ್ಗೀತಾ ಪಾರಾಯಣ ಉದ್ಘಾಟನೆ, ಕೋಟಿ ಗೀತಾ ಲೇಖನ ಯಜ್ಞ ದೀಕ್ಷಾ ಸಮಾರಂಭ ನಡೆಯಲಿದೆ. ಡಿ.24ರಂದು ವಿಷ್ಣುಸಹಸ್ರನಾಮ ಪಾರಾಯಣ, ಭಗವದ್ಗೀತಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು.

ಬಸವನಗುಡಿಯ ಗೋವರ್ಧನ ಗಿರಿ ಮಠದ ದಿವಾನ ಪ್ರಸನ್ನ ಆಚಾರ್ಯ, ನಾಗರಾಜ್ ನಕ್ಷತ್ರಿ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಹೊಸ ವರ್ಷಾಚರಣೆ: ವಾಹನ ತಪಾಸಣೆ ಆರಂಭ

ಬೆಂಗಳೂರು: ಹೊಸ ವರ್ಷಾಚರಣೆಗೆ ದಿನಗಣನೆ ಶುರುವಾಗಿದ್ದು, ಮದ್ಯ ಕುಡಿದು ವಾಹನ ಚಾಲನೆ ಮಾಡುವವರ ಪತ್ತೆಗಾಗಿ ಸಂಚಾರ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ.

ನಗರದ ಹಲವು ಜಂಕ್ಷನ್ ಹಾಗೂ ಪ್ರಮುಖ ರಸ್ತೆಗಳಲ್ಲಿ ಬುಧವಾರ ರಾತ್ರಿ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, ಸುಮಾರು 3,000 ವಾಹನಗಳನ್ನು ತಡೆದು ಆಲ್ಕೋಮೀಟರ್ ಸಹಾಯದಿಂದ ಚಾಲಕರನ್ನು ತಪಾಸಣೆಗೆ ಒಳಪಡಿಸಿದರು.

ಮದ್ಯ ಕುಡಿದು ಚಾಲನೆ ಮಾಡುತ್ತಿದ್ದ 73 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ವಾಹನಗಳನ್ನು ಜಪ್ತಿ ಮಾಡಿದ್ದಾರೆ. ದಂಡ ಪಾವತಿ ಮಾಡುವಂತೆ ನೋಟಿಸ್ ನೀಡಿದ್ದಾರೆ.

‘ಹೊಸ ವರ್ಷಾಚರಣೆ ಸಂದರ್ಭದಲ್ಲಿ ಮದ್ಯ ಕುಡಿದು ವಾಹನ ಚಾಲನೆ ಮಾಡುವವರ ಸಂಖ್ಯೆ ಹೆಚ್ಚಿರುತ್ತದೆ. ಇದರಿಂದಾಗಿ ಅಪಘಾತಗಳು ಸಂಭವಿಸುತ್ತವೆ. ಇದೇ ಕಾರಣಕ್ಕೆ ವಿಶೇಷ ಕಾರ್ಯಾಚರಣೆ ಆರಂಭಿಸಲಾಗಿದೆ. ಹೊಸ ವರ್ಷಾಚರಣೆ ಮುಗಿಯುವವರೆಗೂ ಕಾರ್ಯಾಚರಣೆ ಮುಂದುವರಿಯಲಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅವಳಿ ಕೊಲೆ: ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತೋಟದಲ್ಲಿ ಕೃಷಿ ಸಾಮಗ್ರಿ ಕಳವು ಮಾಡುತ್ತಿದ್ದ ಇಬ್ಬರನ್ನು ಹಿಡಿದು ಥಳಿಸಿ ಅವರ ಸಾವಿಗೆ ಕಾರಣವಾಗಿದ್ದಾರೆ’ ಎಂಬ ಆರೋಪ ಹೊತ್ತು ಬಂಧನಕ್ಕೆ ಒಳಗಾಗಿದ್ದ ತುಮಕೂರಿನ ಪೆದ್ದನಹಳ್ಳಿ ಗ್ರಾಮ ಪಂಚಾಯತಿ ಸದಸ್ಯ ಪಿ.ವಿ.ರಂಗಸ್ವಾಮಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಪ್ರಕರಣದಲ್ಲಿ ಎರಡನೇ ಆರೋಪಿಯಾದ ಪಿ.ವಿ. ರಂಗಸ್ವಾಮಿ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಉಮೇಶ್ ಎಂ.ಅಡಿಗ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಆರೋಪಿ ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಅವರು, ’ಅರ್ಜಿದಾರರಿಗೆ ಮೃತರನ್ನು ಕೊಲೆ ಮಾಡುವ ಯಾವುದೇ ಉದ್ದೇಶ ಇರಲಿಲ್ಲ. ಕೇವಲ ಕಳ್ಳರನ್ನು ಹಿಡಿದು ಬುದ್ಧಿ ಕಲಿಸಬೇಕೆಂಬ ಇರಾದೆಯಿತ್ತು. ಅಂತೆಯೇ, ಆರೋಪಿಗಳು ತೆಂಗಿನ ಸುಳೆಪಟ್ಟೆಯಿಂದ ಸುಟ್ಟು ಗಾಯಗೊಳಿಸಿದ್ದರು ಎಂಬುದಾಗಿ ಘಟನೆಯ ಪ್ರತ್ಯಕ್ಷ ಸಾಕ್ಷಿದಾರರು ನೀಡಿರುವ ಹೇಳಿಕೆ ಸುಳ್ಳು. ಮೃತರ ಮೈಮೇಲೆ ಯಾವುದೇ ಸುಟ್ಟ ಗಾಯಗಳಿರಲಿಲ್ಲ. ಹೀಗಾಗಿ, ಸಾಕ್ಷಿಗಳ ಹೇಳಿಕೆ ನಂಬಲರ್ಹವಲ್ಲ. ಆದ್ದರಿಂದ, ಅರ್ಜಿದಾರರಿಗೆ ಜಾಮೀನು ಮಂಜೂರು ಮಾಡಬೇಕು‘ ಎಂದು ಕೋರಿದರು.

ಈ ವಾದಾಂಶವನ್ನು ಪುರಸ್ಕರಿಸಿದ ನ್ಯಾಯಪೀಠ, ‘ಅರ್ಜಿದಾರರು ₹ 1 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತಕ್ಕೆ ಇಬ್ಬರ ಭದ್ರತಾ ಖಾತರಿ ಒದಗಿಸಬೇಕು. ಸಾಕ್ಷ್ಯನಾಶಕ್ಕೆ ಯತ್ನಿಸಬಾರದು. ವಿಚಾರಣಾ ನ್ಯಾಯಾಲಯದ ಅನುಮತಿ ಇಲ್ಲದೇ ತುಮಕೂರು ಜಿಲ್ಲೆಯನ್ನು ಬಿಟ್ಟು ತೆರಳಬಾರದು. ವಿಚಾರಣಾ ನ್ಯಾಯಾಲಯದ ಮುಂದೆ ವಿಚಾರಣೆಗೆ ತಪ್ಪದೇ ಹಾಜರಾಗಬೇಕು’ ಎಂಬ ಷರತ್ತುಗಳನ್ನು ವಿಧಿಸಿ ಜಾಮೀನು ನೀಡಿತು.

ಅಪರಾಧ ಸುದ್ದಿ

ಪ್ರಕರಣವೇನು?: ‘ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಪೆದ್ದನಹಳ್ಳಿಯಲ್ಲಿ ಕೆ.ಗಿರೀಶ್ ಮತ್ತು ಪಿ.ಎನ್.ಗಿರೀಶ್ ತೋಟಗಳಿಂದ ಅಡಿಕೆ ಗೊನೆ, ಪಂಪ್ ಸೆಟ್ ಮೋಟಾರುಗಳು, ಸ್ಟಾರ್ಟರ್ ಸೇರಿದಂತೆ ಬೆಲೆಬಾಳುವ ಕೃಷಿ ಸಾಮಗ್ರಿಗಳನ್ನು ಕಳ್ಳತನ ಮಾಡುತ್ತಿದ್ದರು. ಇವರಿಬ್ಬರೂ 2023ರ ಏಪ್ರಿಲ್ 21ರಂದು ಗ್ರಾಮದ ತೋಟವೊಂದರಲ್ಲಿ ಸ್ಟಾರ್ಟರ್ ಕಳವು ಮಾಡುತ್ತಿದ್ದಾಗ ಊರ ಜನರಿಗೆ ಸಿಕ್ಕಿಬಿದ್ದಿದ್ದರು. ಆಗ ಊರ ಜನರು ಹಿಗ್ಗಾಮುಗ್ಗಾ ಥಳಿಸಿದ್ದರು. ಪರಿಣಾಮ ಕಳ್ಳರಿಬ್ಬರೂ ಸಾವನ್ನಪ್ಪಿದ್ದರು’ ಎಂದು ಆರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತ ಕೆ.ಗಿರೀಶ್ ತಾಯಿ ಗುಬ್ಬಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ತನಿಖೆ ನಡೆಸಿದ್ದ ಪೊಲೀಸರು, ಪಿ.ವಿ. ರಂಗಸ್ವಾಮಿ ಸೇರಿದಂತೆ ಒಟ್ಟು 29 ಆರೋಪಿಗಳನ್ನು ಮೇ 2ರಂದು ಬಂಧಿಸಿದ್ದರು.

ಆರೋಪಿಗಳ ವಿರುದ್ಧ ಕೊಲೆ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಲಾಗಿತ್ತು. ಜಾಮೀನು ಕೋರಿ ಪಿ.ವಿ. ರಂಗಸ್ವಾಮಿ ಸಲ್ಲಿಸಿದ್ದ ಅರ್ಜಿಯನ್ನು ತುಮಕೂರು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತಿರಸ್ಕರಿಸಿತ್ತು.

ಪಂಜಾಬ್ ಸಚಿವ 8 ಜನರಿಗೆ 2 ವರ್ಷ ಸಜೆ

ಚಂಡೀಗಢ (ಪಿಟಿಐ): 15 ವರ್ಷದ ಹಿಂದಿನ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಪಂಜಾಬ್ ಸಚಿವ ಅಮನ್ ಅರೋರಾ ಮತ್ತು ಇತರೆ ಎಂಟು ಮಂದಿಗೆ ಇಲ್ಲಿನ ನ್ಯಾಯಾಲಯ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿ ಗುರುವಾರ ಆದೇಶಿಸಿದೆ.

ಅರೋರಾ ಅವರ ಸಂಬಂಧಿಯೇ ಆಗಿದ್ದ ರಾಜೀಂದರ್ ದೀಪ ಅವರು, ಅರೋರಾ ಮತ್ತು ಆತನ ಬೆಂಬಲಿಗರು ತಮ್ಮ ಮನೆಗೆ ಬಂದು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ 2008ರಲ್ಲಿ ದೂರು ನೀಡಿದ್ದರು.

ಈ ಸಂಬಂಧ ವಿಚಾರಣೆ ನಡೆಸಿದ ನ್ಯಾಯಾಲಯವು, ಎರಡು ವರ್ಷ ಸಜೆ ವಿಧಿಸಿತು.

ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿರುವ ಅರೋರಾ ಅವರು, ‘ಈ ತೀರ್ಪಿನ ವಿರುದ್ಧ ಹೈಕೋರ್ಟ್ ಮೊರೆ ಹೋಗುತ್ತೇನೆ. ನನಗೆ ನ್ಯಾಯಾಂಗ ವ್ಯವಸ್ಥೆ ಮೇಲೆ ನಂಬಿಕೆ ಇದೆ’ ಎಂದು ತಿಳಿಸಿದ್ದಾರೆ.

75 ಲಕ್ಷ ಹಣ ದೋಚಲು ಯತ್ನಿಸಿದ್ದ ಪ್ರಕರಣ

ಲೋಕನಾಥ್ ಸಿಂಗ್‌ಗೆ ಹೈಕೋರ್ಟ್ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉದ್ಯಮಿಯಿಂದ ಜಪ್ತಿ ಮಾಡಿದ್ದ ₹ 75 ಲಕ್ಷ ಹಣವನ್ನು ದೋಚಲು ಬಿಡದಿ ಠಾಣೆಯ ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ಪ್ರಯತ್ನಿಸಿದ್ದಾರೆ’ ಎನ್ನಲಾದ ಪ್ರಕರಣದಲ್ಲಿ ಎರಡನೇ ಆರೋಪಿಯಾದ ಮಧ್ಯವರ್ತಿ ಎನ್.ಎಸ್.ಲೋಕನಾಥ್ ಸಿಂಗ್ ಅವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

‘ನನ್ನ ವಿರುದ್ಧ ಬ್ಯಾಟರಾಯನಪುರ ಠಾಣಾ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಮತ್ತು ಸಿಸಿಬಿ ಪೊಲೀಸರು ನಡೆಸುತ್ತಿರುವ ತನಿಖೆ ರದ್ದುಪಡಿಸಬೇಕು’ ಎಂದು ಕೋರಿ ಲೋಕನಾಥ್ ಸಿಂಗ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಬುಧವಾರ ಸಂಜೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನ್ ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.



‘ಅರ್ಜಿದಾರರನ್ನು ಜಾಮೀನು ಮೇಲೆ ಬಿಡುಗಡೆ ಮಾಡಬೇಕು. ಭದ್ರತಾ ಖಾತರಿಯಾಗಿ ₹ 2 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತಕ್ಕೆ ಒಬ್ಬರ ಭದ್ರತೆ ಪಡೆಯಬೇಕು’ ಎಂದು ಪ್ರಕರಣದ ತನಿಖಾಧಿಕಾರಿಗೆ ನ್ಯಾಯಪೀಠ ನಿರ್ದೇಶಿಸಿದೆ.

ಪ್ರತಿವಾದಿಯಾದ ಬ್ಯಾಟರಾಯನಪುರ ಠಾಣಾ ಪೊಲೀಸರು ಮತ್ತು ದೂರುದಾರರಾದ ಬ್ಯಾಟರಾಯನಪುರ ಉಪ ವಲಯದ ಎಸಿಪಿ ಭರತ್ ಎಸ್.ರೆಡ್ಡಿ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ವಿಚಾರಣೆ ಮುಂದೂಡಿದೆ. ಅರ್ಜಿದಾರರ ಪರ ಹಿರಿಯ ವಕೀಲ ಸಂದೇಶ್ ಚೌಟ ವಾದ ಮಂಡಿಸಿದರು. ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ವಕಾಲತ್ತು ವಹಿಸಿದ್ದರು.

ಪ್ರಕರಣವೇನು?

‘ಉದ್ಯಮಿ ಹರೀಶ್ ಅವರಿಗೆ ಸೇರಿದ್ದ ₹ 75 ಲಕ್ಷ ಮೊತ್ತವನ್ನು 2022ರ ಸೆಪ್ಟೆಂಬರ್‌ನಲ್ಲಿ ಅವರ ಕಾರು ಚಾಲಕ ಸಂತೋಷ್ ಕದ್ದೊಯ್ದಿದ್ದ. ಈ ವಿಚಾರ ಮಧ್ಯವರ್ತಿ ಲೋಕನಾಥ್ ಸಿಂಗ್‌ಗೆ ಗೊತ್ತಾಗಿತ್ತು. ಅವರೇ ಹರೀಶ್ ಅವರನ್ನು ಬ್ಯಾಟರಾಯನಪುರ ಠಾಣಾ ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ಬಳಿ ಕರೆತಂದಿದ್ದರು. ಆರೋಪಿಯನ್ನು ಹುಡುಕಿಕೊಡಲು ಇನ್‌ಸ್ಪೆಕ್ಟರ್ ₹ 20 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿದ್ದರು. ನಂತರ, ಸುಳ್ಳು ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿ ₹ 75 ಲಕ್ಷ ಜಪ್ತಿ ಮಾಡಿದ್ದರು. ಆದರೆ, ಹಣವನ್ನು ದೂರುದಾರರಿಗೆ ನೀಡದೇ ಸ್ವಂತಕ್ಕೆ ಬಳಸಿಕೊಂಡಿದ್ದರು’ ಎಂಬ ಆರೋಪವನ್ನು ಶಂಕರ್ ನಾಯಕ್ ಎದುರಿಸುತ್ತಿದ್ದರೆ, ಮಧ್ಯವರ್ತಿ ಲೋಕನಾಥ್ ಸಿಂಗ್ ಎರಡನೇ ಆರೋಪಿಯಾಗಿದ್ದಾರೆ.



ಕ್ರೆಡೆಲ್‌ಗೆ ಪ್ರಶಸ್ತಿ

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮವು (ಕ್ರೆಡಲ್) ಕೇಂದ್ರ ಇಂಧನ ಸಚಿವಾಲಯದ ‘2023ನೇ ಸಾಲಿನ ರಾಷ್ಟ್ರೀಯ ಇಂಧನ ಸಂರಕ್ಷಣಾ ಪ್ರಶಸ್ತಿ’ಗೆ ಪಾತ್ರವಾಗಿದೆ. ರಾಷ್ಟ್ರೀಯ ಇಂಧನ ಸಂರಕ್ಷಣಾ ದಿನದ ಅಂಗವಾಗಿ ಬ್ಯೂರೋ ಆಫ್ ಎನರ್ಜಿ ಎಫಿಷಿಯೆನ್ಸಿಯು ನವದೆಹಲಿಯ ವಿಜ್ಞಾನ ಭವನದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕ್ರೆಡಲ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರಶಸ್ತಿ ಸ್ವೀಕರಿಸಿದರು

‘ಮನುಷ್ಯ ಸಾಮರ್ಥ್ಯ ಇಳಿಕೆ: ಕಳವಳ’

ಪ್ರಜಾವಾಣಿ ವಾರ್ತೆ

ಯಲಹಂಕ: ವಿಜ್ಞಾನ, ತಂತ್ರಜ್ಞಾನವು ಮನುಷ್ಯನ ಕೆಲಸವನ್ನು ಮತ್ತು ಶಕ್ತಿಯನ್ನು ಕಡಿಮೆಗೊಳಿಸುತ್ತಿದೆ. ಇದು ಮುಂದುವರಿದರೆ ಮನುಷ್ಯ ಇನ್ನಷ್ಟು ಶಕ್ತಿ, ಸಾಮರ್ಥ್ಯ ಕಳೆದುಕೊಳ್ಳುತ್ತಾನೆ ಎಂದು ಇಸ್ರೊ ಮಾಜಿ ಅಧ್ಯಕ್ಷ, ವಿಜ್ಞಾನಿ ಎ.ಎಸ್.ಕಿರಣ್ ಕುಮಾರ್ ಕಳವಳ ವ್ಯಕ್ತಪಡಿಸಿದರು.

ಹೊನ್ನೇನಹಳ್ಳಿಯಲ್ಲಿರುವ ವಿಶ್ವವಿದ್ಯಾಪೀಠ ಸಮೂಹಶಾಲೆ ಮತ್ತು ಸೀಡ್ ಸ್ಯಾಪಲಿಂಗ್ ಎಜುಕೇಶನ್ ಹಾಗೂ ಟ್ಯಾಕ್ಟ್ ದಿ ಅಕಾಡೆಮಿ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿರುವ ಐದು ದಿನಗಳ ಗಣಿತಮೇಳದಲ್ಲಿ ಅವರು ಮಾತನಾಡಿದರು.

‘ಹೊಸ ಹೊಸ ಮಷಿನ್ ಮತ್ತು ಟೂಲ್ಸ್‌ಗಳ ಆವಿಷ್ಕಾರಗಳು ನಡೆಯುತ್ತಲೇ ಇವೆ. ದಿನದಿಂದ ದಿನಕ್ಕೆ ಮನುಷ್ಯ ಶ್ರಮ ಕಡಿಮೆಯಾಗುತ್ತಿದೆ’ ಎಂದರು.

‘ಗಣಿತದಲ್ಲಿ ನಮ್ಮ ಜೀವನದ ಎಲ್ಲ ಕ್ರಿಯೆಗಳು ಅಡಕವಾಗಿವೆ. ಸರಿಯಾಗಿ ಅರಿತರೆ ಗಣಿತ ಕಷ್ಟವಲ್ಲ. ಈ ನಿಟ್ಟಿನಲ್ಲಿ ಗಣಿತ ಮೇಳ ಆಯೋಜಿಸಿರುವುದು ಶ್ಲಾಘನೀಯ’ ಎಂದರು.

ಶಾಲೆಯ ನಿರ್ದೇಶಕಿ ಸುಶೀಲ ಸಂತೋಷ್, ‘ಭಾರತೀಯ ಗಣಿತ ವಿಜ್ಞಾನಿ ಶ್ರೀನಿವಾಸ ರಾಮಾನುಜನ್ ಅವರ ಜನ್ಮದಿನದ ಪ್ರಯುಕ್ತ ಗಣಿತಮೇಳ ಏರ್ಪಡಿಸಲಾಗಿದೆ. 15ಕ್ಕೂ ಹೆಚ್ಚು ವಿಜ್ಞಾನಿಗಳು ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರನ್ನು ಆಹ್ವಾನಿಸಲಾಗಿದೆ. ಗಣಿತಜ್ಞರು ಹರಟೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಮಕ್ಕಳೊಂದಿಗೆ ವಿಚಾರವಿನಿಮಯ ನಡೆಸುವ ಮೂಲಕ ಗಣಿತದ ಬಗ್ಗೆ ಇರುವ ಭಯವನ್ನು ದೂರ ಮಾಡಿ, ಆನಂದದಿಂದ ಗಣಿತ ಕಲಿಯುವ ರೀತಿಯಲ್ಲಿ ಪ್ರೇರೇಪಿಸಲಿದ್ದಾರೆ’ ಎಂದು ತಿಳಿಸಿದರು.

ಮೇಳದಲ್ಲಿ 45 ಮಳಿಗೆಗಳನ್ನು ತೆರೆದಿದ್ದು, ಗಣಿತ, ಭೌತವಿಜ್ಞಾನ, ಖಗೋಳ ವಿಜ್ಞಾನ, ಪಜಲ್, ಕ್ರೀಡೆ, ಭರತನಾಟ್ಯ, ಸಂಗೀತ, ಜುಗಲ್‌ಬಂದಿ, ನಾಟಕ, ಜಾದೂ ಪ್ರಯೋಗಗಳು ಸೇರಿ ಪ್ರತಿ ಮಳಿಗೆಯಲ್ಲೂ ವಿವಿಧ ಪ್ರಕಾರಗಳನ್ನು ಗಣಿತದ ಮೂಲಕ ತಿಳಿಸಲಾಗುವುದು. ಸಂಜೆ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮವೂ ಗಣಿತದೊಂದಿಗೆ ಸಮ್ಮಿಲನಗೊಂಡಿದೆ ಎಂದು ಅವರು ಮಾಹಿತಿ ನೀಡಿದರು. ಶಾಸಕ ಎಸ್. ಆರ್.ವಿಶ್ವನಾಥ್ ಗಣಿತಮೇಳಕ್ಕೆ ಚಾಲನೆ ನೀಡಿದರು.



ಐದು ದಿನಗಳ ಗಣಿತಮೇಳಕ್ಕೆ ಶಾಸಕ ಎಸ್ ಆರ್.ವಿಶ್ವನಾಥ್ ಚಾಲನೆ ನೀಡಿದರು. ಶಾಲೆಯ ನಿರ್ದೇಶಕಿ ಸುಶೀಲ ಸಂತೋಷ್ ಇದ್ದರು



ಕೊಡಗು ಹಾಕಿ ಹಬ್ಬದ ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಬಿಡುಗಡೆ ಮಾಡಿದರು. ಮುಖ್ಯಮಂತ್ರಿಯ ಕಾನೂನು ಸಲಹೆಗಾರರಾದ ಶಾಸಕ ಎ.ಎಸ್. ಪೊನ್ನಣ್ಣ ಅವರು ಲಾಂಛನದ ಕುರಿತು ವಿವರಿಸಿದರು. ಕೊಡವ ಸಮುದಾಯದ ಪ್ರತಿನಿಧಿಗಳು ಉಪಸ್ಥಿತರಿದ್ದರು

ಕಾಲುದಾರಿ, ಬಂಡಿ ಜಾಡು ಕೂಡಾ ರಸ್ತೆಗಳೇ...: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆಗಳು ಎಂಬ ಪರಿಕಲ್ಪನೆಯಲ್ಲಿ ಕಾಲುದಾರಿ, ಬಂಡಿ ಜಾಡು ಕೂಡಾ ಒಳಗೊಂಡಿರುತ್ತವೆ‘ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಭೂಸ್ವಾಧೀನ ಕಾಯ್ದೆಯಡಿ ಜಮೀಉ ಸ್ವಾಧೀನಪಡಿಸಿಕೊಂಡ ಮಾತ್ರಕ್ಕೆ ‘ಬಿ ಖರಾಬ್’ ಭೂಮಿಯಲ್ಲಿ ಸಾರ್ವಜನಿಕರ ಹಕ್ಕನ್ನು ರದ್ದುಪಡಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಈ ಸಂಬಂಧ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಕರ್ನಾಟಕ ಭೂ ಕಂದಾಯ ಕಾಯ್ದೆ–1964ರ ಕಲಂ 67ರ ಪ್ರಕಾರ ಎಲ್ಲಾ ಸಾರ್ವಜನಿಕ ರಸ್ತೆಗಳು, ಬೀದಿಗಳು, ಓಣಿಗಳು, ಪಥಗಳು, ಸೇತುವೆಗಳು, ಕಂದಕಗಳು, ತಡೆಗೋಡೆಗಳು ಮತ್ತು ಬೇಲಿಗಳು ಸರ್ಕಾರಕ್ಕೆ ಸೇರಿವೆ ಎಂದು ಸೂಚಿಸುತ್ತದೆ. ಕಾಲುದಾರಿ ಅಥವಾ ಬಂಡಿ ಜಾಡು ಎಂಬ ಗಾಡಿ ಜಾಡು ಈ ಹಿಂದೆ ಕರೆಯಲಾಗುತ್ತಿದ್ದ ರಸ್ತೆಗಳೇನಿಸಿವೆ‘ ಎಂದು ನ್ಯಾಯಪೀಠ ಹೇಳಿದೆ.

‘ಕಾಲುದಾರಿ, ಬಂಡಿ ಜಾಡು ಸ್ಥಳವನ್ನು ಗ್ರಾಮದ ನಕ್ಷೆಯಲ್ಲಿ ಮತ್ತು ಸಂಬಂಧಿತ ಕಂದಾಯ ದಾಖಲೆಗಳಲ್ಲಿ ಗುರುತಿಸಲಾಗಿದೆ. ಭೂಮಾಲೀಕರಿಗೆ ಸಂಬಂಧಿಸಿದಂತೆ ಈ ಭಾಗವನ್ನು ‘ಬಿ ಖರಾಬ್’ ಎಂದು ವರ್ಗೀಕರಿಸಲಾಗಿದೆ. ಈ ಜಮೀನುಗಳು ಸರ್ಕಾರಕ್ಕೆ ಸೇರಿದ್ದರೂ, ಸಾರ್ವಜನಿಕರ ಹಕ್ಕನ್ನೂ ನೀಡಲಾಗಿರುತ್ತದೆ‘ ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?: 1999–2000ದ ಅವಧಿಯಲ್ಲಿ ಅರ್ಜಿದಾರ ಎಪಿಎಂಸಿ ತನ್ನ ಅನುಕೂಲಕ್ಕಾಗಿ ಕೆಲವು ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು, ಉಪ ಮಾರುಕಟ್ಟೆಗಾಗಿ ಬಡಾವಣೆ ರಚಿಸಿ, ಕಟ್ಟಡಗಳನ್ನು ನಿರ್ಮಿಸಿದ ಬಳಿಕ ಹಲವರಿಗೆ ವಹಿವಾಟು ನಡೆಸಲು ನಿವೇಶನ ಹಂಚಿಕೆ ಮಾಡಿತ್ತು.

2019ರ ಫೆಬ್ರವರಿ 5ರಂದು ಕಾಲುದಾರಿಯನ್ನು ಮುಚ್ಚಿರುವ ಸಂಬಂಧ ಸ್ಥಳೀಯ ತಹಶೀಲ್ದಾರ್ ಎಪಿಎಂಸಿಗೆ ನೋಟಿಸ್ ಜಾರಿ ಮಾಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಎಪಿಎಂಸಿ, ‘ಅರ್ಜಿಗೆ ಸಂಬಂಧಿಸಿದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಹಂಚಿಕೆ ಮಾಡಲಾಗಿದೆ. ಇಡೀ ಆಸ್ತಿ ಎಪಿಎಂಸಿಗೆ ಸೇರಿದೆ. ಈ ಜಮೀನಿನಲ್ಲಿ ಯಾವುದೇ ಕಾಲು ದಾರಿ ಇಲ್ಲ‘ ಎಂದು ಉತ್ತರಿಸಿತು. ಈ ಅಂಶಗಳನ್ನು ಉಲ್ಲೇಖಿಸಿ ಹೈಕೋರ್ಟ್ ಮೆಟ್ಟಿಲೇರಿತ್ತು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಸರ್ಕಾರದ ಪರ ವಕೀಲರು, ‘ಕೇವಲ 10 ಎಕರೆ 15 ಗುಂಟೆ ಜಮೀನನ್ನು ಮಾತ್ರವೇ ಸ್ವಾಧೀನಪಡಿಸಿಕೊಂಡು ಅರ್ಜಿದಾರರಿಗೆ ಹಂಚಿಕೆ ಮಾಡಲಾಗಿದೆ ಮತ್ತು ಪಕ್ಕದ ಬಿ ಖರಾಬ್ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿಲ್ಲ ಅಥವಾ ಅರ್ಜಿದಾರರಿಗೆ ವರ್ಗಾಯಿಸಲಾಗಿಲ್ಲ‘ ಎಂದು ತಿಳಿಸಿದ್ದರು.

‘ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 68ರ ಪ್ರಕಾರ ’ಬಿ ಖರಾಬ್’ನಲ್ಲಿ ಸಾರ್ವಜನಿಕರ ಹಕ್ಕನ್ನು ಕಸಿದುಕೊಳ್ಳಲಾಗಿಲ್ಲ. ಈ ಸ್ಥಳದ ಮತ್ತು ಸುತ್ತಮುತ್ತಲಿನ ಎಲ್ಲಾ ಗ್ರಾಮಸ್ಥರು ಅಥವಾ ಸಾರ್ವಜನಿಕರು ಕಾಲುದಾರಿ ಬಳಸಲು ಅರ್ಹರಾಗಿರುತ್ತಾರೆ. ಹಾಗಾಗಿ, ಅರ್ಜಿದಾರರು ಈ ಭೂಮಿಯನ್ನು ಮೀಸಲಿಡಬೇಕಾಗಿತ್ತು ಮತ್ತು ಅದನ್ನು ಮಾರುಕಟ್ಟೆ ಪ್ರಾಂಗಣದ ಉದ್ದೇಶಗಳಿಗಾಗಿ ಬಳಸಬಾರದು‘ ಎಂದು ನ್ಯಾಯಪೀಠಕ್ಕೆ ವಿವರಿಸಿದ್ದರು.

ಪತ್ನಿಯರಿಗೆ ಪಿಂಚಣಿ ಸಮಾನ ಹಂಚಿಕೆ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತೀಯ ರೈಲ್ವೆ ನಿಯಮಗಳ ಪ್ರಕಾರ, ಸಾವನ್ನಪ್ಪಿದ ಉದ್ಯೋಗಿಯ ಪತ್ನಿಯರ ನಡುವೆ ಕುಟುಂಬ ಪಿಂಚಣಿ ಸಮಾನವಾಗಿ ಹಂಚಿಕೆಯಾಗಲಿದೆ’ ಎಂದು ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ಮೊದಲನೇ ಪತ್ನಿ ಮತ್ತು ಆಕೆಯ ಪುತ್ರಿಯರಿಗೆ ಮಾತ್ರವೇ ಶೇ 50ರಷ್ಟು ಕುಟುಂಬ ಪಿಂಚಣಿ ಮಂಜೂರು ಮಾಡುವಂತೆ ನೈರುತ್ಯ ರೈಲ್ವೆಗೆ ಆದೇಶಿಸಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಸಾವನ್ನಪ್ಪಿದ್ದ ರೈಲ್ವೆ ಉದ್ಯೋಗಿಯ ಎರಡನೇ ಪತ್ನಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸದೆ.

‘ರೈಲು ಸೇವೆಗಳ (ಪಿಂಚಣಿ) ನಿಯಮಗಳು–1993ಕ್ಕೆ 2016ರಲ್ಲಿ ತಿದ್ದುಪಡಿ ಮಾಡಿ ಹೊಸ ನಿಯಮಗಳನ್ನು ಜಾರಿಗೊಳಿಸಲಾಗಿದೆ. ಇದರನ್ವಯ ಒಬ್ಬರು ಅಥವಾ ಹೆಚ್ಚು ವಿಧವೆಯರು ಕುಟುಂಬ ಪಿಂಚಣಿ ಪಡೆಯಲು ನಿಯಮಗಳಲ್ಲಿ ಸ್ಪಷ್ಟವಾದ ಹಕ್ಕು ಕಲ್ಪಿಸಲಾಗಿದೆ. ಹೀಗಾಗಿ, ನೈರುತ್ಯ ರೈಲ್ವೆ ಮಂಡಳಿಯು ಶೇ 50ರಷ್ಟು ಪಿಂಚಣಿಯನ್ನು ಅರ್ಜಿದಾರರಿಗೆ ಬಿಡುಗಡೆ ಮಾಡಬೇಕು’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

‘ಪಿಂಚಣಿಯನ್ನು ಹೊರತುಪಡಿಸಿ ಇತರೆ ಪ್ರಯೋಜನಗಳು ಬೇಕೆಂದು ಪಕ್ಷಕಾರರು ವಾದಿಸುತ್ತಿದ್ದು, ಇದು ವಿಚಾರಣಾ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣವೇನು?: ಆರ್.ರಮೇಶ್ ಬಾಬು ನೈರುತ್ಯ ರೈಲ್ವೆಯ ಹಿರಿಯ ವಿಭಾಗೀಯ ಸಿಬ್ಬಂದಿ ವ್ಯವಸ್ಥಾಪಕರ ಕಚೇರಿಯಲ್ಲಿನ ಸಂಚಾರ ವಿಭಾಗದಲ್ಲಿ ಪಾಯಿಂಟ್ಸ್ ಮನ್ ಆಗಿ ಕೆಲಸ ಮಾಡುತ್ತಿದ್ದರು. ಮೊದಲ ಪತ್ನಿಯೊಂದಿಗಿನ ವಿವಾಹದಲ್ಲಿ ಬಾಬು ಅವರಿಗೆ ಮೂವರು ಪುತ್ರಿಯರಿದ್ದಾರೆ. 1999ರ ಡಿಸೆಂಬರ್ 9ರಂದು ಬಾಬು, ಪುಷ್ಪಾ ಅವರೊಂದಿಗೆ ತಿರುಪತಿಯಲ್ಲಿ ಎರಡನೇ ವಿವಾಹ ಮಾಡಿಕೊಂಡಿದ್ದರು.

ಬಾಬು ಅವರು 2021ರ ಮೇ 4ರಂದು ನಿಧನ ಹೊಂದಿದ ತರುವಾಯ ಮೊದಲ ಪತ್ನಿ ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದ ಮೆಟ್ಟಿಲೇರಿ, ‘ಕಾನೂನಾತ್ಮಕವಾಗಿ ನಾನು ಮೊದಲ ಪತ್ನಿಯಾಗಿರುವುದರಿಂದ ಸೌಲಭ್ಯ, ಅನುಕಂಪದ ಉದ್ಯೋಗ ಮತ್ತು ಬಾಕಿಗಳನ್ನು ಪಾವತಿಸಲು ನೈರುತ್ಯ ರೈಲ್ವೆ ಮಂಡಳಿಗೆ ನಿರ್ದೇಶಿಸಬೇಕು’ ಎಂದು ಕೋರಿದ್ದರು.

ಇದಕ್ಕೆ ಪೂರಕವಾಗಿ ಎರಡನೇ ಪತ್ನಿಯೂ ಮೆಮೊ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಕೌಟುಂಬಿಕ ನ್ಯಾಯಾಲಯ 2022ರ ಜುಲೈ 22ರಂದು ಮೊದಲ ಪತ್ನಿ ಹಾಗೂ ಅವರ ಮಕ್ಕಳಿಗೆ ಶೇ 50ರಷ್ಟು ಪಿಂಚಣಿ ಪಾವತಿಸಲು ನೈರುತ್ವ ರೈಲ್ವೆ ಮಂಡಳಿಗೆ ನಿರ್ದೇಶಿಸಿತ್ತು. ಇದನ್ನು ಪ್ರಶ್ನಿಸಿ ಎರಡನೇ ಪತ್ನಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಿನಿಮಾ ಪುರವಣಿ



ಗೆಲುವಿನ ರಕ್ತಸಿಕ್ತ ಅಧ್ಯಾಯ

2023ರ ಭಾರತೀಯ ಚಿತ್ರರಂಗದ ಕಡೆ ನೋಡಿದರೆ, ಹಿಂಸೆ, ಕ್ರೌರ್ಯ, ರಕ್ತಸಿಕ್ತ ಅಧ್ಯಾಯಗಳಿಂದ ತುಂಬಿದ ಮಾಸ್ ಸಿನಿಮಾಗಳೇ ಈ ವರ್ಷ ಬಾಕ್ಸ್ ಆಫೀಸ್ ಅನ್ನು ಆಳಿರುವುದು ಸ್ಪಷ್ಟ. 'ಪಠಾಣ್'ನಿಂದ 'ಅನಿಮಲ್'ವರೆಗೂ ಸರಪಟಾಕಿಯಂತಹ ಗನ್‌ಗಳ ಬಳಕೆಯೇ ಟ್ರೆಂಡ್ ಆಗಿವೆ. ಪುರುಷತ್ವ ಮೆರೆಸಿ, ಹೆಣ್ಣನ್ನು ಅವಮಾನಿಸುವುದು ಮಾಸ್ ಸಿನಿಮಾಗಳ ಭಾಗವೆಂದೆನಿಸುತ್ತಿದೆ. ಇವೆಲ್ಲವೂ ಬದಲಾದ ಪ್ರೇಕ್ಷಕರ ಅಭಿರುಚಿಯ ಸಂಕೇತವೇ ಎಂಬಂತಹ ಚರ್ಚೆಯೊಂದು ಚಿತ್ರರಂಗದಲ್ಲಿ ಶುರುವಾಗಿದೆ...

ವಿನಾಯಕ ಕೆ.ಎಸ್.

ಶಾರೂಕ್ ಖಾನ್ ನಟನೆಯ 'ಪಠಾಣ್', 'ಜವಾನ್', ರಣಬೀರ್ ಕಪೂರ್ ನಟನೆಯ 'ಅನಿಮಲ್', ಸನ್ನಿ ಡಿಯೋಲ್ ಅವರ 'ಗದರ್-2', ತಮಿಳಿನ ವಿಜಯ್ ನಟನೆಯ 'ಲಿಯೋ', ರಜನಿಕಾಂತ್ ಅಭಿನಯದ 'ಜೈಲರ್'...ಮೊದಲಾದವು 2023ರಲ್ಲಿ ದೇಶದ ಬಾಕ್ಸ್ ಆಫೀಸ್ ಗಳಿಕೆಯಲ್ಲಿ ಮೆರೆದ ಸಿನಿಮಾಗಳು. ಮಾಸ್, ಆ್ಯಕ್ಷನ್ ಪ್ರಭೇದದ ಈ ಸಿನಿಮಾಗಳಲ್ಲಿ ಕಥಾವಸ್ತುವಿಗಿಂತ ಹೆಚ್ಚು ಅಬ್ಬರಿಸಿದ್ದು ನಾಯಕನ ಕ್ರೌರ್ಯ, ಹಿಂಸೆ, ರಕ್ತ, ಹಸಿಬಿಸಿ ದೃಶ್ಯಗಳು. 'ಅನಿಮಲ್' ಸಿನಿಮಾ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಪುರುಷಾಹಂಕಾರ, ಹೆಣ್ಣಿನ ಅವಹೇಳನದ ದೃಶ್ಯಗಳಿಂದ ಪ್ರೇಕ್ಷಕನ ಚಪ್ಪಾಳೆ ಗಿಟ್ಟಿಸಿಕೊಂಡಿತು. ಕುಟುಂಬವೆಲ್ಲ, ವಿಶೇಷವಾಗಿ ಸಣ್ಣ ಮಕ್ಕಳನ್ನು ಒಟ್ಟಿಗೆ ಕೂರಿಸಿಕೊಂಡು ನೋಡಲಾಗದ ಈ ಚಿತ್ರದ ದೃಶ್ಯಗಳು ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು ವಿಪರ್ಯಾಸ.

ಹಿಂದಿನಿಂದಲೂ ಇದೆ



ಹಿಂದಿನಿಂದಲೂ ಇದೇ ಥರ ಇದ್ದಿದ್ದು ಅನ್ನಿಸುತ್ತದೆ. ಒಬ್ಬ ನಾಯಕ ಇರುತ್ತಾನೆ, ಅವನ ಎದುರಾಳಿ ಖಳನಾಯಕ. ಖಳನಾಯಕ ಹೆಣ್ಣನ್ನು ಅವಮಾನಿಸುವುದು, ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಅತ್ಯಾಚಾರ ಮಾಡುವ ದೃಶ್ಯಗಳಲ್ಲಿ ತೊಡಗಿಕೊಳ್ಳುತ್ತಿದ್ದ. ಈಗ ಅದರ ವಿಸ್ತೃತ ರೂಪವಿದೆ. ದುರಂತವೆಂಬಂತೆ ಈಗಿನ ಚಿತ್ರದ ನಾಯಕನಲ್ಲಿಯೇ ಖಳನಾಯಕನ ಗುಣಗಳು, ಬೈಗುಳಗಳು ಕಾಣಿಸುತ್ತಿವೆ. ಈಗಿನ ವಿಡಿಯೋ ಗೇಮ್ ಜನರೇಷನ್‌ಗೆ ಇಂತಹ ಥ್ರಿಲ್‌ಗಳೇ ಮನರಂಜನೆ ನೀಡಲೂಬಹುದು.

ರೂಪಾ ರಾವ್, ನಿರ್ದೇಶಕಿ

ಮಾರ್ಕೆಟಿಂಗ್ ಕಾಲ: 'ಇದು ಒಳ್ಳೆಯ ಸಿನಿಮಾಗಳ ವಿರುದ್ಧ ಒಳ್ಳೆಯ ಸಿನಿಮಾಗಳು ಸೆಣಸುವ ಕಾಲಘಟ್ಟವಲ್ಲ. ಉತ್ತಮ ಮಾರ್ಕೆಟಿಂಗ್ ತಂತ್ರದ ವಿರುದ್ಧ ಮತ್ತೊಂದು ಉತ್ತಮ ಮಾರ್ಕೆಟಿಂಗ್ ಎದುರಾಗುವ ಕಾಲ. ಚೆನ್ನಾಗಿ ಮಾರ್ಕೆಟಿಂಗ್ ಮಾಡಿದವರು ದೊಡ್ಡ ಮಟ್ಟದ ಗೆಲುವು ಕಾಣುತ್ತಿದ್ದಾರೆ. ಆದರೆ ಇದು ಶಾಶ್ವತವಲ್ಲ. ಮೊನ್ನೆ ಮಮ್ಮುಟಿ ಅವರ 'ಕಾತಲ್-ದಿ ಕೋರ್' ಸಿನಿಮಾ ನೋಡಿದೆ. ಈ ವಯಸ್ಸಲ್ಲಿ ಬಹಳ ಒಳ್ಳೆಯ ಸಿನಿಮಾ ಮಾಡಿದ್ದಾರೆ. ಚಿತ್ರಮಂದಿರದಲ್ಲಿಯೂ ದೊಡ್ಡ ಹಿಟ್. ಆದರೆ ನಾವು ಅಂತಹ ಸಿನಿಮಾಗಳ ಬಗ್ಗೆ ಮಾತಾಡುವುದಿಲ್ಲ. ಯಾಕೆಂದರೆ ಈ ಚಿತ್ರತಂಡ ದುಡ್ಡು ಸುರಿದು ಸಿನಿಮಾವನ್ನು ಹೈಪ್ ಮಾಡಿಲ್ಲ. ಬದುಕಿಗಿಂತ ದೊಡ್ಡದಾಗಿರುವುದನ್ನು ನೋಡಲು ಜನ ಚಿತ್ರಮಂದಿರಕ್ಕೆ ಬರುತ್ತಾರೆ. ಬಹುಶಃ ಈಗಿನ ವಿಕೃತಿಗಳು ಪ್ರೇಕ್ಷಕರಿಗೆ ಒಂದು ರೀತಿ ಥ್ರಿಲ್ ನೀಡುತ್ತಿರಬೇಕು. ಹಾಗಾಗಿ ಅದನ್ನು ಒಂದಷ್ಟು ಮಂದಿ ಎಂಜಾಯ್ ಮಾಡುತ್ತಿದ್ದಾರೆ. ಆದರೆ ಎಲ್ಲ ವರ್ಗದ ಜನ ಈ ರೀತಿಯ ಸಿನಿಮಾ ನೋಡುತ್ತಾರೆ ಎನ್ನಲು ಸಾಧ್ಯವಿಲ್ಲ. ವೈಯಕ್ತಿಕವಾಗಿ ನಾನು ಈ ಸಲ ಗೆದ್ದ ಸಿನಿಮಾಗಳಲ್ಲಿ ನೋಡಿದ್ದು 'ಜವಾನ್' ಮಾತ್ರ. ಶಾರೂಕ್ ಖಾನ್ ಇಷ್ಟ ಎಂಬ ಕಾರಣಕ್ಕೆ ಹೋಗಿದ್ದೆ. ಇಂತಹ ನಾಯಕರು ಯಾಕೆ ಇಷ್ಟು ಕ್ರೌರ್ಯದ ಸಿನಿಮಾ ಮಾಡುತ್ತಾರೆ ಎನ್ನಿಸಿತು. ಫೇರ್ ಆಂಡ್ ಲವ್ಲಿ ಹಚ್ಚಿದರೆ ಬೆಳ್ಳಗಾಗುತ್ತೇವೆ ಎಂಬುದನ್ನು ನಂಬುವ ಜನರೂ ನಮ್ಮಲ್ಲಿದ್ದಾರೆ. ಹೀಗಾಗಿ ಕೆಲವು ಸಿನಿಮಾಗಳು ಗಟ್ಟಿಯಾದ ಮಾರ್ಕೆಟಿಂಗ್‌ನಿಂದ ಗೆಲ್ಲುತ್ತಿವೆ. ವಿಕೃತಿ, ಹೆಣ್ಣಿನ ಅವಹೇಳನಗಳು ಪ್ರೇಕ್ಷಕರಿಗೆ ಥ್ರಿಲ್ ನೀಡುವ ಮಾರಾಟದ ಸರಕುಗಳಾಗುತ್ತಿವೆ' ಎನ್ನುತ್ತಾ ವಿಷಾದದ ಧ್ವನಿ ಹೊರಡಿಸಿದರು ನಿರ್ದೇಶಕಿ ರೂಪಾ ರಾವ್.

'ಕ್ರೌರ್ಯ, ನಗ್ನತೆ ಕಥೆಯ ಭಾಗವಾಗಿದ್ದರೆ ನನಗೆ ಯಾವುದೇ ಸಮಸ್ಯೆ, ಮಡಿವಂತಿಕೆ ಇಲ್ಲ. ಹಾಲಿವುಡ್‌ನಲ್ಲಿ ಸಾಕಷ್ಟು ಕ್ರೌರ್ಯ, ಹಿಂಸೆಯ ಕಥೆಗಳು ಸಿಗುತ್ತವೆ. ಆದರೆ ಕಥೆಗೆ ಅಗತ್ಯವಿಲ್ಲದ ಕ್ರೌರ್ಯದ ತುರುಕುವಿಕೆ ವಿಕೃತಿ ಎನ್ನಿಸುತ್ತದೆ. ಪೋರ್ನೋಗ್ರಫಿ ಸಿನಿಮಾಗಳದ್ದು ಒಂದು ವಿಭಾಗವಾದರೆ, ಪೋರ್ನೋಗ್ರಫಿ ಅಲ್ಲದ ಸಿನಿಮಾಗಳದ್ದು ಮತ್ತೊಂದು ವಿಭಾಗ. ನಾವೆಲ್ಲ ಮಾಡುವ ಚಿತ್ರಗಳು ಈ ಎರಡು ವಿಭಾಗಗಳ ನಡುವೆ ಬರುತ್ತವೆ. ಜಗತ್ತಿನಲ್ಲಿ ಎಲ್ಲ ಸಿನಿಮಾಗಳಿಗಿಂತ ಹೆಚ್ಚು ಗಳಿಕೆ ಕಾಣುವುದು ಪೋರ್ನೋಗ್ರಫಿ ಸಿನಿಮಾಗಳು. ಅವು ಮಾರಾಟವಾಗುವ ಸರಕು. ಹಿಂಸೆಯ ವಿಕೃತಿಯು ಒಂದು ರೀತಿ ಪೋರ್ನೋಗ್ರಫಿ ಕಡೆಗಿನ ಪಯಣ. ಬಹುಶಃ ಇದು ಈಗಿನ ಟ್ರೆಂಡ್ ಇರಬೇಕು' ಎನ್ನುತ್ತಾರೆ ನಿರ್ದೇಶಕ ಪೃಥ್ವಿ ಕೊಣನೂರು.


'ವೀರಪ್ಪನ್' ಸಿರೀಸ್‌ಗೂ ಬೇಡಿಕೆ: 'ಕ್ರೈಂ, ಆ್ಯಕ್ಷನ್ ಸಿನಿಮಾಗಳನ್ನು ನಾವು ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ಗೆ ಸೇರಿಸುತ್ತೇವೆ. ಈ ವರ್ಷ ಒಟಿಟಿಯಲ್ಲಿ ಯಶಸ್ಸು ಕಂಡ ಬಹುತೇಕ ಚಿತ್ರಗಳು ಇದೇ ಜಾನರ್‌ಗೆ ಸೇರಿದ್ದು. ಚಿತ್ರಮಂದಿರಗಳಲ್ಲಿ ಹೈಪ್ ಆದ ಸಿನಿಮಾಗಳು ಸಾಮಾನ್ಯವಾಗಿ ಒಟಿಟಿಯಲ್ಲಿಯೂ ಜನಪ್ರಿಯತೆ ಗಳಿಸುತ್ತವೆ. ದಕ್ಷಿಣ ಭಾರತದಲ್ಲಿ ಗಮನಿಸಿದರೆ ತೆಲುಗಿನ 'ವಿಮಾನಂ', 'ವ್ಯವಸ್ಥಾ', ತಮಿಳಿನ 'ವೀರಪ್ಪನ್' ಡಾಕ್ಯು ಸಿರೀಸ್, 'ವಿಡುತಲೈ', ಕನ್ನಡದಲ್ಲಿ 'ವೇದ', 'ಘೋಸ್ಟ್', 'ಹಾಸ್ಟೆಲ್ ಹುಡುಗರು' ಸಿನಿಮಾಗಳು ಹೆಚ್ಚು ವೀಕ್ಷಣೆ ಪಡೆದಿವೆ' ಎನ್ನುತ್ತಾರೆ ಜೀ5 ಒಟಿಟಿಯ ಹೆಸರು ಹೇಳಲು ಇಚ್ಛಿಸದ ಅಧಿಕಾರಿಯೊಬ್ಬರು.

'ಸಮಾಜದ ಹೊರಗೆ ಚೆನ್ನಾಗಿಲ್ಲ, ಕುಟುಂಬ ಕುಳಿತು ನೋಡಲು ಸಾಧ್ಯವಿಲ್ಲ ಎಂಬ ವರದಿ ಬಂದ ದೊಡ್ಡ ಚಿತ್ರಗಳು ಈ ವರ್ಷ ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ಗೆಲುವು ಕಂಡಿವೆ. ಪಾಲಕರು ಕುಟುಂಬ ಕುಳಿತು ನೋಡಲು ಸಾಧ್ಯವಿಲ್ಲ ಎಂದು ದೂರುತ್ತಾರೆ. ಮಜವೆಂದರೆ ಈ ಎಲ್ಲ ಕ್ರೌರ್ಯಭರಿತ ಸಿನಿಮಾಗಳನ್ನು ಅತಿ ದೊಡ್ಡ ಪ್ರಮಾಣದಲ್ಲಿ ವೀಕ್ಷಿಸಿ ಗೆಲ್ಲಿಸಿದ್ದು 18-25 ವರ್ಷದೊಳಗಿನ ಮಕ್ಕಳು. 25 ವರ್ಷದಿಂದ ಚಿತ್ರರಂಗದಲ್ಲಿದ್ದರೂ ಪ್ರೇಕ್ಷಕರ ಪಲ್ಸ್ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ' ಎನ್ನುತ್ತಾರೆ ಸಿನಿಮಾ ನಿರ್ಮಾಪಕ, ವಿತರಕ ಜಯಣ್ಣ.



ಒಟಿಟಿ ಪ್ರಭಾವ

ಕ್ರೈಂ, ಹಿಂಸೆ, ಸೆಕ್ಸ್ ಸಂಬಂಧಿತ ಸಿನಿಮಾಗಳು ಹೆಚ್ಚು ಆಸಕ್ತಿ ಹುಟ್ಟಿಸುತ್ತವೆ. ಜೀವನದಲ್ಲಿ ನೋಡದೇ ಇರುವುದನ್ನು ತೆರೆಯ ಮೇಲೆ ನೋಡಲು ಪ್ರೇಕ್ಷಕರು ಇಷ್ಟಪಡುತ್ತಾರೆ. ಯಾವುದನ್ನು ಮುಚ್ಚಿಟ್ಟಿರುತ್ತೇವೋ ಅದರ ಕುರಿತು ಆಸಕ್ತಿ ಹೆಚ್ಚು. ಹೀಗಾಗಿ ಹಿಂದಿನಿಂದಲೂ ಈ ರೀತಿ ಸಿನಿಮಾಗಳು ಬಂದಿವೆ. ಆದರೆ ತೋರಿಸುವ ರೀತಿ ಈಗ ಬದಲಾಗಿದೆ. ನಾಲ್ಕೈದು ವರ್ಷಗಳಿಂದ ಪ್ರೇಕ್ಷಕರು ಒಟಿಟಿಯಿಂದಾಗಿ ಪ್ರಪಂಚದ ಸಿನಿಮಾಗಳಿಗೆ ತೆರೆದುಕೊಂಡಿದ್ದಾರೆ. ಫಾರಿನ್ ಸಿನಿಮಾಗಳಲ್ಲಿ ಕ್ರೈಂ, ಸೆಕ್ಸ್ ಅನ್ನು ಅತಿ ವೈಭವೀಕರಿಸುತ್ತಾರೆ. ಒಟಿಟಿ ಯುಗದ ಪ್ರಭಾವವಿದು. ಸಿನಿಮಾ ನೋಡಲು ಯಾರನ್ನೂ ಬಲವಂತವಾಗಿ ತಂದು ಕೂರಿಸಲು ಆಗದು. ಪ್ರೇಕ್ಷಕ ಸ್ವಇಚ್ಛೆಯಿಂದ ನೋಡುತ್ತಿದ್ದಾನೆ.



ಶಶಾಂಕ್, ನಿರ್ದೇಶಕ

ನಿಧಿ ಸುಬ್ಬಯ್ಯ ಹೊಸ ಅವತಾರ



ನಿಧಿ ಸುಬ್ಬಯ್ಯ

ನಟ **ಅನಿರುದ್ಧ್ ಜತ್ಕರ್** ನಾಯಕನಾಗಿ ನಟಿಸಿರುವ 'chef ಚಿದಂಬರ' ಚಿತ್ರದಲ್ಲಿ ನಾಯಕಿ ನಿಧಿ ಸುಬ್ಬಯ್ಯ ಅವರ ಪಾತ್ರ ಪರಿಚಯಿಸುವ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ರಾಘು' ಚಿತ್ರವನ್ನು ನಿರ್ದೇಶಿಸಿದ್ದ ಎಂ.ಆನಂದರಾಜ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಈ ಚಿತ್ರದಲ್ಲಿ ಮೋನಾ ಎಂಬುದು ನಿಧಿ ಸುಬ್ಬಯ್ಯ ಅವರ ಪಾತ್ರದ ಹೆಸರು. ಅವರ ಕೈಯಲ್ಲಿ ಬೇಡಿಯಿದ್ದು, ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಕಾಣಿಸಿಕೊಂಡಿರುವ ಸುಳಿವನ್ನು ಪೋಸ್ಟರ್ ನೀಡುತ್ತಿದೆ.

'ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಬಿರುಸಿನಿಂದ ಸಾಗಿವೆ. ಬಹಳ ದಿನಗಳ ನಂತರ ನಿಧಿ ಸುಬ್ಬಯ್ಯ ಅವರು ನಮ್ಮ ಚಿತ್ರದಲ್ಲಿ ನಟಿಸಿದ್ದಾರೆ. ನಿಧಿ ಅವರ ಪೋಸ್ಟರ್‌ಗೆ ಅಭಿಮಾನಿಗಳು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಆದರೆ, ಕುತೂಹಲ ಮೂಡಿಸಿರುವ ನಿಧಿ ಅವರ ಪಾತ್ರ ಏನು ಎಂಬುದನ್ನು ಚಿತ್ರದಲ್ಲಿ ನೋಡಬೇಕು' ಎಂದು ನಿರ್ದೇಶಕ ಆನಂದರಾಜ್ ಹೇಳಿದ್ದಾರೆ.

ಡಾರ್ಕ್ ಕಾಮಿಡಿ ಇರುವ ಈ ಚಿತ್ರದಲ್ಲಿ ಅನಿರುದ್ಧ್ ಶೆಫ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದಮ್ತಿ ಪಿಕ್ಚರ್ಸ್ ಲಾಂಛನದಲ್ಲಿ ರೂಪ ಡಿ.ಎನ್. ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಉದಯಲೀಲ ಛಾಯಾಗ್ರಹಣ, ರಿತ್ವಿಕ್ ಮುರಳಿಧರ್ ಸಂಗೀತ ನಿರ್ದೇಶನ, ವಿಜೇತ್ ಚಂದ್ರ ಸಂಕಲನವಿದೆ. 'ಲವ್ ಮಾಕ್ಟೇಲ್' ಖ್ಯಾತಿಯ ರೆಚೆಲ್ ಡೇವಿಡ್, ಶರತ್ ಲೋಹಿತಾಶ್ವ, ಕೆ.ಎಸ್ ಶ್ರೀಧರ್, ಶಿವಮಣಿ, ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.



ಈ ವಾರ ತೆರೆಗೆ

'ಸಲಾರ್'ಗೆ ದಾರಿಬಿಟ್ಟ ಚಿತ್ರರಂಗ


ವರ್ಷಾಂತ್ಯಕ್ಕೆ ಒಂದೂ ಕನ್ನಡ ಚಿತ್ರ ತೆರೆಗೆ ಬಾರದೆ ಅಚ್ಚರಿ ಮೂಡಿಸಿದೆ. ತೆಲುಗಿನ ಪ್ರಭಾಸ್ ನಟಿಸಿ, 'ಕೆ.ಜಿ.ಎಫ್' ಖ್ಯಾತಿಯ ಪ್ರಶಾಂತ್ ನೀಲ್ ನಿರ್ದೇಶಿಸಿರುವ 'ಸಲಾರ್' ಇಂದು(ಡಿ.22) ತೆರೆ ಕಾಣುತ್ತಿರುವ ಏಕೈಕ ಕನ್ನಡ ಚಿತ್ರವಾಗಿದೆ. ಇದು ಕೂಡ ನೇರ ಕನ್ನಡ ಚಿತ್ರವಲ್ಲ; ತೆಲುಗಿನಿಂದ ಡಬ್ ಆಗಿರುವುದು. ಹೀಗಾಗಿ ಒಂದು ರೀತಿಯಲ್ಲಿ ಈ ವಾರ ಯಾವುದೇ ಚಿತ್ರ ತೆರೆ ಕಾಣುತ್ತಿಲ್ಲ. ಹಿಂದಿಯಲ್ಲಿ ಶಾರೂಕ್ ಖಾನ್ ನಟನೆಯ 'ಡಂಕಿ' ಕೂಡ ಗುರುವಾರ ತೆರೆಕಂಡಿದ್ದು, ಈ ಎರಡು ದೊಡ್ಡ ಚಿತ್ರಗಳಿಗೆ ಈ ವಾರ ಕನ್ನಡ ಚಿತ್ರರಂಗ ದಾರಿ ಬಿಟ್ಟುಕೊಟ್ಟಿದೆ.

ಹೊಂಬಾಳೆ ಫಿಲ್ಮ್ಸ್ ನಿರ್ಮಾಣದ ಈ ಚಿತ್ರದಲ್ಲಿ ಮಲಯಾಳಂನ ಖ್ಯಾತ ನಟ ಪೃಥ್ವಿರಾಜ್ ಮುಖ್ಯಭೂಮಿಕೆಯಲ್ಲಿದ್ದಾರೆ. ತಾಂತ್ರಿಕವಾಗಿ 'ಕೆಜಿಎಫ್' ತಂಡವೇ ಇದೆ. ರವಿ ಬಸ್ರೂರು ಸಂಗೀತ, ಭುವನ್ ಗೌಡ ಛಾಯಾಗ್ರಹಣ ಚಿತ್ರಕ್ಕಿದೆ. ಮೂಲ ತೆಲುಗು ಸಿನಿಮಾವಾಗಿರುವುದರಿಂದ ಕನ್ನಡ ಅವತರಣಿಕೆ ಬೆರಳೆಣಿಕೆ ಚಿತ್ರಮಂದಿರಗಳಲ್ಲಿ ತೆರೆ ಕಾಣುತ್ತಿದೆ.

ರಾಯಭಾರಿ ನಟ ಶಿವರಾಜ್‌ಕುಮಾರ್ ಮೊದಲ ಟೀಜರ್ ಬಿಡುಗಡೆ

ನಂದಿನಿ ಎಮ್ಮೆ ಹಾಲು ಮಾರುಕಟ್ಟೆಗೆ

ಪ್ರಜಾವಾಣಿ ವಾರ್ತೆ



ಮುಖ್ಯಮಂತ್ರಿ ಸಿದ್ದರಾಮಯ್ಯ, ನಟ ಶಿವರಾಜ್‌ಕುಮಾರ್ ಕೆಎಂಎಫ್‌ನ ಹೊಸ ಉತ್ಪನ್ನಗಳು ಮತ್ತು 'ಪ್ರಜಾವಾಣಿ' ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿದರು. ಮಧು ಬಂಗಾರಪ್ಪ, ಭೀಮನಾಯ್ಕ, ಎಂ.ಕೆ. ಜಗದೀಶ್, ರಘುನಂದನ್, ಗೀತಾ ಶಿವರಾಜಕುಮಾರ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಎಮ್ಮೆ ಹಾಲು ಒಳಗೊಂಡಂತೆ ನಂದಿನಿ ಬ್ರ್ಯಾಂಡ್‌ನ ನೂತನ ಉತ್ಪನ್ನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ನಟ ಶಿವರಾಜ್‌ಕುಮಾರ್ ಅವರು ಗುರುವಾರ ಬಿಡುಗಡೆ ಮಾಡಿದರು.

ಎಲ್ಲ ವರ್ಗದ ಗ್ರಾಹಕರ ಅಭಿರುಚಿಗೆ ತಕ್ಕಂತೆ ಹಾಲು, ಹಾಲಿನ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಿರುವ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ (ಕೆಎಂಎಫ್) 'ನಂದಿನಿ ಎಮ್ಮೆ ಹಾಲು', ಕಡಿಮೆ ಕೊಬ್ಬಿನಾಂಶ ಒಳಗೊಂಡ 'ಮೊಸರು ಲೈಟ್' ಹಾಗೂ ಆಕರ್ಷಕ ವಿನ್ಯಾಸದ ಹೊಸ ಪ್ಯಾಕಿಂಗ್‌ನ ಮೈಸೂರ್ ಪಾಕ್, ಏಲಕ್ಕಿ ಪೇಡಾ, ಸಿರಿಧಾನ್ಯದ ಲಡ್ಡು, ಧಾರವಾಡ ಪೇಡ, ಹಾಲಿನ ಪೇಡ ಸೇರಿದಂತೆ 40ಕ್ಕೂ ಹೆಚ್ಚು ಬಗೆಯ ಸಿಹಿ ತಿನಿಸುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರು.

500 ಮಿ.ಲೀನ ನಂದಿನಿ ಎಮ್ಮೆ ಹಾಲಿಗೆ ₹35, ಮೊಸರು ಲೈಟ್‌ಗೆ ₹25 ನಿಗದಿ ಮಾಡಲಾಗಿದೆ. ನಂದಿನಿ ಉತ್ಪನ್ನಗಳ ರಾಯಭಾರಿ ಯಾಗಿದ್ದ ಪುನೀತ್ ಮರಣಾನಂತರ ಅವರ ಹಿರಿಯ ಸಹೋದರ ಶಿವರಾಜ್ ಕುಮಾರ್ ಅವರು ರಾಯಭಾರಿಯಾಗಿ ಕಾರ್ಯನಿರ್ವಹಿಸಲು ಸಮ್ಮತಿಸಿದ್ದು, ಇದೇ ಮೊದಲ ಬಾರಿ ಅವರು ಪಾಲ್ಗೊಂಡ ನಂದಿನಿ ಉತ್ಪನ್ನಗಳ ಪ್ರಚಾರದ ಟಿವಿ ಜಾಹೀರಾತಿನ ಟೀಜರ್ ಹಾಗೂ ಕೆಎಂಎಫ್ ಸಹಭಾಗಿತ್ವದ 'ಪ್ರಜಾವಾಣಿ' ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ನಿರ್ಮಾಪಕಿ ಗೀತಾ ಶಿವರಾಜ್ ಕುಮಾರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ಕೆಎಂಎಫ್ ಅಧ್ಯಕ್ಷ ಭೀಮನಾಯ್ಕ, ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್, ಮಾರುಕಟ್ಟೆ ವಿಭಾಗದ ನಿರ್ದೇಶಕ ರಘುನಂದನ್, 'ಪ್ರಜಾವಾಣಿ' ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಕಿರಣ್ ಸುಂದರರಾಜನ್ ಉಪಸ್ಥಿತರಿದ್ದರು.

ಅಪ್ಪ ಹಾಗೂ ಪುನೀತ್ ನಂದಿನಿ ಉತ್ಪನ್ನಗಳ ಪರ ಉಚಿತ ಪ್ರಚಾರ ನಡೆಸಿದ್ದರು. ನಾನು ಸಹ ಯಾವುದೇ ಸಂಭಾವನೆ ಪಡೆಯದೆ ರಾಯಭಾರ ನಿಭಾಯಿಸುವೆ

ಶಿವರಾಜ್‌ಕುಮಾರ್, ನಟ

ಅರ್ಜುನ ಸಾವು: ತನಿಖೆ ಆರಂಭ

ಮಾಹಿತಿ ಕಲೆ ಹಾಕಿದ ತನಿಖಾಧಿಕಾರಿ ಅಜಯ್ ಮಿಶ್ರಾ

ಪ್ರಜಾವಾಣಿ ವಾರ್ತೆ

ಹೆತ್ತೂರು (ಹಾಸನ): ಸಮೀಪದ ದಬ್ಬಳಿಕಟ್ಟೆ ಅರಣ್ಯ ಪ್ರದೇಶದಲ್ಲಿ ಡಿ.4ರಂದು ನಡೆದ, ಅಂಬಾರಿ ಆನೆ ಅರ್ಜುನನ ಸಾವಿನ ಪ್ರಕರಣದ ತನಿಖೆ ಆರಂಭವಾಗಿದೆ. ಗುರುವಾರ ಬೆಳಿಗ್ಗೆ ಸ್ಥಳಕ್ಕೆ ಭೇಟಿ ನೀಡಿದ ನಿವೃತ್ತ ಮುಖ್ಯ ವನ್ಯ ಪಾಲಕ (ವನ್ಯಜೀವಿ ವಿಭಾಗ) ಅಜಯ್ ಮಿಶ್ರಾ ಹಾಗೂ ಅವರ ತಂಡ, ಸ್ಥಳೀಯರು ಹಾಗೂ ಅಧಿಕಾರಿಗಳಿಂದ ಮಾಹಿತಿ ಪಡೆಯಿತು.

ಅರ್ಜುನ ಮತ್ತು ಕಾಡಾನೆ ನಡುವೆ ಕಾಳಗ ನಡೆದ ಪ್ರದೇಶಕ್ಕೆ ತೆರಳಿದ ತಂಡ, ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿತು. ಘಟನೆ ನಡೆದಾಗ ಹಾಜರಿದ್ದ ಅರಣ್ಯಾಧಿಕಾರಿಗಳು, ಸಿಬ್ಬಂದಿ ಹಾಗೂ ಸ್ಥಳೀಯರಿಂದ ಮಾಹಿತಿ ಸಂಗ್ರಹಿಸಿತು. ಆನೆಗಳ ಕಾಳಗದಲ್ಲಿ ಅಂಬಾರಿ ಆನೆ ಅರ್ಜುನ, ಕಾಡಾನೆ ದಾಳಿಯಿಂದ ಮೃತಪಟ್ಟಿತ್ತು. ಮೃತಪಡುವ ಮುನ್ನ ಅರ್ಜುನನ ಕಾಲಿಗೆ ಗುಂಡೇಟು ತಗುಲಿತ್ತು. ಇನ್ನೊಂದು ಸಾಕಾನೆ ಪ್ರಶಾಂತ್‌ಗೆ ಅರಿವಳಿಕೆ ಚುಚ್ಚುಮದ್ದು ಬಿದ್ದಿತ್ತು ಎಂಬ ಆರೋಪಗಳು ಕೇಳಿ ಬಂದಿದ್ದವು. ಸ್ಥಳಕ್ಕೆ ಭೇಟಿ ನೀಡಿದ್ದ ಅರಣ್ಯ ಸಚಿವ ಈಶ್ವರ್ ಖಂಡ್ರೆ, ತನಿಖೆ ನಡೆಸಲು ತಂಡವನ್ನು ರಚಿಸಿದ್ದರು.

'ಪ್ರಾಥಮಿಕ ತನಿಖೆಯನ್ನು ಆರಂಭಿಸಲಾಗಿದೆ. ಮರಣೋತ್ತರ ಪರೀಕ್ಷಾ ವರದಿಯನ್ನು ಪರಿಶೀಲಿಸಲಾಗುವುದು. ಎಲ್ಲವನ್ನೂ ಕ್ರೋಡೀಕರಿಸಿ ವರದಿ ಸಲ್ಲಿಸಲಾಗುವುದು' ಎಂದು ತಂಡದ ಸದಸ್ಯರೊಬ್ಬರು ಪ್ರತಿಕ್ರಿಯಿಸಿದರು.

ನಿಧನ ವಾರ್ತೆ

ಚನ್ನಮ್ಮ ಹಳ್ಳಿಕೇರಿ



ಹಾವೇರಿ: ತಾಲ್ಲೂಕಿನ ಹೊಸ ರಿತ್ತಿ ಗ್ರಾಮದ ಗಾಂಧಿವಾದಿ ಚನ್ನಮ್ಮ ಹಳ್ಳಿಕೇರಿ (92) ಅವರು ಮಹಾರಾಷ್ಟ್ರದ ವಾರ್ಧಾ ತಾಲ್ಲೂಕಿನ ಪೌನಾರ್ ಆಶ್ರಮದಲ್ಲಿ ವಯೋಸಹಜ ಅನಾರೋಗ್ಯದಿಂದ ಬುಧವಾರ ನಿಧನರಾದರು.

1931ರಲ್ಲಿ ಚನ್ನಬಸಪ್ಪ ಮತ್ತು ಗೌರಮ್ಮ ದಂಪತಿಯ ಮೂರನೇ ಪುತ್ರಿಯಾಗಿ ಜನಿಸಿದ ಚನ್ನಮ್ಮ ಅವರು 1940ರ ದಶಕದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಹಳ್ಳಿಕೇರಿ ಗುದ್ಲೆಪ್ಪ ಮತ್ತು ವೆಂಕಟೇಶ ಮಾಗಡಿ ಅವರು ಸ್ಥಾಪಿಸಿದ್ದ ಗಾಂಧಿ ಆಶ್ರಮದಿಂದ ಸ್ಫೂರ್ತಿ ಪಡೆದಿದ್ದರು.

ಭೂದಾನ ಚಳವಳಿ, ಸರ್ವೋದಯ ವಿಚಾರ ಪ್ರಸಾರ, ಅಸ್ಪೃಶ್ಯತೆ ನಿವಾರಣೆ, ಗ್ರಾಮೀಣ ನೈರ್ಮಲ್ಯ, ಹರಿಜನೋದ್ಧಾರ, ಖಾದಿ ಪ್ರಚಾರ, ಮಹಿಳಾ ಸಬಲೀಕರಣ ಮುಂತಾದ ಚಳವಳಿಗಳಲ್ಲಿ, ವಿನೋಬಾ ಭಾವೆ ಮತ್ತು ಮಹಾತ್ಮ ಗಾಂಧಿ ಅವರೊಡನೆ ಭೂದಾನ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು. ಇವರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿ ಗಳಿಗೆ ಭಾಜನರಾಗಿದ್ದರು.

ಸಾಯಿಕೃಷ್ಣ: ತೀವ್ರ ವಿಚಾರಣೆ

ಪ್ರಜಾವಾಣಿ ವಾರ್ತೆ



ಸಾಯಿಕೃಷ್ಣ

ಬಾಗಲಕೋಟೆ: ಲೋಕಸಭೆ ಕಲಾಪದ ವೇಳೆ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದಿದ್ದ ಆರೋಪಿ ಡಿ. ಮನೋರಂಜನ್ ಸಹಪಾಠಿ ಸಾಯಿಕೃಷ್ಣ ಜಗಲಿ ಅವರನ್ನು ವಶಕ್ಕೆ ಪಡೆದ ದೆಹಲಿ ಪೊಲೀಸರು, ಹೈದರಾಬಾದ್ ಮೂಲಕ ದೆಹಲಿಗೆ ಕರೆದೊಯ್ದಿದ್ದಾರೆ.

'ಬೆಂಗಳೂರಿನ ಬಿಐಟಿ ಕಾಲೇಜಿನಲ್ಲಿ ಇಬ್ಬರೂ ಸಹಪಾಠಿಗಳಾಗಿದ್ದರು. ಇಬ್ಬರೂ ಸಂಪರ್ಕದಲ್ಲಿರುವುದು ಮನೋರಂಜನ್ ಕರೆಗಳ ವಿವರದಿಂದ ಗೊತ್ತಾಗಿದೆ. ಇಬ್ಬರ ನಡುವೆ ಯಾವ ರೀತಿಯ ಸಂಪರ್ಕವಿತ್ತು? ಯಾವ ವಿಷಯ ಚರ್ಚೆ ಯಾಗುತ್ತಿತ್ತು? ಲೋಕಸಭಾ ಕಲಾಪಕ್ಕೆ ನುಗ್ಗಿದ್ದ ವಿಷಯ ಚರ್ಚೆಯಾಗಿತ್ತೇ? ಅದರಲ್ಲಿ ಇವರ ಪಾತ್ರವೇನಾದರೂ ಇತ್ತೇ ಎಂಬ ಬಗ್ಗೆ ವಿಚಾರಣೆ ನಡೆದಿದೆ' ಎಂದು ಮೂಲಗಳು ತಿಳಿಸಿವೆ. ಮನೋರಂಜನ್‌ಗೆ ಯಾವುದೇ ಕೆಲಸ ಇರಲಿಲ್ಲ. ಕಂಪನಿಯೊಂದರ ಹಿರಿಯ ಎಂಜಿನಿಯರ್ ಸಾಯಿಕೃಷ್ಣ ಕಡೆಯಿಂದ ಆರ್ಥಿಕ ನೆರವು ಸಿಗುತ್ತಿತ್ತೇ ಎಂಬ ಬಗ್ಗೆಯೂ ತನಿಖೆ ನಡೆಸಲಾಗಿದೆ' ಎಂದು ಗೊತ್ತಾಗಿದೆ.

ಸಲೂನ್ ಸ್ನೇಹಿತನಿಂದ ಮನೋರಂಜನ್‌ಗೆ ಹಣ!

ಮೈಸೂರು: ಸಂಸತ್ತಿನಲ್ಲಿ ಭದ್ರತಾ ಲೋಪ ಪ್ರಕರಣದ ಆರೋಪಿ ಡಿ.ಮನೋರಂಜನ್‌ಗೆ, ನಗರದ ವಿಜಯನಗರದಲ್ಲಿ ಹೇರ್ ಕಟಿಂಗ್ ಸಲೂನ್ ನಡೆಸುತ್ತಿರುವ ಸ್ನೇಹಿತ ಸೂರಪ್ಪ ಹಣ ವರ್ಗಾವಣೆ ಮಾಡಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ.

ಹೀಗಾಗಿ ಸೂರಪ್ಪ ಅವರನ್ನು ದೆಹಲಿ ಪೊಲೀಸರು ಎರಡು ದಿನದಿಂದ ವಿಚಾರಣೆಗೊಳಪಡಿಸಿದ್ದಾರೆ. ಆರೋಪಿ ಮನೆಯಲ್ಲಿ ದೊರೆತ ಡೈರಿಯಲ್ಲಿರುವ ಮಾಹಿತಿಗಳ ಜಾಡು ಹಿಡಿದು ತನಿಖೆ ಮುಂದುವರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ನಿರುದ್ಯೋಗಿಯಾಗಿದ್ದ ಆರೋಪಿಯ ಹಣದ ಮೂಲಗಳ ಬಗ್ಗೆಯೇ ಅಧಿಕಾರಿಗಳು ಗಂಭೀರ ಗಮನ ಹರಿಸಿದ್ದಾರೆ. ಆತನ ಸಂಪರ್ಕಕ್ಕೆ ಬಂದಿರುವ ಎಲ್ಲರನ್ನೂ ವಿಚಾರಣೆಗೆ ಒಳಪಡಿಸುವ ಪ್ರಯತ್ನಗಳೂ ನಡೆದಿವೆ.

रजिस्ट्री.सं. डी.एल.- 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.- 11122023-250557
CG-DL-E- 11122023-250557
असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

No. 4979] NEW DELHI, FRIDAY, DECEMBER 08, 2023/ AGRAHAYANA 17, 1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ನವದೆಹಲಿ

ನವದೆಹಲಿ ದಿನಾಂಕ 08ನೇ ಡಿಸೆಂಬರ್,2023

ಅಧಿಸೂಚನೆ

ಸಂ.ವಿ.ಭೂ. ಸ್ವಾ ಅ/ರಾಹೆ/ವಿ. ವಿ

ವಿಶೇಷ ಭೂ–ಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ –367 (ಬಾಣಾಪೂರ– ಗದ್ದನಕೇರಿ ಸೆಕ್ಷನ್) ಕಿ.ಮೀ 71.50 ರಿಂದ ಕಿ.ಮೀ 104.00 ರವರೆಗೆ, ರಾಷ್ಟ್ರೀಯ ಹೆದ್ದಾರಿಗಳು, ಮಿನಿವಿಧಾನ ಸೌಧ ಧಾರವಾಡ.

ಸಾರ್ವಜನಿಕ ಪ್ರಕಟಣೆ

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಸೆಕ್ಷನ್ 3ಡಿ(1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭಾರತ ಸರಕಾರವು ಕರ್ನಾಟಕ ರಾಜ್ಯದ ಬಾಗಲಕೋಟ ಜಿಲ್ಲೆಯ ಈ ಕೆಳಗೆ ಅಧಿಸೂಚನೆಯಲ್ಲಿ ಪ್ರಕಟಿಸಿರುವ ಜಮೀನುಗಳನ್ನು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 367ರಲ್ಲಿ (ಬಾಣಾಪೂರ– ಗದ್ದನಕೇರಿ ಸೆಕ್ಷನ್) ಕಿ.ಮೀ 71.50ರಿಂದ ಕಿ.ಮೀ 104.00ರವರೆಗೆ ರಸ್ತೆ ನಿರ್ಮಾಣ (ಅಗಲಗೊಳಿಸುವುದು/ 4 ಲೇನ್ಇತ್ಯಾದಿ) ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳಲು 3ಡಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ಅಧಿಸೂಚನೆಯು ಭಾರತ ರಾಜಪತ್ರದ ಅಸಾಧಾರಣ, ಭಾಗ–2, ಸೆಕ್ಷನ್ 3, ಸಬ್‌ಸೆಕ್ಷನ್ (2) ರಲ್ಲಿ ಎಸ್.ಓ.ಸಂ 597 (ಇ) ದಿನಾಂಕ: 06–02–2023 ರಂದು ಪ್ರಕಟವಾಗಿರುತ್ತದೆ.

ಆದಕಾರಣ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಸೆಕ್ಷನ್ 3ಜಿ ಉಪಕಲಂ (1) (2) (3) ಮತ್ತು (4) ಹಾಗೂ 1997ರ ತಿದ್ದುಪಡಿಯಡಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಯಲ್ಲಿ ನಮೂದಿಸಿದ ಭೂಮಿಯ ಮಾಲೀಕರು ಹಾಗೂ ಸದರಿ ಭೂಮಿಗಳಲ್ಲಿ ಹಿತಾಸಕ್ತಿ ಉಳ್ಳವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅಧಿಸೂಚನೆಯಲ್ಲಿ ನಮೂದಿಸಿರುವ ಜಮೀನುಗಳನ್ನು ಕೇಂದ್ರ ಸರ್ಕಾರವು ಭೂಸ್ವಾಧೀನ ಪಡಿಸಿಕೊಂಡಿರುವುದರಿಂದ ಸದರಿ ಜಮೀನುಗಳಿಗೆ ಪರಿಹಾರ ನಿಗಧಿಪಡಿಸಿ ಪಾವತಿಸಲು ಜಮೀನಿಗೆ ಸಂಬಂಧಿಸಿದ ಅಧಿಕೃತ ದಾಖಲೆಗಳನ್ನು ಅಂದರೆ (1) ಮೂಲ ದಾಖಲೆ ಪತ್ರಗಳು (2) ಕ್ರಯಪತ್ರ, ವಿಭಾಗಪತ್ರ, ಇತರೆ ಹಕ್ಕು ಪತ್ರಗಳು, (3) ಪಹಣಿ ಪತ್ರಿಕೆಗಳು (ಆರ್.ಟಿ.ಸಿ) (4) ಹಕ್ಕು ಬದಲಾವಣೆ ದಾಖಲೆ (ಮ್ಯುಟೇಶನ್) (5)ಕಂದಾಯ ಪಾವತಿಸಿದ ರಶೀದಿ (6) ಋಣಭಾರ ರಹಿತ ದೃಢೀಕರಣ ಪತ್ರ (ಇ.ಸಿ) (7) ಗ್ರಾಮ ಪಂಚಾಯತಿ ಸ್ವತ್ತಿಗೆ ಸಂಬಂದಿಸಿದಂತೆ ಇ–ಸ್ವತ್ತುದಾಖಲೆ (ನಿವೇಶನಗಳಿಗೆ), ಇತರ ಅನ್ವಯವಾಗುವ ದಾಖಲೆಗಳು ಹಾಗೂ ಅಪೇಕ್ಷಿಸುವ ಪರಿಹಾರಧನ (ಸೂಕ್ತ ಸಮರ್ಥನೆಗಳೊಂದಿಗೆ) ದಾಖಲೆಗಳನ್ನು ಪ್ರಕಟಣೆಗೊಂಡ ದಿನಾಂಕದಿಂದ 21 ದಿನಗಳೊಳಗಾಗಿ ಕಛೇರಿ ವೇಳೆಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಮಿನಿ ವಿಧಾನಸೌಧ, ಧಾರವಾಡ ಇವರಿಗೆ ಸಲ್ಲಿಸತಕ್ಕದ್ದು ತಪ್ಪಿದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಪರಿಹಾರಧನ ನಿಗದಿಪಡಿಸಿ ವಿತರಿಸಲಾಗುವುದು.

ಅಧಿಸೂಚನೆ

ಎಸ್.ಓ. 5208(ಇ) ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಮೂಲಕ ಪ್ರಕಟಿಸಲಾದ ಅಧಿಸೂಚನೆ ಸಂಖ್ಯೆ ಎಸ್.ಓ597(ಇ) ದಿನಾಂಕ 06ನೇ ಫೆಬ್ರುವರಿ 2023ರಂದು ಭಾರತ ರಾಜಪತ್ರದ ಅಸಾಧಾರಣ, ಭಾಗ–2, ಸೆಕ್ಷನ್ 3, ಸಬ್‌ಸೆಕ್ಷನ್ (2) ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ಪ್ರಕಾರ ಸೆಕ್ಷನ್ 3(ಎ)ರ ಸಬ್ ಸೆಕ್ಷನ್ (1) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸರ್ಕಾರವು ಇದರೊಂದಿಗೆ ಲಗತ್ತಿಸಿರುವ ಅನುಸೂಚಿ (ಶೆಡ್ಯೂಲ್) ಯಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಬಾಗಲಕೋಟ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ.367ರ (ಬಾಣಾಪೂರ– ಗದ್ದನಕೇರಿ ಸೆಕ್ಷನ್) ರಸ್ತೆಯ ಕಿಮೀ.71.50ರಿಂದ ಕಿಮೀ 104.00ರವರೆಗೆ ರಸ್ತೆ ನಿರ್ಮಾಣ (ಅಗಲಗೊಳಿಸುವುದು/ 4 ಲೇನ್ ಇತ್ಯಾದಿ) ಸಂರಕ್ಷಣೆ ಕಾರ್ಯನಿರ್ವಹಣೆ ಮತ್ತು ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿದೆ.

ಸದರಿ ಅಧಿಸೂಚನೆಯನ್ನು"ಹೊಸದಿಗಂತ" ಮತ್ತು "ಟೈಮ್ಸ್ ಆಫ್ ಇಂಡಿಯಾ" ದಿನ ಪತ್ರಿಕೆಗಳಲ್ಲಿ ದಿನಾಂಕ: 11–03–2023ರಂದು ಪ್ರಚುರಪಡಿಸಿ, ರಾಷ್ಟ್ರೀಯ ಹೆದ್ದಾರಿಕಾಯ್ದೆ ಸೆಕ್ಷನ್ 3(ಎ)ರ ಸಬ್‌ಸೆಕ್ಷನ್ (3) ರ ಪ್ರಕಾರ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಅದರಂತೆ ಆಕ್ಷೇಪಣೆಗಳನ್ನು ಸ್ವೀಕರಿಸಿ ಮತ್ತು ಪರಿಶೀಲನೆ ನಡೆಸಿ ಸಕ್ಷಮ ಪ್ರಾಧಿಕಾರಿಯವರು ಅಂಗೀಕರಿಸಿರುತ್ತಾರೆ /ತಿರಸ್ಕರಿಸಿರುತ್ತಾರೆ. ಅಂತಹ ಆಕ್ಷೇಪಣೆಗಳಿಗೆ ಕಾಯಿದೆಯ ಸೆಕ್ಷನ್ 3(ಡಿ)ರ ಸಬ್–ಸೆಕ್ಷನ್ (1) ರ ಪ್ರಕಾರ ಸಕ್ಷಮ ಪ್ರಾಧಿಕಾರವು ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ.

ಆದ್ದರಿಂದ ಈಗ ಸಕ್ಷಮ ಪ್ರಾಧಿಕಾರಿಯವರಿಂದ ಬಂದ ವರದಿ ಪ್ರಕಾರ ಮತ್ತು ಸೆಕ್ಷನ್ 3(ಡಿ) ರ ಸಬ್‌ಸೆಕ್ಷನ್ (1) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅನುಸೂಚಿಯಲ್ಲಿ ತೋರಿಸಿದ ಭೂಮಿಯನ್ನು ಮೇಲೆ ತಿಳಿಸಿದ ಉಪಯೋಗಕ್ಕಾಗಿ ಸ್ವಾಧೀನ ಮಾಡಿಕೊಳ್ಳಲು ಕೇಂದ್ರ ಸರಕಾರವು ಘೋಷಿಸುತ್ತದೆ. ಈಗ ಸೆಕ್ಷನ್ 3(ಡಿ)ರ ಸಬ್‌ಸೆಕ್ಷನ್ (2) ರ ಅನುಸಾರ ರಾಜ್ಯ ಪತ್ರದಲ್ಲಿ ಅಧಿಸೂಚನೆ ಪ್ರಕಟಣೆಗೊಂಡ ಮೇಲೆ ಅನುಸೂಚಿಯಲ್ಲಿ ವಿವರಿಸಿರುವ ಭೂಮಿಯು ಯಾವುದೇ ಋಣಭಾರವಿಲ್ಲದೇ ಕೇಂದ್ರ ಸರಕಾರದ ಸಂಪೂರ್ಣ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಕೇಂದ್ರ ಸರ್ಕಾರವು ಘೋಷಿಸಿದೆ.

ಅನುಸೂಚಿ

ಕರ್ನಾಟಕ ರಾಜ್ಯದಲ್ಲಿರುವ ಬಾಗಲಕೋಟ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ.367 (ಬಾಣಾಪೂರ– ಗದ್ದನಕೇರಿ ಸೆಕ್ಷನ್) ರಸ್ತೆಯ ಕಿ.ಮೀ 71.50 ರಿಂದ ಕಿ.ಮೀ 104.00 ರವರೆಗೆ ಕಟ್ಟಡಗಳು ಹಾಗೂ ಕಟ್ಟಡಗಳ ರಹಿತ ಭೂಸ್ವಾಧೀನಗೊಳ್ಳಲಿರುವ ಜಮೀನುಗಳ ಸಂಕ್ಷಿಪ್ತ ವಿವರ.

ರಾಜ್ಯ: ಕರ್ನಾಟಕ ಜಿಲ್ಲೆ: ಬಾಗಲಕೋಟ

ಅ.ನಂ.	ಸರ್ವೇ ನಂ. / ಪ್ಲಾಟ್ ನಂ.	ಜಮೀನಿನ ಪ್ರಕಾರ (ಟೈಪ್ ಆಫ್ ಲ್ಯಾಂಡ)	ಜಮೀನಿನ ತರಹೆ	ಜಮೀನಿನ ವಿಸ್ತೀರ್ಣ (ಹೆಕ್ಟೆರ್‌ಗಳಲ್ಲಿ)	ಭೂಮಾಲಿಕರ/ ಹಿತಾಸಕ್ತಿವುಳ್ಳವರ ಹೆಸರು ಮತ್ತು ಸರ್ವೇ ನಂಬರಿನ ಭಾಗ
1	2	3	4	5	6
ತಾಲ್ಲೂಕ: ಬದಾಮಿ					ಗ್ರಾಮ: ಗೋವನಕಿ
1	24	ಖಾಸಗಿ	ಖುಷ್ಕಿ	0.0759	ಅಧ್ಯಕ್ಷರು ಮದ್ದೀಶ್ವರ ಶಿವಯೋಗ ಮಂದಿರ ಟ್ರಸ್ಟ್ ಕಮಿಟಿ(24/*)
2	25	ಖಾಸಗಿ	ಖುಷ್ಕಿ	0.0348	ಅಧ್ಯಕ್ಷರು ಮದ್ದೀಶ್ವರ ಶಿವಯೋಗ ಮಂದಿರ ಟ್ರಸ್ಟ್ ಕಮಿಟಿ(25/*)
3	26	ಖಾಸಗಿ	ಖುಷ್ಕಿ	0.0349	ಅಧ್ಯಕ್ಷರು ಮದ್ದೀಶ್ವರ ಶಿವಯೋಗ ಮಂದಿರ ಟ್ರಸ್ಟ್ ಕಮಿಟಿ(26/*)
4	27	ಖಾಸಗಿ	ಖುಷ್ಕಿ	0.0057	ಅಧ್ಯಕ್ಷರು ಮಾದ್ದೀಶ್ವರ ಶಿವಯೋಗ ಮಂದಿರ ಟ್ರಸ್ಟ್ ಕಮಿಟಿ(27/*)
5	28	ಖಾಸಗಿ	ಖುಷ್ಕಿ	0.027539	ಅಧ್ಯಕ್ಷರು ಮದ್ದೀಶ್ವರ ಶಿವಯೋಗ ಮಂದಿರ ಟ್ರಸ್ಟ್ ಕಮಿಟಿ(28/*)
6	31	ಖಾಸಗಿ	ಖುಷ್ಕಿ	0.2734	ಮುತ್ತವ್ವ ಮುದಿಗೌಡ ಗದ್ದಿಗೌಡ್ರ, ಶಾಂತಗೌಡ ಮುದಿಗೌಡ ಗದ್ದಿಗೌಡ್ರ, ಹನಮಗೌಡ ಮುದಿಗೌಡ ಗದ್ದಿಗೌಡ್ರ, ಈರವ್ವ ಯಲ್ಲನಗೌಡ ಗದ್ದಿಗೌಡ್ರ, ಮುದಿಗೌಡ ಯಲ್ಲನಗೌಡ ಗದ್ದಿಗೌಡ್ರ, ಕೆ ಎನ್ ಎನ್ ಎಲ್ (31/*)
7	32	ಖಾಸಗಿ	ಖುಷ್ಕಿ	0.0647	ಅಧ್ಯಕ್ಷರು ಮದ್ದೀಶ್ವರ ಶಿವಯೋಗ ಮಂದಿರ ಟ್ರಸ್ಟ್ ಕಮಿಟಿ (32/*)
8	33	ಖಾಸಗಿ	ಖುಷ್ಕಿ	0.020634	ಕುಮಾರಯ್ಯ ವೀರಯ್ಯ ರೋಣದ್ (33/1)
9	33	ಖಾಸಗಿ	ಖುಷ್ಕಿ	0.030703	ಗೊಡಚಯ್ಯ ವೀರಯ್ಯ ರೋಣದ್ (33/3)
10	33	ಖಾಸಗಿ	ಖುಷ್ಕಿ	0.031058	ಅಂದಯ್ಯ ವೀರಯ್ಯ ರೋಣದ್ (33/4)
11	34	ಖಾಸಗಿ	ಖುಷ್ಕಿ	0.003911	ಬಸಯ್ಯ ಅಯ್ಯಪ್ಪಯ್ಯ ರೋಣದ್, ಹಾಲಯ್ಯ ಅಯ್ಯಪ್ಪಯ್ಯ ರೋಣದ್, ಸುನಂದಾ ಬಸವನಗೌಡ ರೋಣದ್, ಮಲ್ಲಮ್ಮ ಮುರುಗಯ್ಯ ಸರಗಣಾಚಾರಿ, ಶಕುಂತಲಾ ನಾಗನಗೌಡ ಮಲ್ಲನಗೌಡ್ರ, ಗಿರಿಜವ್ವ ಅಯ್ಯಪ್ಪಯ್ಯ ರೋಣದ್ (34/*)
12	35	ಖಾಸಗಿ	ಖುಷ್ಕಿ	0.0367	ಮಮತಾರಾಣಿ ಉರ್ಫ್ ಸೌಮ್ಯ ನಾರಾಯಣಾಚಾರ್ಯ ಗುಡಿ, ಸರ್ವೋತ್ತಮ ನಾರಾಯಣಾಚಾರ್ಯ ಗುಡಿ, ಸಹನಾ ನಾರಾಯಣಾಚಾರ್ಯ ಗುಡಿ (35/*)
13	36	ಖಾಸಗಿ	ಖುಷ್ಕಿ	0.021536	ಬಸಯ್ಯ ಅಯ್ಯಪ್ಪಯ್ಯ ರೋಣದ್, ಹಾಲಯ್ಯ ಅಯ್ಯಪ್ಪಯ್ಯ ರೋಣದ್, ಸುನಂದಾ ಬಸವನಗೌಡ ರೋಣದ್, ಮಲ್ಲಮ್ಮ ಮುರುಗಯ್ಯ ಸರಗಣಾಚಾರಿ, ಶಕುಂತಲಾ ನಾಗನಗೌಡ ಮಲ್ಲನಗೌಡ್ರ, ಗಿರಿಜವ್ವ ಅಯ್ಯಪ್ಪಯ್ಯ ರೋಣದ್ (36/1)
14	38	ಖಾಸಗಿ	ಖುಷ್ಕಿ	0.0323	ಯಲ್ಲಪ್ಪ ಹನಮಪ್ಪ ಇರಸಕನಾಳ, ಭೀಮಪ್ಪ ಹನಮಪ್ಪ ಇರಸಕನಾಳ, ಶೇಖಪ್ಪ ಹನಮಪ್ಪ ಇರಸಕನಾಳ, ಪರಸಪ್ಪ ಹನಮಪ್ಪ ಇರಸಕನಾಳ, ಲಕ್ಷ್ಮವ್ವ ಹನಮಪ್ಪ ಇರಸಕನಾಳ, ತಿಮ್ಮಣ್ಣ ಹನಮಪ್ಪ ಇರಸಕನಾಳ, ಹನಮವ್ವ ಹನಮಪ್ಪ ಇರಸಕನಾಳ (38/*)
15	39	ಖಾಸಗಿ	ಖುಷ್ಕಿ	0.0444	ಷಣ್ಮುಖಪ್ಪ ಹನಮಪ್ಪ ಹೊನಕೇರಿ, ಶಿವಾನಂದ ಹನಮಪ್ಪ ಹೊನಕೇರಿ, ಲೀಲಾವತಿ ಷಣ್ಮುಖಪ್ಪ ಹೊನಕೇರಿ, ರಂಗನಾಥ ಷಣ್ಮುಖಪ್ಪ ಹೊನಕೇರಿ (39/*)
16	41	ಖಾಸಗಿ	ಖುಷ್ಕಿ	0.016622	ಕುಮಾರಗೌಡ ಬಸನಗೌಡ ಜನಾಲಿ (41/*)
17	42	ಖಾಸಗಿ	ಖುಷ್ಕಿ	0.0101	ಬಸನಗೌಡ ಮಾಗುಂಡಗೌಡ ಜನಾಲಿ (42/1)
18	43	ಖಾಸಗಿ	ಖುಷ್ಕಿ	0.0141	ಸಣ್ಣಭೀಮಪ್ಪ ಸಾಬಣ್ಣ ಹಾಲಾರ್ (43/1)
19	44	ಖಾಸಗಿ	ಖುಷ್ಕಿ	0.0279	1)ಮಾಗುಂಡಯ್ಯ ಪರಯ್ಯ ಪಟ್ಟೇಡ್ ಉರ್ಫ್ ಹಂಗರಗಿ, ಮುತ್ತವ್ವ ನಂದನಗೌಡ ದೇವರಮನಿ, ದೊಡ್ಡವೀರಯ್ಯ ಪರಯ್ಯ ಪಟ್ಟೇದ್ ಉರ್ಫ್ ಹಂಗರಗಿ, ಶಂಕ್ರಯ್ಯ ಪರಯ್ಯ ಪಟ್ಟೇಡ್ ಉರ್ಫ್ ಹಂಗರಗಿ, ಕಳಕವ್ವ ವೀರಯ್ಯ ಪಟ್ಟೇಡ್ ಉರ್ಫ್ ಹಂಗರಗಿ, ಕುಮಾರಯ್ಯ ವೀರಯ್ಯ ಪಟ್ಟೇಡ್ ಊರ್ಫ್ ಹಂಗರಗಿ, ಸಿದ್ದಲಿಂಗಯ್ಯ ವೀರಯ್ಯ ಪಟ್ಟೇಡ್ ಉರ್ಫ್ ಹಂಗರಗಿ, ಕಳಕಯ್ಯ ವೀರಯ್ಯ ಪಟ್ಟೇಡ್ ಉರ್ಫ್ ಹಂಗರಗಿ, 2) ಈರವ್ವ ಶರಣಪ್ಪ ನಾಗನೂರು, ಕಾಳವ್ವ ಪರಸಪ್ಪ ಕರಮುಡಿ (44/1,44/2)
20	5	ಖಾಸಗಿ	ಖುಷ್ಕಿ	0.003027	1) ಮಾನಗೌಡ ಮುನಿಯಪ್ಪಗೌಡ ಜನಾಲಿ, 2) ಬಸಮ್ಮ ಭೈರೇಗೌಡ ಜನಾಲಿ, ಮಾಧುರಿ ಹರೀಶ್ ಹಿರೇಮಠ, ಶೈಲಾ ಹಾಲಯ್ಯ ಹಿರೇಮಠ, ಮಲ್ಲನಗೌಡ ಭೈರೇಗೌಡ ಜನಾಲಿ, ಮಾನಗೌಡ ಭೈರೇಗೌಡ ಜನಾಲಿ, ಲಕ್ಷ್ಮೀ ಸಂಗಮೇಶ ಪೂಜಾರ್, ನಾಗವ್ವ ಮಾಗುಂಡಗೌಡ ಜನಾಲಿ, ಅಡಿಯವ್ವ ಮಾಗುಂಡಗೌಡ ಜನಾಲಿ, ಮಹಾದೇವಿ ಕುಮಾರಯ್ಯ ಹಂಗರಗಿ, ಮಲ್ಲನಗೌಡ ಭೈರೇಗೌಡ ಜನಾಲಿ, ಬಸವ್ವ ಮಾಗುಂಡಗೌಡ ಜನಲಿ,3) ಕಲ್ಲವ್ವ ಬೈರೇಗೌಡ ಯಡಪ್ಪನವರ್, ಗಂಗವ್ವ ಬಸಯ್ಯ ಮಲ್ಲಾಪುರ, ಪಾರ್ವತೆವ್ವ ಸಾಂತಯ್ಯ ಪೂಜಾರ್, ಮುಕ್ಕಣ್ಣ ಶಿವನಗೌಡ ಜನಾಲಿ, ನಿಂಗನಗೌಡ ಶಿವನಗೌಡ ಜನಾಲಿ, 4)ಬೈರೇಗೌಡ ಮಲ್ಲನಗೌಡ ಜನಾಲಿ, ನಾಗವ್ವ ಮಾಗುಂಡಗೌಡ ಮಲ್ಲನಗೌಡ ಜನಾಲಿ, ಅಡಿಯವ್ವ ಮಾಗುಂಡಗೌಡ ಜನಾಲಿ, ನಾಗವ್ವ ಮಾಗುಂಡಗೌಡ ಮಲ್ಲನಗೌಡ ಜನಾಲಿ, ಆಡಿಯವ್ವ ಮಾಗುಂಡ ಕುಮಾರ, ಮಹಾದೇವಿ ಕುಮಾರಯ್ಯ ಹಂಗರಗಿ, ಮಲ್ಲನಗೌಡ ಭೈರೇಗೌಡ ಜನಾಲಿ, ಬಸವ್ವ ಮಾಗುಂಡಗೌಡ ಜನಲಿ, 5) ಮಾನಗೌಡ ಮುನಿಯಪ್ಪಗೌಡ ಜನಾಲಿ, 6) ಕಲ್ಲವ್ವ ಬೈರೇಗೌಡ ಯಡಪ್ಪನವರ್, ಗಂಗವ್ವ ಬಸಯ್ಯ ಮಲ್ಲಾಪುರ, ಪರ್ವತೆವ್ವ ಸಾಂತಯ್ಯ ಪೂಜಾರ್, ಮುಕ್ಕಣ್ಣ ಶಿವನಗೌಡ ಜನಾಲಿ, ನಿಂಗನಗೌಡ ಶಿವನಗೌಡ ಜನಾಲಿ, 7)ಬಸಮ್ಮ ಭೈರೇಗೌಡ ಜನಾಲಿ, ಮಾಧುರಿ ಹರೀಶ್ ಹಿರೇಮಠ, ಶೈಲಾ ಹಾಲಯ್ಯ ಹಿರೇಮಠ, ಮಲ್ಲನಗೌಡ ಭೈರೇಗೌಡ ಜನಾಲಿ, ಮಾನಗೌಡ ಭೈರೇಗೌಡ ಜನಾಲಿ, ಲಕ್ಷ್ಮೀ ಸಂಗಮೇಶ ಪೂಜಾರ್, ನಾಗವ್ವ ಮಾಗುಂಡಗೌಡ ಜನಾಲಿ, ಮಹಾದೇವಿ ಕುಮಾರಯ್ಯ ಹಂಗರಗಿ, ಮಲ್ಲನಗೌಡ ಭೈರೇಗೌಡ ಜನಾಲಿ, ಬಸವ್ವ ಮಾಗುಂಡಗೌಡ ಜನಲಿ, 8) ಮಾನಗೌಡ ಮುನಿಯಪ್ಪಗೌಡ ಜನಾಲಿ, 9) ಬಸಮ್ಮ ಭೈರೇಗೌಡ ಜನಾಲಿ, ಮಾಧುರಿ ಹರೀಶ್ ಹಿರೇಮಠ, ಶೈಲಾ ಹಾಲಯ್ಯ ಹಿರೇಮಠ, ಮಲ್ಲನಗೌಡ ಭೈರೇಗೌಡ ಜನಾಲಿ, ಮಾನಗೌಡ ಭೈರೇಗೌಡ ಜನಾಲಿ, ಲಕ್ಷ್ಮೀ ಸಂಗಮೇಶ ಪೂಜಾರ್, ನಾಗವ್ವ ಮಾಗುಂಡಗೌಡ ಜನಾಲಿ, ಮಹಾದೇವಿ ಕುಮಾರಯ್ಯ ಹಂಗರಗಿ, ಮಲ್ಲನಗೌಡ ಭೈರೇಗೌಡ ಜನಾಲಿ, ಬಸವ್ವ ಮಾಗುಂಡಗೌಡ ಜನಲಿ, 10)ಮಾನಗೌಡ ಮುನಿಯಪ್ಪಗೌಡ ಜನಾಲಿ (5/1ಎ+2+3+4+5ಎ,5/1ಬಿ+6+5ಬಿ)
21	5	ಖಾಸಗಿ	ಖುಷ್ಕಿ	0.016023	ಹಾಲಯ್ಯ ಪರುತಗೌಡ ಗೌಡರ್ (5/8)
22	6	ಖಾಸಗಿ	ಖುಷ್ಕಿ	0.040178	ಮುತ್ತವ್ವ ಮುದಿಗೌಡ ಗದ್ದಿಗೌಡ್ರ, ಶಾಂತಗೌಡ ಮುದಿಗೌಡ ಗದ್ದಿಗೌಡ್ರ, ಹನಮಗೌಡ ಮುದಿಗೌಡ ಗದ್ದಿಗೌಡ್ರ (6/3)
23	6	ಖಾಸಗಿ	ಖುಷ್ಕಿ	0.016122	ಈರವ್ವ ಯಲ್ಲನಗೌಡ ಗದ್ದಿಗೌಡ್ರ, ಮುದಿಗೌಡ ಯಲ್ಲನಗೌಡ ಗದ್ದಿಗೌಡ್ರ (6/4)
ತಾಲೂಕ : ಬದಾಮಿ					ಗ್ರಾಮ: ನಾಗರಾಳ ಎಸ್ ಬಿ
24	11	ಖಾಸಗಿ	ಖುಷ್ಕಿ	0.032749	ರತ್ನವ್ವ ಕರಬಸಪ್ಪ ಜವಳಗಡ್ಡಿ, ವೀರಪ್ಪ ಕರಬಸಪ್ಪ ಜವಳಗಡ್ಡಿ, ಸುನಂದಾ ಕರಬಸಪ್ಪ ಜವಳಗಡ್ಡಿ, ಜಯಶ್ರೀ ಕರಬಸಪ್ಪ ಜವಳಗಡ್ಡಿ, ಮಲ್ಲಪ್ಪ ಕರಬಸಪ್ಪ ಜವಳಗಡ್ಡಿ, ಮಾಗುಂಡಪ್ಪ ಕರಬಸಪ್ಪ ಜವಳಗಡ್ಡಿ, ಸುಜಾತಾ ಕರಬಸಪ್ಪ ಜವಳಗಡ್ಡಿ, ಅಶೋಕ ಕರಬಸಪ್ಪ ಜವಳಗಡ್ಡಿ (11/1)
25	11	ಖಾಸಗಿ	ಖುಷ್ಕಿ	0.005119	ಸಾಬಣ್ಣ ಫಕೀರಪ್ಪ ಮಾದರ (11/2)
26	11	ಖಾಸಗಿ	ಖುಷ್ಕಿ	0.001435	ಸಾಬಣ್ಣ ಫಕೀರಪ್ಪ ಮಾದರ, ದ್ಯಾವಪ್ಪ ಫಕೀರಪ್ಪ ಮಾದರ, ದೋದ್ಯಾವಪ್ಪ ಫಕೀರಪ್ಪ ಮಾದರ, ಬಾಳಪ್ಪ ಫಕೀರ ಪ್ಪಮಾದರ, ಸಾಬಣ್ಣ ಫಕೀರಪ್ಪ ಮಾದರ (11/3)
27	11	ಖಾಸಗಿ	ಖುಷ್ಕಿ	0.004232	ಬಸಪ್ಪ ಬಾಳಪ್ಪ ಮಾದರ, ಮಹಾದೇವಿ ಬಾಳವ್ವ ಮಾದರ, ರೇಣವ್ವ ಬಾಳವ್ವ ಮಾದರ, ಕನಕಪ್ಪ ಬಾಳವ್ವ ಮಾದರ, ದುರಗವ್ವ ಬಾಳವ್ವ ಮಾದರ, ಗೌರವ್ವ ಬಾಳಪ್ಪ ಮಾದರ, (11/4)
28	11	ಖಾಸಗಿ	ಖುಷ್ಕಿ	0.006847	ದುರಗಪ್ಪ ಹನಮಪ್ಪ ಮಾದರ, ಹುಲಿಯಪ್ಪ ಹನಮಪ್ಪ ಮಾದರ, ಉರ್ಫ್ ಉಲ್ಲಾಸ್ ಎಚ್, ಶರಣಪ್ಪ ಹನಮಪ್ಪ ಮಾದರ (11/6)
29	11	ಖಾಸಗಿ	ಖುಷ್ಕಿ	0.012476	ರೇಣುಕಾ ಹನಮಪ್ಪ ಮಾದರ, ಹಿರಿಯಮ್ಮ ಯಮನಪ್ಪ ಮಾದರ, ತಿಪ್ಪಮ್ಮ ಯಮನಪ್ಪ ಮಾದರ, ಯಲ್ಲಮ್ಮ ಯಮನಪ್ಪ ಮಾದರ, ಫಕೀರಪ್ಪ ಯಮನಪ್ಪ ಮಾದರ, ಮಂಜಮ್ಮ ಯಮನಪ್ಪ ಮಾದರ (11/9)
30	12	ಖಾಸಗಿ	ಖುಷ್ಕಿ	0.0029	ಚಿದಂಬರ ಗುಂಡಭಟ್ಟ ಪೂಜಾರ್, ವಿದ್ಯಾನಂದ ಶಂಕರಭಟ್ಟ ಪೂಜಾರ್, ಮಾರ್ತಾಂಡ ಭಟ್ಟ ಶಂಕರಭಟ್ಟ ಪೂಜಾರ್, ವೆಂಕಟೇಶ್ ಶಂಕರಭಟ್ಟ ಪೂಜಾರ್, ಇ ಇ ಬಾಗಲಕೋಟೆ (12/1)
31	16	ಖಾಸಗಿ	ಖುಷ್ಕಿ	0.005545	ಬಶೆಟ್ಟೆಪ್ಪ ನೂರಂದಪ್ಪ ಹುಂಡೇಕರ್ (16/1ಎ/1)
32	16	ಖಾಸಗಿ	ಖುಷ್ಕಿ	0.001291	ಲಕ್ಷ್ಮಿ ಬಶೆಟ್ಟೆಪ್ಪ ಹುಂಡೇಕರ್ (16/1ಎ/3)
33	16	ಖಾಸಗಿ	ಖುಷ್ಕಿ	0.019188	ಬಸನಗೌಡ ಕಳಕನಗೌಡ ಪಾಟೀಲ್ (16/1ಬಿ)
34	16	ಖಾಸಗಿ	ಖುಷ್ಕಿ	0.021	ಈರಣ್ಣ ತೋಟಪ್ಪ ಗಾರವಾಡ (16/2ಎ)
35	16	ಖಾಸಗಿ	ಖುಷ್ಕಿ	0.026782	ಶಂಕ್ರವ್ವ ಶಂಕ್ರಪ್ಪ ಹಟ್ಟಿ, ಶಾಂತವ್ವ ಹನಮಪ್ಪ ಬೊಮ್ಮಸಾಗರ, ಪ್ರೇಮವ್ವ ಶ್ರೀಶೈಲ್ ಜಾಲಿಹಾಳ, ಮಲ್ಲವ್ವ ಈಚರಪ್ಪ ಜಾಲಿಹಾಳ, ಬಸವರಾಜ ಶಂಕ್ರಪ್ಪ ಹಟ್ಟಿ, ಬಸವರಾಜ ಶಂಕ್ರಪ್ಪ ಹಟ್ಟಿ, ಶರಣವ್ವ ಶ್ರೀಶೈಲಪ್ಪ ನೀರಲಗಿ (16/2ಬಿ)
36	16	ಖಾಸಗಿ	ಖುಷ್ಕಿ	0.010286	ರಾಚಪ್ಪ ಸಂಗಪ್ಪ ಪಟ್ಟಣದ್ ಭೂ.ಪ (16/2ಸಿ)
37	16	ಖಾಸಗಿ	ಖುಷ್ಕಿ	0.003808	ರಾಚಪ್ಪ ಸಂಗಪ್ಪ ಪಟ್ಟಣದ್ ಭೂ.ಪ (16/2ಡಿ)
38	17	ಖಾಸಗಿ	ಖುಷ್ಕಿ	0.1086	ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ಹಂಪಿ(17/*)
39	18	ಖಾಸಗಿ	ಖುಷ್ಕಿ	0.022807	ನೀಲವ್ವ ಲಿಂಗಪ್ಪ ಪಡಿಯಪ್ಪನವರ್, ಕಿರಣಕುಮಾರ ಲಿಂಗಪ್ಪ ಪಡಿಯಪ್ಪನವರ್, ಪ್ರಶಾಂತ್ ಲಿಂಗಪ್ಪ ಪಡಿಯಪ್ಪನವರ್, ಗಂಗಮ್ಮ ವಿನಾಯಕ ಕರಡಿ (18/4ಸಿ)
40	21	ಖಾಸಗಿ	ಖುಷ್ಕಿ	0.00413	ಮಲ್ಲಯ್ಯ ಶೇಖರಯ್ಯ ಹಂಪಿಹೊಳಿಮಠ (21/6)
41	21	ಖಾಸಗಿ	ಖುಷ್ಕಿ	0.069209	ಷಣ್ಮುಖಪ್ಪ ಕಳಕಪ್ಪ ಜವಳಗಡ್ಡಿ, ಚನ್ನಮ್ಮ ಕಳಕಪ್ಪ ಜವಳಗಡ್ಡಿ (21/7)
42	21	ಖಾಸಗಿ	ಖುಷ್ಕಿ	0.089624	ಬಸವರಾಜ ಕಳಕಪ್ಪ ಜವಳಗಡ್ಡಿ (21/13)
43	21	ಖಾಸಗಿ	ಖುಷ್ಕಿ	0.089037	ಶ್ರೀಶೈಲಪ್ಪ ಕಳಕಪ್ಪ ಜವಳಗಡ್ಡಿ (21/14)
44	22	ಖಾಸಗಿ	ಖುಷ್ಕಿ	0.0415	1) ದಾನಪ್ಪ ತೋಟಪ್ಪ ಗಾರವಾಡ, ಶಿವಬಸಪ್ಪ ತೋಟಪ್ಪ ಗಾರವಾಡ, ಈರಣ್ಣ ತೋಟಪ್ಪ ಗಾರವಾಡ, 2) ಶಿವಯೋಗಪ್ಪ ಕಾಡಪ್ಪ ಅಂಬಿಗೇರಿ (22/2,3)
45	23	ಖಾಸಗಿ	ಖುಷ್ಕಿ	0.05	ಮಹಾದೇವಿ ಅಯ್ಯಪ್ಪ ಪುರ್ತಗೇರಿ, ರುದ್ರಪ್ಪ ಶಿವಪ್ಪ ಅಮರಗೋಳ, ಸುವರ್ಣ ಅಶೋಕ ಪಲ್ಲೇದ್, ರೇಣವ್ವ ಮಲ್ಲಪ್ಪ ಸೊಬರದ, ಸುಧಾ ಬಸಪ್ಪ ಹೊಸಮನಿ (23/2)
46	5	ಖಾಸಗಿ	ಖುಷ್ಕಿ	0.0677	ಪ್ರಕಾಶ ಹನಮಂತಪ್ಪ ಈಳಗೇರ್ (5/*)
47	6	ಖಾಸಗಿ	ಖುಷ್ಕಿ	0.046526	ಮೈಲಾರಿ ಸಿದ್ದಾರೂಢ ಕುರಿ, ರುಕ್ಮವ್ವ ಸಿದ್ದಾರೂಢ ಕುರಿ, ಮಹಾಂತೇಶ ಸಿದ್ದಾರೂಢ ಕುರಿ, ಕುಮಾರ ಸಿದ್ದಾರೂಢ ಕುರಿ(6/1)
48	6	ಖಾಸಗಿ	ಖುಷ್ಕಿ	0.010028	ಹನಮಪ್ಪ ಮಾಗುಂಡಪ್ಪ ತಳವಾರ, ರಂಗಪ್ಪ ಮಾಗುಂಡಪ್ಪ ತಳವಾರ, ಹನಮಪ್ಪ ರಂಗಪ್ಪ ತಳವಾರ, ಬಸವರಾಜ ರಂಗಪ್ಪ ತಳವಾರ, ಮುತ್ತಪ್ಪ ಕರಿಯಪ್ಪ ತಳವಾರ, ರಂಗಪ್ಪ ಕರಿಯಪ್ಪ ತಳವಾರ, ಹನಮಪ್ಪ ಕರಿಯಪ್ಪ ತಳವಾರ (6/3ಸಿ)
49	6	ಖಾಸಗಿ	ಖುಷ್ಕಿ	0.021826	ಹನಮವ್ವ ಹನಮಪ್ಪ ತಳವಾರ (6/4)
50	72	ಖಾಸಗಿ	ಖುಷ್ಕಿ	0.466376	ಅಧ್ಯಕ್ಷರು ಶ್ರೀ ಕುಮಾರೇಶ್ವರ ಸಂಸ್ಕಾರ (72/*)
51	73	ಖಾಸಗಿ	ಖುಷ್ಕಿ	0.4044	ಅಧ್ಯಕ್ಷರು ಕುಮಾರೇಶ್ವರ ಸಾಂಸ್ಕೃತಿಕ ವಿದ್ಯಾಪೀಠ ಶಿವಯೋಗಮಂದಿರ (73/*)
52	75	ಖಾಸಗಿ	ಖುಷ್ಕಿ	0.067882	ಮಾರುತಿ ಬಾಳಪ್ಪ ಕೋಟಿಕಲ್ಲ, ಕಮಲವ್ವ ಕನಕಪ್ಪ ಕೋಟಿಕಲ್ಲ, ಹನಮವ್ವ ಶಿವಪ್ಪ ಪೂಜಾರ, ಶಾಂತಾ ಶೇಖಪ್ಪ ಪೂಜಾರ, ಪಾರ್ವತಿ ಬಸವಂತಪ್ಪ ಕೋಟಿಕಲ್ಲ, ಗೋವಿಂದಪ್ಪ ಬಸವಂತಪ್ಪ ಕೋಟಿಕಲ್ಲ, ಬಸಮ್ಮ ಶೇಖರಪ್ಪ ಜಕನೂರ, ಸುಮಿತ್ರಾ ಕಳಕಪ್ಪ ಕೊಪ್ಪದ್, ಆನಂದ ಬಸವಂತಪ್ಪ ಕೋಟಿಕಲ್ಲ (75/1)
53	75	ಖಾಸಗಿ	ಖುಷ್ಕಿ	0.044397	ಭೀಮಪ್ಪ ಹನಮಪ್ಪ ಕೋಟಿಕಲ್ (75/2)
54	75	ಖಾಸಗಿ	ಖುಷ್ಕಿ	0.139471	ಮಂಜುನಾಥ ಶಿವಪ್ಪ ಕರಮಡ್ಡಿ, ಸಂಗಪ್ಪ ಶಿವಪ್ಪ ಕರಮಡ್ಡಿ, ಬಾಳಪ್ಪ ಶಿವಪ್ಪ ಕರಮಡ್ಡಿ, ಮಲ್ಲವ್ವ ಶಿವಪ್ಪ ಕರಮಡ್ಡಿ, ಶೋಭಾ ಶಿವಪ್ಪ ಕರಮಡ್ಡಿ, ದೀಪಾ ಶಿವಪ್ಪ ಕರಮಡ್ಡಿ, ಕಸ್ತೂರವ್ವ ಶಿವಪ್ಪ ಕರಮಡ್ಡಿ (75/3)
55	75	ಖಾಸಗಿ	ಖುಷ್ಕಿ	0.029106	ಚಂದ್ರಕಾಂತ ಹನಮಪ್ಪ ಕೋಟಿಕಲ್ (75/4)
56	75	ಖಾಸಗಿ	ಖುಷ್ಕಿ	0.048854	ಯಲ್ಲವ್ವ ಶಿವಲಿಂಗಪ್ಪ ಕೋಟಿಕಲ್ಲ, ಬಸವ್ವ ಹನಮಪ್ಪ ಉಗಲವಾಟ, ಬುಡ್ಡಪ್ಪ ಶಿವಲಿಂಗಪ್ಪ ಕೋಟಿಕಲ್ಲ, ಕಾಂತಪ್ಪ ಶಿವಲಿಂಗಪ್ಪ ಕೋಟಿಕಲ್ಲ, ಶಂಕ್ರವ್ವ ಮಾರುತಿ ಬಂಡಿವಾಡ, ನಾಗಪ್ಪ ಶಿವಲಿಂಗಪ್ಪ ಕೋಟಿಕಲ್ಲ, ರತ್ನವ್ವ ಪರಸಪ್ಪ ಮುರಡಿ, ಪಾರವ್ವ ಮಂಜುನಾಥ ಕಂಕನೋಡಿ, ಲಕ್ಷ್ಮೀಬಾಯಿ ಹನಮಪ್ಪ ಕೋಟಿಕಲ್ಲ, ಪ್ರೇಮಾ ಹನಮಂತ ಹಗನುರ, ಮಂಜುನಾಥ ಹನಮಪ್ಪ ಕೋಟಿಕಲ್ಲ, ರೇಣುಕಾ ದ್ಯಾವಪ್ಪ ಹಗನುರ, ಭಿಮಪ್ಪ ಹನಮಪ್ಪ ಕೊಟಿಕಲ್ (75/5)
57	75	ಖಾಸಗಿ	ಖುಷ್ಕಿ	0.111397	ಮಂಜುನಾಥ ಹನಮಪ್ಪ ಕೋಟಿಕಲ್ (75/6)
58	76	ಖಾಸಗಿ	ಖುಷ್ಕಿ	0.057111	ಹನಮಪ್ಪ ಭರಮಪ್ಪ ಜೋಗೆರ್ (76/1)
59	76	ಖಾಸಗಿ	ಖುಷ್ಕಿ	0.057111	ಹನಮಪ್ಪ ಭರಮಪ್ಪ ಜೋಗೆರ್ (76/2)
60	76	ಖಾಸಗಿ	ಖುಷ್ಕಿ	0.051093	ಬಸವರಾಜ ಯಲ್ಲಪ್ಪ ಜೋಗೆರ್ (76/3)
61	76	ಖಾಸಗಿ	ಖುಷ್ಕಿ	0.065729	ಬಸವರಾಜ ಯಲ್ಲಪ್ಪ ಜೋಗೆರ್ (76/4)
62	77	ಖಾಸಗಿ	ಖುಷ್ಕಿ	0.155742	ಮಲ್ಲಪ್ಪ ಯಮನಪ್ಪ ಅಂಬಿಗೇರ್, ಶಾಂತಾಬಾಯಿ ಸಿದ್ದಪ್ಪ ಅಂಬಿಗೇರ್, ಮಲ್ಲಿಕಾರ್ಜುನ ಸಿದ್ದಪ್ಪ ಅಂಬಿಗೇರ್ (77/1)
63	77	ಖಾಸಗಿ	ಖುಷ್ಕಿ	0.032088	ಶಿವಪ್ಪ ಹನಮಂತಪ್ಪ ಅಂಬಿಗೇರ, ಮಹಾಂತೇಶ ಹನಮಂತಪ್ಪ ಅಂಬಿಗೇರ, ಮಂಜುನಾಥ ಹನಮಂತಪ್ಪ ಅಂಬಿಗೇರ (77/2)
64	77	ಖಾಸಗಿ	ಖುಷ್ಕಿ	0.068132	ಶರಣಪ್ಪ ಸಣ್ಣಪ್ಪ ಅಂಬಿಗೇರ್ (77/3)
65	77	ಖಾಸಗಿ	ಖುಷ್ಕಿ	0.070348	ಅಶೋಕ ಅಣ್ಣಪ್ಪ ಅಂಬಿಗೇರ್, ಮಲ್ಲಿಕಾರ್ಜುನ ಅಶೋಕ್ ಅಂಬಿಗೇರ್, ಮಹೇಶ್ ಅಶೋಕ್ ಅಂಬಿಗೇರ್ (77/4)
66	77	ಖಾಸಗಿ	ಖುಷ್ಕಿ	0.06319	ಬಸಪ್ಪ ಸಣ್ಣಪ್ಪ ಅಂಬಿಗೇರ್ (77/5)
67	78	ಖಾಸಗಿ	ಖುಷ್ಕಿ	0.113	ವಿಜಯಚಂದ್ರ ಮಲ್ಲಪ್ಪ ದುಗಲದ್, ಶ್ರೀಧರ ಮಲ್ಲಪ್ಪ ದುಗಲದ್, ರೇವಣಸಿದ್ದೇಶ್ವರ ಮಲ್ಲಪ್ಪ ದುಗಲದ್ (78/*)
68	79	ಖಾಸಗಿ	ಖುಷ್ಕಿ	0.0615	ಮಲ್ಲಪ್ಪ ಭೀಮಪ್ಪ ದುಗಲದ್ (79/*)
69	80	ಖಾಸಗಿ	ಖುಷ್ಕಿ	0.1798	ಶಂಕ್ರಪ್ಪ ವಿರೂಪಾಕ್ಷಪ್ಪ ಗಂಗಲ್, ಈರವ್ವ ವಿರೂಪಾಕ್ಷಪ್ಪ ಗಂಗಲ್ (80/*)
70	81	ಖಾಸಗಿ	ಖುಷ್ಕಿ	0.857551	ಶಾಂತವ್ವ ರಂಗಪ್ಪ ಮಾಡಲಗೇರಿ, ಬಸವ್ವ ಸಂಗಪ್ಪ ಕಾಳಪ್ಪನವರ್, ಕಸ್ತೂರವ್ವ ಕಾಳಪ್ಪ ಗಾಣಗೇರ್, ಮಾಗುಂಡಪ್ಪ ರಂಗಪ್ಪ ಮಾಡಲಗೇರಿ, ರಾಮವ್ವ ಮಲ್ಲಪ್ಪ ಮುಚಖಂಡಿ, ಪ್ರಕಾಶ ರಂಗಪ್ಪ ಮಾಡಲಗೇರಿ, ಮುತ್ತಪ್ಪ ರಂಗಪ್ಪ ಮಾಡಲಗೇರಿ, ಗೌಡಪ್ಪ ರಂಗಪ್ಪ ಮಾಡಲಗೇರಿ (81/*)
71	83	ಖಾಸಗಿ	ಖುಷ್ಕಿ	0.1061	ಲಕ್ಷ್ಮಪ್ಪ ದ್ಯಾವಪ್ಪ ಶೀಲಿ, ಹನಮಪ್ಪ ದ್ಯಾವಪ್ಪ ಶೀಲಿ, ಯಮನಪ್ಪ ದ್ಯಾವಪ್ಪ ಶೀಲಿ, ಭೀಮಪ್ಪ ದ್ಯಾವಪ್ಪ ಶೀಲಿ (83/1)
72	83	ಖಾಸಗಿ	ಖುಷ್ಕಿ	0.021674	ಯಮನಪ್ಪ ಯಲ್ಲಪ್ಪ ಫಡಿ (83/2)
73	83	ಖಾಸಗಿ	ಖುಷ್ಕಿ	0.007196	ಯಮನಪ್ಪ ಹನಮಪ್ಪ ಪಡಿ (83/3)
74	83	ಖಾಸಗಿ	ಖುಷ್ಕಿ	0.010198	ಭೀಮಪ್ಪ ಹನಮಪ್ಪ ಪಡಿ (83/4
75	83	ಖಾಸಗಿ	ಖುಷ್ಕಿ	0.011733	ಈರಪ್ಪ ಹನಮಪ್ಪ ಪಡಿ (83/5)
76	84	ಖಾಸಗಿ	ಖುಷ್ಕಿ	0.130957	ಸರಸ್ವತೆವ್ವ ಯಲ್ಲಪ್ಪ ಉಡಚಂಚಿ, ರಂಗವ್ವ ರಂಗನಗೌಡ ಮರಿಗೌಡರ, ನಾಗವ್ವ ರಂಗನಗೌಡ ಮರಿಗೌಡರ, ಉಲ್ಲಪ್ಪ ರಂಗನಗೌಡ ಮರಿಗೌಡರ, ಕುಮಾರ ರಂಗನಗೌಡ ಮರಿಗೌಡರ, ಹರ್ಷವರ್ಧನ ಚಂದಪ್ಪ ಮರಿಗೌಡರ (84/1ಎ)
77	84	ಖಾಸಗಿ	ಖುಷ್ಕಿ	0.140283	ಶಂಕ್ರಪ್ಪ ಧರ್ಮಪ್ಪ ರೋಣದ್ (84/1ಬಿ)
78	84	ಖಾಸಗಿ	ಖುಷ್ಕಿ	0.77196	ಅಶೋಕ ರಾಜಾರಾಮ್ ಕೊಟನಕರ್, ಮಳಿಯಪ್ಪ ರಂಗಪ್ಪ ಮಡ್ಲಗೇರ್ (84/2)
79	85	ಖಾಸಗಿ	ಖುಷ್ಕಿ	0.083978	ಪುಂಡನಗೌಡ ಹನಮಂತಗೌಡ ಹಂಸನೂರು (85/1)
80	85	ಖಾಸಗಿ	ಖುಷ್ಕಿ	0.0465	ಶಾಂತಾ ಗಿರಿಗೌಡ ಹಂಸನೂರ, ಗೀತಾ ಅಂದಾನಗೌಡ ಲಿಂಗನಗೌಡ್ರ, ರೇಖಾ ಋಷಿಕುಮಾರ ಹೊರಕೇರಿ, ರಾಧಾ ಶಿವಾನಂದ ಚಿತ್ತರಗಿ, ಹನಮಂತಗೌಡ ಗಿರಿಗೌಡ ಹಂಸನೂರ (85/2)
81	85	ಖಾಸಗಿ	ಖುಷ್ಕಿ	0.026026	ಕುಬೇರಗೌಡ ಹನಮಂತಗೌಡ ಹಂಸನೂರು (85/3)
82	85	ಖಾಸಗಿ	ಖುಷ್ಕಿ	0.246296	ಪುಂಡನಗೌಡ ಭೀಮನಗೌಡ ಹಂಸನೂರು, ರಂಗವ್ವ ರಂಗನಗೌಡ ಹಂಸನೂರು, ಬಸನಗೌಡ ಭೀಮನಗೌಡ ಹಂಸನೂರು, ಚಂದನಗೌಡ ಭೀಮನಗೌಡ ಹಂಸನೂರು, ಹನಮಂತಗೌಡ ಭೀಮನಗೌಡ ಹಂಸನೂರ, ಮುಡಿಯವ್ವ ಭೀಮನಗೌಡ ಹಂಸನೂರ (85/4)
83	86	ಖಾಸಗಿ	ಖುಷ್ಕಿ	0.098547	ಅಶೋಕ ಸಂಕಪ್ಪ ಅಂಬಿಗೇರ, ಬಸಪ್ಪ ಸಂಕಪ್ಪ ಅಂಬಿಗೇರ, ನೀಲವ್ವ ರಂಗಪ್ಪ ತೆಂಗಿ, ಶಾಂತಾಬಾಯಿ ಸಿದ್ದಪ್ಪ ಅಂಬಿಗೇರ, ಯಲ್ಲವ್ವ ಗುರಪ್ಪ ಅಂಬಿಗೇರ, ಭೀಮಪ್ಪ ಗುರಪ್ಪ ಅಂಬಿಗೇರ (86/1)
84	86	ಖಾಸಗಿ	ಖುಷ್ಕಿ	0.065801	ಬಸವ್ವ ಮಾಗುಂಡಪ್ಪ ಅಂಬಿಗೇರ್ (86/2)
85	86	ಖಾಸಗಿ	ಖುಷ್ಕಿ	0.014142	ಸಿದ್ದಪ್ಪ ಫಕೀರಪ್ಪ ಹನಮರ್ (86/3)
86	86	ಖಾಸಗಿ	ಖುಷ್ಕಿ	0.02701	ಲಕ್ಷ್ಮಪ್ಪ ದ್ಯಾವಪ್ಪ ಶೀಲಿ (86/4)
87	87	ಖಾಸಗಿ	ಖುಷ್ಕಿ	0.2196	1) ಪಾರ್ವತೆವ್ವ ಬಸಪ್ಪ ಗಂಗಲ್, ಮುರುಗೇಶ್ ಬಸಪ್ಪ ಗಂಗಲ್, ಜಯಶ್ರೀ ಚಿನ್ನಪ್ಪ ಗಂಗಲ್, ಗಗನಶ್ರೀ ಚಿನ್ನಪ್ಪ ಗಂಗಲ್, ಜ್ಯೋತಿ ಚಿನ್ನಪ್ಪ ಗಂಗಲ್, ರಜತಾ ಚಿನ್ನಪ್ಪ ಗಂಗಲ್ ಎ.ಪಿ. ತಾಯಿ ಜಯಶ್ರೀ, ಶಕುಂತಲಾ ಮಹಾದೇವಪ್ಪ ಅಂಗಡಿ, ಸರೋಜಿನಿ ಶಂಕ್ರಪ್ಪ ಗಂಗಲ್, ಪ್ರೀತಿ ಸಂತೋಷ ಹಣಜಿ, ಪ್ರಶಾಂತ ಶಂಕ್ರಪ್ಪ ಗಂಗಲ್, ಮಂಗಳಾ ಮೋಹನ ಗಂಗಲ, ರಾಜಮೋಹನ ಮೋಹನ ಗಂಗಲ, ಅಕ್ಷಯ ಮೋಹನ ಗಂಗಲ. 2) ಹುಲ್ಲಪ್ಪ ಫಕೀರಪ್ಪ ಹನಮರ, ಲಕ್ಷ್ಮವ್ವ ಶಿದ್ದಪ್ಪ ಹನಮರ, ರೇಣವ್ವ ಶಿದ್ದಪ್ಪ ಹನಮರ, ಪರಸಪ್ಪ ಶಿದ್ದಪ್ಪ ಹನಮರ, ಹುಲ್ಲಪ್ಪ ಶಿದ್ದಪ್ಪ ಹನಮರ, ಹನಮವ್ವ ಶಿದ್ದಪ್ಪ ಹನಮರ, ಯಲ್ಲವ್ವ ಶಿದ್ದಪ್ಪ ಹನಮರ, ಭೀಮವ್ವ ಶಿದ್ದಪ್ಪ ಹನಮರ ಅ ಪ ತಾಯಿ ಲಕ್ಷ್ಮವ್ವ, ಹನಮವ್ವ ಹನಮಪ್ಪ ಹನಮರ, ಮಂಜವ್ವ ಹುಲ್ಲಪ್ಪ ಹನಮರ, ಶೋಭಾ ಹುಲ್ಲಪ್ಪ ಹನಮರ ಅ ಪ ತಾಯಿ ಶಿವಗಂಗವ್ವ, ಜಗದೀಶ ಹುಲ್ಲಪ್ಪ ಹನಮರ ಅ ಪ ತಾಯಿ ಶಿವಗಂಗವ್ವ, ನೀಲವ್ವ ಮುತ್ತಪ್ಪ ಹನಮರ ಉರ್ಫ್ ಗುಡೂರು, ಶ್ರದ್ಧಾ ಮುತ್ತಪ್ಪ ಹನಮರ ಉರ್ಫ್ ಗುಡೂರು ಅ ಪ ತಾಯಿ ನೀಲವ್ವ, ಹನಮಂತ ಮುತ್ತಪ್ಪ ಹನಮರ ಉರ್ಫ್ ಗುಡೂರು ಅ ಪ ತಾಯಿ ನೀಲವ್ವ, ಕೃಷ್ಣ ಮುತ್ತಪ್ಪ ಹನಮರ ಉರ್ಫ್ ಗುಡೂರು ಅ ಪ ತಾಯಿ ನೀಲವ್ವ (87/1,2)
88	88	ಖಾಸಗಿ	ಖುಷ್ಕಿ	0.246339	ಪಾರ್ವತೆವ್ವ ಬಸಪ್ಪ ಗಂಗಲ್, ಮುರುಗೇಶ್ ಬಸಪ್ಪ ಗಂಗಲ್, ಜಯಶ್ರೀ ಚಿನ್ನಪ್ಪ ಗಂಗಲ್, ಗಗನಶ್ರೀ ಚಿನ್ನಪ್ಪ ಗಂಗಲ್, ಜ್ಯೋತಿ ಚಿನ್ನಪ್ಪ ಗಂಗಲ್, ರಜತಾ ಚಿನ್ನಪ್ಪ ಗಂಗಲ್ ಎ.ಪಿ. ತಾಯಿ ಜಯಶ್ರೀ, ಶಕುಂತಲಾ ಮಹಾದೇವಪ್ಪ ಅಂಗಡಿ, ಸರೋಜಿನಿ ಶಂಕ್ರಪ್ಪ ಗಂಗಲ್, ಪ್ರೀತಿ ಸಂತೋಷ ಹಣಜಿ, ಪ್ರಶಾಂತ ಶಂಕ್ರಪ್ಪ ಗಂಗಲ್, ಮಂಗಳಾ ಮೋಹನ ಗಂಗಲ, ರಾಜಮೋಹನ ಮೋಹನ ಗಂಗಲ, ಅಕ್ಷಯ ಮೋಹನ ಗಂಗಲ (88/2)
89	88	ಖಾಸಗಿ	ಖುಷ್ಕಿ	0.254206	ಅಂದಪ್ಪ ಶಿವಪ್ಪ ಗಂಗಲ್ (88/3)
90	88	ಖಾಸಗಿ	ಖುಷ್ಕಿ	0.263606	ಶಶಿಕಲಾ ಅಶೋಕ್ ಗಂಗಲ (88/4)
91	88	ಖಾಸಗಿ	ಖುಷ್ಕಿ	0.059689	ಅಶೋಕ ಶಿವಪ್ಪ ಗಂಗಲ (88/5)
92	88	ಖಾಸಗಿ	ಖುಷ್ಕಿ	0.06276	ಅಂದಪ್ಪ ಶಿವಪ್ಪ ಗಂಗಲ್ (88/6)
93	89	ಖಾಸಗಿ	ಖುಷ್ಕಿ	0.136216	ಕಸ್ತೂರವ್ವ ವಿರೂಪಾಕ್ಷಯ್ಯ ಹಂಪಿಹೊಳಿ, ಭಾರತಿ ಸಂಗಯ್ಯ ಹಿರೇಮಠ, ಬಸಯ್ಯ ವಿರೂಪಾಕ್ಷಯ್ಯ ಹಂಪಿಹೊಳಿ, ಮಹಾಂತಯ್ಯ ವಿರೂಪಾಕ್ಷಯ್ಯ ಹಂಪಿಹೊಳಿ, ಶಿವಮ್ಮ ವೀರಯ್ಯ ಹಡಗಲಿ, ರೇಖಾ ಶಿವಯ್ಯ ಕುಲಕರ್ಣಿ (89/1)
94	89	ಖಾಸಗಿ	ಖುಷ್ಕಿ	0.288276	ಗೌರವ್ವ ಶಿವಪುತ್ರಯ್ಯ ಉರ್ಫ್ ಶಿವಪುತ್ರಪ್ಪ ಗಣಾಚಾರಿ, ಬಸಯ್ಯ ಶಿವಪುತ್ರಯ್ಯ ಉರ್ಫ್ ಶಿವಪುತ್ರಪ್ಪ ಗಣಾಚಾರಿ, ಶಿವಗಂಗವ್ವ ಶಿವಪುತ್ರಯ್ಯ ಉರ್ಫ್ ಶಿವಪುತ್ರಪ್ಪ ಗಣಾಚಾರಿ, ವೀರಯ್ಯ ಶಿವಪುತ್ರಯ್ಯ ಉರ್ಫ್ ಶಿವಪುತ್ರಪ್ಪ ಗಣಾಚಾರಿ, ಲಲಿತಾ ಶಿವಪುತ್ರಯ್ಯ ಉರ್ಫ್ ಶಿವಪುತ್ರಪ್ಪ ಗಣಾಚಾರಿ, ವೀರಭದ್ರಯ್ಯ ಶಿವಪುತ್ರಯ್ಯ ಉರ್ಫ್ ಶಿವಪುತ್ರಪ್ಪ ಗಣಾಚಾರಿ, ಶಿವರುದಯ್ಯ್ ಶಿವಪುತ್ರಯ್ಯ ಉರ್ಫ್ ಶಿವಪುತ್ರಪ್ಪ ಗಣಾಚಾರಿ.(89/2)
95	89	ಖಾಸಗಿ	ಖುಷ್ಕಿ	0.278474	ಬಸವರಾಜ ಶಿವರುದ್ರಯ್ಯ ಚೋಳಚಗುಡ್ಡ (89/3)
96	89	ಖಾಸಗಿ	ಖುಷ್ಕಿ	0.261891	ಮಹಾಂತಯ್ಯ ವಿರೂಪಾಕ್ಷಯ್ಯ ಹಂಪಿಹೊಳಿ (89/4)
97	89	ಖಾಸಗಿ	ಖುಷ್ಕಿ	0.258526	ಬಸಯ್ಯ ವಿರೂಪಾಕ್ಷಯ್ಯ ಹಂಪಿಹೊಳಿ (89/5)
98	91	ಖಾಸಗಿ	ಖುಷ್ಕಿ	0.0017	1) ಶಿದ್ದಲಿಂಗ ಅರವಿಂದ ಮಾಳವಾಡ, 2) ಲಾಲಾಹುಸೇನ್ ಉರ್ಫ್ ಲಾಲಾಸಾಬ್ ರಾಜೇಸಾಬ್ ನಾಯಕ್, ಗೈಬುಸಾಬ್ ರಾಜೇಸಾಬ್ ನಾಯಕ್, ಅಮೀನಬಿ ಮಹಿಬೂಬಸಾಬ್ ಖಾಕಂಡಕಿ, 3) ಲಾಲಾಹುಸೇನ್ ಉರ್ಫ್ಲಾಲಾಸಾಬ್ ರಾಜೇಸಾಬ್ ನಾಯಕ್,4) ಲಾಲಾಹುಸೇನ್ ಉರ್ಫ್ ಲಾಲಾಸಾಬ್, ರಾಜೇಸಾಬಾ ನಾಯಕ್ 5) ಲಾಲಾಹುಸೇನ್ ಉರ್ಫ್ ಲಾಲಾಸಾಬ್ ನಾಯಕ್(91/1,2,3,4,5)
99	92	ಖಾಸಗಿ	ಖುಷ್ಕಿ	0.152464	ಆನಂದ ಬಸಪ್ಪ ಗಡ್ಡಿ (92/1)
100	92	ಖಾಸಗಿ	ಖುಷ್ಕಿ	0.231569	ಉಮೇಶ ಬಸಪ್ಪ ಗಡ್ಡಿ (92/2)
101	93	ಖಾಸಗಿ	ಖುಷ್ಕಿ	0.145671	ವತ್ಸಲಾ ಶಾಂತೇಶ್ ಹವಾಲ್ದಾರ್, ಅಭಿಷೇಕ್ ಶಾಂತೇಶ್ ಹವಾಲ್ದಾರ್, ಹನಮಂತ್ ಶಾಂತೇಶ್ ಹವಾಲ್ದಾರ್, ಯಶಸ್ವಿನಿ ಶಾಂತೇಶ್ ಹವಾಲ್ದಾರ್, ಗುರುಶಾಂತವ್ವ ಹನಮಂತಪ್ಪ ಹವಾಲ್ದಾರ್ (93/1)
102	93	ಖಾಸಗಿ	ಖುಷ್ಕಿ	0.227129	ಶ್ರೀಮತಿ ಪನ್ನಂಬೇಶ್ವರಿ ಮಹೇಶ್ ಹದ್ಲಿ (93/2)
103	94	ಖಾಸಗಿ	ಖುಷ್ಕಿ	0.01332	ಮಹೇಶ ಈರಪ್ಪ ಗಡ್ಡಿ (94/1)
104	94	ಖಾಸಗಿ	ಖುಷ್ಕಿ	0.001754	ನೀಲಮ್ಮ ಈರಪ್ಪ ಗಡ್ಡಿ (94/2)
105	94	ಖಾಸಗಿ	ಖುಷ್ಕಿ	0.028826	ರಮೇಶ ಈರಪ್ಪ ಗಡ್ಡಿ (94/3)
106	97	ಖಾಸಗಿ	ಖುಷ್ಕಿ	0.062592	ಬಸವ್ವ ಶ್ರೀಶೈಲಪ್ಪ ಧನ್ನೂರು (97/1)
107	97	ಖಾಸಗಿ	ಖುಷ್ಕಿ	0.005308	ಈಶ್ವರಪ್ಪ ಈರಪ್ಪ ಅಂಗಡಿ, ಬಸವಂತಪ್ಪ ಈರಪ್ಪ ಅಂಗಡಿ (97/2)
108	98	ಖಾಸಗಿ	ಖುಷ್ಕಿ	0.2078	ಬಸವ್ವ ಶ್ರೀಶೈಲಪ್ಪ ಧನ್ನೂರು (98/*)
109	99	ಖಾಸಗಿ	ಖುಷ್ಕಿ	0.462	ಬಸಯ್ಯ ವೀರಭದ್ರಯ್ಯ ಕಲ್ಲಣ್ಣವರ, ನೀಲಕಂಠಯ್ಯ ವೀರಭದ್ರಯ್ಯ ಕಲ್ಲಣ್ಣವರ, ವೀರಯ್ಯ ವೀರಭದ್ರಯ್ಯ ಕಲ್ಲಣ್ಣವರ, ಬಸವಣ್ಣೆವ್ವ ಸವಳಗಯ್ಯ ಕಲ್ಲಣ್ಣವರ, ಮಹಾಂತೇಶ ಸವಳಗಯ್ಯ ಕಲ್ಲಣ್ಣವರ, ರುದ್ರಯ್ಯ ಸವಳಗಯ್ಯ ಕಲ್ಲಣ್ಣವರ, ಜಯಶ್ರೀ ಸವಳಗಯ್ಯ ಕಲ್ಲಣ್ಣವರ, ಪುಷ್ಪಾ ಸವಳಗಯ್ಯ ಕಲ್ಲಣ್ಣವರ, ನಾಗರಾಜ ಸವಳಗಯ್ಯ ಕಲ್ಲಣ್ಣವರ (99A/*)
ತಾಲ್ಲೂಕ: ಬದಾಮಿ					ಗ್ರಾಮ: ಹೀರೆನಸಬಿ
110	1	ಖಾಸಗಿ	ಖುಷ್ಕಿ	0.420713	ಶರಣಯ್ಯ ಶಿವರುದ್ರಯ್ಯ ಕೆಂಭಾವಿಮಠ, ಈರಯ್ಯ ಶಿವರುದ್ರಯ್ಯ ಕೆಂಭಾವಿಮಠ, ಶಂಕ್ರವ್ವ ಶಿವರುದ್ರಯ್ಯ ಕೆಂಭಾವಿಮಠ (1/1)
111	1	ಖಾಸಗಿ	ಖುಷ್ಕಿ	0.125421	ಕುಮಾರಗೌಡ ವೀರನಗೌಡ ಅಯ್ಯನಗೌಡ್ರ (1/2)
112	10	ಖಾಸಗಿ	ಖುಷ್ಕಿ	0.06247	ಜೀವೂಬಾಯಿ ಸಿದ್ದಪ್ಪ ಶಿರೂರು (10/1)
113	10	ಖಾಸಗಿ	ಖುಷ್ಕಿ	0.00693	ಜೀವೂಬಾಯಿ ಸಿದ್ದಪ್ಪ ಶಿರೂರು (10/2)
114	11	ಖಾಸಗಿ	ಖುಷ್ಕಿ	0.0627	ಪಾರ್ವತೆವ್ವ ಶಾಂತಕುಮಾರ ಅಂಗಡಿ (11/1)
115	17	ಖಾಸಗಿ	ಖುಷ್ಕಿ	0.02313	ವೀರನಗೌಡ ರುದ್ರಗೌಡ ಪಾಟೀಲ್ (17/1)
116	17	ಖಾಸಗಿ	ಖುಷ್ಕಿ	0.54197	ಮಲ್ಲನಗೌಡ ವೀರನಗೌಡ ಗೌಡ್ರ ವಗೈರೆ ಇಬ್ಬರು, ನಾಗನಗೌಡ ಅಯ್ಯನಗೌಡ ಗೌಡ್ರ, ಅಯ್ಯನಗೌಡ ಅಯ್ಯನಗೌಡ ಗೌಡ್ರ, ವೀರಭದ್ರಗೌಡ ಅಯ್ಯನಗೌಡ ಗೌಡ್ರ, ಅಂದಾನಗೌಡ ಅಯ್ಯನಗೌಡ ಗೌಡ್ರ, ಸಿದ್ದನಗೌಡ ಬಸನಗೌಡ ಗೌಡ್ರ (17/2)
117	18	ಖಾಸಗಿ	ಖುಷ್ಕಿ	0.612298	ವೀರನಗೌಡ ರುದ್ರಗೌಡ ಪಾಟೀಲ್ (18/1)
118	18	ಖಾಸಗಿ	ಖುಷ್ಕಿ	0.381244	ಶಂಕರಗೌಡ ರುದ್ರಗೌಡ ಪಾಟೀಲ್ ಉರ್ಫ್ ಗೌಡ್ರ, ಸಿದ್ದಲಿಂಗಗೌಡ ಡಾ ಶಿವನಗೌಡ ಪಾಟೀಲ್, ಸಿದ್ದವ್ವ ಕುಮಾರಗೌಡ ಪಾಟೀಲ್, ರೇಣುಕಾ ನಿರಂಜನಮೂರ್ತಿ, ವೀಣಾ ಬಸಯ್ಯ ಹಿರೇಮಠ, ಪವಿತ್ರಾ ಈರಯ್ಯ ಹಿರೇಮಠ, ವೀರಣ್ಣ ಕುಮಾರಗೌಡ ಪಾಟೀಲ್ (18/3)
119	19	ಖಾಸಗಿ	ಖುಷ್ಕಿ	0.387185	ಚಂದ್ರಶೇಖರ ಬಸವಂತಪ್ಪ ಕೆಲೂರು, ಮಹಾಂತೇಶ ಬಸವಂತಪ್ಪ ಕೆಲೂರು, ಮಂಜುನಾಥ ಬಸವಂತಪ್ಪ ಕೆಲೂರು (19/1)
120	19	ಖಾಸಗಿ	ಖುಷ್ಕಿ	0.275422	ಮಲ್ಲವ್ವ ಬೈಲಪ್ಪ ಕುರಿ, ಶರಣವ್ವ ನಾಗಪ್ಪ ಹಾನಾಪುರ, ಸಿದ್ದವ್ವ ಹನಮಪ್ಪ ಕಂಬಳಿ, ಮಲ್ಲಿಕಾರ್ಜುನ ಬೈಲಪ್ಪ ಕುರಿ, ಶರಣಪ್ಪ ಬೈಲಪ್ಪ ಕುರಿ, ಬಸಯ್ಯ ಸೊಲಬಯ್ಯ ಮಲ್ಲಾಪುರ, ಸಿದ್ದವ್ವ ವೀರಬಸಯ್ಯ ಮಲ್ಲಾಪುರ, ಜ್ಯೋತಿ ಮಲ್ಲಯ್ಯ ಪೂಜಾರ್, ಸರೋಜಿನಿ ಲೋಕೇಶ್ ಹೊಸಮಠ, ಸವಿತಾ ವೀರಬಸಯ್ಯ ಮಲ್ಲಾಪುರ, ಸೊಲಬಯ್ಯ ವೀರಬಸಯ್ಯ ಮಲ್ಲಾಪುರ, ಶಿವಯ್ಯ ವೀರಬಸಯ್ಯ ಮಲ್ಲಾಪುರ, ಪ್ರವೀಣ ವೀರಬಸಯ್ಯ ಮಲ್ಲಾಪುರ, ವರ್ಷಿಣಿ ವೀರಬಸಯ್ಯ ಮಲ್ಲಾಪುರ ಅ ಪ ತಾಯಿ ಸವಿತಾ (19/2)
121	19	ಖಾಸಗಿ	ಖುಷ್ಕಿ	0.063786	ನಾಗವ್ವ ಈರಪ್ಪ ಕಂಬಾರ, ಶರಣವ್ವ ಸುರೇಶ ಕಂಬಾರ, ಭೀಮವ್ವ ಬೂದ್ಯಾಳಪ್ಪ ಕಂಬಾರ, ವೀರೇಶ ಬೂದ್ಯಾಳಪ್ಪ ಕಂಬಾರ (19/3ಎ)
122	19	ಖಾಸಗಿ	ಖುಷ್ಕಿ	0.025375	ನಾಗವ್ವ ಈರಪ್ಪ ಕಂಬಾರ, ಶರಣವ್ವ ಸುರೇಶ ಕಂಬಾರ, ಭೀಮವ್ವ ಬೂದ್ಯಾಳಪ್ಪ ಕಂಬಾರ, ವೀರೇಶ ಬೂದ್ಯಾಳಪ್ಪ ಕಂಬಾರ(19/3ಬಿ)
123	19	ಖಾಸಗಿ	ಖುಷ್ಕಿ	0.451295	ಚಂದ್ರಶೇಖರ ಬಸವಂತಪ್ಪ ಕೆಲೂರು, ಮಹಾಂತೇಶ ಬಸವಂತಪ್ಪ ಕೆಲೂರು, ಮಂಜುನಾಥ ಬಸವಂತಪ್ಪ ಕೆಲೂರು (19/4)
124	19	ಖಾಸಗಿ	ಖುಷ್ಕಿ	0.25098	ಶೈಲಾ ರಮೇಶ್ ಕಂಬಾರ (19/5)
125	5	ಖಾಸಗಿ	ಖುಷ್ಕಿ	0.147894	ಸಿದ್ದಯ್ಯ ಸಿದ್ದಯ್ಯ ಕಾಡಯ್ಯನವರ್, ನೀಲಕಂಠಯ್ಯ ಸಿದ್ದಯ್ಯ ಕಾಡಯ್ಯನವರ್, ರೇವಣಯ್ಯ ಸಿದ್ದಯ್ಯ ಕಾಡಯ್ಯನವರ್ (5/1)
126	5	ಖಾಸಗಿ	ಖುಷ್ಕಿ	0.440881	ಚನ್ನಬಸಯ್ಯ ಶಿವಯ್ಯ ಕಾಡಯ್ಯನವರ್, ಮಹಾದೇವಿ ವೀರೇಶ್ ಪಾಟೀಲ್, ಸಿದ್ದಮ್ಮ ಶಿವಯ್ಯ ಕಾಡಯ್ಯನವರ್ (5/2)
127	5	ಖಾಸಗಿ	ಖುಷ್ಕಿ	0.003882	ರಾಮನಗೌಡ ಬಸನಗೌಡ ಪಾಟೀಲ್ (5/3)
128	5	ಖಾಸಗಿ	ಖುಷ್ಕಿ	0.25269	1) ಶರಣವ್ವ ಸಿದ್ದಪ್ಪ ಪೂಜಾರ್, ಮಹಾದೇವಿ ಸಿದ್ದಪ್ಪ ಗೌಡರ, ಸಿದ್ದಮ್ಮ ಆನಂದ ಅನವಾಳ, ಮುತ್ತಪ್ಪ ಸಿದ್ದಪ್ಪ ಪೂಜಾರ್, ಮಂಜುನಾಥ ಸಿದ್ದಪ್ಪ ಪೂಜಾರ್, 2) ಶರಣಬಸವ ಸಂಗಪ್ಪ ದಳವಾಯಿ (5/4ಎ, 5/4ಬಿ)
129	5	ಖಾಸಗಿ	ಖುಷ್ಕಿ	0.074842	ಫಕೀರಪ್ಪ ನಿಂಗಪ್ಪ ಪೂಜಾರ್ (5/4ಸಿ)
130	5	ಖಾಸಗಿ	ಖುಷ್ಕಿ	0.115477	ಗವಿಸಿದ್ದಪ್ಪ ನಿಂಗಪ್ಪ ಪೂಜಾರ್ (5/4ಡಿ)
131	5	ಖಾಸಗಿ	ಖುಷ್ಕಿ	0.311822	ಶಿದ್ದವ್ವ ಸಂಗಪ್ಪ ದಳವಾಯಿ (5/5)
132	5	ಖಾಸಗಿ	ಖುಷ್ಕಿ	0.138708	ಕಾಡಯ್ಯ ಸಿದ್ದಯ್ಯ ಕಾಡಯ್ಯನವರ್ (5/6)
133	5	ಖಾಸಗಿ	ಖುಷ್ಕಿ	0.432882	ರಾಮನಗೌಡ ಬಸನಗೌಡ ಪಾಟೀಲ್ (5/7)
134	6	ಖಾಸಗಿ	ಖುಷ್ಕಿ	0.266866	ವಿಜಯಕುಮಾರ ಶಾಂತಕುಮಾರ್ ಅಂಗಡಿ (6/2)
135	6	ಖಾಸಗಿ	ಖುಷ್ಕಿ	0.276041	ಶಿವಕುಮಾರ ಬಶೆಟ್ಟೆಪ್ಪ ಅಂಗಡಿ (6/3)
136	77A	ಖಾಸಗಿ	ಖುಷ್ಕಿ	0.1299	1) ಬಸವರಾಜ ಮಾಗುಂಡಪ್ಪ ಹೊಟ್ಟಿ, 2) ಅಗ್ನೆಶಿ ಜೋಶೀದ್ ಬೆಟಗೇರಿ (77)
137	77B	ಖಾಸಗಿ	ಖುಷ್ಕಿ	0.0145	1) ಬಸವರಾಜ ಮಾಗುಂಡಪ್ಪ ಹೊಟ್ಟಿ, 2) ಅಗ್ನೆಶಿ ಜೋಶೀದ್ ಬೆಟಗೇರಿ (77)
138	78	ಖಾಸಗಿ	ಖುಷ್ಕಿ	0.024228	ದ್ರಾಕ್ಷಾಯಿಣಿ ಷಡಕ್ಷರಯ್ಯ ಹಲಗಿಮಠ, ಗಿರಿಜವ್ವ ಸಿದ್ದಯ್ಯ ಅರಳಿಮಠ, ರಾಜೇಶ್ವರಿ ಪ್ರವೀಣ ಕೆಂಭಾವಿಮಠ, ರತ್ನಾ ಚನ್ನಬಸಯ್ಯ ಸುತ್ತೂರುಮಠ, ಬಸವರಾಜ ಚನ್ನಬಸಯ್ಯ ಸುತ್ತೂರುಮಠ, ಗಂಗವ್ವ ಕೊಟ್ರಯ್ಯ ಸುತ್ತೂರುಮಠ, ಬಸವಣ್ಣೆವ್ವ ಅಂದಾನಯ್ಯ ಹಿರೇಮಠ (78/9)
139	79	ಖಾಸಗಿ	ಖುಷ್ಕಿ	0.1845	1) ಮಾಗುಂಡಪ್ಪ ಹುಚ್ಚಪ್ಪ ಬಂಡಿವಡ್ಡರ, ಸಿದ್ದಯ್ಯ ಗುರಯ್ಯ ಕಾಡಯ್ಯನವರ, ನಾಗಪ್ಪ ಬೂಸಪ್ಪ ಬಂಡಿವಡ್ಡರ, 2) ದರಗಾ (79/*)
140	8	ಖಾಸಗಿ	ಖುಷ್ಕಿ	0.722196	ಶಂಕ್ರಪ್ಪ ವಿರೂಪಾಕ್ಷಪ್ಪ ಗಂಗಲ್, ಈರವ್ವ ವಿರೂಪಾಕ್ಷಪ್ಪ ಗಂಗಲ್ (8/1)
141	8	ಖಾಸಗಿ	ಖುಷ್ಕಿ	0.18901	ಕಾಳಪ್ಪ ಫಕೀರಪ್ಪ ಕಂಬಾರ (8/2)

142	9	ಖಾಸಗಿ	ಖುಷ್ಕಿ	0.210831	ಯಲ್ಲಪ್ಪ ಭೀಮಪ್ಪ ಮಾದಾಪುರ (9/1)
143	9	ಖಾಸಗಿ	ಖುಷ್ಕಿ	0.161918	ಶ್ರೀಮತಿ ಬಿ.ಸುವರ್ಣಾ ಬಿ.ಪ್ರಹ್ಲಾದ್ (9/2)
144	9	ಖಾಸಗಿ	ಖುಷ್ಕಿ	0.082825	ನೀಲಪ್ಪ ಭೀಮಪ್ಪ ಮಾದಾಪುರ (9/3)
145	9	ಖಾಸಗಿ	ಖುಷ್ಕಿ	0.190184	ಕೃಷ್ಣಗೌಡ ಭರಮಗೌಡ ರಂಗಣ್ಣವರ, ಮಲ್ಲನಗೌಡ ಭರಮಗೌಡ ರಂಗಣ್ಣವರ, ಮಂಜುಳಾ ಕುಶಪ್ಪ ಅನವಾಲ್, ಸುಮಂಗಲಾ ಬೂದಿ(9/4)
ತಾಲ್ಲೂಕ: ಬದಾಮಿ					ಗ್ರಾಮ: ಚಿಕ್ಕನಸಬಿ
146	10	ಖಾಸಗಿ	ಖುಷ್ಕಿ	0.0226	ವೀರಪ್ಪಚನ್ನ ಬಸಪ್ಪ ಕತ್ತಿಕಾಯಿ (10/1)
147	11	ಖಾಸಗಿ	ಖುಷ್ಕಿ	0.0261	ಶಿವಸಂಗಯ್ಯ ಕೆಂಜೋಡಯ್ಯ ಶಿವಪ್ಪಯ್ಯನಮಠ, ವೀರಭದ್ರಯ್ಯ ಕೆಂಜೋಡಯ್ಯ ಶಿವಪ್ಪಯ್ಯನಮಠ, ಈಶ್ವರಯ್ಯ ಕೆಂಜೋಡಯ್ಯ ಶಿವಪ್ಪಯ್ಯನಮಠ, ಶಿವಬಸಯ್ಯ ವೀರಯ್ಯ ಶಿವಪ್ಪಯ್ಯನಮಠ, ಶೇಖರಯ್ಯ ವೀರಯ್ಯ ಶಿವಪ್ಪಯ್ಯನಮಠ, ಶಿವಯ್ಯ ಶಿವಸಂಗಯ್ಯ ಶಿವಪ್ಪಯ್ಯನಮಠ, ಸಂಗವ್ವ ಸಂಗಯ್ಯ ಶಿವಪ್ಪಯ್ಯನಮಠ, ನೀಲವ್ವ ಶರಣಬಸಯ್ಯ ಬಿಕ್ಷಾವತಿಮಠ, ಶಾಂತಾಬಾಯಿ, ಮೃತ್ಯುಂಜಯ ಹಿರೇಮಠ, ಈಶ್ವರಯ್ಯ ಕೆಂಜೊಡಯ್ಯ ಶಿವಪ್ಪಯ್ಯನಮಠ (11/*)
148	12	ಖಾಸಗಿ	ಖುಷ್ಕಿ	0.0464	1) ಸುಭಾಶ್ಚಂದ್ರ ಮಾಗುಂಡಪ್ಪ ಕತ್ತಿಕಾಯಿ, 2) ಈರಬಸಪ್ಪ ಮಾಂತಪ್ಪ ಕತ್ತಿಕಾಯಿ, ಷಣ್ಮುಖಪ್ಪ ಮಾಂತಪ್ಪ ಕತ್ತಿಕಾಯಿ, ಬಾಲಚಂದ್ರ ಮಾಂತಪ್ಪ ಕತ್ತಿಕಾಯಿ, ವನಿತಾ ಶೇಖರಪ್ಪ ಕತ್ತಿಕಾಯಿ, ಲತಾ ಶಂಕರಪ್ಪ ಕತ್ತಿಕಾಯಿ, ಅಭಿಷೇಕ್ ಶಂಕ್ರಪ್ಪ ಕತ್ತಿಕಾಯಿ ಅ.ಪ. ತಾಯಿ ಲತಾ, ಕಾರ್ತಿಕ ಶಂಕ್ರಪ್ಪ ಕತ್ತಿಕಾಯಿ ಅ.ಪ. ತಾಯಿ ಲತಾ (12/*)
149	13	ಖಾಸಗಿ	ಖುಷ್ಕಿ	0.014416	ಜಗದೀಶ್ವರಯ್ಯ ಗಂಗಯ್ಯ ಹಿರೇಮಠ, ಮಂಜುನಾಥಸ್ವಾಮಿ ಗಂಗಯ್ಯ ಹಿರೇಮಠ, ಬಸಯ್ಯ ಬಸಲಿಂಗಯ್ಯ ಹಿರೇಮಠ, ನಾಗರತ್ನ ಬಸಲಿಂಗಯ್ಯ ಹಿರೇಮಠ, ಅನ್ನಪೂರ್ಣ ಬಸಲಿಂಗಯ್ಯ ಹಿರೇಮಠ, ಸಿದ್ದಮ್ಮ ಬಸಲಿಂಗಯ್ಯ ಹಿರೇಮಠ (13/2)
150	13	ಖಾಸಗಿ	ಖುಷ್ಕಿ	0.020136	ಸುರೇಶ ಅಂದಪ್ಪ ಯಲಿಗಾರ್ (13/3)
151	13	ಖಾಸಗಿ	ಖುಷ್ಕಿ	0.009726	ಸುರೇಶ ಅಂದಪ್ಪ ಯಲಿಗಾರ್ (13/5)
152	13	ಖಾಸಗಿ	ಖುಷ್ಕಿ	0.003922	ಶಿವಲೀಲಾ ನಿಂಗಪ್ಪ ಗೋಗೇರಿ, ಗೌರಮ್ ಸಂಜೀವಕುಮಾರ ಹಳಿಂಗಲಿ, ವಿಶ್ವನಾಥ ನಿಂಗಪ್ಪ ಗೋಗೇರಿ, ಬಸವರಾಜ ನಿಂಗಪ್ಪ ಗೋಗೇರಿ (13/8)
153	14	ಖಾಸಗಿ	ಖುಷ್ಕಿ	0.015107	ಹನಮಪ್ಪ ಕಲ್ಲಪ್ಪ ಪೂಜಾರ್, ಯಲ್ಲಪ್ಪ ಕಲ್ಲಪ್ಪ ಪೂಜಾರ್, ಮುದಕಪ್ಪ ಕಲ್ಲಪ್ಪ ಪೂಜಾರ್ (14/1)
154	14	ಖಾಸಗಿ	ಖುಷ್ಕಿ	0.002214	ರಮೇಶ ಯಮನಪ್ಪ ಪೂಜಾರ್, ಪಕೀರಪ್ಪ ಕೆಂಚಪ್ಪ ಪೂಜಾರ್, ಸಾಬಣ್ಣ ಕೆಂಚಪ್ಪ ಪೂಜಾರ್ (14/ಇ)
155	14	ಖಾಸಗಿ	ಖುಷ್ಕಿ	0.015596	ಕೆಂಚಪ್ಪ ಸಾಬಣ್ಣ ಪೂಜಾರ್ (14/2ಬಿ)
156	29	ಖಾಸಗಿ	ಖುಷ್ಕಿ	0.0215	ಫಕೀರಪ್ಪ ಪರಪ್ಪ ಫಡಿ, ಕನಕಪ್ಪ ಪರಪ್ಪ ಫಡಿ, ಮಂಗಳಪ್ಪ ಯಲ್ಲಪ್ಪ ಫಡಿ, ಗಿರಿಯವ್ವ ರಾಮಣ್ಣ ಫಡಿ, ಹನಮಂತ ರಾಮಣ್ಣ ಫಡಿ, ಹನಮವ್ವ ಬಸಪ್ಪ ಹಿರೇಹೊಳಿ, ಬಾಳಪ್ಪ ರಾಮಣ್ಣ ಫಡಿ, ಮಲ್ಲಪ್ಪ ಹನಮಪ್ಪ ಫಡಿ, ಪಾರ್ವತೆವ್ವ ಭೀಮಪ್ಪ ಪೂಜಾರ್ (29/1)
157	4	ಖಾಸಗಿ	ಖುಷ್ಕಿ	0.0244	ಸಂಗಪ್ಪ ಸಣ್ಣಪರಪ್ಪ ನಿಡಗುಂದಿ, ಶಾಂತವ್ವ ಕಳಕಪ್ಪ ನಿಡಗುಂದಿ, ಆನಂದ ಕಳಕಪ್ಪ ನಿಡಗುಂದಿ, ಪರಮೇಶ ಕಳಕಪ್ಪ ನಿಡಗುಂದಿ, ಹರ್ಷವರ್ಧನ ಕಳಕಪ್ಪ ನಿಡಗುಂದಿ, ರಾಜೇಶ್ವರಿ ಅತ್ರೇಶ ದೊಡಮನಿ (4/*)
158	5	ಖಾಸಗಿ	ಖುಷ್ಕಿ	0.011999	ಸಾವಿತ್ರಿ ಪಂಚಾಕ್ಷರಯ್ಯ ಮಠ, ದ್ರಾಕ್ಷಾಯಿಣಿ ಮಲ್ಲಯ್ಯ ನಸಬಿಮಠ, ಶಿವಲೀಲಾ ಚಂದ್ರು ವಸ್ತದ್, ಸಿದ್ದಲಿಂಗಯ್ಯ ಮಲ್ಲಯ್ಯ ನಸಬಿಮಠ ಉರ್ಫ್ ಹೀರೆಮಠ, ಮಂಜುನಾಥ ಮಲ್ಲಯ್ಯ ನಸಬಿಮಠ ಉರ್ಫ್ ಹೀರೆಮಠ, ಅಕ್ಕಮಹಾದೇವಿ ಚಂದ್ರಕಾಂತ ಸ್ವತಂತ್ರಮಠ, ಬಸವರಾಜ ಸದಾಶಿವಯ್ಯ ನಸಬಿಮಠ, ಅನ್ನಪೂರ್ಣ ಬಸವರಾಜ ಪುರಾಣಿಕಮಠ (5/1ಬಿ)
159	5	ಖಾಸಗಿ	ಖುಷ್ಕಿ	0.035701	ಸಂಗವ್ವ ಅಂದಾನಯ್ಯ ವಸ್ತದ (5/1ಎ)
160	8	ಖಾಸಗಿ	ಖುಷ್ಕಿ	0.0226	ಚೇತನ ಶರಣಬಸಪ್ಪ ಕುಂದಗೋಳ, ಗಿರಿಜಾ ಶರಣಬಸಪ್ಪ ಕುಂದಗೋಳ, ಪ್ರಕಾಶ ಮಹಾಂತಪ್ಪ ಕುಂದಗೋಳ, ಅಶೋಕ ಮಹಾಂತಪ್ಪ ಕುಂದಗೋಳ, ಶಿವಸಾಗರ ಮಹಾಂತಪ್ಪ ಕುಂದಗೋಳ, ಶಿವಲೀಲಾ ಬಸವಪ್ರಭು ಕುಂದಗೋಳ, ಆದ್ಯ ಬಸವಪ್ರಭು ಕುಂದಗೋಳ ಅ.ಪ. ಶಿವಲೀಲಾ, ವೀಣಾ ಶರಣಬಸಪ್ಪ ಕುಂದಗೋಳ (8/1+2)
161	9	ಖಾಸಗಿ	ಖುಷ್ಕಿ	0.0142	ಸಂತೋಷ ಜಂಬಣ್ಣ ಟೆಂಗಿನಕಾಯಿ, ಚೇತನ್ ಜಂಬಣ್ಣ ಟೆಂಗಿನಕಾಯಿ, ನವೀನ್ ಜಂಬಣ್ಣ ಟೆಂಗಿನಕಾಯಿ (9/6)
ತಾಲ್ಲೂಕ: ಬದಾಮಿ					ಗ್ರಾಮ: ಚೋಳಚಗುಡ್ಡ
162	161	ಖಾಸಗಿ	ಖುಷ್ಕಿ	0.1279	ಶಂಕರಭಟ್ ಮಾರ್ತಾಂಡಭಟ್ ಪೂಜಾರ, ವಿಠ್ಠಲಭಟ್ ಮಲ್ಲಾರಭಟ್ ಪೂಜಾರ್, ಆನಂದ ಭೀಮಭಟ್ ಪೂಜಾರ್, ಅರವಿಂದಭಟ್ ಭೀಮಭಟ್ ಪೂಜಾರ್, ದತ್ತಂಬಭಟ್ ಯಜ್ಞೇಶ್ವರಭಟ್ ಪೂಜಾರ್, ಶಂಕರಭಟ್ ಸಾಂಭಭಟ್ ಪೂಜಾರ್, ಶಂಕರಭಟ್ ದತ್ತಂಬಭಟ್ ಪೂಜಾರ್ (161/*)
163	177	ಖಾಸಗಿ	ಖುಷ್ಕಿ	0.028301	ಸಂಗನಗೌಡ ಗುರುಪಾದಗೌಡ ಪಾಟೀಲ್ (177/1)
164	178	ಖಾಸಗಿ	ಖುಷ್ಕಿ	0.041521	ಪಂಚಯ್ಯ ವಿರೂಪಾಕ್ಷಯ್ಯ ಹಿರೇಮಠ (178/1ಸಿ)
165	178	ಖಾಸಗಿ	ಖುಷ್ಕಿ	0.008806	ನಾಗೇಂದ್ರಪ್ಪ ಕೇಶಪ್ಪ ನೇಮಡಿ, ಅಶೋಕಪ್ಪ ಕೇಶಪ್ಪ ನೇಮಡಿ, ವಸಂತಪ್ಪ ಕೇಶಪ್ಪ ನೇಮಡಿ, ಶಿವಶಕ್ರಪ್ಪ ಸಿದ್ದಪ್ಪ ನೇಮಡಿ, ಪ್ರಕಾಶ ಶಿದ್ದಪ್ಪ ನೇಮಡಿ (178/1ಡಿ)
ತಾಲ್ಲೂಕ: ಬದಾಮಿ					ಗ್ರಾಮ: ಜಾಲಿಹಾಳ
166	100	ಖಾಸಗಿ	ಖುಷ್ಕಿ	0.0441	ರಾಮನಗೌಡ ಬಸನಗೌಡ ಪಾಟೀಲ, ಅರುಣಕುಮಾರ ಬಸನಗೌಡ ಪಾಟೀಲ, ಸಿದ್ದನಗೌಡ ಬಸನಗೌಡ ಪಾಟೀಲ, ಗುರುರಾಜ ಅಶೋಕ ಪಾಟೀಲ, ಪ್ರಿಯದರ್ಶಿನಿ ಶರಣಬಸವ ಇನಾಮ್‌ದಾರ್ (100/2)
167	101	ಖಾಸಗಿ	ಖುಷ್ಕಿ	0.0387	ರಾಘವೇಂದ್ರ ನಿಂಗಪ್ಪ ಜೋಗಿನ್ (101/1)
168	208	ಖಾಸಗಿ	ಖುಷ್ಕಿ	0.1432	ರಾಮಪ್ಪ ಯಲ್ಲಪ್ಪ ಕೋಟಿ ಭೂ.ಪ (208/1)
169	209	ಖಾಸಗಿ	ಖುಷ್ಕಿ	0.3114	ಕರ್ನಾಟಕ ವಕ್ಫ್ ಬೋರ್ಡ್ ವಕ್ಫ್ ಆಸ್ತಿ, ಯಮನೂರಸಾಬ್ ರಾಜೇಸಾಬ್ ಶಡ್ಲಗೇರಿ, ಮಕ್ತುಂಸಾಬ್ ಸಾಬಣ್ಣ ಬಾಗವಾನ್, ಮಿಯಾಸಾಬ್ ಹಸನ್‌ಸಾಬ್ ಕೆರೂರ (209/*)
170	65	ಖಾಸಗಿ	ಖುಷ್ಕಿ	0.271	ರಾಮನಗೌಡ ಬಸನಗೌಡ ಪಾಟೀಲ, ಅರುಣಕುಮಾರ ಬಸನಗೌಡ ಪಾಟೀಲ, ಸಿದ್ದನಗೌಡ ಬಸನಗೌಡ ಪಾಟೀಲ, ಗುರುರಾಜ ಅಶೋಕ ಪಾಟೀಲ, ಪ್ರಿಯದರ್ಶಿನಿ ಶರಣಬಸವ ಇನಾಮದಾರ (65/*)
171	66	ಖಾಸಗಿ	ಖುಷ್ಕಿ	0.262554	ಭೀಮವ್ವ ಅಂದಪ್ಪ ದಳವಾಯಿ (66/1)
172	66	ಖಾಸಗಿ	ಖುಷ್ಕಿ	0.206195	ಶಿವಪ್ಪ ರುದ್ರಪ್ಪ ಗಡದ್ (66/2)
173	66	ಖಾಸಗಿ	ಖುಷ್ಕಿ	0.193677	ಭೀಮವ್ವ ಅಂದಪ್ಪ ದಳವಾಯಿ (66/3)
174	66	ಖಾಸಗಿ	ಖುಷ್ಕಿ	0.210702	ಗಂಗವ್ವ ಮುತ್ತಪ್ಪ ದಳವಾಯಿ, ಯಲ್ಲಪ್ಪ ಮುತ್ತಪ್ಪ ದಳವಾಯಿ, ಕಾಳಿಂಗಪ್ಪ ಮುತ್ತಪ್ಪ ದಳವಾಯಿ (66/4)
175	67	ಖಾಸಗಿ	ಖುಷ್ಕಿ	0.918724	ಶಕುಂತಲಾ ವೆಂಕನಗೌಡ ಪಾಟೀಲ್ (67/*)
176	68	ಖಾಸಗಿ	ಖುಷ್ಕಿ	0.328845	ತೋಟಪ್ಪ ಸಕ್ರಪ್ಪ ತೋಟಗೇರ್ (68/1)
177	68	ಖಾಸಗಿ	ಖುಷ್ಕಿ	0.081269	ವೀರಬಸಪ್ಪ ಸಿದ್ದಪ್ಪ ತೋಟಗೇರ್ (68/2)
178	68	ಖಾಸಗಿ	ಖುಷ್ಕಿ	0.027453	ಹೂವಪ್ಪ ಬಸಪ್ಪ ತೋಟಗೇರ್ (68/3)
179	68	ಖಾಸಗಿ	ಖುಷ್ಕಿ	0.028272	ಬಸವರಾಜ ಸಂಗಪ್ಪ ತೋಟಗೇರ್, ಮಂಜುನಾಥ ಸಂಗಪ್ಪ ತೋಟಗೇರ್, ಪೂರ್ಣಿಮಾ ಸಂಗಪ್ಪ ತೋಟಗೇರ್, ಅನಸೂಯಾ ಸಂಗಪ್ಪ ತೋಟಗೇರ್ (68/4)
180	68	ಖಾಸಗಿ	ಖುಷ್ಕಿ	0.029118	ಅಂದವ್ವ ಬಸಪ್ಪ ತೋಟಗೇರ್, ಮಲ್ಲಪ್ಪ ಬಸಪ್ಪ ತೋಟಗೇರ್ (68/5)
181	68	ಖಾಸಗಿ	ಖುಷ್ಕಿ	0.187943	ಬಸಪ್ಪ ಸಂಗಪ್ಪ ತೋಟಗೇರ್, ಬಾಲಪ್ಪ ಸಂಗಪ್ಪ ತೋಟಗೇರ್, ಗುಂಡಪ್ಪ ಸಂಗಪ್ಪ ತೋಟಗೇರ್ (68/6)
182	69	ಖಾಸಗಿ	ಖುಷ್ಕಿ	0.002253	ನಿಂಗನಗೌಡ ನಾಗನಗೌಡ ಪಾಟೀಲ್ (69/*)
183	82	ಖಾಸಗಿ	ಖುಷ್ಕಿ	0.003793	ಯಲ್ಲವ್ವ ನೀಲಪ್ಪ ಶಿರೂರು, ಗದಿಗೆಪ್ಪ ನೀಲಪ್ಪ ಶಿರೂರು, ಶೇಖಪ್ಪ ನೀಲಪ್ಪ ಶಿರೂರು, ಶಿವಾನಂದ ನೀಲಪ್ಪ ಶಿರೂರು, ನಿಂಬಣ್ಣ ಯಲ್ಲಪ್ಪ ಶಿರೂರು, ನೀಲಪ್ಪ ಯಲ್ಲಪ್ಪ ಶಿರೂರು, ರಾಮಪ್ಪ ಮಹಾದೇವಪ್ಪ ಶಿರೂರು (82/1)
184	82	ಖಾಸಗಿ	ಖುಷ್ಕಿ	0.10898	ಯಲ್ಲವ್ವ ನೀಲಪ್ಪ ಶಿರೂರು, ಗದಿಗೆಪ್ಪ ನೀಲಪ್ಪ ಶಿರೂರು, ಶೇಖಪ್ಪ ನೀಲಪ್ಪ ಶಿರೂರು, ಶಿವಾನಂದ ನೀಲಪ್ಪಶಿರೂರು, ನಿಂಬಣ್ಣ ಯಲ್ಲಪ್ಪ ಶಿರೂರು, ನೀಲಪ್ಪ ಯಲ್ಲಪ್ಪ ಶಿರೂರು, ರಾಮಪ್ಪ ಮಹಾದೇವಪ್ಪಶಿರೂರು (82/2)
185	82	ಖಾಸಗಿ	ಖುಷ್ಕಿ	0.016134	ಯಲ್ಲವ್ವ ನೀಲಪ್ಪ ಶಿರೂರು (82/3)
186	83	ಖಾಸಗಿ	ಖುಷ್ಕಿ	0.582415	ರಾಮನಗೌಡ ಬಸನಗೌಡ ಪಾಟೀಲ, ಅರುಣಕುಮಾರ ಬಸನಗೌಡ ಪಾಟೀಲ, ಸಿದ್ದನಗೌಡ ಬಸನಗೌಡ ಪಾಟೀಲ, ಗುರುರಾಜ ಅಶೋಕ ಪಾಟೀಲ, ಪ್ರಿಯದರ್ಶಿನಿ ಶರಣಬಸವ ಇನಾಮದಾರ (83/*)
187	84	ಖಾಸಗಿ	ಖುಷ್ಕಿ	0.208256	ಕಳಕಪ್ಪ ಬಸಪ್ಪ ಸೂಡಿ, ಸಂಗಪ್ಪ ಬಸಪ್ಪ ಸೂಡಿ (84/1)
188	84	ಖಾಸಗಿ	ಖುಷ್ಕಿ	0.17281	ವೀರಭದ್ರಪ್ಪ ಬಸಪ್ಪ ಸೂಡಿ, ಶಂಕ್ರವ್ವ ಚನ್ನಬಸಪ್ಪ ಮಂಗಳೂರು, ಶೇಖರಪ್ಪ ಬಸಪ್ಪ ಸೂಡಿ, ಕಳಕಪ್ಪ ಬಸಪ್ಪಸೂಡಿ, ಪಾರ್ವತೆವ್ವ ರುದ್ರಪ್ಪ ಚಿಲಕವಾಡ, ಸಂಗಪ್ಪ ಬಸಪ್ಪ ಸೂಡಿ, ಮಹಾದೇವಿ ಕಲ್ಲಪ್ಪ ಸೂಡಿ, ಜಯಶ್ರೀ ಕಲ್ಲಪ್ಪ ಸೂಡಿ, ಹೇಮಾ ಕಲ್ಲಪ್ಪ ಸೂಡಿ, ಗಾಯತ್ರಿ ಕಲ್ಲಪ್ಪ ಸೂಡಿ, ಪುಷ್ಪಲತಾ ಕಲ್ಲಪ್ಪ ಸೂಡಿ (84/2)
189	84	ಖಾಸಗಿ	ಖುಷ್ಕಿ	0.161479	ಮಹಾಂತಪ್ಪ ಶಿವಪ್ಪ ಪಲ್ಲೇದ್, ಸಂಗಪ್ಪ ಶಿವಪ್ಪ ಪಲ್ಲೇದ್, ಯಲ್ಲವ್ವ ದಾನಪ್ಪ ಅಂಗಡಿ, ಪರತವ್ವ ವಿಟ್ಟಪ್ಪ ಅಬಕಾರಿ, ಉಮೇಶ ಗುರುಪಾದಪ್ಪ ಪಲ್ಲೇದ್, ಪಾರ್ವತಿ ಶಿವಪ್ಪ ಪಲ್ಲೇದ್, ಶೇಖಪ್ಪ ಗುರುಪಾದಪ್ಪ ಪಲ್ಲೇದ್, ಬಸವ್ವ ನಿಂಗಪ್ಪ ಮುರಗೋಡ ಉರ್ಫ್ ಪಲ್ಲೇದ್, ಪುಂಡಪ್ಪ ನಿಂಗಪ್ಪ ಮುರಗೋಡ ಉರ್ಫ್ ಪಲ್ಲೇದ್, ರೇಣುಕಾ ಗುರಪ್ಪ ಕಣಿ, ಕಾವೇರಿ ಶಂಕ್ರಪ್ಪ ದಂಡಿನ್, ಶ್ವೇತಾ ಕಿರಣ ಕೆಂಜೋಡಿ, ಶ್ರದ್ಧಾ ಶಿವಪ್ಪ ಪಲ್ಲೇದ್ (84/3)
190	90	ಖಾಸಗಿ	ಖುಷ್ಕಿ	0.505866	ಬಸವರಾಜ ಭೀಮಸೇನ ಬನದ, ವೆಂಕಪ್ಪ ಭೀಮಸೇನ ಬನದ್, ಗಿರೀಶ ಭೀಮಸೇನ ಬನದ್, ಶರಣಪ್ಪ ಭೀಮಸೇನ ಬನದ್(90/*)
191	91	ಖಾಸಗಿ	ಖುಷ್ಕಿ	0.487421	ಶೇಕಪ್ಪ ಚನ್ನಪ್ಪ ಕಟಗೇರಿ (91/*)
192	92	ಖಾಸಗಿ	ಖುಷ್ಕಿ	0.006333	ಗಂಗಪ್ಪ ಬೇಲೂರಪ್ಪ ಗೊಂದಳೆ, ನಾಗಪ್ಪ ಬೇಲೂರಪ್ಪ ಗೊಂದಳೆ (92/1)
193	92	ಖಾಸಗಿ	ಖುಷ್ಕಿ	0.384455	ಶರಣಪ್ಪ ಅಯ್ಯನಗೌಡ ನೀರಲಗಿ, ಷಣ್ಮುಖಪ್ಪ ಅಯ್ಯನಗೌಡ ನೀರಲಗಿ, ಚಂದ್ರಶೇಖರಪ್ಪ ಅಯ್ಯನಗೌಡ ನೀರಲಗಿ, ಶಾರವ್ವ ಅಂದಪ್ಪ ನೀರಲಗಿ (92/2)
194	92	ಖಾಸಗಿ	ಖುಷ್ಕಿ	0.138466	1) ಚಿದಂಬರ ಶಂಕರಭಟ್ಟ ಗ್ರಾಮಪುರೋಹಿತ, ವಸಂತ ಶಂಕರಭಟ್ಟ ಗ್ರಾಮಪುರೋಹಿತ, ಅಶೋಕ ಶಂಕರಭಟ್ಟ ಗ್ರಾಮಪುರೋಹಿತ, 2) ಚಿದಂಬರ ಶಂಕರಭಟ್ಟ ಗ್ರಾಮಪುರೋಹಿತ, ವಸಂತ ಶಂಕರಭಟ್ಟ ಗ್ರಾಮಪುರೋಹಿತ, ಅಶೋಕ ಶಂಕರಭಟ್ಟ ಗ್ರಾಮಪುರೋಹಿತ (92/3ಎ, 92/3ಬಿ)
195	92	ಖಾಸಗಿ	ಖುಷ್ಕಿ	0.307667	ಫಕೀರಪ್ಪ ಮಲ್ಲಪ್ಪ ನೀರಲಗಿ, ಕಂಟಿಬಸಪ್ಪ ಮಲ್ಲಪ್ಪ ನೀರಲಗಿ, ರುದ್ರವ್ವ ಸಿದ್ದನಗೌಡ ಹಿರೇ ನಿಂಗನಗೌಡ್ರ, ಅಂದವ್ವ ಈರಪ್ಪ ಗಾಣಗೇರ, ಶಿವವ್ವ ಶಿವನಪ್ಪ ಪಾಲಣ್ಣನವರ ಸಾಮೂಹಿಕ (92/4)
196	92	ಖಾಸಗಿ	ಖುಷ್ಕಿ	0.242959	ಶಶಿಕಾಂತ ಪ್ರಲ್ಹಾದರಾವ್ ಕುಲಕರ್ಣಿ (92/5)
197	95	ಖಾಸಗಿ	ಖುಷ್ಕಿ	0.018512	ಈರಪ್ಪ ಉಮ್ಮಣ್ಣ ಬಿಳೇಲಿ (95/1ಎ)
198	95	ಖಾಸಗಿ	ಖುಷ್ಕಿ	0.018798	ಮಲ್ಲಿಕಾರ್ಜುನ ಚನ್ನಮಲ್ಲಪ್ಪ ಗೆದಗೇರಿ (95/1ಬಿ)
199	95	ಖಾಸಗಿ	ಖುಷ್ಕಿ	0.018191	ಅಂದಾನ ಪ್ಪವೀರಪ್ಪ ಬಿಳೇಲಿ (95/2)
200	95	ಖಾಸಗಿ	ಖುಷ್ಕಿ	0.016499	ಬಸಪ್ಪ ಸಂಗಪ್ಪ ಬಿಳೇಲಿ (95/3)
201	96	ಖಾಸಗಿ	ಖುಷ್ಕಿ	0.0714	ಯಲಗೂರದಪ್ಪ ಶಿವನಪ್ಪ ಚಂದ್ರಗಿರಿ, ಅಕ್ಕಮ್ಮ ನಾಗಪ್ಪ ಚಂದ್ರಗಿರಿ, ಶಿವು ನಾಗಪ್ಪ ಚಂದ್ರಗಿರಿ ಅ.ಪಿ.ತಾ.ಅಕ್ಕಮ್ಮ, ಸಹನಾ ನಾಗಪ್ಪ ಚಂದ್ರಗಿರಿ ಎ.ಪಿ.ತಾ.ಅಕ್ಕಮ್ಮ, ಹನಮವ್ವ ನಿಂಗಪ್ಪಚಂದ್ರಗಿರಿ, ಯಲಗೂರದಪ್ಪ ನಿಂಗಪ್ಪ ಚಂದ್ರಗಿರಿ, ಹನಮಪ್ಪ ನಿಂಗಪ್ಪ ಚಂದ್ರಗಿರಿ, ಯಂಕಪ್ಪನಿಂಗಪ್ಪ ಚಂದ್ರಗಿರಿ, ಶೇಖವ್ವ ಅಶೋಕ ಶಂಕರ ಗುಂಡಿ, ಫಕೀರಪ್ಪ ನಿಂಗಪ್ಪ ಚಂದ್ರಗಿರಿ, ವಸಂತನಿಂಗಪ್ಪ ಚಂದ್ರಗಿರಿ, ಪರಸಪ್ಪ ನಿಂಗಪ್ಪ ಚಂದ್ರಗಿರಿ, ಅಂದಪ್ಪ ನಿಂಗಪ್ಪ ಚಂದ್ರಗಿರಿ, ವಿರುಪಾಕ್ಷಪ್ಪ ಪುಂಡಪ್ಪ ಚಂದ್ರಗಿರಿ, ಯಲ್ಲವ್ವಸಿಂಧೂರಪ್ಪ ಪೂಜಾರ್, ಶಾಂತವ್ವ ಶಂಕ್ರಪ್ಪ ಪೂಜಾರ್, ನಾಗವ್ವ ಭೀಮಪ್ಪ ಪೂಜಾರ್, ಅಣ್ಣಪ್ಪ ಪುಂಡಪ್ಪ ಚಂದ್ರಗೇರಿ (96/*)
202	97	ಖಾಸಗಿ	ಖುಷ್ಕಿ	0.021642	ದೇವಪ್ಪ ಶಂಕ್ರಪ್ಪ ಬೀರಕಬ್ಬಿ (97/2)
203	97	ಖಾಸಗಿ	ಖುಷ್ಕಿ	0.022915	ದೇವಪ್ಪ ಮಲ್ಲಪ್ಪ ಮುತ್ತಲಗೇರಿ (97/5)
204	97	ಖಾಸಗಿ	ಖುಷ್ಕಿ	0.025932	ದೇವಪ್ಪ ಮಲ್ಲಪ್ಪ ಮುತ್ತಲಗೇರಿ (97/7)
205	97	ಖಾಸಗಿ	ಖುಷ್ಕಿ	0.007111	ಯಂಕಪ್ಪ ಲಚ್ಚಪ್ಪ ಭೀರಕಬ್ಬಿ, ಫಕೀರವ್ವ ಶಿವಬಸಪ್ಪ ಬೀರಕಬ್ಬಿ, ಫಕೀರಪ್ಪ ಶಿವಬಸಪ್ಪ ಬೀರಕಬ್ಬಿ, ಹನಮಪ್ಪ ಶಿವಬಸಪ್ಪ ಬೀರಕಬ್ಬಿ, ಬಸಪ್ಪ ಶಿವಬಸಪ್ಪ ಬೀರಕಬ್ಬಿ, ಭಿಮಪ್ಪ ಶಿವಬಸಪ್ಪ ಬೀರಕಬ್ಬಿ (97/9)
206	98	ಖಾಸಗಿ	ಖುಷ್ಕಿ	0.1082	ಸೌಭಾಗ್ಯ ಯಲ್ಲಪ್ಪ ಕಳ್ಳಿ, ಮಹೇಶ ಯಲ್ಲಪ್ಪ ಕಳ್ಳಿ, ಕವಿತಾ ಯಲ್ಲಪ್ಪ ಕಳ್ಳಿ, ರೇಣವ್ವ ಹನಮಪ್ಪ ಕಳ್ಳಿ, ಜಗದೀಶ ಹನಮಪ್ಪ ಕಳ್ಳಿ, ಬಸಮ್ಮ ಹನಮಪ್ಪ ಕಳ್ಳಿ, ಇಂದುಮತಿ ಪರಸಪ್ಪ ಕಳ್ಳಿ, ವಿರೂಪಾಕ್ಷಿ ಭೀಮಪ್ಪ ಕಳ್ಳಿ, ಅಶೋಕ ಭೀಮಪ್ಪ ಕಳ್ಳಿ, ಶರಣವ್ವ ಮಲ್ಲಿಕಾರ್ಜುನ ಕಳ್ಳಿ (98/5)
207	99	ಖಾಸಗಿ	ಖುಷ್ಕಿ	0.043212	1) ಮಂಜುನಾಥ್ ಶಂಕ್ರಪ್ಪ ಕರೆಯಣ್ಣನವರ್, ರೇಣವ್ವ ಶಂಕ್ರಪ್ಪ ಕರೆಯಣ್ಣನವರ್, ಹೂವವ್ವ ಶಂಕ್ರಪ್ಪ ಕರಿಯಣ್ಣನವರ್, ಶಂಕ್ರವ್ವ ಭೀಮಪ್ಪ ಕರಿಯಣ್ಣನವರ್, ಶರಣಪ್ಪ ಭೀಮಪ್ಪ ಕರಿಯಣ್ಣನವರ್, ಸೋಮಲಿಂಗಪ್ಪ ಭೀಮಪ್ಪ ಕರಿಯಣ್ಣನವರ್, 2) ಹರಿಶ್ಚಂದ್ರ ರಂಗಪ್ಪ ಪೂಜಾರ್, ರಾಮಪ್ಪ ಅಡಿವೆಪ್ಪ ಹುನಗುಂಡಿ, ಮಾರುತಿ ಅಡಿವೆಪ್ಪ ಹುನಗುಂಡಿ, ಹನಮಪ್ಪ ಅಡಿವೆಪ್ಪ ಹುನಗುಂಡಿ, ಹೊನ್ನವ್ವ ಶಿವಾನಂದ ತಳವಾರ, ಪಾರವ್ವ ಹನಮಪ್ಪ ರಾಮಣ್ಣನವರ್, ಹನಮವ್ವ ಕುಶಾಲಪ್ಪ ವಾಲ್ಮೀಕಿ, ದೇವಕ್ಕೆವ್ವ ಭೀಮಪ್ಪ ಹುನಗುಂಡಿ, 3)ಮಂಜುನಾಥ ಶಂಕ್ರಪ್ಪ ಕರೆಯಣ್ಣನವರ್, ರೇಣವ್ವ ಶಂಕ್ರಪ್ಪ ಕರೆಯಣ್ಣನವರ್, ಹೂವವ್ವ ಶಂಕ್ರಪ್ಪ ಕರಿಯಣ್ಣನವರ್, ಶಂಕ್ರವ್ವ ಭೀಮಪ್ಪ ಕರಿಯಣ್ಣನವರ್, ಶರಣಪ್ಪ ಭೀಮಪ್ಪ ಕರಿಯಪ್ಪನವರ, ಸೋಮಲಿಂಗಪ್ಪ ಭೀಮಪ್ಪ ಕರಿಯಪ್ಪನವರ, 4) ಶೇಖರಪ್ಪ ಚಲ್ಲಪ್ಪ ಉರ್ಫ್ ಮುದಕಪ್ಪ ಹಡಪದ್, 5) ರಂಗಪ್ಪ ಬಾಳಪ್ಪ ಈ ಕು ಮ್ಯಾ ಕರಿಯಣ್ಣನವರ್, 6) ಯಂಕವ್ವ ವೆಂಕಪ್ಪ ಧಾರವಾಡ, ಹನಮಪ್ಪ ವೆಂಕಪ್ಪ ಧಾರವಾಡ, ದೇವಕ್ಕ ಕೂಂಟೆಪ್ಪ ಪೂಜಾರ್, ಶಂಕ್ರವ್ವ ಈರಪ್ಪ ಪೂಜಾರ್, ರಾಮಪ್ಪವೆಂಕಪ್ಪ ಧಾರವಾಡ, ರೇಣವ್ವ ದೇವಪ್ಪ ತಳವಾರ, ಶಂಕ್ರಪ್ಪ ವೆಂಕಪ್ಪ ಧಾರವಾಡ, ಗಂಗವ್ವ ಹನಮಪ್ಪ ಪೂಜಾರ,ಮಂಜುಳಾ ಯಲ್ಲಪ್ಪ ಧಾರವಾಡ, ಮೇಘಾ ಯಲ್ಲಪ್ಪ ಧಾರವಾಡ ಎ ಪ ತಾಯಿ ಮಂಜುಳಾ, 7) ಯಮನವ್ವ ರಂಗಪ್ಪ ಕರಿಯಣ್ಣನವರ್, ಯಲ್ಲವ್ವ ಬಾಳಪ್ಪ ತಳವಾರ, ಬಸಮ್ಮ ಹನಮಪ್ಪ ತಳವಾರ, ಮಲ್ಲಮ್ಮ ರಾಮಣ್ಣ ಪೂಜಾರ್, ದ್ಯಾಮಣ್ಣ ರಂಗಪ್ಪ ಕರಿಯಣ್ಣನವರ್, ನೀಲವ್ವ ಹನಮಪ್ಪ ತಳವಾರ, ಹನಮಪ್ಪ ರಂಗಪ್ಪ ಕರಿಯಣ್ಣನವರ್, 8) ಶೇಖರಪ್ಪ ಚಳ್ಳಪ್ಪ ಉರ್ಫ್ ಮುದಕಪ್ಪದ ಹಡಪದ, 9)ಮಂಜುನಾಥ್ ಶಂಕರಪ್ಪ ಕರಿಯಣ್ಣನವರ್, ರೇಣವ್ವ ಶಂಕರಪ್ಪ ಕರಿಯಣ್ಣನವರ್, ಹೂವವ್ವ ಶಂಕ್ರಪ್ಪ ಕರೆಯಣ್ಣನವರ್, ಶಂಕ್ರವ್ವ ಭೀಮಪ್ಪ ಕರಿಯಣ್ಣನವರ್, ಶರಣಪ್ಪ ಭೀಮಪ್ಪ ಕರಿಯಣ್ಣನವರ್, ಸೋಮಲಿಂಗಪ್ಪ ಭೀಮಪ್ಪ ಕರಿಯಣ್ಣನವರ್, 10) ರಂಗಪ್ಪ ಬಾಳಪ್ಪ ಇ ಕು ಮ್ಯಾ ಕರಿಯಣ್ಣನವರ್ (99/1)
208	99	ಖಾಸಗಿ	ಖುಷ್ಕಿ	0.019288	1) ಶಿವಪ್ಪ ಹನಮಪ್ಪ ಕರಿಯಣ್ಣವರ, ಬೇಲೂರಪ್ಪ ಹನಮಪ್ಪ ಕರಿಯಣ್ಣವರ, ಕನಕಪ್ಪ ಹನಮಪ್ಪ ಕರಿಯಣ್ಣವರ, ಚಿನ್ನವ್ವ ಬಾಳಪ್ಪ ಬಾರಕೇರ, 2) ಪರಸಪ್ಪ ಯಂಕಪ್ಪ ಕರಿಯಣ್ಣವರ, ಫಕೀರಪ್ಪ ಯಂಕಪ್ಪ ಕರಿಯಣ್ಣವರ, ಭೀಮವ್ವ ನಾಗಪ್ಪ ಇಸರನಾಳ, ಶೇಖವ್ವ ಸಾಬಪ್ಪ ದಿಬ್ಬದಮನಿ, ಲಕ್ಷ್ಮವ್ವ ಶಂಕ್ರಪ್ಪ ಕರಿಯಣ್ಣನವರ್ (99/3)
ತಾಲ್ಲೂಕ: ಬದಾಮಿ					ಗ್ರಾಮ: ಬೇಲೂರ
209	106	ಖಾಸಗಿ	ಖುಷ್ಕಿ	0.037911	ಪಿತ್ರಂಬವ್ವ ಕಾಳಪ್ಪ ಮದಕಟ್ಟಿ (106/*)
210	107	ಖಾಸಗಿ	ಖುಷ್ಕಿ	0.110385	ಶಿವಯ್ಯ ಶಿವಸಂಗಯ್ಯ ಶಿವಪ್ಪಯ್ಯನಮಠ (107/1) 107/1
211	107	ಖಾಸಗಿ	ಖುಷ್ಕಿ	0.231653	ಶಿವಸಂಗಯ್ಯ ಕೆಂಜೋಕಯ್ಯ ಶಿವಪ್ಪಯ್ಯನಮಠ, ವೀರಭದ್ರಯ್ಯ ಕೆಂಜೋಕಯ್ಯ ಶಿವಪ್ಪಯ್ಯನಮಠ, ಈಶ್ವರಪ್ಪಯ್ಯ ಕೆಂಜೋಕಯ್ಯ ಶಿವಪ್ಪಯ್ಯನಮಠ (107/2)
212	122	ಖಾಸಗಿ	ಖುಷ್ಕಿ	0.0062	1) ಕಾಶಿನಾಥ ಈರಪ್ಪ ಕತ್ತಿಕಾಯಿ, 2) ಪಾರ್ವತೆವ್ವ ಅಂದಾನಯ್ಯ ಹುನಗುಂದಿಮಠ, ವೀರಭದ್ರಯ್ಯ ಅಂದಾನಯ್ಯ ಹುನಗುಂದಿಮಠ, ಸುವರ್ಣ ಶಿವಲಿಂಗಯ್ಯ ಲೂತಿಮಠ, ಲಲಿತಾ ಸಂಗಯ್ಯ ಹಿರೇಮಠ, ರತ್ನಾ ಸಂಗಯ್ಯ ಹಿರೇಮಠ, ಅನ್ನಪೂರ್ಣ ಆನಂದಯ್ಯ ಹಿರೇಮಠ, ಸಾವಿತ್ರಿ ಮಹಾಂತಯ್ಯ ಗೊಣ್ಣಗಾರಮಠ, ಸಂಗಯ್ಯ ಅಂದಾನಯ್ಯ ಹುನಗುಂದಿಮಠ, ದ್ರಾಕ್ಷಾಯಿಣಿ ಬಸಯ್ಯ ಪಾಟೀಲ್, ಪ್ರಭುರಾಜೇಂದ್ರಯ್ಯ ಅಂದಾನಯ್ಯ ಹುನಗುಂದಿಮಠ (122/1,122/2)
213	123	ಖಾಸಗಿ	ಖುಷ್ಕಿ	0.0043	ಪಾರ್ವತೆವ್ವ ಅಂದಾನಯ್ಯ ಹುನಗುಂದಿಮಠ, ವೀರಭದ್ರಯ್ಯ ಅಂದಾನಯ್ಯ ಹುನಗುಂದಿಮಠ, ಸುವರ್ಣ ಶಿವಲಿಂಗಯ್ಯ ಲೂತಿಮಠ, ಲಲಿತಾ ಸಂಗಯ್ಯ ಹಿರೇಮಠ, ರತ್ನಾ ಸಂಗಯ್ಯ ಹಿರೇಮಠ, ಅನ್ನಪೂರ್ಣ ಆನಂದಯ್ಯ ಹಿರೇಮಠ, ಸಾವಿತ್ರಿ ಮಹಾಂತಯ್ಯ ಗೊಣ್ಣಗಾರಮಠ, ಸಂಗಯ್ಯ ಅಂದಾನಯ್ಯ ಹುನಗುಂದಿಮಠ, ದ್ರಾಕ್ಷಾಯಿಣಿ ಬಸಯ್ಯಪಾಟೀಲ, ಪ್ರಭುರಾಜೇಂದ್ರಯ್ಯ ಅಂದಾನಯ್ಯ ಹುನಗುಂದಿಮಠ (123/1)
214	125	ಖಾಸಗಿ	ಖುಷ್ಕಿ	0.005917	ಅಧ್ಯಕ್ಷರು ಶಿವಶರಣೆ ಮುಕ್ತಾಯಮ್ಮ ಉರ್ಫ್ ಸುಶೀಲಾಬಾಯಿ ಶ್ರೀ ಗುರು ಬಸವೇಶ್ವರ ಮಠ ಬೇಲೂರು (125/1)
215	125	ಖಾಸಗಿ	ಖುಷ್ಕಿ	0.003913	ಅಣ್ಣವ್ವ ನೀಲಪ್ಪ ತಳವಾರ, ಮಲ್ಲವ್ವ ಶಾಸಪ್ಪ ತಳವಾರ, ಮಂಜವ್ವ ವಿಠ್ಠಲ ಕೊಲ್ಲಣ್ಣವರ, ಲಕ್ಷ್ಮವ್ವ ಪಾಂಡುರಂಗ ಪೂಜಾರ, ನೀಲವ್ವ ಮಂಜುನಾಥ ಗೌಡರ್, ಸುಮಂಗಲಾ ನೀಲಪ್ಪ ತಳವಾರ (125/5)
216	125	ಖಾಸಗಿ	ಖುಷ್ಕಿ	0.04866	ಜುಮ್ಮವ್ವ ಈರಪ್ಪ ತಳವಾರ, ರೇಣವ್ವ ಕೋನಪ್ಪ ತಳವಾರ, ಬಸವರಾಜ ಕೋನಪ್ಪ ತಳವಾರ, ನೀಲವ್ವ ಮಲಿಯಪ್ಪ ನಾಯ್ಕರ್, ನೇತ್ರಾ ಯಲ್ಲಪ್ಪ ಪಾಟೀಲ, ಸಂಗೀತಾ ಕೋನಪ್ಪ ತಳವಾರ–ಅ.ಪ. ತಾ ರೇಣವ್ವ, ರೇಣವ್ವ ರಾಮಚಂದ್ರಗೌಡ ಪಾಟೀಲ, ಹನಮವ್ವ ಸಂಜೀವಪ್ಪ ನಾಯ್ಕರ್ (125/6)
217	125	ಖಾಸಗಿ	ಖುಷ್ಕಿ	0.002089	ಭೀಮಪ್ಪ ದ್ಯಾವಪ್ಪ ತಳವಾರ (125/7)
218	125	ಖಾಸಗಿ	ಖುಷ್ಕಿ	0.001944	ಯಲ್ಲವ್ವ ಹನಮಪ್ಪ ತಳವಾರ (125/8)
219	126	ಖಾಸಗಿ	ಖುಷ್ಕಿ	0.214832	ಶಿವಾನಂದ ಶಂಕ್ರಪ್ಪ ರಾವುತರ್, ಬಸುರಾಜ್ ಶಂಕ್ರಪ್ಪ ರಾವುತರ್, ಶ್ರೀಶೈಲ್ ಶಂಕ್ರಪ್ಪ ರಾವುತರ್, ಈಶಪ್ಪಶಂಕ್ರಪ್ಪ ರಾವುತರ್,ಅಶೋಕ್ ಶಂಕ್ರಪ್ಪ ರಾವುತರ್ (ಭೂ.ಪ)(126/1ಎ)
220	126	ಖಾಸಗಿ	ಖುಷ್ಕಿ	0.115049	ರುದ್ರಗೌಡ ಪ್ರಭುಗೌಡ ಪಾಟೀಲ್, ಸುನಿಲ್ ಪ್ರಭುಗೌಡ ಪಾಟೀಲ್, ಉಮಾದೇವಿ ರವಿ ವಿಭೂತಿ (126/3)
221	130	ಖಾಸಗಿ	ಖುಷ್ಕಿ	0.188897	ಶಿವಾನಂದ ಶಂಕ್ರಪ್ಪ ರಾವುತರ್, ಬಸುರಾಜ್ ಶಂಕ್ರಪ್ಪ ರಾವುತರ್, ಶ್ರೀಶೈಲ್ ಶಂಕ್ರಪ್ಪ ರಾವುತರ್, ಈಶಪ್ಪ ಶಂಕ್ರಪ್ಪ ರಾವುತರ್,ಅಶೋಕ್ ಶಂಕ್ರಪ್ಪ ರಾವುತರ್ (ಭೂ.ಪ)(130/1)
222	130	ಖಾಸಗಿ	ಖುಷ್ಕಿ	0.051528	ಗಿರಿಜಾ ಶರಣಬಸಪ್ಪ ಕುಂದಗೋಳ, ಬಸವಪ್ರಭು ಶರಣಬಸಪ್ಪ ಕುಂದಗೋಳ, ಚೇತನ್ ಶರಣಬಸಪ್ಪ ಕುಂದಗೋಳ (130/2)
223	142	ಖಾಸಗಿ	ಖುಷ್ಕಿ	0.985698	ಬಸಯ್ಯ ವೀರಯ್ಯ ಮಠಪತಿ ಮತ್ತು ಇತರರು,2) ಈರಯ್ಯ ಉರ್ಫ್ ವೀರಣ್ಣ ಶಿವಯ್ಯ ಮಠಪತಿ,3) ಮಹಾದೇವಿ ಬಸಯ್ಯ ಮಠಪತಿ (142/1,142/2,142/3)
224	143	ಖಾಸಗಿ	ಖುಷ್ಕಿ	0.742759	ಗಿರಿಜಾ ಶರಣಬಸಪ್ಪ ಕುಂದಗೋಳ, ಚೇತನ್ ಶರಣಬಸಪ್ಪ ಕುಂದಗೋಳ, ಶಿವಲೀಲಾ ಬಸವಪ್ರಭು ಕುಂದಗೋಳ, ಆದ್ಯಬಸವಪ್ರಭು ಕುಂದಗೋಳ ಎ ಪಿಎ ತಾಯಿ ಶಿವಲೀಲಾ (143/*)
225	144	ಖಾಸಗಿ	ಖುಷ್ಕಿ	0.1423	ವಾದಿರಾಜ ರಾಘವೇಂದ್ರ ಕುಲಕರ್ಣಿ, ಕೃಷ್ಣ ರಾಘವೇಂದ್ರ ಕುಲಕರ್ಣಿ, ಹನಮಂತ ರಾಘವೇಂದ್ರ ಕುಲಕರ್ಣಿ, ರಂಗನಾಥ ರಾಘವೇಂದ್ರ ಕುಲಕರ್ಣಿ (144/*)
226	15	ಖಾಸಗಿ	ಖುಷ್ಕಿ	0.79653	ಮಾಗುಂಡಪ್ಪವೀರಪ್ಪ ಮುಚಿಗೇರ್ (15/1)
227	15	ಖಾಸಗಿ	ಖುಷ್ಕಿ	0.349802	ಸಂಗನ ಬಸಪ್ಪಹನಮಪ್ಪ ಮದಕಟ್ಟಿ, ಶಾಂತಪ್ಪ ಹನಮಪ್ಪ ಮದಕಟ್ಟಿ, ಸಂಗನಬಸಪ್ಪ ಹನಮಪ್ಪ ಮದಕಟ್ಟಿ ಭೂ.ಪ, ಶಾಂತಪ್ಪ ಹನಮಪ್ಪ ಮದಕಟ್ಟಿ ಭೂ.ಪ (15/2)
228	15	ಖಾಸಗಿ	ಖುಷ್ಕಿ	0.181051	ಶಿವಪುತ್ರಪ್ಪ ಹನಮಪ್ಪ ಮದಕಟ್ಟಿ, ಆನಂದಪ್ಪ ನಿಜಲಿಂಗಪ್ಪ ಮದಕಟ್ಟಿ (15/3)
229	15	ಖಾಸಗಿ	ಖುಷ್ಕಿ	0.126535	ಚನ್ನಬಸಪ್ಪ ಹನಮಪ್ಪ ಮದಕಟ್ಟಿ, ಹೊಳಿಯವ್ವ ಮಲ್ಲಪ್ಪ ಮದಕಟ್ಟಿ, ಶಂಕ್ರವ್ವ ಲಕ್ಷ್ಮಪ್ಪ ಕೋಳೂರು, ಕಳಸಪ್ಪ ಮಲ್ಲಪ್ಪ ಮದಕಟ್ಟಿ, ಷಣ್ಮುಖಪ್ಪ ಮಲ್ಲಪ್ಪ ಮದಕಟ್ಟಿ, ಲಕ್ಷ್ಮವ್ವ ಈರಪ್ಪ ಬಂಡಿ, ಈರವ್ವ ಬಸವಂತಪ್ಪ ನರೇಗಲ್, ಲಕ್ಷ್ಮವ್ವ ನಾಗಪ್ಪ ಕೋಳೂರು (15/4)
230	150	ಖಾಸಗಿ	ಖುಷ್ಕಿ	0.095085	ಶಿವನವ್ವ ಕನಕಪ್ಪ ಮಾದರ, ಪಾರವ್ವ ಪರಸಪ್ಪ ಪೂಜಾರ್, ರಾಘವೇಂದ್ರ ಪರಸಪ್ಪ ಪೂಜಾರ್, ಬಸಮ್ಮ ಚನ್ನಬಸಪ್ಪ ಮಾದರ, ಮಂಜುನಾಥ ಪರಸಪ್ಪ ಪೂಜಾರ್, ನವೀನಕುಮಾರ ಪರಸಪ್ಪ ಪೂಜಾರ್ (150/1)
231	150	ಖಾಸಗಿ	ಖುಷ್ಕಿ	0.005907	ದುರ್ಗವ್ವ ಬೇಲೂರಪ್ಪ ಮಾದರ, ಹನಮಪ್ಪ ಫಕೀರಪ್ಪ ಮಾದರ (150/2)
232	151	ಖಾಸಗಿ	ಖುಷ್ಕಿ	0.01905	ಫಕೀರಪ್ಪ ಲಕ್ಷ್ಮಪ್ಪ ಬಾರಕೇರ್ ಎಕುಮ್ಯ, ಜೀಜಾಬಾಯಿ ರಣದೇವ್ ಗಂಡ ಬಂಡುಬಾ (151/1)
233	151	ಖಾಸಗಿ	ಖುಷ್ಕಿ	0.249077	ಹನಮಪ್ಪ ನಾಗಪ್ಪ ಬಾರಕೇರ್ (151/2)
234	152	ಖಾಸಗಿ	ಖುಷ್ಕಿ	0.472053	ರೇಖಾಶೇಖರ ಗೌಡ ಪಾಟೀಲ್ (152/1)
235	152	ಖಾಸಗಿ	ಖುಷ್ಕಿ	0.381213	ನೀಲವ್ವ ಶಿವನಗೌಡ ಗಾಣಿಗೇರ್, ಶರಣಮ್ಮ ಲೋಕಪ್ಪ ವ್ಯಾಪಾರಿ, ಇಂದಿರಾ ಶಶಿಧರ ತೆಲ, ಹೊಳೆಬಸಪ್ಪ ಶಿವನಗೌಡ ಗಾಣಿಗೇರ್, ಗಿರೀಶ್ ಶಿವನಗೌಡ ಗಾಣಿಗೇರ್, ಗಿರಿಜಾ ರಮೇಶ್ ಗಾಣಿಗೇರ್, ಸುನಿಲ್ ರಮೇಶ ಗಾಣಿಗೇರ್, ನಾಗರಾಜ್ ರಮೇಶ್ ಗಾಣಿಗೇರ್, ಪ್ರವೀಣ್ ರಮೇಶ್ ಗಾಣಿಗೇರ್, ಸುವರ್ಣ ಉಮೇಶ ಗಾಣಿಗೇರ್, ಅನ್ನಪೂರ್ಣ ಉಮೇಶ್ ಗಾಣಿಗೇರ್, ಪ್ರಿಯಾ ಉಮೇಶ್ ಗಾಣಿಗೇರ್ (152/2ಎ)
236	152	ಖಾಸಗಿ	ಖುಷ್ಕಿ	0.006508	ನೀಲವ್ವ ಶಿವನಗೌಡ ಗಾಣಿಗೇರ್, ಶರಣಮ್ಮ ಲೋಕಪ್ಪ ವ್ಯಾಪಾರಿ, ಇಂದಿರಾ ಶಶಿಧರ ತೆಲ, ಹೊಳೆಬಸಪ್ಪ ಶಿವನಗೌಡ ಗಾಣಿಗೇರ್, ಗಿರೀಶ್ ಶಿವನಗೌಡ ಗಾಣಿಗೇರ್, ಗಿರಿಜಾ ರಮೇಶ್ ಗಾಣಿಗೇರ್, ಸುನಿಲ್ ರಮೇಶ ಗಾಣಿಗೇರ್, ನಾಗರಾಜ್ ರಮೇಶ್ ಗಾಣಿಗೇರ್, ಪ್ರವೀಣ್ ರಮೇಶ್ ಗಾಣಿಗೇರ್, ಸುವರ್ಣ ಉಮೇಶ್ಗಾಣಿಗೇರ್, ಅನ್ನಪೂರ್ಣ ಉಮೇಶ್ ಗಾಣಿಗೇರ್, ಪ್ರಿಯಾ ಉಮೇಶ್ ಗಾಣಿಗೇರ್ (152/2ಬಿ)
237	154	ಖಾಸಗಿ	ಖುಷ್ಕಿ	0.0056	ಶಿವಯ್ಯ ಶಿವಸಂಗಯ್ಯ ಶಿವಪ್ಪಯ್ಯನಮಠ (154/1)
238	155	ಖಾಸಗಿ	ಖುಷ್ಕಿ	0.263722	ದೇವಕ್ಕವ್ವ ನಿಂಗಪ್ಪ ಬಡಿಗೇರ್ (155/1)
239	155	ಖಾಸಗಿ	ಖುಷ್ಕಿ	0.08786	ಈರಪ್ಪ ವೀರಭದ್ರಪ್ಪ ಗಾಣಿಗೇರ್, ವೀರಭದ್ರಪ್ಪ ಅಂದಾನೆಪ್ಪ ಗಾಣಿಗೇರ್ (155/2)
240	155	ಖಾಸಗಿ	ಖುಷ್ಕಿ	0.120528	ಈರಪ್ಪ ವೀರಭದ್ರಪ್ಪ ಗಾಣಿಗೇರ, ವೀರಭದ್ರಪ್ಪ ಅಂದಾನೆಪ್ಪ ಗಾಣಿಗೇರ (155/4)
241	155	ಖಾಸಗಿ	ಖುಷ್ಕಿ	0.003162	ಸುಧಾ ಅರುಣಕುಮಾರ್ ಟೆಂಗಿನಕಾಯಿ (155ಎ/12)
242	155	ಖಾಸಗಿ	ಖುಷ್ಕಿ	0.004148	ಸುಧಾ ಅರುಣಕುಮಾರ್ ಟೆಂಗಿನಕಾಯಿ (155ಎ/13)
243	155	ಖಾಸಗಿ	ಖುಷ್ಕಿ	0.005588	ಸುಧಾ ಅರುಣಕುಮಾರ್ ಟೆಂಗಿನಕಾಯಿ (155ಎ/14)
244	155	ಖಾಸಗಿ	ಖುಷ್ಕಿ	0.010992	ಸುಧಾ ಅರುಣಕುಮಾರ್ ಟೆಂಗಿನಕಾಯಿ (155ಎ/15)
245	156	ಖಾಸಗಿ	ಖುಷ್ಕಿ	0.006551	ಈರಪ್ಪ ವೀರಭದ್ರಪ್ಪ ಗಾಣಿಗೇರ್, ವೀರಭದ್ರಪ್ಪ ಅಂದಾನೆಪ್ಪ ಗಾಣಿಗೇರ್ (156/4)
246	156	ಖಾಸಗಿ	ಖುಷ್ಕಿ	0.002071	ಪ್ರಕಾಶ ಪುಂಡಲೀಕಪ್ಪ ರಣದೇವ್ (156/4)
247	156	ಖಾಸಗಿ	ಖುಷ್ಕಿ	0.055582	ಹೂವಪ್ಪ ಶಿವಬಸಪ್ಪ ಮಾಡಲಗೇರಿ, ಬಸಪ್ಪ ಶಿವಬಸಪ್ಪ ಮಾಡಲಗೇರಿ (156/5)
248	16	ಖಾಸಗಿ	ಖುಷ್ಕಿ	0.0238	ರಾಮಪ್ಪ ಯಮನಪ್ಪ ಬಾರಕೇರ್, ಶರಣಪ್ಪ ಯಮನಪ್ಪ ಬಾರಕೇರ್ (16/*)
249	17	ಖಾಸಗಿ	ಖುಷ್ಕಿ	0.536316	ರಾಮಪ್ಪ ಯಮನಪ್ಪ ಬಾರಕೇರ್, ಶರಣಪ್ಪ ಯಮನಪ್ಪ ಬಾರಕೇರ್ (17/*)
250	186	ಖಾಸಗಿ	ಖುಷ್ಕಿ	0.010457	ವೀರಣ್ಣ ಶಿವಯ್ಯ ಮಠಪತಿ (186/1)
251	186	ಖಾಸಗಿ	ಖುಷ್ಕಿ	0.023701	ಮಹಾದೇವಿ ಬಸಯ್ಯ ಮಠಪತಿ, ಕವಿತಾ ವಿರೂಪಾಕ್ಷಯ್ಯ ಪೂಜಾರ್, ಈರಮ್ಮ ಶಿವಯೋಗಿ ಗುಡದವರ, ಸವಿತಾ ಬಸಯ್ಯ ಮಠಪತಿ, ಅಕ್ಷಯ್ ಬಸಯ್ಯ ಮಠಪತಿ (186/2)
252	186	ಖಾಸಗಿ	ಖುಷ್ಕಿ	0.002954	ಗಿರಿಜವ್ವ ಬಸವಂತ ಕುಂಬಾರ, ಈರಣ್ಣ ಬಸವಂತ ಕುಂಬಾರ (186/3)
253	186	ಖಾಸಗಿ	ಖುಷ್ಕಿ	0.02563	ಅನಿಲ ಕುಮಾರ್ ಶೆಟ್ಟರ್ (186/4)
254	186	ಖಾಸಗಿ	ಖುಷ್ಕಿ	0.007022	ಶರಣಪ್ಪ ಸಂಗಪ್ಪ ಚಾವಡಿ, ಗಂಗಾಧರ ಸಂಗಪ್ಪ ಚಾವಡಿ (186/5)
255	19	ಖಾಸಗಿ	ಖುಷ್ಕಿ	0.083698	ಶೇಖರಪ್ಪ ಮಾಗುಂಡಪ್ಪ ಮಿಟ್ಲಕೋಡ್ (19/1)
256	19	ಖಾಸಗಿ	ಖುಷ್ಕಿ	0.092507	ಮಹಮದರಫಿ ರಾಜೇಸಾಬ್ ನದಾಫ್, ಬಸವರಾಜ ಶಂಕ್ರಪ್ಪ ರಾಹುತರ್ (19/2)
257	19	ಖಾಸಗಿ	ಖುಷ್ಕಿ	0.153605	ಮಹಾದೇವಿ ಶಿವಕುಮಾರ ಕಂಟಿಮಠ (19/5) 19/5
258	20	ಖಾಸಗಿ	ಖುಷ್ಕಿ	0.081153	ಶೇಖರಪ್ಪ ಮಾಗುಂಡಪ್ಪ ಮಿಟ್ಲಕೋಡ್ (20/1)
259	20	ಖಾಸಗಿ	ಖುಷ್ಕಿ	0.004391	ಸುಮಂಗಲಾ ಶಿವಾನಂದ್ ದೊಡ್ಡನಿಂಗಪ್ಪನವರ್ (20/3)
260	20	ಖಾಸಗಿ	ಖುಷ್ಕಿ	0.086127	ಸುಮಂಗಲಾ ಶಿವನಾದ್ ದೊಡ್ಡನಿಂಗಪ್ಪನವರ್ (20ಎ/1)
261	20	ಖಾಸಗಿ	ಖುಷ್ಕಿ	0.000538	ಸುಮಂಗಲಾ ಶಿವನಾದ್ ದೊಡ್ಡನಿಂಗಪ್ಪನವರ್ (20ಎ/4)
262	20	ಖಾಸಗಿ	ಖುಷ್ಕಿ	0.00486	ಸುಮಂಗಲಾ ಶಿವಾನಂದ್ ದೊಡ್ಡನಿಂಗಪ್ಪನವರ್ (20ಎ/5)
263	20	ಖಾಸಗಿ	ಖುಷ್ಕಿ	0.009647	ಸುಮಂಗಲಾ ಶಿವನಾದ್ ದೊಡ್ಡನಿಂಗಪ್ಪನವರ್ (20ಎ/6)
264	20	ಖಾಸಗಿ	ಖುಷ್ಕಿ	0.000266	ಸುಮಂಗಲಾ ಶಿವನಾದ್ ದೊಡ್ಡನಿಂಗಪ್ಪನವರ್ (20ಎ/7)
265	20	ಖಾಸಗಿ	ಖುಷ್ಕಿ	0.01954	ಸುಮಂಗಲಾ ಶಿವನಾದ್ ದೊಡ್ಡನಿಂಗಪ್ಪನವರ್ (20ಎ/54)
266	20	ಖಾಸಗಿ	ಖುಷ್ಕಿ	0.042091	ಸುಮಂಗಲಾ ಶಿವನಾದ್ ದೊಡ್ಡನಿಂಗಪ್ಪನವರ್ (20ಎ/1) ಕಮರ್ಷಿಯಲ್
267	20	ಖಾಸಗಿ	ಖುಷ್ಕಿ	0.001062	ಸುಮಂಗಲಾ ಶಿವನಾದ್ ದೊಡ್ಡನಿಂಗಪ್ಪನವರ್ (20ಎ/2) ಕಮರ್ಷಿಯಲ್
268	6	ಖಾಸಗಿ	ಖುಷ್ಕಿ	0.601887	1) ಹೊನ್ನಪ್ಪ ಮುದಕವ್ವ ಮಾದರ, 2) ರಾಮಪ್ಪ ಯಲ್ಲಪ್ಪ ಕೋಟೆ, ರಾಮಪ್ಪ ಯಲ್ಲಪ್ಪ ಕೋಟೆ ಭೂ.ಪ, 3) ಮಂಗಳವ್ವ ಹನಮಪ್ಪ ಮಾದರ, 4) ಮರಿಯಪ್ಪ ದುರ್ಗಪ್ಪ ಮಾದರ, ಮರಿಯವ್ವ ಪಡಿಯಪ್ಪ ಮಾದರ, ಪರಸಪ್ಪ ಪಡಿಯಪ್ಪ ಮಾದರ, ಲಕ್ಷ್ಮವ್ವ ಕನಕಪ್ಪ ಮಾದರ, ರೋಣಪ್ಪ ಪಡಿಯಪ್ಪ ಮಾದರ, ಮಾಯವ್ವ ಮರಡಪ್ಪ ಮಾದರ, ದೇವಕ್ಕ ಶಿವಪುತ್ರಪ್ಪ ದೊಡಮನಿ, ರೇಣುಕಾ ಯಲ್ಲಪ್ಪ ಪೂಜಾರ, ಸುಸಲವ್ವ ಹನಮಪ್ಪ ಮಾದರ, ಮುತ್ತಪ್ಪ ಹನಮಪ್ಪ ಮಾದರ, ಮಲ್ಲಪ್ಪ ಹನಮಪ್ಪ ಮಾದರ, ಯಲ್ಲವ್ವ ಹನಮಪ್ಪ ಮಾದರ, ಮಾಯಪ್ಪ ಹಿರಿಯವ್ವ ಮಾದರ, ಭುವನೇಶ್ವರಿ ಹಿರಿಯವ್ವ ಮಾದರ, 5) ಅಧ್ಯಕ್ಷರು ಶ್ರೀ ಗುರು ನೀಲಕಂಠೇಶ್ವರದೇವಸ್ತಾನ ಸೇವಾ ಸಮತಿ ಜಾಲಿಹಾಳ (6/1,6/2,6/3,6/4,6/5,6/6,6/9,6/10)
269	6	ಖಾಸಗಿ	ಖುಷ್ಕಿ	0.001847	ರಾಮಪ್ಪ ಯಲ್ಲಪ್ಪ ಕೋಟೆ (6/7ಎ)
270	7	ಖಾಸಗಿ	ಖುಷ್ಕಿ	0.0207	ಸಂಗಯ್ಯ ಗುರಯ್ಯ ಚೌಕಿಮಠ (7/1)
271	7	ಖಾಸಗಿ	ಖುಷ್ಕಿ	0.197741	ಉಮಾಪತಿ ಚನ್ನಬಸಯ್ಯ ಚೌಕಿಮಠ, ಸಂಗಯ್ಯ ಚನ್ನಬಸಯ್ಯ ಚೌಕಿಮಠ, ವೀರಯ್ಯ ಚನ್ನಬಸಯ್ಯ ಚೌಕಿಮಠ, ಬಸವರಾಜ ಚನ್ನಬಸಯ್ಯ ಚೌಕಿಮಠ, ಅನ್ನಪೂರ್ಣ ಮಲ್ಲಿಕಾರ್ಜುನಯ್ಯ ಹಿರೇಮಠ, ಗಿರಿಜಾ ಕುಮಾರಸ್ವಾಮಿ ಅಗ್ಗಿಮಠ, ಅಕ್ಕಮಹಾದೇವಿ ನಾಗಭೂಷಣಸ್ವಾಮಿ ಚೌಕಿಮಠ, ವಿನೋದಕುಮಾರ ನಾಗಭೂಷಣಸ್ವಾಮಿ ಚೌಕಿಮಠ, ಸಂಗಮೇಶ ನಾಗಭೂಷಣಸ್ವಾಮಿ ಚೌಕಿಮಠ, ನೇತ್ರಾವತಿ ನಾಗಭೂಷಣಸ್ವಾಮಿ ಚೌಕಿಮಠ (7/3)
272	7	ಖಾಸಗಿ	ಖುಷ್ಕಿ	0.069935	ಉಮಾಪತಿ ಚನ್ನಬಸಯ್ಯ ಚೌಕಿಮಠ, ಸಂಗಯ್ಯ ಚನ್ನಬಸಯ್ಯ ಚೌಕಿಮಠ, ವೀರಯ್ಯ ಚನ್ನಬಸಯ್ಯ ಚೌಕಿಮಠ, ಬಸವರಾಜ ಚನ್ನಬಸಯ್ಯ ಚೌಕಿಮಠ, ಅನ್ನಪೂರ್ಣ ಮಲ್ಲಿಕಾರ್ಜುನಯ್ಯ ಹಿರೇಮಠ, ಗಿರಿಜಾ ಕುಮಾರಸ್ವಾಮಿ ಅಗ್ಗಿಮಠ, ಅಕ್ಕಮಹಾದೇವಿ ನಾಗಭೂಷಣಸ್ವಾಮಿ ಚೌಕಿಮಠ, ವಿನೋದಕುಮಾರ ನಾಗಭೂಷಣಸ್ವಾಮಿ ಚೌಕಿಮಠ, ಸಂಗಮೇಶ ನಾಗಭೂಷಣಸ್ವಾಮಿ ಚೌಕಿಮಠ, ನೇತ್ರಾವತಿ ನಾಗಭೂಷಣಸ್ವಾಮಿ ಚೌಕಿಮಠ (7/4)
273	7	ಖಾಸಗಿ	ಖುಷ್ಕಿ	0.193097	ಕಾಶಿಬಾಯಿ ಸಂಗಯ್ಯ ಚೌಕಿಮಠ, ಹರ್ಷಿತಾ ಉರ್ಫ್ ಶಕುಂತಲಾ ಅನ್ನದಾನಯ್ಯ ಚೌಕಿಮಠ (7/6)
274	7	ಖಾಸಗಿ	ಖುಷ್ಕಿ	0.153908	ಸೋಮಶೇಖರಯ್ಯ ಸಂಗಯ್ಯ ಚೌಕಿಮಠ, ಕಾಶಿಬಾಯಿ ಸಂಗಯ್ಯ ಚೌಕಿಮಠ, ಶೋಭಾ ನಿಂಗನಗೌಡ ಅಯ್ಯನಗೌಡ, ಲಲಿತಾ ಕಾಂತಯ್ಯ ರೇಣುಕಮಠ (7/7)
275	7	ಖಾಸಗಿ	ಖುಷ್ಕಿ	0.308983	ಮಲ್ಲಿಕಾರ್ಜುನ ಗುರಯ್ಯ ಚೌಕಿಮಠ (7/8)
276	7	ಖಾಸಗಿ	ಖುಷ್ಕಿ	0.094039	ಮುತ್ತಯ್ಯ ಗುರಯ್ಯ ಚೌಕಿಮಠ (7/9)
ತಾಲ್ಲೂಕ: ಬದಾಮಿ					ಗ್ರಾಮ: ನೆಲವಿಗಿ
277	1	ಖಾಸಗಿ	ಖುಷ್ಕಿ	0.04097	ಯಲ್ಲನಗೌಡ ಹನಮಗೌಡ ಗೌಡ್ರ (1/4)
278	1	ಖಾಸಗಿ	ಖುಷ್ಕಿ	0.028701	ಹನಮಪ್ಪ ಮರಿತಮ್ಮಪ್ಪ ಗಾರವಾಡ (1/9)
279	1	ಖಾಸಗಿ	ಖುಷ್ಕಿ	0.025303	ಈರಪ್ಪ ಮರಿತಮ್ಮಪ್ಪ ಗಾರವಾಡ (1/10)
280	1	ಖಾಸಗಿ	ಖುಷ್ಕಿ	0.028586	ಮಲ್ಲಪ್ಪ ಮರಿತಮ್ಮಪ್ಪ ಗಾರವಾಡ (1/2) 1/2
281	1	ಖಾಸಗಿ	ಖುಷ್ಕಿ	0.009215	ಚಂದ್ರಗೌಡ ಹನಮಗೌಡ ಗೌಡ್ರ (1/3) 1/3
282	1	ಖಾಸಗಿ	ಖುಷ್ಕಿ	0.036525	ಚನ್ನಪ್ಪ ಫಕೀರಪ್ಪ ಅಂಗಡಿ, ಮಲ್ಲಿಕಾರ್ಜುನ ಫಕೀರಪ್ಪ ಅಂಗಡಿ, ಸಿದ್ದಲಿಂಗಪ್ಪ ಫಕೀರಪ್ಪ ಅಂಗಡಿ, ವೀರಣ್ಣ ಫಕೀರಪ್ಪ ಅಂಗಡಿ, ಸಂಗಪ್ಪ ಫಕೀರಪ್ಪ ಅಂಗಡಿ, ಸುಭಾಷ್ ಫಕೀರಪ್ಪ ಅಂಗಡಿ (1/1)
283	10	ಖಾಸಗಿ	ಖುಷ್ಕಿ	0.0875	ಮಾಗುಂಡಪ್ಪ ಬಸಪ್ಪ ಹಡಪದ, ನಾದೆಪ್ಪ ಬಸಪ್ಪ ಹಡಪದ(10/1)
284	11	ಖಾಸಗಿ	ಖುಷ್ಕಿ	0.047737	ಬಸವ್ವ ಶಿವಯ್ಯ ಹಾಳಬಾವಿ (11/1)
285	11	ಖಾಸಗಿ	ಖುಷ್ಕಿ	0.026863	ಬಸವರಾಜ ರಾಮಯ್ಯ ಜಂಗಮರ, ಕಸ್ತೂರಿ ಮಲ್ಲಯ್ಯ ಬೂದಿಹಾಳಮಠ, ರಾಮಯ್ಯ ಮಲ್ಲಯ್ಯ ಜಂಗಮರ (11/2)
286	12	ಖಾಸಗಿ	ಖುಷ್ಕಿ	0.006395	ಮಾಗುಂಡಪ್ಪ ಯಲ್ಲಪ್ಪ ಮಡ್ಡಿ (12/2)
287	12	ಖಾಸಗಿ	ಖುಷ್ಕಿ	0.025405	ಲಕ್ಷ್ಮವ್ವ ದೇವೇಂದ್ರಪ್ಪ ಮಡ್ಡಿ, ಕಾಶಿನಾಥ ದೇವೇಂದ್ರಪ್ಪ ಮಡ್ಡಿ(12/1)
288	13	ಖಾಸಗಿ	ಖುಷ್ಕಿ	0.00957	ಸತ್ಯವ್ವ ರಂಗಪ್ಪ ಮಡ್ಡಿ, ಲಕ್ಷ್ಮವ್ವ ಬಸಪ್ಪ ದಾನಕಶಿರೂರ (13/2)
289	13	ಖಾಸಗಿ	ಖುಷ್ಕಿ	0.00593	ಮಾಗುಂಡಪ್ಪ ಯಲ್ಲಪ್ಪ ಮಡ್ಡಿ (13/1)
290	15	ಖಾಸಗಿ	ಖುಷ್ಕಿ	0.002	ಲಕ್ಷ್ಮವ್ವ ದೇವೇಂದ್ರಪ್ಪ ಮಡ್ಡಿ, ಕಾಶಿನಾಥ ದೇವೇಂದ್ರಪ್ಪ ಮಡ್ಡಿ(15/*)
291	16	ಖಾಸಗಿ	ಖುಷ್ಕಿ	0.0124	1) ಶಿವಬಸವ ಕಳಕಯ್ಯ ಜನಾಲಿ, ಬಸವ್ವ ಮಲಕಯ್ಯ ಭಾವಿಕಟ್ಟಿ, ಮಲ್ಲನಗೌಡ ಮಾಗುಂಡಗೌಡ ಜನಾಲಿ, ಬಸವ್ವ ಮಾಗುಂಡಗೌಡ ಜನಾಲಿ, ರಾಚಯ್ಯ ಸಿದ್ದಯ್ಯ ಗಣಾಚಾರಿ, ಮನಗೌಡ ರಾಚಯ್ಯ ಸರಗಣಾಚಾರಿ ಎ.ಪಿ.ತಂದೆ ರಾಚಯ್ಯ, ಮಹಾದೇವಿ ಕುಮಾರಯ್ಯ ಹಂಗರಗಿ (16/1), 2) ಮಾನನಗೌಡ ಮುನಿಯಪ್ಪಗೌಡ ಜನಾಲಿ (16/2)
292	17	ಖಾಸಗಿ	ಖುಷ್ಕಿ	0.0116	ರಮೇಶ ಭೀಮಪ್ಪ ಗಾರವಾಡ (17/1)
293	18	ಖಾಸಗಿ	ಖುಷ್ಕಿ	0.0436	ಪರಸಪ್ಪ ಗುರಪ್ಪ ಹಡಪದ, ಮಲ್ಲಿಕಾರ್ಜುನ ಗುರಪ್ಪ ಹಡಪದ, ಮಹಾದೇವಪ್ಪ ಗುರಪ್ಪ ಹಡಪದ, ಮುದಕವ್ವ ಹನಮಪ್ಪ ಹಡಪದ, ಸುರೇಶ ಹನಮಪ್ಪ ಹಡಪದ, ಮಂಜುನಾಥ ಹನಮಪ್ಪ ಹಡಪದ, ಚಂದ್ರಪ್ಪ ಹನಮಪ್ಪ ಹಡಪದ, ರಾಜು ಹನಮಪ್ಪ ಹಡಪದ, ಸುಜಾತಾ ಮಲ್ಲಪ್ಪ ಹಡಪದ, ಮಂಜವ್ವ ಹನಮಪ್ಪ ಹಡಪದ, ನಿರ್ಮಲಾ ಹನಮಪ್ಪ ಹಡಪದ, ಗುರಮ್ಮ ಹನಮಪ್ಪ ಹಡಪದ (18/1)
294	21	ಖಾಸಗಿ	ಖುಷ್ಕಿ	0.001678	ಬೈರೇಗೌಡ ಮುನಿಯಪ್ಪಗೌಡ ಉರ್ಫ್ ಮಾಗುಂಡಯ್ಯ ಜನಾಲಿ, ಶಿವವ್ವ ಮಲ್ಲಯ್ಯ ಭೂಸನೂರಮಠ (21/2)
295	21	ಖಾಸಗಿ	ಖುಷ್ಕಿ	0.022504	ವೀರಯ್ಯ ಬಸವಂತಯ್ಯ ಭಿಕ್ಷಾವತಿ, ಚನ್ನವ್ವ ರುದ್ರಗೌಡ ಕೋಟಿ, ಮಡಿವಾಳಯ್ಯ ಬಸವಂತಯ್ಯ ಭಿಕ್ಷಾವತಿ, ನಿಂಗಯ್ಯ ಬಸವಂತಯ್ಯ ಭಿಕ್ಷಾವತಿ(21/2)
296	25	ಖಾಸಗಿ	ಖುಷ್ಕಿ	0.00194	ಮಾಗುಂಡ ಪ್ಪಯಲ್ಲಪ್ಪ ಮಡ್ಡಿ (25/2)
297	25	ಖಾಸಗಿ	ಖುಷ್ಕಿ	0.00326	ಲಕ್ಷ್ಮವ್ವ ದೇವೇಂದ್ರಪ್ಪ ಮಡ್ಡಿ, ಕಾಶಿನಾಥ ದೇವೇಂದ್ರಪ್ಪ ಮಡ್ಡಿ(25/1)
298	8	ಖಾಸಗಿ	ಖುಷ್ಕಿ	0.1264	ವಿರೂಪಾಕ್ಷಪ್ಪ ರಾಚಪ್ಪ ಅಂಗದ (8/1)
299	94	ಖಾಸಗಿ	ಖುಷ್ಕಿ	0.113898	ಶಾಂತವ್ವ ಹೂವಪ್ಪ ಹತರಕಿ, ನಿಂಗವ್ವ ಚನ್ನಪ್ಪ ಮುಗನೂರ, ತಿರಕಪ್ಪ ಹೂವಪ್ಪ ಹತರಕಿ, ರೇಣವ್ವ ಯಲ್ಲಪ್ಪ ಯಕನಾಳ, ಕುಮಾರ ಹೂವಪ್ಪ ಹತರಕಿ (94/4)
300	94	ಖಾಸಗಿ	ಖುಷ್ಕಿ	0.015002	ಪರಸಪ್ಪ ಯಲ್ಲಪ್ಪ ಜೋಗಿನ್ (94/7)
301	96	ಖಾಸಗಿ	ಖುಷ್ಕಿ	0.126428	1) ಕಳಸನಗೌಡ ಸತ್ಯನಗೌಡ ಗೌಡ್ರ, 2) ಹೊನಗೌಡ ಸತ್ಯನಗೌಡ ಗೌಡ್ರ (96/2)
			ಒಟ್ಟು	35,913135	

[F.No. RW/NH/367/KNT/2022/3D 1]
ABHAY JAIN, Dy. Secy.

ಸಹಿ/–ಇಸ್ಮಾಯಿಲ್‌ಸಾಹೇಬ ಶಿರಹಟ್ಟಿ (ಕ.ಆ. ಸೇ)
ವಿಶೇಷ ಭೂ–ಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು
ರಾಷ್ಟ್ರೀಯ ಹೆದ್ದಾರಿಗಳು,ಮಿನಿ ವಿಧಾನಸೌಧ, ಧಾರವಾಡ – 580 001




❦ ಸುಭಾಷಿತ ❦

ಕೊಟ್ಟು ಕೆಟ್ಟವರಿಲ್ಲ, ತಿಂದು ಬದುಕಿದವರಿಲ್ಲ, ಕೊಟ್ಟು ಕದಿಯಲು ಬೇಡ, ಕೊಟ್ಟಾಡಿಕೊಳಬೇಡ...

–ಸರ್ವಜ್ಞ

ನ್ಯಾಯ ಸಂಹಿತೆ ಮಸೂದೆಗಳ ಅಂಗೀಕಾರಕ್ಕೆ ತರಾತುರಿ ಬೇಕಿರಲಿಲ್ಲ

ಈಗ ಅಸ್ತಿತ್ವದಲ್ಲಿ ಇರುವ ಅಪರಾಧ ಕಾನೂನುಗಳ ಬದಲಿಗೆ– ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಸಂಹಿತೆ ಎಂಬ ಮೂರು ಮಸೂದೆಗಳನ್ನು ಸಂಸತ್ತು ಅಂಗೀಕರಿಸಿದೆ. ಈಗ ಇರುವ ಕಾನೂನುಗಳು ನ್ಯಾಯಕ್ಕಿಂತ ಶಿಕ್ಷೆಗೆ ಹೆಚ್ಚು ಒತ್ತು ಕೊಡುವ ವಸಾಹತುಶಾಹಿ ಮನಃಸ್ಥಿತಿ ಹೊಂದಿವೆ ಎಂದು ಸರ್ಕಾರ ಹೇಳಿದೆ. ಹಾಗೆಯೇ, ಭಾರತೀಯ ಚಿಂತನಾ ಕ್ರಮದ ಆಧಾರದಲ್ಲಿ ನ್ಯಾಯ ವ್ಯವಸ್ಥೆಯನ್ನು ಈ ಸಂಹಿತೆಗಳು ಸ್ಥಾಪಿಸಲಿವೆ ಎಂದು ಸರ್ಕಾರ ಪ್ರತಿಪಾದಿಸಿದೆ. ವ್ಯಾಪಕ ಸಮಾಲೋಚನೆಯ ನಂತರ ಈ ಸಂಹಿತೆಗಳನ್ನು ಅಂತಿಮಗೊಳಿಸಲಾಗಿದೆ ಎಂದೂ ಸರ್ಕಾರ ಹೇಳಿದೆ. ಆದರೆ, ಈ ಎರಡೂ ಪ್ರತಿಪಾದನೆಗಳನ್ನು ಪರಿಶೀಲನೆಗೆ ಒಳಪಡಿಸಿದರೆ, ಅವುಗಳಲ್ಲಿ ಸತ್ಯಾಂಶವಿಲ್ಲ ಎಂಬುದು ತಿಳಿಯುತ್ತದೆ. ಪ್ರಕರಣಗಳನ್ನು ತ್ವರಿತವಾಗಿ ಮತ್ತು ಕಾಲಮಿತಿಯೊಳಗೆ ಇತ್ಯರ್ಥ ಮಾಡುವ ಅವಕಾಶ ಮಸೂದೆಗಳಲ್ಲಿ ಇದೆ. ಕೆಲವು ಪ್ರಕ್ರಿಯೆಗಳನ್ನು ಸರಳಗೊಳಿಸಲಾಗಿದೆ ಎಂಬುದೂ ನಿಜ. ಆದರೆ, ಈ ಸಂಹಿತೆಗಳು ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿವೆ. ಪೌರರ ಹಕ್ಕುಗಳನ್ನು ಮೊಟಕು ಮಾಡಿವೆ. ಈ ಮಸೂದೆಗಳನ್ನು ಪರಿಶೀಲನೆಗೆ ಒಳಪಡಿಸಿದ ಸಂಸತ್ ಸಮಿತಿಯು ತರಾತುರಿಯಲ್ಲಿ ಕೆಲಸ ಮುಗಿಸಿದೆ. ವಿರೋಧ ಪಕ್ಷಗಳ ಸದಸ್ಯರ ಅಭಿಪ್ರಾಯಗಳಿಗೆ ಕಿವಿಗೊಟ್ಟಿಲ್ಲ. ಸಮಿತಿಯು ಗುರುತಿಸಿದ್ದ ಕೆಲವು ಸಮಸ್ಯೆಗಳನ್ನು ಪರಿಹರಿಸಲಾಗಿಲ್ಲ. ಅಂತಿಮವಾಗಿ, ಅರೆಬೆಂದ ಮಸೂದೆಗಳನ್ನು ಸಂಸತ್ತು ಅನುಮೋದಿಸಿದೆ. ಅದೂ ವಿರೋಧ ಪಕ್ಷಗಳ ಬಹುಪಾಲು ಸದಸ್ಯರ ಅನುಪಸ್ಥಿತಿಯಲ್ಲಿ ಮಸೂದೆಗಳಿಗೆ ಅನುಮೋದನೆ ನೀಡಲಾಗಿದೆ.



ಈ ಮಸೂದೆಗಳು ಜನಕೇಂದ್ರಿತ ಎಂದು ಸರ್ಕಾರ ಹೇಳಿಕೊಂಡಿದೆಯಾದರೂ ಅವು ಈಗ ಇರುವ ಕಾನೂನುಗಳಿಗಿಂತಲೂ ಹೆಚ್ಚು ಸರ್ಕಾರಕೇಂದ್ರಿತವಾಗಿವೆ

ಹೊಸ ಮಸೂದೆಗಳು ಜನಕೇಂದ್ರಿತ ಎಂದು ಸರ್ಕಾರ ಹೇಳಿಕೊಂಡಿದೆ. ಆದರೆ, ಈ ಮಸೂದೆಗಳು ಈಗ ಇರುವ ಕಾನೂನುಗಳಿಗಿಂತಲೂ ಹೆಚ್ಚು ಸರ್ಕಾರಕೇಂದ್ರಿತವಾಗಿವೆ. ಹಾಗಾಗಿ, ನಿರ್ವಸಾಹತೀಕರಣದ ವಾದದಲ್ಲಿ ಹೆಚ್ಚಿನ ಹುರುಳು ಇಲ್ಲ. ಹಲವು ಅಪರಾಧಗಳ ವ್ಯಾಖ್ಯೆಗಳನ್ನು ಹೆಚ್ಚು ವಿಸ್ತಾರಗೊಳಿಸಲಾಗಿದೆ. ಸಾರ್ವಭೌಮತೆಗೆ ಧಕ್ಕೆ ಉಂಟು ಮಾಡುವಂತಹ ಕ್ರಮಗಳು, ಈ ಸಂಬಂಧ ಸುಳ್ಳು ಮಾಹಿತಿ ಹಂಚಿಕೆ, ಭಯೋತ್ಪಾದಕ ಕೃತ್ಯಗಳಂತಹ ಸಂಘಟಿತ ಅಪರಾಧಗಳ ಇತ್ಯರ್ಥಕ್ಕೆ ಹೆಚ್ಚು ವ್ಯಾಪಕವಾದ ಅವಕಾಶಗಳನ್ನು ಮಸೂದೆಗಳು ಹೊಂದಿವೆ. ಆದರೆ, ಪೊಲೀಸರ ಕೈಗೆ ಹೆಚ್ಚಿನ ಅಧಿಕಾರ ದೊರಕುವ ಕಾರಣ, ಜನರ ಹಕ್ಕುಗಳು ಮತ್ತು ಸ್ವಾತಂತ್ರ್ಯವು ಅಪಾಯಕ್ಕೆ ಸಿಲುಕಬಹುದು. ಈಗಿನ ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಇರುವುದಕ್ಕಿಂತ ಹೆಚ್ಚು ಅವಧಿಗೆ ಆರೋಪಿಗಳನ್ನು ಪೊಲೀಸ್ ಕಸ್ಟಡಿಯಲ್ಲಿ ಇರಿಸಲು ಹೊಸ ಮಸೂದೆಗಳು ಅವಕಾಶ ಕಲ್ಪಿಸುತ್ತವೆ. ಭಯೋತ್ಪಾದನಾ ಕೃತ್ಯಗಳಿಗೆ ಸಂಬಂಧಿಸಿ ಈಗಿನ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಇರುವುದಕ್ಕಿಂತ ಹೆಚ್ಚು ಅಧಿಕಾರವನ್ನು ಪೊಲೀಸರಿಗೆ ನೀಡಲಾಗಿದೆ. ಪ್ರಥಮ ಮಾಹಿತಿ ವರದಿಗೆ (ಎಫ್‌ಐಆರ್) ಸಂಬಂಧಿಸಿ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಪೊಲೀಸರಿಗೆ ನೀಡಲಾಗಿದೆ. ಆರೋಪಿಗಳಿಗೆ ಕೈಕೋಳ ತೊಡಿಸುವುದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಹಲವು ಪ್ರಕರಣಗಳಲ್ಲಿ ಹೇಳಿದೆ. ಹಾಗಿದ್ದರೂ ಆರ್ಥಿಕ ಅಪರಾಧಗಳು ಸೇರಿದಂತೆ ಹಲವು ಅಪರಾಧ ಕೃತ್ಯಗಳ ಆರೋಪ ಹೊತ್ತು ಬಂಧಿತರಾದವರಿಗೆ ಬೇಡಿ ತೊಡಿಸುವುದಕ್ಕೆ ಅವಕಾಶ ನೀಡಲಾಗಿದೆ.

ದೇಶದ್ರೋಹದ ಎಲ್ಲ ಪ್ರಕರಣಗಳಿಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಅಂತಹ ಪ್ರಕರಣ ದಾಖಲಿಸುವ ಅವಕಾಶವನ್ನೇ ತೆಗೆದುಹಾಕಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಆದರೆ ಇದು ಬೇರೊಂದು ರೂಪದಲ್ಲಿ ಬಂದಿದೆ. 'ರಾಜದ್ರೋಹ' ಎಂಬುದನ್ನು 'ದೇಶದ್ರೋಹ' ಎಂದು ಬದಲಿಸಲಾಗಿದೆ. ಗುಂಪು ಹಲ್ಲೆಯನ್ನು ಪ್ರತ್ಯೇಕ ಅಪರಾಧ ಎಂದು ಗುರುತಿಸಿ, ಮರಣದಂಡನೆ ವಿಧಿಸಲು ಅವಕಾಶ ಒದಗಿಸಲಾಗಿದೆ. ಮರಣದಂಡನೆಯನ್ನು ಹಲವು ದೇಶಗಳು ಈಗಾಗಲೇ ರದ್ದುಪಡಿಸಿವೆ. ಹಲವು ದೇಶಗಳು ಇಂತಹ ಚಿಂತನೆ ನಡೆಸುತ್ತಿವೆ. ಆದರೆ, ಹೊಸ ಮಸೂದೆಗಳಲ್ಲಿ ಹೆಚ್ಚಿನ ಅಪರಾಧಗಳನ್ನು ಮರಣದಂಡನೆ ವ್ಯಾಪ್ತಿಗೆ ಒಳಪಡಿಸಲಾಗಿದೆ. ಬಂಧನಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ರೂಪಿಸಿರುವ ಮಾರ್ಗಸೂಚಿಯನ್ನು ಮಸೂದೆಗಳಲ್ಲಿ ಸೇರಿಸಿಕೊಳ್ಳಲಾಗಿಲ್ಲ; ಮರಣದಂಡನೆಗೆ ಒಳಗಾದವರ ಪರವಾಗಿ ಮೂರನೆಯವರು ದಯಾ ಅರ್ಜಿ ಸಲ್ಲಿಸುವುದನ್ನು ನಿಷೇಧಿಸಲಾಗಿದೆ; ಜಾಮೀನು ನೀಡಿಕೆಯನ್ನು ಬಿಗಿಗೊಳಿಸಲಾಗಿದೆ. ಈ ಎಲ್ಲವೂ ಹೆಚ್ಚು ನಿರ್ಬಂಧಕಾರಿಯೇ ಆಗಿವೆ. ಈ ಮಸೂದೆಗಳು ದೇಶದ ನ್ಯಾಯ ವ್ಯವಸ್ಥೆಯನ್ನು ಹೆಚ್ಚು ಕಠಿಣಗೊಳಿಸಲಿವೆ. ವಿರೋಧ ಪಕ್ಷಗಳ ಭಾಗವಹಿಸುವಿಕೆ ಇಲ್ಲದೆ, ವ್ಯಾಪಕ ಸಮಾಲೋಚನೆ ಇಲ್ಲದೆ ಈ ಮಸೂದೆಗಳನ್ನು ತರಾತುರಿಯಲ್ಲಿ ಅನುಮೋದಿಸಬಾರದಿತ್ತು. ವಸಾಹತುಶಾಹಿ ಅಪರಾಧ ಕಾನೂನುಗಳ ಬದಲಾವಣೆಗಾಗಿ ದೇಶವು 75 ವರ್ಷ ಕಾದಿದೆ. ದೇಶದ ಅಪರಾಧ ನ್ಯಾಯ ವ್ಯವಸ್ಥೆಗೆ ಈ ಮಸೂದೆಗಳು ಮುಂದೆ ಕಾನೂನು ಆಗಿ ಆಧಾರಸ್ತಂಭಗಳು ಎನಿಸಲಿವೆ. ಅಂತಹ ಕಾನೂನುಗಳನ್ನು ರೂಪಿಸುವಾಗ ಹೆಚ್ಚಿನ ಸಹಮತ ಬೇಕಿತ್ತು.

ದಿನದ ಟ್ವೀಟ್

ಇದೆಂತಹ ಬೆಳವಣಿಗೆ?



ಯಾವುದೇ ಗಂಭೀರವಾದ ಮತ್ತು ಅರ್ಥಪೂರ್ಣವಾದ ಚರ್ಚೆಗಳಿಲ್ಲದೆ ಮೂರು ಮಸೂದೆಗಳನ್ನು ಸಂಸತ್ತು ಅಂಗೀಕರಿಸಿದೆ. ಇದಕ್ಕೆ ಮುನ್ನ ವಿರೋಧ ಪಕ್ಷಗಳ 141 ಸಂಸದರನ್ನು ಅಮಾನತು ಮಾಡಲಾಗಿತ್ತು. ಇದು ಪ್ರಜಾಪ್ರಭುತ್ವವೇ? ದೇಶ ಮತ್ತು ಅದರ ಭವಿಷ್ಯದ ದೃಷ್ಟಿಯಿಂದ ಇದು ಎಷ್ಟರಮಟ್ಟಿಗಿನ ಆರೋಗ್ಯಕರವಾದ ಬೆಳವಣಿಗೆ?

ರಿತು, ಸಾಮಾಜಿಕ ಹೋರಾಟಗಾರ್ತಿ

ಕಿಡಿನುಡಿ



ಭಾರತೀಯ ಕುಸ್ತಿ ಫೆಡರೇಷನ್‌ಗೆ ಸಂಜಯ್ ಸಿಂಗ್ ಅಧ್ಯಕ್ಷರಾಗಿರುವುದರಿಂದ ಮಹಿಳಾ ಕುಸ್ತಿಪಟುಗಳಿಗೆ ನ್ಯಾಯ ಸಿಗುತ್ತದೆ ಎಂಬ ನಂಬಿಕೆ ಇಲ್ಲ. ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಹಿಂಬಾಗಿಲಿನ ರಾಜಕೀಯ ನಡೆಯುತ್ತಲೇ ಇದೆ. ಕ್ರೀಡಾ ಸಚಿವರನ್ನು ಭೇಟಿ ಮಾಡಿ ದೌರ್ಜನ್ಯದ ಬಗ್ಗೆ ಮಾಹಿತಿ ನೀಡಿದಾಗ ನಮ್ಮೊಂದಿಗೆ 15-20 ಹೆಣ್ಣುಮಕ್ಕಳು ಇದ್ದರು. ಈಗ ಆ ಸಂಖ್ಯೆ ಆರಕ್ಕೆ ಕುಸಿದಿದೆ. ಆರೋಪದಿಂದ ಹಿಂದೆ ಸರಿಯುವಂತೆ ಅವರ ಮೇಲೆ ಒತ್ತಡ ಹೇರಲಾಗುತ್ತಿದೆ.

ಬಜರಂಗ್ ಪೂನಿಯಾ, ಕುಸ್ತಿಪಟು

25 ವರ್ಷಗಳ ಹಿಂದೆ

ಮಂಗಳವಾರ, 22-12-1998

● **ವಿವಾದ ಎಬ್ಬಿಸಿದ ಕಾವೇರಿ 4ನೇ ಹಂತದ ಗುತ್ತಿಗೆ**

ಬೆಂಗಳೂರು, ಡಿ. 21– ನಗರಕ್ಕೆ ಕುಡಿಯುವ ನೀರು ಪೂರೈಸಲು ರೂಪಿಸಿರುವ ಸುಮಾರು 1,600 ಕೋಟಿ ರೂಪಾಯಿ ಅಂದಾಜು ವೆಚ್ಚದ ಕಾವೇರಿ ನಾಲ್ಕನೇ ಹಂತದ (ಎರಡನೇ ಘಟ್ಟ) ಯೋಜನೆಯ ಕಾಮಗಾರಿಗಳ ಗುತ್ತಿಗೆಯನ್ನು ಮಲೇಷ್ಯಾದ ಸಂಸ್ಥೆಯೊಂದಕ್ಕೆ ನೀಡಲು ಸರ್ಕಾರದ ಉನ್ನತ ಸ್ಥಾನಗಳಲ್ಲಿರುವ ಕೆಲವರು ತೋರಿಸುತ್ತಿದ್ದಾರೆ ಎನ್ನಲಾದ 'ವಿಶೇಷ ಆಸಕ್ತಿ' ನಾನಾ ರೀತಿಯ ಗುಮಾನಿಗಳಿಗೆ ಎಡೆ ಮಾಡಿಕೊಟ್ಟಿದೆ.

ಯೋಜನೆಯ ಕಾಮಗಾರಿಗಳ ಗುತ್ತಿಗೆ ಪಡೆಯಲು ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲು ನೇಮಿಸಲಾಗಿದ್ದ ಪರಿಣತ ತಾಂತ್ರಿಕ ಸಂಸ್ಥೆ, ಯೋಜನೆಯನ್ನು ಅನುಷ್ಠಾನಗೊಳಿಸಲು ಮಲೇಷ್ಯಾ ಸಂಸ್ಥೆಗೆ ಇರುವ ಆರ್ಥಿಕ ಮತ್ತು ತಾಂತ್ರಿಕ ಸಾಮರ್ಥ್ಯವು ಟೆಂಡರ್‌ನಲ್ಲಿ ಭಾಗವಹಿಸಿರುವ ಇತರ ಸಂಸ್ಥೆಗಳಿಗಿಂತ ಕಡಿಮೆಯಿದೆ ಎಂದು ಸ್ಪಷ್ಟ ವರದಿ ನೀಡಿದೆ. ಆದರೂ ಉನ್ನತ ಅಧಿಕಾರ ಸ್ಥಾನಗಳಲ್ಲಿ ಇರುವ ಕೆಲವರು ಈ ಸಂಸ್ಥೆಗೇ ಕಾಮಗಾರಿಗಳ ಗುತ್ತಿಗೆ ನೀಡಲು ತೆರೆಮರೆಯಲ್ಲಿ ಸನ್ನಾಹ ನಡೆಸಿದ್ದಾರೆಂದು ತಿಳಿದುಬಂದಿದೆ.

50 ವರ್ಷಗಳ ಹಿಂದೆ

ಶನಿವಾರ, 22-12-1973

● **'ಕರಾವಳಿಯ ಚಿನ್ನ' ಶೀಗಡಿ ಮೀನು ಜಪಾನಿನಲ್ಲಿ ಅಪಾರ ಜನಪ್ರಿಯ**

ಬೆಂಗಳೂರು, ಡಿ. 21– ಕರ್ನಾಟಕ ಮತ್ಸ್ಯೋದ್ಯಮ ಅಭಿವೃದ್ಧಿ ಕಾರ್ಪೊರೇಷನ್‌ನ 'ವಿಶೇಷ ಬ್ರ್ಯಾಂಡ್' ಶೀಗಡಿ, ಜಪಾನಿನಲ್ಲಿ ಇದೀಗ ಅತ್ಯಂತ ಜನಪ್ರಿಯ ವಿದೇಶಿ ಮೀನು.

ಮಂಜಿನ ಶೀತದೊಳಗೆ ಘನೀಕರಿಸಿ, ಇಲ್ಲಿಂದ ರಫ್ತಾಗುವ ಶೀಗಡಿ, ವಿದೇಶಿ ವಿನಿಮಯದ ದೃಷ್ಟಿಯಿಂದ ಕರಾವಳಿಯ ಚಿನ್ನವೇ ಆಗಿದೆ.

ಕಳೆದ ವರ್ಷ ಕಾರ್ಪೊರೇಷನ್ ಸುಮಾರು 6 ಕೋಟಿ ರೂಪಾಯಿಗಳಷ್ಟು ಬೆಲೆಯ ಶೀಗಡಿಯನ್ನು ವಿದೇಶಗಳಿಗೆ ರಫ್ತು ಮಾಡಿತ್ತು. ಈ ಪೈಕಿ ಬಹುತೇಕ ಪ್ರಮಾಣ ಹೋದುದು ಜಪಾನಿಗೆ.

● **ಮಹಾಜನ್ ಶಿಫಾರಸು ಜಾರಿಗೆ ಸಂಸತ್ತಿನ ಕರ್ನಾಟಕ ಸದಸ್ಯರ ಆಗ್ರಹ**

ನವದೆಹಲಿ, ಡಿ. 21– ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದದಲ್ಲಿ ಮಹಾಜನ್ ಆಯೋಗದ ಶಿಫಾರಸುಗಳನ್ನು ಶೀಘ್ರವೇ ಅನುಷ್ಠಾನಕ್ಕೆ ತರಬೇಕೆಂದು ಇಂದು ಇಲ್ಲಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರಿಗೆ ಖುದ್ದಾಗಿ ಮನವಿ ಪತ್ರ ಸಲ್ಲಿಸಿ, ಕರ್ನಾಟಕದ ಹದಿನಾರು ಮಂದಿ ಕಾಂಗ್ರೆಸ್ ಸದಸ್ಯರು ಒತ್ತಾಯಪಡಿಸಿದರು.

ಮಹತ್ವದ ತಂತ್ರಜ್ಞಾನ 'ಯಾಂತ್ರಿಕ ಬುದ್ಧಿಮತ್ತೆ'ಗೆ ಪೆಟ್ಟು ನೀಡುವ ಪ್ರಯತ್ನ?

'ಯಾಂಬು'ಗೆ ಗಣಿತದ ಸವಾಲು



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಈ ಶತಮಾನದ ಅತ್ಯಂತ ಮಹತ್ವದ ತಂತ್ರಜ್ಞಾನ ಎಂದೇ ಬಿಂಬಿತವಾಗಿರುವ ಯಾಂತ್ರಿಕ ಬುದ್ಧಿಮತ್ತೆಗೆ (ಯಾಂಬು = A.I. ಅಂದರೆ Artificial Intelligence) ಇದೀಗ ಕಠಿಣ ಸವಾಲೊಂದು ಎದುರಾಗಿದೆ. ನಾವು ಕೇಳುವ ಪತ್ರ, ಪದ್ಯ, ಲೇಖನವನ್ನು ಬರೆದು, ಚಿತ್ರ ಬಿಡಿಸಿ, ಅದಾಗಲೇ ನಾವು ಮಾಡಿ ಮುಗಿಸಿರುವ ಕೆಲಸಗಳನ್ನು ಮತ್ತಷ್ಟು ಉತ್ತಮಗೊಳಿಸಿ, ಅತಿ ಕಡಿಮೆ ಸಮಯದಲ್ಲಿ ನಮಗೆ ಪೂರೈಸುತ್ತದೆ ಎಂಬ ಹೆಗ್ಗಳಿಕೆ ಯಾಂಬುಗೆ ಲಭಿಸಿ ವರ್ಷಗಳೇ ಆಗಿವೆ.

ಆದರೆ ಯಾಂಬುವಿನ ಈ ಹೆಗ್ಗಳಿಕೆಗೆ ಪೆಟ್ಟು ನೀಡುವ ಪ್ರಯತ್ನವೊಂದು ಗಣಿತದ ಸಮಸ್ಯೆಯ ರೂಪದಲ್ಲಿ ಪ್ರಕಟಗೊಂಡಿದೆ. ಯಾಂಬುಗೆ ಅದು ಗೊತ್ತು, ಇದು ಗೊತ್ತು, ನಮ್ಮ ಸಮಸ್ಯೆಗಳಿಗೆಲ್ಲಾ ಉತ್ತರ ನೀಡುತ್ತದೆ ಎಂದು ವಕಾಲತ್ತು ವಹಿಸುತ್ತಿದ್ದವರೆಲ್ಲ ಈಗ ಅದಕ್ಕೆ ಎದುರಾಗಿರುವ ಗಣಿತದ ಸಮಸ್ಯೆಯಿಂದ ಸ್ವಲ್ಪ ಮಟ್ಟಿಗೆ ಕಂಗಾಲಾಗಿದ್ದಾರೆ.

ಅಂತರರಾಷ್ಟ್ರೀಯ ಗಣಿತ ಒಲಿಂಪಿಯಾಡ್‌ನಲ್ಲಿ ನೀಡುವ ಲೆಕ್ಕಗಳನ್ನು ತಪ್ಪಿಲ್ಲದೆ ಬಿಡಿಸುವುದೇ ಯಾಂತ್ರಿಕ ಬುದ್ಧಿಮತ್ತೆಯ ಮುಂದಿರುವ ಕಠಿಣ ಸವಾಲು. ಬಹುಮಾನದ ಮೊತ್ತ 50 ಲಕ್ಷ ಅಮೆರಿಕನ್ ಡಾಲರ್. ಅಂದರೆ, ಬರೋಬ್ಬರಿ ₹ 42 ಕೋಟಿ! ಬೇರೆ ಬೇರೆ ಹಂತದವರೆಗಿನ ಪ್ರಶ್ನೆಗಳಿಗೆ ಉತ್ತರಿಸುವ ಯಾಂಬು ಮಾದರಿಗಳಿಗೆ ಪ್ರತ್ಯೇಕ 50 ಲಕ್ಷ ಡಾಲರ್ ಬಹುಮಾನಗಳಿದ್ದು, ಒಟ್ಟು ಬಹುಮಾನಗಳ ಮೊತ್ತ ₹ 100 ಕೋಟಿ ದಾಟುತ್ತದೆ. ಅಂಥದ್ದೊಂದು ಯಾಂಬು ತಯಾರಿಸುವ ವ್ಯಕ್ತಿ ಅಥವಾ ಸಂಸ್ಥೆಗೆ ಈ ಬಹುಮಾನ ಸಲ್ಲುತ್ತದೆ. ತಯಾರಿಸಲು ಉಳಿದಿರುವ ಸಮಯ ಬರೀ ಆರು ತಿಂಗಳು. ಬರುವ ವರ್ಷದ ಜನವರಿಯಲ್ಲಿ ನೋಂದಣಿ ಮಾಡಿಕೊಂಡು, ಜುಲೈನಲ್ಲಿ ನಡೆಯುವ ಪರೀಕ್ಷೆ ಎದುರಿಸಬೇಕು.

ವಿಶ್ವದ ಪ್ರಸಿದ್ಧ ಎಕ್ಸ್‌ಟಿಎಕ್ಸ್ ಅಲ್ಗೊರಿದಂ ಟ್ರೇಡಿಂಗ್ ಕಂಪನಿ ಈ ಸವಾಲನ್ನು ವಿಶ್ವದ ಮುಂದಿಟ್ಟಿದ್ದು, ಲಕ್ಷಾಂತರ ಡಾಲರ್ ಮೊತ್ತದ ಬಹುಮಾನವು ಗಣಿತ ತಜ್ಞರ ಹುಬ್ಬೇರಿಸಿದೆ. ಗಣಿತದಲ್ಲಿ ಪಿಎಚ್.ಡಿ ಪಡೆದಿರುವ ಎಕ್ಸ್‌ಟಿಎಕ್ಸ್ ಕಂಪನಿಯ ಮುಖ್ಯಸ್ಥ ಅಲೆಕ್ಸ್ ಗೆರ್ಕೊ, ಯಾಂತ್ರಿಕ ಬುದ್ಧಿಮತ್ತೆಯ ಕ್ಷಮತೆಯನ್ನು ಮತ್ತಷ್ಟು ಹೆಚ್ಚಿಸುವುದಷ್ಟೇ ಈ ಸವಾಲಿನ ಹಿಂದಿರುವ ಗುರಿ ಎಂದಿದ್ದಾರೆ.


ಯಾಂತ್ರಿಕ ಬುದ್ಧಿಮತ್ತೆಯನ್ನು ಆಧರಿಸಿದ ಯಾವುದೇ ಉತ್ಪನ್ನ 'ಟುರಿಂಗ್ ಟೆಸ್ಟ್' ಪಾಸಾಗಬೇಕು. ಯಂತ್ರವೊಂದು ಮನುಷ್ಯನಂತೆಯೇ ಯೋಜಿಸಿ ಉತ್ತರ ನೀಡಿ, ಸಮಸ್ಯೆ ಬಗೆಹರಿಸಿದರೆ ಮತ್ತು ಆ ಕೆಲಸ ಮಾಡಿದ್ದು ಯಂತ್ರವೋ ಮನುಷ್ಯನೋ ಎಂಬುದು ಗೊತ್ತಾಗದಂತಿದ್ದರೆ, ಆ ಯಂತ್ರವು ಟುರಿಂಗ್ ಟೆಸ್ಟ್ ಪಾಸಾಗಿದೆ ಎಂದರ್ಥ.

ಯಾಂತ್ರಿಕ ಬುದ್ಧಿಮತ್ತೆಯ ಬಗ್ಗೆ ಸುಮಾರು 70 ವರ್ಷಗಳ ಹಿಂದೆಯೇ ಯೋಚಿಸಿದ್ದ ಅಲನ್ ಟುರಿಂಗ್ ಎಂಬ ಕಂಪ್ಯೂಟರ್ ತಜ್ಞ, ಕೃತಕ ಬುದ್ಧಿಮತ್ತೆಯ ಸತ್ವಪರೀಕ್ಷೆಗೆ ಈ ಪರೀಕ್ಷೆ ಇಟ್ಟಿದ್ದ. ಸಮರ್ಥವಾಗಿ ಎದುರಿಸಿ ಗೆಲ್ಲುವ ಅಲ್ಗೊರಿದಂ (ಕಂಪ್ಯೂಟರ್ ಕ್ರಮಾವಳಿ) ಅನ್ನು ಕೃತಕ ಬುದ್ಧಿಮತ್ತೆ ಎಂದು ಕರೆಯಲಾಗಿತ್ತು. ಗಣಿತ ಒಲಿಂಪಿಯಾಡ್‌ನ ಸಮಸ್ಯೆ ಬಿಡಿಸುವುದೇ ಯಾಂಬುವಿನ ಹೊಸ ಟುರಿಂಗ್ ಟೆಸ್ಟ್ ಆಗಲಿದೆ ಎಂಬುದು ಗೆರ್ಕೊ ಅವರ ಅಭಿಪ್ರಾಯ.

ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಿಗಾಗಿ ಪ್ರತಿವರ್ಷ ನಡೆಯುವ, ವಿಶ್ವದ ಅತ್ಯಂತ ಪ್ರತಿಷ್ಠಿತ ಗಣಿತ ಪರೀಕ್ಷೆ ಎಂದೇ ಖ್ಯಾತಿಯುಳ್ಳ ಅಂತರರಾಷ್ಟ್ರೀಯ ಗಣಿತ ಒಲಿಂಪಿಯಾಡ್‌ನಲ್ಲಿ ಆರು ಪ್ರಶ್ನೆಗಳಿರುತ್ತವೆ. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಎರಡು ದಿನ ಕಾಲಾವಕಾಶ ಇರುತ್ತದೆ. ಪ್ರಶ್ನೆಗಳು ಬೀಜಗಣಿತ, ಎಣಿಕೆ ಮತ್ತು ಜೋಡಣೆ, ಕ್ರಿಯಾತ್ಮಕ ಸಮೀಕರಣ, ನಂಬರ್ ಥಿಯರಿ, ರೇಖಾಗಣಿತಕ್ಕೆ ಸಂಬಂಧಿಸಿರುತ್ತವೆ. ಆನ್ವಯಿಕ ಗಣಿತದ (ಅಪ್ಲೈಡ್ ಮ್ಯಾಥಮೆಟಿಕ್ಸ್) ಇಂಟೆಗ್ರೇಶನ್, ಡಿಫರೆನ್ಷಿಯೇಶನ್, ಸಂಖ್ಯಾಯತಗಳ ಕುರಿತು ಯಾವುದೇ ಪ್ರಶ್ನೆಗಳಿರುವುದಿಲ್ಲ. ಸಿದ್ಧ ಸೂತ್ರ ಬಳಸಿದಾಕ್ಷಣ ಪ್ರಶ್ನೆಗಳಿಗೆ ಉತ್ತರ ದೊರಕುವುದಿಲ್ಲ. ಸಿದ್ಧ ಮಾದರಿಯ ಉತ್ತರ ನೀಡಬೇಕೆಂಬ ಕಠಿಣ ನಿಯಮಗಳೂ ಅಲ್ಲಿಲ್ಲ. ಕೆಲವು ಉತ್ತರಗಳಂತೂ ಶುದ್ಧ ತರ್ಕವನ್ನು ಆಧರಿಸಿರುತ್ತವೆ.

ಮೊದಲ ಮೂರು ಪ್ರಶ್ನೆಗಳಿಗೆ ಮೊದಲ ದಿನ ಮತ್ತು ಉಳಿದ ಮೂರಕ್ಕೆ ಎರಡನೆಯ ದಿನ ಉತ್ತರಿಸಬೇಕು. ಪ್ರತಿ ಮೂರು ಪ್ರಶ್ನೆಗಳಿಗೆ ಉತ್ತರಿಸಲು ನಾಲ್ಕೂವರೆ ಗಂಟೆಗಳ ಸಮಯವಿರುತ್ತದೆ. ಉತ್ತರಗಳಿಗೆ ಕನಿಷ್ಠ ಸೊನ್ನೆ ಮತ್ತು ಗರಿಷ್ಠ 7 ಅಂಕ ನೀಡಲಾಗುತ್ತದೆ. ಆರು ಪ್ರಶ್ನೆಗಳಿಂದ ಒಟ್ಟು 31 ಅಂಕಗಳನ್ನು (ಒಂದು ಪ್ರಶ್ನೆಗೆ 5ಕ್ಕಿಂತ ಹೆಚ್ಚು ಅಂಕ) ಗಳಿಸುವ ವಿದ್ಯಾರ್ಥಿಗೆ ಬಂಗಾರದ ಪದಕ ನೀಡಲಾಗುತ್ತದೆ. 2020ರಲ್ಲಿ 105 ದೇಶಗಳ 616 ಅಭ್ಯರ್ಥಿಗಳ ಪೈಕಿ 49 ಜನ ಬಂಗಾರದ ಪದಕ ಪಡೆದಿದ್ದರು. ಒಬ್ಬ ವಿದ್ಯಾರ್ಥಿ ಮಾತ್ರ ಎಲ್ಲ 42 ಅಂಕ ಗಳಿಸಿದ್ದ.

ಪ್ರತಿವರ್ಷ ಬೇರೆ ಬೇರೆ ದೇಶದ ನೇತೃತ್ವದಲ್ಲಿ ನಡೆಯುವ ಈ ಪರೀಕ್ಷೆಯು 1959ರಲ್ಲಿ ರೊಮೇನಿಯಾದಲ್ಲಿ ಪ್ರಾರಂಭವಾಯಿತು. 2024ರ ಗಣಿತ ಒಲಿಂಪಿಯಾಡ್, ಗ್ರೇಟ್ ಬ್ರಿಟನ್‌ನ ಬಾತ್ ನಗರದಲ್ಲಿ ಜುಲೈ 16 ಮತ್ತು 17ರಂದು ನಡೆಯಲಿದೆ. ಹಿಂದಿನ ನಾಲ್ಕು ವರ್ಷಗಳಲ್ಲಿ ಚೀನಾದ ವಿದ್ಯಾರ್ಥಿಗಳು ಸತತವಾಗಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಅಮೆರಿಕ, ಕೊರಿಯಾ ಹಲವು ಸಲ ಪ್ರಥಮ ಮೂರು ಸ್ಥಾನಗಳನ್ನು ಗಳಿಸುವಲ್ಲಿ ಯಶಸ್ಸು ಕಂಡಿವೆ. ನಮ್ಮ ವಿದ್ಯಾರ್ಥಿಗಳು ಇದುವರೆಗೆ ಗಳಿಸಿರುವ ಅತ್ಯುತ್ತಮ ಸ್ಥಾನ ಏಳನೆಯದ್ದಾಗಿದೆ.



ಒಲಿಂಪಿಯಾಡ್‌ನ ಪ್ರಶ್ನೆಗಳಿಗೆ ಉತ್ತರಿಸಲು ಯಾಂಬುಗೆ 9 ಗಂಟೆಗಳ ಸಮಯಾವಕಾಶ ಇರುತ್ತದೆ. ಪ್ರಶ್ನೆಗಳನ್ನು ಬಿಡಿಸಲು ಯಾಂಬು ಬಳಸುವ ತಂತ್ರಜ್ಞಾನದ ಮಾದರಿಯು ಅದಾಗಲೇ ಮಾರುಕಟ್ಟೆಯಲ್ಲಿ ಲಭ್ಯವಿರುವಂತಹದ್ದಾಗಿರಬೇಕು. ಪ್ರಶ್ನೆಗಳಿಗೆ ಉತ್ತರಿಸುವಾಗ ಯಾಂಬು ಯಾವುದೇ ಕಾರಣಕ್ಕೂ ಇಂಟರ್ನೆಟ್ ಬಳಸಕೂಡದು ಎಂಬ ನಿಬಂಧನೆ ಇದೆ.

ಇಲ್ಲಿನ ಗಣಿತ ಸಮಸ್ಯೆ ಬಿಡಿಸಲು ವಿಶ್ವವಿದ್ಯಾಲಯದ ಪದವಿ ಇರಬೇಕಿಲ್ಲ, ಸಮಸ್ಯೆಯ ಬಗ್ಗೆ ಸ್ಪಷ್ಟ ತಿಳಿವಳಿಕೆ, ಅಸಂಗತ ಚಿಂತನಾಕ್ರಮ, ಇದೇ ಉತ್ತರ ಎಂಬುದಕ್ಕೆ ಒಂದಾದ ನಂತರ ಇನ್ನೊಂದು ಕಾರಣ ನೀಡುವ ಚಾಕಚಕ್ಯತೆ ಮತ್ತು ಸಮಸ್ಯೆಯ ಹೊರಗೆ ನಿಂತು ಉತ್ತರ ಕಂಡುಕೊಳ್ಳುವ (ಔಟ್ ಆಫ್ ದ ಬಾಕ್ಸ್ ಐಡಿಯಾ) ಆಲೋಚನೆಗಳಿದ್ದರೆ ಕೆಲಸ ಸುಲಭ ಎನ್ನುವ ಕಾರ್ನೆಗಿ ಮೆಲನ್ ವಿಶ್ವವಿದ್ಯಾಲಯದ ಗಣಿತ ಅಧ್ಯಾಪಕ ಪೊ- ಶೆನ್-ಲೊಹ್, ಯಾಂಬುವಿನ ಸಾಮರ್ಥ್ಯ ಪರೀಕ್ಷೆಗೆ ಇದಕ್ಕಿಂತ ದೊಡ್ಡ ಅವಕಾಶ ಮತ್ತೆ ಸಿಗಲಾರದು ಎಂದಿದ್ದಾರೆ. ಹದಿಮೂರನೆಯ ವಯಸ್ಸಿಗೆ ಒಲಿಂಪಿಯಾಡ್ ಚಿನ್ನದ ಪದಕ ಗೆದ್ದು ಈಗ ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾದಲ್ಲಿ ಗಣಿತದ ಪಾಠ ಮಾಡುವ ಟೆರೆನ್ಸ್ ತಾವ್, ಈ ಸವಾಲನ್ನು ಯಾಂಬು ಗೆದ್ದರೆ ಕೃತಕ ಬುದ್ಧಿಮತ್ತೆಯ ಸಾಮರ್ಥ್ಯ ಅಥವಾ ದೌರ್ಬಲ್ಯ ಎರಡೂ ತಿಳಿಯುವುದಲ್ಲದೆ, ಗಣಿತದ ಪ್ರಶ್ನೆಗಳ ಸ್ವರೂಪವೇ ಬದಲಾಗುತ್ತದೆ ಎಂದಿದ್ದಾರೆ. ಲೆಕ್ಕ ಮಾಡುವ ಮನುಷ್ಯನ ಬುದ್ಧಿವಂತಿಕೆಯನ್ನು ತೀಕ್ಷ್ಣವಾಗಿ ಪರೀಕ್ಷಿಸುವ ಈ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಉತ್ತರಿಸುವುದೇ ದೊಡ್ಡ ಸಾಧನೆ ಎಂಬ ಮಾತಿದೆ.

ಈಗಾಗಲೇ ಪುಸ್ತಕಗಳಲ್ಲಿರುವ ಪ್ರಶ್ನೆಗಳನ್ನು ಯಾಂಬು ಸರಿಯಾಗಿ ಬಿಡಿಸುತ್ತದೆ. ಆದರೆ ಹೊಸ ಹೊಸ ದತ್ತಾಂಶ ಮತ್ತು ಸಂಕೀರ್ಣವಾಗಿರುವ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ಅದಕ್ಕೆ ಸಾಧ್ಯವಾಗುತ್ತಿಲ್ಲ. ಅಂದರೆ ಮನುಷ್ಯನ ಮನಸ್ಸು, ಬುದ್ಧಿಯು ಯೋಚಿಸುವ ಅನೂಹ್ಯ ಮಾದರಿ ಅದಕ್ಕಿನ್ನೂ ದಕ್ಕಿಲ್ಲ. ವಿಶ್ವದ ಯಾವುದೇ ವ್ಯಕ್ತಿ ಸೃಜಿಸಿರುವ ಯಾಂಬುವಿನಿಂದ ಒಲಿಂಪಿಯಾಡ್‌ನ ಆರೂ ಸಮಸ್ಯೆಗಳು ಬಗೆಹರಿದರೆ, ಅದು ಯಾಂತ್ರಿಕ ಬುದ್ಧಿಮತ್ತೆಯ ಅತ್ಯುತ್ಕೃಷ್ಟ ಶಕ್ತಿಯನ್ನು ಇಡೀ ಜಗತ್ತಿಗೆ ಪರಿಚಯಿಸುತ್ತದೆ ಎನ್ನುವ ಅಲೆಕ್ಸ್ ಗೆರ್ಕೊ, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ (ಎಸ್‌ಟಿಇಎಂ) ವಿಷಯಗಳ ಬೆಳವಣಿಗೆಗೆ ಭಾರಿ ಧನಸಹಾಯ ಮಾಡುತ್ತಿದ್ದಾರೆ.

ಇಂಥ ಸವಾಲು ಮುನ್ನೆಲೆಗೆ ಬಂದಿರುವುದು ಇದೇ ಮೊದಲೇನಲ್ಲ. 2019ರಲ್ಲೂ ಇದೇ ಪ್ರಶ್ನೆಯನ್ನು ಗೆರ್ಕೊ ಜಗತ್ತಿನ ಮುಂದಿರಿಸಿದ್ದರು. ಆಗಿನ್ನೂ ಚಾಟ್ ಜಿಪಿಟಿ ಚಾಲ್ತಿಗೆ ಬಂದಿರಲಿಲ್ಲ. ಮಾರುಕಟ್ಟೆಯಲ್ಲಿರುವ ಚಾಟ್ ಜಿಪಿಟಿ– 4, ಮೆಸಾಚುಸೆಟ್ಸ್ ವಿಶ್ವವಿದ್ಯಾಲಯದ ಎಲೆಕ್ಟ್ರಿಕಲ್ ಮತ್ತು ಕಂಪ್ಯೂಟರ್ ಎಂಜಿನಿಯರಿಂಗ್ ಪದವಿ ವಿಭಾಗದ ಪ್ರಶ್ನೆಗಳಿಗೆ ತಪ್ಪಿಲ್ಲದೇ ಉತ್ತರ ನೀಡಿರುವುದು ಇತ್ತೀಚೆಗಷ್ಟೇ ವರದಿಯಾಗಿದೆ. ಗಣಿತ ಒಲಿಂಪಿಯಾಡ್‌ನ ಪ್ರಶ್ನೆಗಳನ್ನು ಯಾಂಬು ಸರಿಯಾಗಿ ಉತ್ತರಿಸಬಲ್ಲದೇ ಎಂಬುದನ್ನು ಕಾದು ನೋಡಬೇಕು.

ಚುರುಮುರಿ



ಅದೂ... ಅದೂ...

● ಬಿ.ಎನ್.ಮಲ್ಲೇಶ್

'ಮಹಾಮಾರಿ, ಮಹಾಸೋಂಕು... ಇವೆಲ್ಲ ಮತ್ತೆ ಚಾಲೂ ಆದ್ವು ನೋಡು ಮಾಧ್ಯಮದಾಗೆ' ಎಂದೆ ಮಡದಿ ಕೊಟ್ಟ ಕಾಫಿ ಕುಡಿಯುತ್ತ.

'ಹೋದ್ಯಾ ಪಿಶಾಚಿ ಅಂದ್ರೆ ಇದೇನ್ರಿ ಮತ್ ಬಂತಲ್ಲ. ಮತ್ತೆ ಮಾಸ್ಕು, ಮಣ್ಣು ಮಸಿ ತೆಲಿನೋವು'.

'ಕೊರೊನಾ ಸೋಂಕಿನ ಈ ಹೊಸ ಉಪತಳಿ ಡೀಸೆಂಟಂತೆ ಬಿಡು, ಹೆಸರು ನೋಡು ಜೆಎನ್.1 ಅಂತೆ. ಸರಿಗಮಪ ಸೀಸನ್ ಒನ್ ಟೂ ತ್ರೀ ತರ. ಆದ್ರೆ ಹಿಂದೆ ಬಂದಿತ್ತಲ್ಲ ಕೊರೊನಾ, ಅದು ನಿನ್ ತರ, ಡೈರೆಕ್ಟ್ ಅಟ್ಯಾಕ್!'

'ಏನು, ನನ್ ತರಾನ? ಹೆಂಗೈತಿ ಮೈಯಾಗೆ? ನೀವು ಟಿ.ವಿ ಬಿಟ್ಟು ಪೇಪರ್ ಓದಿ. ನಮ್ ಸಿದ್ರಾಮಣ್ಣ ನೋಡಿ, ಮೋದಿ ಸಾಹೆಬ್ರತ್ರ ಹೆಂಗ್ ನಗ್ತಾ ನಗ್ತ ಮಾತಾಡ್ತದಾರೆ. ಒಳ್ಳೆ ಸುದ್ದಿ ಓದೋದು ಆರೋಗ್ಯಕ್ಕೆ ಒಳ್ಳೇದು'.

'ಅಲ್ಲ ಮೋದಿ ಸಾಹೆಬ್ರು ನಿಮ್ ಡಿಸಿಎಂ ಡಿ.ಕೆ.ಶಿವಕುಮಾರ್ ಹೆಂಗದಾರೆ ಅಂತಾನೂ ವಿಚಾರಿಸಿದ್ರಂತೆ. ಅದೇನು ಅಷ್ಟ್ ಪ್ರೀತಿ ಅವರ ಮೇಲೆ?'

'ಅದೂ... ಏನೋಪ್ಪ ನಂಗೇನ್ರಿ ಗೊತ್ತು?'

'ಈ ಅದೂ... ಅನ್ನೋ ರಾಗ ಇದೆಯಲ್ಲ, ಅದ್ನ ಕೇಳಿದ್ರೆ ನಂಗಾಗಲ್ಲ ನೋಡು. ಅದ್ರಲ್ಲಿ ಎಂತೆಂಥ ಸುಳ್ಳುಗಳು, ಕತೆಗಳು ಅಡಗಿರ್ತಾವಂದ್ರೆ... ನೀನು ನೋಡ್ತಿರ್ತೀಯಲ್ಲ ಟಿ.ವಿ ಧಾರಾವಾಹಿಗಳು, ಅವೆಲ್ಲವೂ ಈ 'ಅದೂ...' ಅನ್ನೋದ್ರ ಮೇಲೆ ನಿಂತಿರ್ತಾವೆ ನೋಡು'.

'ನೀವೂ ಅಷ್ಟೆ, ರಾತ್ರಿ ಯಾಕ್ ಲೇಟು ಅಂದ್ರೆ 'ಅದೂ...' ಅಂತ ರಾಗ ತೆಗೀತೀರಿ. ಹಬ್ಬಕ್ಕೆ ಸೀರಿ ಕೊಡ್ಸಿ ಅಂದ್ರೆ 'ಅದೂ...' ಅಂತ ಏನೇನೋ ಕತಿ ಹೇಳ್ತೀರಿ. ಹೋಟೆಲ್‌ಗೆ ಊಟಕ್ಕೆ ಕರ್ಕೊಂಡು ಹೋಗ್ರಿ ಅಂದ್ರೆ 'ಅದೂ...' ಅಂತ ಏನೇನೋ ಹೇಳಿ ತಪ್ಪಿಸ್ಕಂತೀರಿ. ಹೌದು ತಾನೆ?'

'ಮಾತಿಗೆ ಮಾತು ಕೊಡೋದ್ರಲ್ಲಿ ನಿನ್ನ ಮೀಸೋರಿಲ್ಲ ಬಿಡು. ಅದಿರ್ಲಿ, ರಾತ್ರಿ ನನ್ ಶರ್ಟ್ ಜೇಬಿನಾಗಿದ್ದ ರೊಕ್ಕದಲ್ಲಿ ಸಾವಿರ ರೂಪಾಯಿ ಕಮ್ಮಿಯಾಗೇತಿ, ನೀನು ತಗಂಡ್ಯಾ?'

'ಅದೂ...'

ಸಂಗತ

ಭ್ರಷ್ಟಾಚಾರದ ಸೋಂಕಿಗೆ ಬೇಕಿದೆ ಮದ್ದು

ಅಧಿಕಾರದ ಬಲದಲ್ಲಿ ನಡೆಸುವ ಎಲ್ಲ ಬಗೆಯ ಅಕ್ರಮಗಳಿಗೂ ಚುನಾವಣಾ ವ್ಯವಸ್ಥೆಯ ಸುಧಾರಣೆಯಿಂದಷ್ಟೇ ತಕ್ಕಮಟ್ಟಿಗೆ ಪರಿಹಾರ ಸಿಕ್ಕೀತು

● ಸತೀಶ್ ಜಿ.ಕೆ. ತೀರ್ಥಹಳ್ಳಿ

ಭ್ರಷ್ಟಾಚಾರ ವಿರೋಧಿ ದಿನವನ್ನು ಇತ್ತೀಚೆಗಷ್ಟೇ ಜಾಗತಿಕವಾಗಿ ಆಚರಿಸಿದ್ದೇವೆ. ಈ ವರ್ಷದ ಘೋಷವಾಕ್ಯ 'ಭ್ರಷ್ಟಾಚಾರದ ವಿರುದ್ಧ ವಿಶ್ವವನ್ನು ಒಗ್ಗೂಡಿಸುವುದು' ಎಂದಾಗಿದೆ. ಆಚರಣೆಗಿಂತ ಆತ್ಮಾವಲೋಕನ ಮತ್ತು ಕನಿಷ್ಠ ಮಟ್ಟದಲ್ಲಾದರೂ ಅನುಷ್ಠಾನಕ್ಕೆ ಮುಂದಾಗುವ ಮೂಲಕ ಮೊದಲ ಹೆಜ್ಜೆ ಇಡಬೇಕೆಂದು ಗಣ್ಯರು ಕರೆ ನೀಡಿದ್ದೂ ಆಯಿತು. ಆದರೆ, ಭ್ರಷ್ಟಾಚಾರ ನಿರ್ಮೂಲನೆಯ ಸಾಧ್ಯಮಾರ್ಗಗಳ ಸುಳಿವು ಸಿಗದೆ, ಯಥಾಪ್ರಕಾರ ಆಚರಣೆಗಷ್ಟೇ ಅದು ಸೀಮಿತಗೊಂಡಿತು.

ಸರ್ವವ್ಯಾಪಿಯಾಗಿರುವ ಭ್ರಷ್ಟಾಚಾರದ ಬೇರನ್ನು ಕಿತ್ತೊಗೆಯುವುದೇನೂ ಸಲೀಸಲ್ಲ. ಅದರ ಆಳ-ಅಗಲ, ಹರವು-ವಿಸ್ತಾರಗಳೆಲ್ಲ ಅಂಕೆಗೂ ನಿಲುಕದಂತಹವು. ಅದೀಗ ಮನುಷ್ಯನ ಮೂಲಗುಣವಾಗಿಬಿಡುವ ಅಪಾಯವೂ ಇದೆ. ಲಂಚ, ಭ್ರಷ್ಟಾಚಾರ, ವಂಚನೆ ಬಗೆಗಿನ ಸಾರ್ವಜನಿಕ ಲಜ್ಜೆಯು ಕ್ರಮೇಣ ಮಾಯವಾಗಿ, ಈಗ ಸಾಮಾನ್ಯ ವಿದ್ಯಮಾನದಂತಾಗಿದೆ. ಭ್ರಷ್ಟಾಚಾರದ ನಂಜು ಗ್ಯಾಂಗ್ರಿನ್‌ನಂತೆ ಹಬ್ಬಿ, ಸಮಾಜದ ಹಲವು ಅವಯವ ಗಳನ್ನು ಕೊಳೆಸುತ್ತದೆ. ಎಲ್ಲ ಸಮಾಜಘಟಕಗಳಿಗೂ ಆ ಬಗ್ಗೆ ಅರಿವಿದೆಯಾದರೂ ಚಿಕಿತ್ಸಕ ವೈದ್ಯರು ಯಾರು ಎಂಬುದಷ್ಟೇ ಯಕ್ಷಪ್ರಶ್ನೆ.


ಜನಸೇವೆಗೆಂದೇ ನೇಮಿಸಿದ ಸರ್ಕಾರಿ ನೌಕರರಲ್ಲಿ ಕೆಲವರು ತಾವು ಮಾಡಲೇಬೇಕಾದ ಪ್ರತಿ ಕೆಲಸಕ್ಕೂ ಇಷ್ಟಿಷ್ಟು ಎಂದು ದರ ನಿಗದಿಗೊಳಿಸಿ ಸಾರ್ವಜನಿಕರನ್ನು ಕಾಡುತ್ತಲೇ ಇದ್ದಾರೆ. ಹಿಂದೊಮ್ಮೆ 'ಕಚೇರಿಯೆದುರು ಲಂಚದ ದರಪಟ್ಟಿ ಹಾಕಿಬಿಡಿ' ಅನ್ನುವ ಕೂಗೂ ಎದ್ದಿತ್ತು. ಹಾಗಾದಾಗಲೂ ಕೆಲವು ಸಮಯ ಸರಿದ ಮೇಲೆ ಅದೂ ಸಾಮಾನ್ಯ ಎಂಬಂತಾಗಿ, ಲಂಚದ ದರದ ಮೇಲಷ್ಟು ಲಂಚ ಬೇಡುವ ದಿನಗಳೂ ಬಂದುಬಿಡಬಹುದು ಎಂಬ ಆತಂಕ ಕೆಲವರಿಗೆ ಬಂತು!

ಎಲ್ಲ ಕಾಲದಲ್ಲೂ ಹಣಕ್ಕೆ ಪ್ರಾಶಸ್ತ್ಯ ಇತ್ತಾದರೂ ಹಿಂದೆಲ್ಲಾ ಅದು ನಿಯತ್ತಿನ ದುಡಿಮೆ ಹಾಗೂ ಸಾತ್ವಿಕ ಬದುಕಿನ ಇತಿಮಿತಿಯಲ್ಲಿ ಇರುತ್ತಿತ್ತು. ದುಡ್ಡಿದ್ದ ಕೆಲವರದು ಮಾತ್ರ ದೌಲತ್ತು, ಧಾರ್ಷ್ಟ್ಯ, ದರ್ಪ, ದೌರ್ಜನ್ಯದ ಬದುಕು. ಆದರೆ ಇಂದು ಎಲ್ಲರೂ ದುಡ್ಡಿನ ಹಿಂದೆ ಹೊರಟವರೇ. ಉದಾತ್ತ ನಿಲುವು ಮತ್ತು ಪ್ರೌಢಿಮೆಯನ್ನು ಮೆರೆಯಬೇಕಾದ ಹಿರಿಯರನೇಕರ ಬಾಯಲ್ಲೂ ಭ್ರಷ್ಟರ ಗುಣಗಾನ. ಧನದಾಹ, ಅಧಿಕಾರದ ಜಪ ಮತ್ತು ಜಾತಿಧರ್ಮಗಳ ಕುರಿತ ಅಂಧಾಭಿಮಾನದ ನಿಲುವುಗಳು ಹೊಸ ತಲೆಮಾರುಗಳ ದಿಕ್ಕು ತಪ್ಪಿಸುತ್ತಿವೆ. ಹಳ್ಳಿಮನೆಯಲ್ಲೊಬ್ಬರು 'ಈ ಸಲ ವೋಟಿಗೆ ಸಾವಿರ ಇಡದೇ ಹೋದರೆ ನಾವ್ಯಾರೂ ಮತಗಟ್ಟೆಗೆ ಹೆಜ್ಜೆ ಇಡಲ್ಲ!' ಅಂದಿದ್ದನ್ನು ನೆನೆದರೆ ನಾಳೆಗಳ ಬಗ್ಗೆ ದಿಗಿಲಾಗುತ್ತದೆ. ಸಮಾಜ ನೆಮ್ಮದಿ ಕಳೆದುಕೊಂಡಿದೆ.

ಈಗೆಲ್ಲಾ ಪಂಚಾಯಿತಿ ಚುನಾವಣೆ ಗೆಲ್ಲುತ್ತಲೇ ಕಮಿಷನ್, ಪರ್ಸೆಂಟೇಜ್ ಬಗ್ಗೆ ಮಾತನಾಡುವ ಅರೆಬರೆ ಅಕ್ಷರಸ್ಥ ಹಳ್ಳಿಗರು ಬಹಳ. ಅಲ್ಲೂ ಈಗ ಗೆದ್ದುಬರಬೇಕೆಂದರೆ ಮನೆಗಿಷ್ಟು, ವೋಟಿಗಿಷ್ಟು ನೋಟು ಎಂದು ಲಕ್ಷಲಕ್ಷ ಚೆಲ್ಲಬೇಕಿದೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿನ ಭ್ರಷ್ಟಾಚಾರದ ತಾಯಿಬೇರು ಚುನಾವಣಾ ವ್ಯವಸ್ಥೆ. ಹಣ ಚೆಲ್ಲಿ ಚುನಾವಣೆ ಗೆದ್ದು ಅಧಿಕಾರದ ಬಲದಲ್ಲಿ ನಡೆಸುವ ಎಲ್ಲ ಬಗೆಯ ಅಕ್ರಮಗಳಿಗೂ ಚುನಾವಣಾ ವ್ಯವಸ್ಥೆಯ ಸುಧಾರಣೆಯಿಂದಷ್ಟೇ ತಕ್ಕಮಟ್ಟಿಗೆ ಪರಿಹಾರ ಸಿಕ್ಕೀತು.

ಎಲ್ಲ ಕ್ಷೇತ್ರಗಳೂ ಕಲುಷಿತಗೊಂಡಿರುವ ಹೊತ್ತಿನಲ್ಲಿ ನೈತಿಕತೆಯ ಪುನರುತ್ಥಾನದ ಬಗೆ ಯಾವುದು? 'ಉಳ್ಳವರು ಶಿವಾಲಯವ ಮಾಡುವರು..' ಎಂಬ ವಿಡಂಬನೆಯಲ್ಲಿ 'ದೇಹವೇ ದೇಗುಲ' ಚಿಂತನೆಯನ್ನು ಮುನ್ನೆಲೆಗೆ ತಂದು, 800 ವರ್ಷಗಳ ಹಿಂದೆಯೇ ಸಮಾಜ ಸುಧಾರಣೆಗೆ ಹಂಬಲಿಸಿದ್ದರು ಬಸವಣ್ಣ. ಆದರೆ ದೇವರಿಗೆ ಕಾಣಿಕೆ, ಹರಕೆ, ಪೂಜೆಯನ್ನೊಪ್ಪಿಸಿ ಅಪರಾಧವನ್ನು ಮರೆಸಿ ದೇವರನ್ನೇ ವಂಚಿಸುತ್ತೇವೆ ಎಂಬ ಭ್ರಾಂತಿಗೂ ಈಗ ಕೊರತೆ ಇಲ್ಲ.

ಭಾರತದಂತಹ ದೇಶದಲ್ಲಿ ಭ್ರಷ್ಟಾಚಾರ, ಅನಾಚಾರದ ಹೆಚ್ಚಳಕ್ಕೆ ಜಾತಿ ಪದ್ಧತಿಯೂ ಒಂದು ಕಾರಣ. ತಪ್ಪಿತಸ್ಥನ ತಪ್ಪಿನ ಪ್ರಮಾಣ ನಿರ್ಧಾರ ಆಗುವುದು ಅವನ ಜಾತಿ, ಧರ್ಮ, ಪಕ್ಷಸಿದ್ಧಾಂತಗಳ ಆಧಾರದಲ್ಲಿ! ಅವನು ತನ್ನ ಅಥವಾ ತಾನೊಪ್ಪುವ ಪಕ್ಷ, ಪಂಗಡಕ್ಕೆ ಸೇರಿದವನಾಗಿದ್ದರೆ ಮನಸ್ಸು ಅನೈತಿಕತೆಯ ಸಮರ್ಥನೆಗೆ ಸ್ವತಃ ನಿಂತುಬಿಡುತ್ತದೆ. ಹಾಗೆಯೇ ಭಿನ್ನ ಪಂಗಡದವನಾದರೆ, ಮಾಡಿರಬಹುದಾದ ಮನುಷ್ಯಸಹಜ, ಕ್ಷುಲ್ಲಕ ತಪ್ಪಿಗೂ ಉಗ್ರವಾಗಿ ಖಂಡಿಸುವ, ನಿಂದಿಸುವ ಅಮಾನವೀಯ ಹಂತಕ್ಕೆ ಇಳಿಯಲಾಗುತ್ತದೆ. ಹೀಗಾಗಿ, ಇಲ್ಲಿ ಸರಿತಪ್ಪುಗಳ ತಾತ್ವಿಕತೆಯೂ ತಪ್ಪಾಗಿಯೇ ನಿರೂಪಿತವಾಗುತ್ತದೆ.



ವಂಚನೆ, ಭ್ರಷ್ಟಾಚಾರದ ನಿರ್ಮೂಲನೆಗೆ ಕಠಿಣ ಕಾನೂನು, ಸರ್ಕಾರದ ಇಚ್ಛಾಶಕ್ತಿ ಮಾತ್ರ ಸಾಲದು, ನೈತಿಕತೆ ಮತ್ತು ಮಾನವೀಯ ಸಮಾಜವನ್ನು ರೂಪಿಸಲು ಎಲ್ಲರೂ ಬದ್ಧರಾಗಬೇಕು. ಸಮಾಜದಲ್ಲಿ ಹಣ, ಆಸ್ತಿ, ಅಂತಸ್ತು, ಅಧಿಕಾರಕ್ಕಿಂತ ಮನುಷ್ಯನ ಪ್ರಾಮಾಣಿಕತೆಗೆ, ಶ್ರಮಸಂಸ್ಕೃತಿಯ ನೈಜ ವ್ಯಕ್ತಿತ್ವಕ್ಕೆ ಹೆಚ್ಚು ಬೆಲೆ ಸಿಗುವಂತಾಗಬೇಕು. ಹಣವಂತರು, ಅಧಿಕಾರಸ್ಥರ ಬದಲು ವಿದ್ಯಾವಂತರು, ಜ್ಞಾನವಂತರು, ಸರಳಜೀವಿಗಳು, ಪರೋಪಕಾರಿಗಳು ಮತ್ತು ಜೀವಪರರನ್ನು ಸಮಾಜವು ಪ್ರಜ್ಞಾಪೂರ್ವಕವಾಗಿ ಆದರಿಸುವಂತೆ ಆಗಬೇಕು. ತಪ್ಪನ್ನು ತಪ್ಪೆಂದು ಹೇಳುವ, ಕೆಟ್ಟದ್ದನ್ನು ಖಂಡಿಸುವ ಅಥವಾ ತಿರಸ್ಕರಿಸುವ, ಅದೂ ಸಾಧ್ಯವಾಗದಿದ್ದಲ್ಲಿ ನಿರ್ಲಕ್ಷಿಸುವ ಮನೋಭಾವ ಬೆಳೆಯದಿದ್ದಲ್ಲಿ ಸತ್ಯ ಸೊರಗುತ್ತದೆ. ಸಾತ್ವಿಕತೆ ಸೋಲಬೇಕಾಗುತ್ತದೆ. ಬೆಳೆಯುವ ಎಳೆಯರೆದುರು ತೋರುವ ಆದರ್ಶವು ಮೌಲ್ಯಯುತವಾಗಿರಬೇಕು. ಇಲ್ಲದಿದ್ದಲ್ಲಿ ಸಂಸ್ಕಾರ, ಸಂಸ್ಕೃತಿ ಹಾಗಿರಲಿ, ಮುಂದಿನ ತಲೆಮಾರು ಕನಿಷ್ಠ ಮಾನವೀಯತೆಯನ್ನೂ ಉಳಿಸಿಕೊಳ್ಳದೆ ಹೋದರೂ ಆಶ್ಚರ್ಯವಿಲ್ಲ.

ವಾಚಕರ ವಾಣಿ

ಒಗ್ಗಟ್ಟಿನ ಬಲದ ಮಹತ್ವ ಅರಿವಾಗಲಿ

ಸೇವಾ ಭದ್ರತೆಗೆ ಆಗ್ರಹಿಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ನಡೆಸುತ್ತಿರುವ ಹೋರಾಟವು ಬಣಗಳ ನಡುವಿನ ತಿಕ್ಕಾಟದಿಂದ ಹಳಿ ತಪ್ಪಿರುವ ಸುದ್ದಿಯನ್ನು (ಪ್ರ.ವಾ., ಡಿ. 21) ತಿಳಿದು ಸಖೇದಾಶ್ಚರ್ಯ, ನೋವು ಉಂಟಾಯಿತು. ಸುಮಾರು ಹತ್ತು ಸಾವಿರದಷ್ಟು ಇರುವ ಅತಿಥಿ ಉಪನ್ಯಾಸಕರ ನಡುವೆ ಐದು ಬಣಗಳು ಸೃಷ್ಟಿಯಾಗಿರುವುದು ದುರದೃಷ್ಟಕರ. ಅತಿಥಿ ಉಪನ್ಯಾಸಕರು ತಮ್ಮ ಒಣ ಪ್ರತಿಷ್ಠೆಯನ್ನು ಬದಿಗಿಟ್ಟು, ಒಗ್ಗಟ್ಟಿನ ಬಲದ ಮಹತ್ವವನ್ನು ಅರಿತು ಒಂದಾಗಬೇಕು. ಇಲ್ಲದೇಹೋದಲ್ಲಿ ತಮ್ಮ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಜಾಣ ಕಿವುಡುತನ ಎಂದಿನಂತೆ ಮುಂದುವರಿಯುತ್ತದೆ ಎಂಬುದನ್ನು ಹೋರಾಟಗಾರರು ಮರೆಯಬಾರದು.

ಎನ್.ಮಂಜುನಾಥ ಕಾಮತ್, ರಿಪ್ಪನ್‌ಪೇಟೆ

ಅನುಭವದ ಸಮರ್ಪಕ ಬಳಕೆಯಾಗಲಿ

'ಕಾಡಿಗೂ ಇದೆ ಸಂವಿಧಾನ!' ಎಂಬ ಅ.ನ.ಯಲ್ಲಪ್ಪ ರೆಡ್ಡಿ ಅವರ ಲೇಖನ (ಪ್ರ.ವಾ., ಡಿ. 21) ಅತ್ಯಂತ ಸಮಯೋಚಿತವಾಗಿದೆ. 1986ರಲ್ಲಿ ರಾಜ್ಯದಲ್ಲಿ ತೀವ್ರ ಬರಗಾಲವಿದ್ದ ಸಂದರ್ಭದಲ್ಲಿ, ಧಾರವಾಡ- ಹಳಿಯಾಳ ನಡುವಿನ ತತವಾಂಗಿ ಎಂಬಲ್ಲಿಗೆ ಸಮೀಪದ ಅರಣ್ಯ ಇಲಾಖೆಯ ನೆಡುತೋಪಿನಲ್ಲಿ ಮಾತ್ರ ದಟ್ಟವಾಗಿ ಬೆಳೆದಿದ್ದ ಮೇವನ್ನು ರೈತರಿಗೆ ಪುಕ್ಕಟೆಯಾಗಿ ಹಂಚಲಾಗಿತ್ತು. ಅದರ ಹಿಂದಿದ್ದವರು ಯಲ್ಲಪ್ಪ ರೆಡ್ಡಿ. ಕೆನರಾ ಸರ್ಕಲ್‌ನ ಎಲ್ಲ ಅರಣ್ಯ ಪ್ರದೇಶಗಳ ಗುಡ್ಡಗಳ ಇಳಿಜಾರಿನಲ್ಲಿ ಅವರು ಬಳಕೆಗೆ ತಂದ, ಹರಿದುಹೋಗುವ ನೀರನ್ನು ಹಿಡಿದಿಡುವ ಸ್ಥಳೀಯ 'ಚಂದ್ರ ಬರಾವು' ತಂತ್ರಜ್ಞಾನ ಅತ್ಯುತ್ತಮ ಫಲಿತಾಂಶ ನೀಡಿತ್ತು. ಅವರು ತಮ್ಮ ಅಪಾರ ಅನುಭವದಿಂದ ಬರೆದಿರುವ ಲೇಖನದಲ್ಲಿನ ಅಂಶಗಳನ್ನು ಇಂದಿನ ಎಲ್ಲ ಅರಣ್ಯಾಧಿಕಾರಿಗಳು ಹಾಗೂ ಸರ್ಕಾರವು ವಿಶೇಷ ಆಸಕ್ತಿಯಿಂದ ಗಮನಿಸಬೇಕು.

ಎಚ್.ಆರ್.ಕೃಷ್ಣಮೂರ್ತಿ, ಬೆಂಗಳೂರು

ಹಿಂದಿ ಭಾಷೆ: ಗೊಂದಲದ ಹೇಳಿಕೆ ಸಲ್ಲ

ನವದೆಹಲಿಯಲ್ಲಿ ಇತ್ತೀಚೆಗೆ ನಡೆದ 'ಇಂಡಿಯಾ' ಮೈತ್ರಿಕೂಟದ ಸಭೆಯಲ್ಲಿ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್, ತಾವು ಹಿಂದಿಯಲ್ಲಿ ಮಾಡಿದ ಭಾಷಣದ ಅನುವಾದಕ್ಕೆ ಬೇಡಿಕೆ ಇಟ್ಟ ಡಿಎಂಕೆ ನಾಯಕರಿಗೆ, ರಾಷ್ಟ್ರಭಾಷೆ ಹಿಂದಿಯನ್ನು ಕಲಿಯಬೇಕು ಎಂದು ಹೇಳಿರುವುದು ಸರಿಯಲ್ಲ. ಭಾರತದ ಸಂವಿಧಾನದ ಪ್ರಕಾರ, ಹಿಂದಿ ಭಾಷೆಯು ದೇಶದ ಅಧಿಕೃತ ಭಾಷೆಯೇ ವಿನಾ ರಾಷ್ಟ್ರಭಾಷೆ ಅಲ್ಲ. ಹೀಗಿದ್ದರೂ ಉತ್ತರ ಭಾರತದ ರಾಜಕಾರಣಿಗಳು ತಮ್ಮ ಭಾಷಣಗಳಲ್ಲಿ 'ಹಿಂದಿ ರಾಷ್ಟ್ರಭಾಷೆ' ಎಂದು ಪದೇಪದೇ ಹೇಳಿ ಪ್ರಜೆಗಳಲ್ಲಿ ಗೊಂದಲ ಮೂಡಿಸುತ್ತಿದ್ದಾರೆ.

ಇಂಗ್ಲಿಷ್ ಭಾಷೆ ವ್ಯಾಪಕವಾಗಿ ಬೆಳೆಯುತ್ತಿರುವ ಪ್ರವೃತ್ತಿಯನ್ನು ತಡೆದು, ಹಿಂದಿ ಭಾಷೆಯನ್ನು ಹಂತಹಂತವಾಗಿ ಬೆಳೆಸುವ ಹಾಗೂ ರಾಷ್ಟ್ರಭಾಷೆಯನ್ನಾಗಿಸುವ ಉದ್ದೇಶದಿಂದ ಬಹಳಷ್ಟು ಹಿಂದಿನಿಂದಲೂ 'ಹಿಂದಿ ದಿವಸ'ವನ್ನು ಆಚರಿಸಲಾಗುತ್ತಿದೆ. ಆದರೆ ಇಂದಿನವರೆಗೂ ಹಿಂದಿ ಭಾಷೆಯನ್ನು ರಾಷ್ಟ್ರಭಾಷೆಯೆಂದು ಘೋಷಿಸಿಲ್ಲ ಎಂಬುದನ್ನು ಮರೆಯಬಾರದು.

ಜಿ.ನಾಗೇಂದ್ರ ಕಾವೂರು, ಸಂಡೂರು

ಸಹಾಯವಾಣಿ ಸಹಾಯಕ್ಕೆ ಒದಗಲಿ

ಸರ್ಕಾರದ ಎಲ್ಲ ಇಲಾಖೆಗಳು ಮತ್ತು ಸಂಸ್ಥೆಗಳು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ತಮ್ಮ ವೆಬ್‌ಸೈಟ್‌ಗಳಲ್ಲಿ ಸಹಾಯವಾಣಿ ಸಂಖ್ಯೆಯನ್ನು ನೀಡಿರುತ್ತವೆ. ಆದರೆ ಇವುಗಳಲ್ಲಿ ಬಹುತೇಕ ಸಹಾಯವಾಣಿ ಸಂಖ್ಯೆಗಳು ನಿಷ್ಕ್ರಿಯವಾಗಿರುತ್ತವೆ. ಇದು, ಆಯಾ ಇಲಾಖೆ ಮತ್ತು ಸಂಸ್ಥೆಯ ನಿಷ್ಕ್ರಿಯತೆಗೆ ನಿದರ್ಶನವಾಗಿದೆ. ಸಂಬಂಧಪಟ್ಟವರು ಕೂಡಲೇ ಎಚ್ಚೆತ್ತು, ಸಹಾಯವಾಣಿ ಸಂಖ್ಯೆಗಳನ್ನು ಸಕ್ರಿಯಗೊಳಿಸುವ ಮೂಲಕ ಜನರ ಕುಂದುಕೊರತೆಗಳಿಗೆ ಸ್ಪಂದಿಸಬೇಕು.

ನವೀನಕುಮಾರ ರಾ ಕಾಳೆ, ಕಂಚಕರವಾಡಿ, ರಾಯಬಾಗ

ಜನಸಾಮಾನ್ಯರಿಗಿಲ್ಲ ಧರ್ಮದ ಹಂಗು

'ಬಸವ ಪರಂಪರೆಯನ್ನು ಒಪ್ಪಿಕೊಳ್ಳುವವರು ವೈದಿಕ ಪರಂಪರೆಯಿಂದ ದೂರವಿರಿ' ಎಂಬ ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರ ವಿಚಾರಗಳಿಗೆ ಪ್ರತಿಕ್ರಿಯಿಸಿರುವ ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ (ವಾ.ವಾ., ಡಿ. 21), 'ಬೌದ್ಧ, ಸಿಖ್, ಜೈನದಂತಹ ನೂತನ ಧರ್ಮಗಳು ವೈದಿಕ ಮತ್ತು ಸಂಸ್ಕೃತ ಭಾಷೆಗಳಿಂದ ಪ್ರಭಾವಿತವಾಗಿರುವುದನ್ನು ಅಲ್ಲಗಳೆಯಲಾಗದು' ಎಂದಿದ್ದಾರೆ. ಅವರ ಪ್ರಕಾರ ಅದು ಸರಿ ಇರಬಹುದು. ಆದರೆ, ಈ ಧರ್ಮಗಳು ವೈದಿಕದ ಸೆರೆಯಿಂದ ಬಿಡಿಸಿಕೊಂಡು ಸ್ವತಂತ್ರ ಧರ್ಮಗಳಾಗಿ ರೂಪುಗೊಂಡು ಜಗತ್ತಿನಾದ್ಯಂತ ಬೆಳೆದದ್ದೂ ನಿಜವಲ್ಲವೇ?

ಬಸವಣ್ಣ ವೇದೋಪನಿಷತ್ತುಗಳನ್ನು ಓದದೇ ವಿರೋಧಿಸಲಿಲ್ಲ. ಆತನ ವಚನವೊಂದು ಹೀಗಿದೆ: 'ವೇದ ನಡನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತಯ್ಯಾ| ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯಾ| ಆಗಮ ಹೆರತೊಲಗಿ ಅಗಲಿದ್ದಿತಯ್ಯಾ| ನಮ್ಮ ಕೂಡಲಸಂಗಯ್ಯನು ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ. ಇದು ಬಸವಣ್ಣನ ನಿಲುವು. 'ಶರಣ ತತ್ವವನ್ನು ಮಾತ್ರ ಒಪ್ಪುವವರು ವೈದಿಕದ ಲಾಂಛನಗಳಾದ ಭಸ್ಮ, ರುದ್ರಾಕ್ಷಿ, ಕಾವಿ, ಲಿಂಗ, ಮಂತ್ರಗಳನ್ನು ತೊರೆದು ಶೂನ್ಯ ಲಲಾಟರಾದಾಗ ಮಾತ್ರ ವೈದಿಕದಿಂದ ದೂರವಿರಲು ಸಾಧ್ಯ' ಎಂದು ಪರೋಕ್ಷವಾಗಿ ವೈದಿಕದ ಪರವಾಗಿ ವಕಾಲತ್ತು ವಹಿಸಿದ್ದಾರೆ. ಜನಸಾಮಾನ್ಯರು ಯಾವುದೇ ಬಗೆಯ ಧಾರ್ಮಿಕ ಲಾಂಛನಗಳನ್ನು ಧರಿಸುವುದಿಲ್ಲ. ಅವರಿಗೆ ಯಾವುದೇ ಧರ್ಮದ ಹಂಗೂ ಇಲ್ಲ. ಅವರೆಲ್ಲರೂ ಭಾರತೀಯರು ಮಾತ್ರ!

ಕೆ.ಆರ್.ದುರ್ಗಾದಾಸ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೋದಿ ಆಡಳಿತದ ಒಂಬತ್ತು ವರ್ಷ

ರೈಟ್-ಆಫ್ ಆದ ₹14.56 ಲಕ್ಷ ಕೋಟಿ ಸಾಲ ಏನಾಯಿತು..?



ಕೇಂದ್ರ ಸರ್ಕಾರವು ಸಿರಿವಂತರ ಸಾಲಗಳನ್ನು ಮನ್ನಾ ಮಾಡುತ್ತಲೇ ಇದೆ. ಇದರಿಂದ ಬಡವರಿಗೆ ಹೊರೆಯಾಗುತ್ತಿದೆ ಎಂದು ವಿರೋಧ ಪಕ್ಷಗಳ ನಾಯಕರು ಆರೋಪಿಸುತ್ತಲೇ ಇದ್ದಾರೆ. ಈ ಆರೋಪವನ್ನು ಸರ್ಕಾರ ನಿರಾಕರಿಸುತ್ತಲೇ ಇದೆ. 'ನಾವು ಸಾಲ ಮನ್ನಾ ಮಾಡಿಲ್ಲ. ಬದಲಿಗೆ, ವಸೂಲಾಗದ ಸಾಲವನ್ನು ರೈಟ್ ಆಫ್ ಮಾಡಲಾಗಿದೆ. ಅವನ್ನು ವಸೂಲಿ ಮಾಡಲಾಗುತ್ತದೆ. ಈ ಕ್ರಮದಿಂದ ಬ್ಯಾಂಕ್‌ಗಳ ವಸೂಲಾಗದ ಸಾಲದ ಪ್ರಮಾಣ ಇಳಿಕೆಯಾಗುತ್ತಿದೆ' ಎಂದು ಸರ್ಕಾರ ಹೇಳುತ್ತಿದೆ. ಆದರೆ, ವಾಸ್ತವಾಂಶ ಇಷ್ಟು ಸರಳವಾಗಿಲ್ಲ


ಪ್ರಜಾವಾಣಿ ವಾರ್ತೆ

ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದ ಒಂಬತ್ತು ವರ್ಷಗಳಲ್ಲಿ ದೇಶದ ಎಲ್ಲಾ ಬ್ಯಾಂಕ್‌ಗಳು ಒಟ್ಟು ₹14.56 ಲಕ್ಷ ಕೋಟಿ ಮೊತ್ತದಷ್ಟು ಸಾಲವನ್ನು ರೈಟ್-ಆಫ್ ಮಾಡಿವೆ. ಅಂದರೆ ವಸೂಲಾಗದ ಸಾಲದಲ್ಲಿ ಇಷ್ಟು ಮೊತ್ತದಷ್ಟು ಸಾಲಗಳನ್ನು ತಮ್ಮ ಬ್ಯಾಲೆನ್ಸ್‌ಶೀಟ್‌ನಿಂದ ಹೊರಗಿಟ್ಟಿವೆ. 2014–15ಕ್ಕೆ ಹೋಲಿಸಿದರೆ ಹೀಗೆ ರೈಟ್-ಆಫ್ ಮಾಡಲಾದ ಸಾಲದ ಮೊತ್ತ ಪ್ರತಿ ವರ್ಷ ಏರಿಕೆಯಾಗುತ್ತಲೇ ಇದೆ.

ವಿರೋಧ ಪಕ್ಷಗಳು ಇದನ್ನು ಸಾಲ ಮನ್ನಾ ಎಂದೇ ಕರೆಯುತ್ತಿವೆ. ಈ ಬಗ್ಗೆ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಸಂಸದರು ಹಲವು ಬಾರಿ ಪ್ರಶ್ನೆಗಳನ್ನು ಕೇಳಿದ್ದಾರೆ. 'ಇದು ಸಾಲ ಮನ್ನಾ ಅಲ್ಲ. ಇದರಿಂದ ಸರ್ಕಾರಕ್ಕೆ ಯಾವುದೇ ಹೊರೆಯಾಗುವುದಿಲ್ಲ' ಎಂದೇ ಹಣಕಾಸು ಸಚಿವಾಲಯವು ಈ ಪ್ರಶ್ನೆಗಳಿಗೆ ಉತ್ತರಿಸಿದೆ. ಹಾಗಿದ್ದಲ್ಲಿ ಇಷ್ಟು ದೊಡ್ಡ ಮೊತ್ತದ ವಸೂಲಾಗದ ಸಾಲಗಳು ಏನಾದವು ಎಂದು ಪ್ರಶ್ನಿಸಿದರೆ, ಅವುಗಳನ್ನು ವಸೂಲಿ ಮಾಡಲಾಗುತ್ತದೆ ಎಂದಷ್ಟೇ ಹಣಕಾಸು ಸಚಿವಾಲಯ ಹೇಳುತ್ತದೆ.

ರೈಟ್-ಆಫ್ ಮತ್ತು ಸಾಲ ಮನ್ನಾದ ಮಧ್ಯೆ ವ್ಯತ್ಯಾಸವಿದೆ. ಸಾಲ ಮನ್ನಾ ಎಂದರೆ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುವುದು. ರೈಟ್-ಆಫ್ ಅಂದರೆ ಬ್ಯಾಂಕ್‌ಗಳು ತಮ್ಮ ಬ್ಯಾಲೆನ್ಸ್‌ಶೀಟ್‌ನಿಂದ ವಸೂಲಾಗದ ಸಾಲವನ್ನು ಹೊರಗೆ ಇಡುವುದು. ಹೀಗೆ ರೈಟ್-ಆಫ್ ಆದ ಸಾಲವನ್ನು ಬ್ಯಾಂಕ್‌ಗಳು ನಷ್ಟ ಎಂದು ನಮೂದಿಸಿಕೊಳ್ಳುತ್ತವೆ. ಬ್ಯಾಂಕ್‌ಗಳಿಗೆ ಆದ ನಷ್ಟವು ಗ್ರಾಹಕರಿಗೆ ಆದ ನಷ್ಟವೇ ಆಗಿದೆ. ಹೀಗೆ ವಸೂಲಾಗದ ಸಾಲಗಳನ್ನು ರೈಟ್-ಆಫ್ ಮಾಡಿದರೂ, ಅವುಗಳನ್ನು ಬ್ಯಾಂಕ್‌ಗಳು ವಸೂಲಿ ಮಾಡಬಹುದು. ಈ ರೀತಿ ವಸೂಲಿ ಮಾಡಲಾದ ರೈಟ್-ಆಫ್ ಸಾಲಗಳನ್ನು ಬ್ಯಾಂಕ್‌ನ ಆದಾಯಕ್ಕೆ ಸೇರಿಸಲಾಗುತ್ತದೆ. ಆ ಸಾಲ ವಸೂಲಿ ಆಗದೇ ಇದ್ದರೆ ಅದು ಅಂತಿಮವಾಗಿ ನಷ್ಟವೇ ಸರಿ. ಹೀಗಾಗಿಯೇ ವಿರೋಧ ಪಕ್ಷಗಳು ರೈಟ್-ಆಫ್ ಅನ್ನು ಸಾಲ ಮನ್ನಾ ಎಂದೇ ಕರೆಯುತ್ತಿವೆ.

ಆದರೆ ಕೇಂದ್ರ ಹಣಕಾಸು ಸಚಿವಾಲಯವು ನಾವು ಈ ಸಾಲಗಳನ್ನು ವಸೂಲಿ ಮಾಡದೇ ಬಿಡುವುದಿಲ್ಲ ಎಂದು ಹೇಳುತ್ತಲೇ ಇದೆ. ಆದರೆ ವಸೂಲಿ ಮಾಡಿದ ರೈಟ್-ಆಫ್ ಸಾಲದ ಪ್ರಮಾಣ ಮಾತ್ರ ಆಶಾದಾಯಕವಾಗಿ ಇಲ್ಲ. 2014–15ನೇ ಸಾಲಿನಿಂದ 2022–23ನೇ ಸಾಲಿನ ಅಂತ್ಯದವರೆಗೆ ಸರ್ಕಾರಿ ಸ್ವಾಮ್ಯದ ವಾಣಿಜ್ಯ ಬ್ಯಾಂಕ್‌ಗಳು ಒಟ್ಟು ₹10.42 ಲಕ್ಷ ಕೋಟಿ ಮೊತ್ತದಷ್ಟು ಸಾಲಗಳನ್ನು ರೈಟ್-ಆಫ್ ಮಾಡಿವೆ. ಆದರೆ ಇದೇ ಅವಧಿಯಲ್ಲಿ ಈ ಬ್ಯಾಂಕ್‌ಗಳು ವಸೂಲಿ ಮಾಡಿದ ರೈಟ್-ಆಫ್ ಸಾಲಗಳ ಮೊತ್ತ ₹1.61 ಲಕ್ಷ ಕೋಟಿ ಮಾತ್ರ. ಈ ಅವಧಿಯಲ್ಲಿ ಸರ್ಕಾರಿ ಬ್ಯಾಂಕುಗಳು ರೈಟ್-ಆಫ್ ಮಾಡಿದ ಒಟ್ಟು ಸಾಲದಲ್ಲಿ ವಸೂಲಾಗಿದ್ದು ಶೇ 15ರಷ್ಟು ಮಾತ್ರ. ಸರ್ಕಾರಿ ಬ್ಯಾಂಕ್‌ಗಳು ರೈಟ್-ಆಫ್ ಮಾಡಿದ ಸಾಲದಲ್ಲಿ ಇನ್ನೂ ₹8.81 ಲಕ್ಷ ಕೋಟಿಯಷ್ಟು ವಸೂಲಾಗದೇ ಉಳಿದಿದೆ. ಅದರ ಹೊರೆಯನ್ನು ಬ್ಯಾಂಕ್‌ಗಳು, ಅಂತಿಮವಾಗಿ ಸಾಮಾನ್ಯ ಗ್ರಾಹಕರು ಹೊರಬೇಕಾಗಿದೆ.



₹10.42 ಲಕ್ಷ ಕೋಟಿ
ನರೇಂದ್ರ ಮೋದಿ ಸರ್ಕಾರದ ಮೊದಲ ಒಂಬತ್ತು ವರ್ಷಗಳ ಅವಧಿಯಲ್ಲಿ ಸರ್ಕಾರಿ ಸ್ವಾಮ್ಯದ ವಾಣಿಜ್ಯ ಬ್ಯಾಂಕ್‌ಗಳು ರೈಟ್-ಆಫ್ ಮಾಡಿದ ಸಾಲದ ಒಟ್ಟು ಮೊತ್ತ

₹4.14 ಲಕ್ಷ ಕೋಟಿ
ಈ ಅವಧಿಯಲ್ಲಿ ಖಾಸಗಿ ವಾಣಿಜ್ಯ ಬ್ಯಾಂಕ್‌ಗಳು ರೈಟ್-ಆಫ್ ಮಾಡಿದ ಸಾಲದ ಒಟ್ಟು ಮೊತ್ತ

ದೊಡ್ಡ ಉದ್ಯಮ, ಉದ್ಯಮಿಗಳ ರೈಟ್-ಆಫ್ ಸಾಲದ ಮೊತ್ತ ₹7.49 ಲಕ್ಷ ಕೋಟಿ

ಈ ಒಂಬತ್ತು ವರ್ಷಗಳಲ್ಲಿ ರೈಟ್-ಆಫ್ ಮಾಡಲಾದ ಸಾಲಗಳ ಫಲಾನುಭವಿಗಳು ಯಾರು ಎಂದು ವಿರೋಧ ಪಕ್ಷಗಳ ಸಂಸದರು ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಹಲವು ಬಾರಿ ಪ್ರಶ್ನೆಗಳನ್ನು ಕೇಳುತ್ತಲೇ ಇದ್ದಾರೆ. ಆದರೆ ಸರ್ಕಾರ ಮಾತ್ರ ಆ ಪ್ರಶ್ನೆಗಳಿಗೆ ಉತ್ತರ ನೀಡುತ್ತಿಲ್ಲ. ಯಾರ ಸಾಲವನ್ನು ರೈಟ್-ಆಫ್ ಮಾಡಲಾಗಿದೆ ಎಂಬುದರ ದಾಖಲೆಯನ್ನು ನಿರ್ವಹಿಸುತ್ತಿಲ್ಲ ಎಂದೇ ಸರ್ಕಾರ ಹೇಳುತ್ತಿದೆ. ಆದರೆ ಅತಿಹೆಚ್ಚು ಸಾಲಗಳು ರೈಟ್-ಆಫ್ ಆದದ್ದು ದೊಡ್ಡ–ದೊಡ್ಡ ಉದ್ಯಮ ಸಂಸ್ಥೆಗಳದ್ದು ಎಂದು ಸರ್ಕಾರವೇ ಒಪ್ಪಿಕೊಂಡಿದೆ.


2014–15ರಿಂದ 2022–23ರ ನಡುವೆ ಎಲ್ಲಾ ವಾಣಿಜ್ಯ ಬ್ಯಾಂಕ್‌ಗಳು ರೈಟ್-ಆಫ್ ಮಾಡಿದ ₹14.56 ಲಕ್ಷ ಕೋಟಿ ಮೊತ್ತದ ಸಾಲದಲ್ಲಿ ದೊಡ್ಡ–ದೊಡ್ಡ ಉದ್ಯಮ ಸಂಸ್ಥೆಗಳ ಸಾಲದ ಮೊತ್ತ ₹7.49 ಲಕ್ಷ ಕೋಟಿಯಷ್ಟಾಗುತ್ತದೆ.

ಯಾವ ಉದ್ಯಮ ಸಂಸ್ಥೆಗಳು ಮತ್ತು ಯಾವ ಉದ್ಯಮಿಯ ಸಾಲಗಳು ರೈಟ್-ಆಫ್ ಆಗಿವೆ ಎಂದು ಕೇಳಲಾದ ಪ್ರಶ್ನೆಗೂ ಹಣಕಾಸು ಸಚಿವಾಲಯವು ವಿವರಗಳನ್ನು ಒದಗಿಸಿಲ್ಲ. ಬದಲಿಗೆ 'ಆರ್‌ಬಿಐನ ನಿಯಮಗಳ ಪ್ರಕಾರ ಸಾಲಗಾರರ ಮಾಹಿತಿಯನ್ನು ಬಹಿರಂಗಪಡಿಸುವಂತಿಲ್ಲ. ಹೀಗಾಗಿ ಈ ವಿವರಗಳನ್ನು ಒದಗಿಸಲು ಸಾಧ್ಯವಿಲ್ಲ' ಎಂದೇ ಹಲವು ಬಾರಿ ಉತ್ತರಿಸಿದೆ.

ರೈಟ್-ಆಫ್ ಮಾಡಿದ ಸಾಲವನ್ನೂ ವಸೂಲಿ ಮಾಡುವುದರಿಂದ, ರೈಟ್-ಆಫ್ ಮೂಲಕ ಯಾರಿಗೂ ಲಾಭ ಮಾಡಿಕೊಟ್ಟಂತೆ ಆಗುವುದಿಲ್ಲ. ಇದರಿಂದ ಸರ್ಕಾರಕ್ಕೇನೂ ಹೊರೆಯಾಗುವುದಿಲ್ಲ ಎಂದು ಹಣಕಾಸು ಸಚಿವಾಲಯ ಹಲವು ಬಾರಿ ಉತ್ತರ ನೀಡಿದೆ. ಆದರೆ ರೈಟ್-ಆಫ್ ಮಾಡಿದ ಸಾಲಗಳು ವಸೂಲಿ ಆಗದೇ ಇರುವುದರಿಂದ ಅಂತಿಮವಾಗಿ ಸಾಲಗಾರರಿಗೆ ಅನುಕೂಲವೇ ಆಗಿದೆ. ಅದರಲ್ಲೂ ದೊಡ್ಡ ಉದ್ಯಮ ಸಂಸ್ಥೆಗಳಿಗೆ ಲಾಭವೇ ಆಗಿದೆ ಎಂಬುದು ವಿರೋಧ ಪಕ್ಷಗಳ ಆರೋಪ.

ಎನ್‌ಪಿಎ ನಿಜಕ್ಕೂ ಇಳಿಯುತ್ತಿದೆಯೇ?

ಬ್ಯಾಂಕ್‌ಗಳು ವಸೂಲಾಗದ ಸಾಲಗಳನ್ನು ಎನ್‌ಪಿಎ (ನಾನ್ ಪರ್ಫಾರ್ಮಿಂಗ್ ಅಸೆಟ್ಸ್) ಎಂದು ವರ್ಗೀಕರಿಸುತ್ತವೆ. ಈಚಿನ ಐದು ವರ್ಷಗಳಲ್ಲಿ ಬ್ಯಾಂಕ್‌ಗಳ ವಸೂಲಾಗದ ಸಾಲವು ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ ಎಂದು ಹಣಕಾಸು ಸಚಿವಾಲಯವು ಸಂಸತ್ತಿನ ಇದೇ ಅಧಿವೇಶನದಲ್ಲಿ ಹೇಳಿದೆ. 2018–19ರಲ್ಲಿ ₹ 9.33 ಲಕ್ಷ ಕೋಟಿಯಷ್ಟಿದ್ದ ಎನ್‌ಪಿಎಯ ಮೊತ್ತ 2022–23ರಲ್ಲಿ ₹5.71 ಲಕ್ಷ ಕೋಟಿಗೆ ಇಳಿಕೆಯಾಗಿದೆ ಎಂದು ಸಚಿವಾಲಯವು ಇದೇ 19ರಂದು ರಾಜ್ಯಸಭೆಗೆ ನೀಡಿದ ಉತ್ತರದಲ್ಲಿ ವಿವರಿಸಿದೆ.



ಆದರೆ ಬ್ಯಾಂಕ್‌ಗಳ ಎನ್‌ಪಿಎ ನಿಜಕ್ಕೂ ಇಳಿಕೆಯಾಗಿದೆಯೇ ಎಂಬ ಪ್ರಶ್ನೆಗೆ ಸರಳ ಉತ್ತರ ದೊರೆಯುವುದಿಲ್ಲ. ಏಕೆಂದರೆ ಬ್ಯಾಂಕ್‌ಗಳು ವಸೂಲಾಗದ ಸಾಲಗಳನ್ನು (ಎನ್‌ಪಿಎ) ರೈಟ್-ಆಫ್ ಮಾಡುತ್ತಿವೆ. ಇದರಿಂದ ಒಂದೆಡೆ ಬ್ಯಾಂಕ್‌ಗಳ ಎನ್‌ಪಿಎ ಮೊತ್ತ ಇಳಿಕೆಯಾಗುತ್ತಿದ್ದರೆ, ಇನ್ನೊಂದೆಡೆ ಬ್ಯಾಂಕ್‌ಗಳ ರೈಟ್-ಆಫ್ ಸಾಲದ ಮೊತ್ತ ಏರಿಕೆಯಾಗುತ್ತಲೇ ಇದೆ. ಅಂದರೆ ವಾಸ್ತವದಲ್ಲಿ ಬ್ಯಾಂಕ್‌ಗಳ ಎನ್‌ಪಿಎಯನ್ನು ವಸೂಲಿ ಮಾಡಿದ್ದರಿಂದ ಅವುಗಳ ಪ್ರಮಾಣ ಕಡಿಮೆಯಾಗಿಲ್ಲ ಎಂಬುದನ್ನೇ ಈ ದತ್ತಾಂಶಗಳು ಹೇಳುತ್ತವೆ. ವಸೂಲಾಗದ ಸಾಲಗಳನ್ನು ನಿರ್ವಹಿಸಲು 'ಬ್ಯಾಡ್ ಬ್ಯಾಂಕ್' ಅನ್ನು ಸ್ಥಾಪಿಸುವುದಾಗಿ ಸರ್ಕಾರ ಹೇಳಿತ್ತು. ಅದರಂತೆ ಎನ್‌ಎಆರ್‌ಸಿಎಲ್ ಎಂಬ ಸಂಸ್ಥೆಯನ್ನು ಕೇಂದ್ರ ಸರ್ಕಾರ ಸ್ಥಾಪಿಸಿದೆ. ಬ್ಯಾಂಕ್‌ಗಳ ವಸೂಲಾಗದ ಸಾಲವನ್ನು ಎನ್‌ಎಆರ್‌ಸಿಎಲ್ ಖರೀದಿಸುತ್ತದೆ ಮತ್ತು ಅದನ್ನು ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳುತ್ತದೆ. ಆದರೆ ಅಂತಹ ಸಾಲಗಳನ್ನು ಎನ್‌ಎಆರ್‌ಸಿಎಲ್‌ಗೆ ವರ್ಗಾಯಿಸುವಲ್ಲಿ ಹಲವು ತೊಡಕುಗಳು ಎದುರಾಗಿರುವ ಕಾರಣ ಬ್ಯಾಡ್ ಬ್ಯಾಂಕ್ ಸಹ ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡುತ್ತಿಲ್ಲ.


ಒಟ್ಟಾರೆಯಾಗಿ ಈ ಒಂಬತ್ತು ವರ್ಷಗಳಲ್ಲಿ ಎಲ್ಲಾ ಬ್ಯಾಂಕ್‌ಗಳು ರೈಟ್-ಆಫ್ ಮಾಡಿದ ಸಾಲದ ಮೊತ್ತವನ್ನೂ ಪರಿಗಣಿಸಿದರೆ, ಒಟ್ಟು ಎನ್‌ಪಿಎಯ ಮೊತ್ತ ₹20.23 ಲಕ್ಷ ಕೋಟಿಯಷ್ಟಾಗುತ್ತದೆ. ಬ್ಯಾಡ್ ಬ್ಯಾಂಕ್‌ಗೆ ವರ್ಗಾಯಿಸಲಾದ ಎನ್‌ಪಿಎಗಳನ್ನೂ ಒಗ್ಗೂಡಿಸಿದರೆ ಈ ಮೊತ್ತ ಇನ್ನಷ್ಟು ಹೆಚ್ಚಾಗುತ್ತದೆ.

ಆಧಾರ: ಲೋಕಸಭೆ ಮತ್ತು ರಾಜ್ಯಸಭೆಗೆ ಹಣಕಾಸು ಸಚಿವಾಲಯವು ನೀಡಿದ ಉತ್ತರಗಳು, ಹಣಕಾಸು ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯ 68ನೇ ವರದಿ, ಆರ್‌ಬಿಐನ ವಾರ್ಷಿಕ ವರದಿ, ಕೇಂದ್ರ ಸರ್ಕಾರದ ಓಪನ್‌ಡಾಟಾ.ಒಆರ್‌ಜಿ ದತ್ತಾಂಶಗಳು

ನಾವು ನೋಡಿದ ಸಿನಿಮಾ

ಹಿರಾನಿ ಸಿನಿಮಾ ಹಿಂಗ್ಯಾಕ್ರೀ...

ಡಂಕಿ (ಹಿಂದಿ)
- **ನಿರ್ಮಾಣ:** ಗೌರಿ ಖಾನ್, ರಾಜ್‌ಕುಮಾರ್ ಇರಾನಿ, ಜ್ಯೋತಿ ದೇಶಪಾಂಡೆ
- **ನಿರ್ದೇಶನ:** ರಾಜ್‌ಕುಮಾರ್ ಹಿರಾನಿ
- **ತಾರಾಗಣ:** ತಾಪ್ಸಿ ಪನ್ನು, ಶಾರುಕ್ ಖಾನ್, ವಿಕ್ರಂ ಕೊಚ್ಚರ್, ಅನಿಲ್ ಗ್ರೋವರ್, ವಿಕ್ಕಿ ಕೌಶಲ್, ಬೊಮನ್ ಇರಾನಿ.



ಆಸ್ಪತ್ರೆಯಿಂದ ವೃದ್ಧೆ ತಪ್ಪಿಸಿಕೊಂಡು, ಒಂದು ಕೈಲಿ ತನಗೆ ಹಾಕಿದ್ದ ಡ್ರಿಪ್ಸ್ ಅನ್ನೇ ಹಿಡಿದು ಸೀದಾ ವಕೀಲನ ಕಚೇರಿ ತಲುಪುವ ದೃಶ್ಯದೊಂದಿಗೆ ಸಿನಿಮಾ ಶುರುವಾಗುತ್ತದೆ. ಇದು ರಾಜ್‌ಕುಮಾರ್ ಹಿರಾನಿ ರುಜು.

ಕೆಲವೇ ನಿಮಿಷಗಳಲ್ಲಿ ಫ್ಲ್ಯಾಷ್‌ಬ್ಯಾಕ್‌ನಲ್ಲಿ ಪಂಜಾಬ್. ಇಂಗ್ಲೆಂಡ್‌ಗೆ ಹೋಗಲು ತುದಿಗಾಲಲ್ಲಿ ನಿಂತ ಬಡವರ ಗುಂಪು. ಸೇನೆಯಿಂದ ಬಂದ ನಾಯಕ ಅದನ್ನು ಸೇರಿಕೊಳ್ಳುತ್ತಾನೆ. ಹಣವಿಲ್ಲದ, ಕನಸೊಂದನ್ನೇ ಬಂಡವಾಗಿ ಉಳ್ಳ ಅವರೆಲ್ಲ ಇಂಗ್ಲೆಂಡ್‌ಗೆ ಅಕ್ರಮವಾಗಿ ಸಾಗಿ ತಲುಪುವ ಆಸಕ್ತಿಕರ ಒನ್‌ಲೈನರ್ ಅನ್ನು ನಿರ್ದೇಶಕರು ಹಿಂಜುತ್ತಾ ಚಿತ್ರಕಥೆ ಕಟ್ಟಿದ್ದಾರೆ.

ರಾಜ್‌ಕುಮಾರ್ ಹಿರಾನಿ ಸಿನಿಮಾಗಳಲ್ಲಿ ಒಂದು ನಿರ್ದಿಷ್ಟ ವ್ಯಾಕರಣವನ್ನು ನಾವು ಮೊದಲಿನಿಂದಲೂ ನೋಡಿಕೊಂಡು ಬಂದಿದ್ದೇವೆ. ಅವರು ತಮ್ಮ ಬಹುತೇಕ ದೃಶ್ಯಗಳ ಆದಿ, ಅಂತ್ಯದ ನಡುವೆ ಭಾವುಕತೆಯ ಹೂರಣ ತುಂಬುತ್ತಾರೆ. ಒಂದೊಂದು ದೃಶ್ಯಕ್ಕೂ 'ಕ್ಲೈಮ್ಯಾಕ್ಸ್' ಇರಬೇಕೆನ್ನುವ ಕ್ರಮವಿದು. ನಗು, ಅಳು, ತಿರುವು, ಅಚ್ಚರಿ, ಹುಚ್ಚಾಟ, ಅತಿರೇಕ... ಇವೆಲ್ಲವೂ ಇಡುಕಿರಿದಂತಹ ಸಿನಿಮಾ ವ್ಯಾಕರಣ ಅದು. ಈ ಸಿನಿಮಾದಲ್ಲಿ ಆ ವ್ಯಾಕರಣವೇ ಚಿಂದಿ. ಮೊದಲ ದೃಶ್ಯದಲ್ಲಿ ಕಾಣುವ ಹಿರಾನಿ ಅವರ ಹಳೆಯ ರುಜುವಿಗೆ ಆಮೇಲೆ ಹುಡುಕಾಡಬೇಕು.

ಪಂಜಾಬ್‌ನ ಹಳ್ಳಿಯವರು ಇಂಗ್ಲೆಂಡ್‌ಗೆ ವೀಸಾ ಪಡೆಯಲು ನಡೆಸುವ ಪಡಿಪಾಟಲನ್ನು ಹಾಸ್ಯವಲ್ಲರಿಯಲ್ಲಿ ತೋರಿಸುವುದು ಸಿನಿಮಾದ ಮೊದಲಾರ್ಧದ ಉದ್ದೇಶ. ಆದರೆ ಎಷ್ಟೋ ಕಡೆ 'ಇದು ಹಾಸ್ಯವಲ್ಲ... ರೀ' ಎನಿಸುತ್ತದೆ. 'ಥ್ರೀ ಈಡಿಯಟ್ಸ್', 'ಪಿಕೆ' ಸಿನಿಮಾಗಳ ಒಂದೊಂದೂ ಕಚಗುಳಿಯನ್ನು ನೆನಪಿಸಿಕೊಂಡರೆ, ಇದು ಹಿರಾನಿ ವರಸೆಯೇ ಅಲ್ಲವಲ್ಲ ಎನಿಸತೊಡಗುತ್ತದೆ.

'ಡಂಕಿ' ಎಂದರೆ ಅಕ್ರಮವಾಗಿ ಹಲವು ದೇಶಗಳ ಗಡಿಗಳನ್ನು ದಾಟಿಕೊಂಡು ವಿದೇಶ ತಲುಪುವುದು ಎಂದರ್ಥ. ಈ ಪಯಣವನ್ನಾದರೂ ರೋಚಕ ಅಥವಾ ಆಸಕ್ತಿಕರವಾಗಿ ತೋರಿಸುವ ದೊಡ್ಡ ಸಾಧ್ಯತೆ ಇತ್ತು. ಹಿರಾನಿ ಅದನ್ನೂ ಮಾಡಿಲ್ಲ.

ಚಿತ್ರಕತೆಯು ಹೀಗೇ ಸಾಗಬಹುದು ಎಂಬ ನಮ್ಮ ಊಹೆಯನ್ನು ಬಹುಪಾಲು ನಿಜವಾಗಿಸುವುದು ಸಿನಿಮಾದ ಇನ್ನೊಂದು ದುರ್ಬಲ ಅಂಶ. ಈ ವಿಷಯದಲ್ಲಿಯೂ ಹಿಂದಿನ ತಮ್ಮ ಚಿತ್ರಗಳ ಹೋಲಿಕೆಯಲ್ಲಿ ಹಿರಾನಿ ದಣಿದಂತಾಗಿದ್ದಾರೆ.

ತಾಪ್ಸಿ ಪನ್ನು, ಶಾರುಕ್ ಖಾನ್ ಹಾಗೂ ವಿಕ್ಕಿ ಕೌಶಲ್ ಅಭಿನಯ ಅಲ್ಲಲ್ಲಿ ಹಿಡಿದಿಟ್ಟುಕೊಳ್ಳುತ್ತದೆ. ಬೊಮನ್ ಇರಾನಿ ಪಾತ್ರಪೋಷಣೆಯೇ ಜಾಳುಜಾಳಾಗಿದೆ. ಹಾಡುಗಳೂ ಕಾಡುವುದಿಲ್ಲ. ಅಪರೂಪಕ್ಕೊಮ್ಮೆ ಕಣ್ಣಂಚಿನಲ್ಲಿ ನೀರು ಒಸರುವಂತೆ ಮಾಡುವ ಕೆಲವು ಸನ್ನಿವೇಶಗಳನ್ನು ಹೊರತುಪಡಿಸಿದರೆ ರಾಜ್‌ಕುಮಾರ್ ಹಿರಾನಿ ಫಾರ್ಮ್ ಕಳೆದುಕೊಂಡಿದ್ದಾರೇನೋ ಎನ್ನುವ ಅಭಿಪ್ರಾಯವೇ ಕೊನೆಗೆ ಉಳಿಯುವುದು.

ವಿಶಾಖ ಎನ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೆವೈಸಿ ಅಪ್‌ಡೇಟ್ ಮಾಡದಿದ್ದರೆ ಬ್ಯಾಂಕ್ ಖಾತೆಗಳನ್ನು ತಕ್ಷಣವೇ ಬ್ಲಾಕ್ ಮಾಡಲಾಗುತ್ತದೆ ಎಂಬ ಸುಳ್ಳು ಸಂದೇಶಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ಹರಿಬಿಡಲಾಗಿತ್ತು. ಅಂತೆಯೇ ಇದೀಗ ಭಾರತೀಯ ಅಂಚೆಗೆ ಸಂಬಂಧಿಸಿದ ಸಂದೇಶವೊಂದು ಹರಿದಾಡುತ್ತಿದೆ. 'ಆತ್ಮೀಯ ಗ್ರಾಹಕರೆ, ನಿಮ್ಮ ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್ ಖಾತೆಯನ್ನು ಇಂದು ನಿರ್ಬಂಧಿಸಲಾಗಿದೆ. ದಯವಿಟ್ಟು ನಿಮ್ಮ ಪಾನ್ ಕಾರ್ಡ್ ಅನ್ನು ತಕ್ಷಣ ನವೀಕರಿಸಿ. ಕೆಳಗಿನ ಲಿಂಕ್ ಅನ್ನು ಕ್ಲಿಕ್ ಮಾಡಿ- http://surl.li./iccpf' ಎಂದು ಸಂದೇಶದಲ್ಲಿ ತಿಳಿಸಲಾಗಿದೆ. ಆದರೆ ಇದು ನಿಜವಲ್ಲ.



ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ (ಪಿಐಬಿ) ಫ್ಯಾಕ್ಟ್‌ಚೆಕ್ ವಿಭಾಗವು ಈ ಸಂದೇಶದ ಹಿಂದಿನ ಅಸಲಿಯತ್ತನ್ನು ಪತ್ತೆಹಚ್ಚಿದ್ದು, 'ಇಂಡಿಯಾ ಪೋಸ್ಟ್ ಹೆಸರಿನಲ್ಲಿ ಹರಿದಾಡುತ್ತಿರುವ ಸಂದೇಶ ನಕಲಿ. ಇಂಡಿಯಾ ಪೋಸ್ಟ್ ಈ ರೀತಿಯ ಸಂದೇಶಗಳನ್ನು ತನ್ನ ಗ್ರಾಹಕರಿಗೆ ಕಳುಹಿಸುವುದಿಲ್ಲ. ಈ ಲಿಂಕ್ ಅನ್ನು ಜನರು ಕ್ಲಿಕ್ ಮಾಡಿದರೆ, ವಂಚನೆಗೆ ಒಳಗಾಗಬಹುದು' ಎಂದು ಎಚ್ಚರಿಕೆ ನೀಡಿದೆ. ಸಾರ್ವಜನಿಕರು ತಮ್ಮ ವೈಯಕ್ತಿಕ ಹಾಗೂ ಬ್ಯಾಂಕ್ ವಿವರಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ ಎಂದು ಎಂದೂ ಎಚ್ಚರಿಕೆ ನೀಡಿದೆ.

ಗುಂಡಣ್ಣ



ಅಜ್ಜಿ ಎಂಬ ವಾತ್ಸಲ್ಯ ವೃಕ್ಷ

ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

ಅಜ್ಜಿ ಮೊಮ್ಮಗಳ ತಲೆಗೆ ಹರಳೆಣ್ಣೆ ಒತ್ತುವಾಗ ಮೊಮ್ಮಗಳ ತುಂಬುಗೆನ್ನೆ ತುಂಬಾ ಇಳಿದಿತ್ತು ಎಣ್ಣೆ. ಅಜ್ಜಿ ಆ ಎಣ್ಣೆಯನ್ನೆಲ್ಲಾ ಮೊಮ್ಮಗಳ ಮೊಕಕ್ಕೆ ತಿಕ್ಕುವಾಗ ಶುರು ಆಯ್ತು ಅಜ್ಜಿಗೂ ಮೊಮ್ಮಗಳಿಗೂ ಖಾಡಾಖಾಡಿ ಜಗಳ.

'ಅಜ್ಜೀ, ಹೀರೇಕಾಯಿ ಬಜ್ಜಿ, ಈಚೆಗೆ ನೀನು ಭಾಳಾ ಹೆಚ್ಕೊಂಡ್ ಬಿಟ್ಟಿದ್ದೀಯ, ನಿನ್ನ್ ಹಲ್ಲ್ ಮುರೀತೀನಿ'.

'ಸುಮ್ಮೆ ಕೂತ್ಕೊಳ್ಳೆ ಸುಪುನಾತಿ, ಇದ್ರೆ ತಾನೆ ಮುರಿಯದು ನೀನು?'

'ಹಂಗಾದ್ರೆ ನಿನ್ನ್ ಜುಟ್ಟ್ ಕಿತ್ತಾಕ್ತೀನಿ ನಾನು'

'ಇರೋದೇ ನಾಕ್ ಕೂದ್ಲು, ಕಿತ್ತಾಕ್ ಬುಡು, ನಿನ್ನ್ ಮದುವೇಗ್ ಬಂದು ಬೋಳ್ ಬೋಳಾಗ್ ನಿಂತ್ಕೋತೀನಿ ನಾನು'

ಅಜ್ಜಿಗೂ ಮೊಮ್ಮಗಳಿಗೂ ಇಂಥದ್ದೊಂದು ಜಗಳ ನಡೀತಿದ್ರೆ ಮನೆಮಂದಿಯೆಲ್ಲಾ ಮುಸಿಮುಸಿ ನಕ್ಕು ಅವರವರ ಕೆಲಸ ಅವರು ಮಾಡ್ತಾ ಇರೋರು. ಮೊಮ್ಮಗಳ ಅಂಗೈ ಮುಂಗೈ ಅಂಗಾಲು ಮುಂಗಾಲಿಗೆಲ್ಲಾ ಎಣ್ಣೆ ತಿಕ್ಕಿದ ಮೇಲೆ ಜಗಳ ಆಖೈರು!

ಅಜ್ಜಿಯನ್ನು ತನ್ನ ಎಣ್ಣೆ ತೋಳುಗಳಿಂದ ಅಪ್ಪಿಕೊಂಡು ಮೊಮ್ಮಗಳು ಅವಳ ಮುದಿಗೆನ್ನೆಯ ಮೇಲೆ ಮುತ್ತಿಟ್ಟರೆ ಮುದುಕಿಯ ಕಣ್ಣುಗಳಲ್ಲಿ ನಕ್ಷತ್ರಗಳ ಮೇಳ. ಬೋಡುಬಾಯ ತುಂಬಾ ಫಳ್ ಅಂತ ನಗು.

ಮತ್ತೆ ಅಜ್ಜಿ ಮೊಮ್ಮಗಳನ್ನು ಬಚ್ಚಲಿಗೆ ಎಳಕೊಂಡು ಹೋಗಿ ಕೂರಿಸಿ, ತಲೆಗೆ ಸೀಗೇಕಾಯಿ ತಿಕ್ಕಿ ಸುಡುಸುಡು ನೀರೆರೆಯುವಾಗ ಜಗಳದ ಮತ್ತೊಂದು ಎಪಿಸೋಡು ಶುರು...

'ಸುಟ್ಟ ಸುಟ್ಟ ಅಂತ ಹಾರಾಡ್ ಬ್ಯಾಡ ಸುಮ್ನೆ ಕೂತ್ ಕೊಳ್ಳೆ... ನಮ್ಮಜ್ಜಿ ನನ್ಗೆ ನೀರ ಎರೀವಾಗ ನಾನು ಮೂರ್ಛೆ ಓಗ್ಬುಡ್ತಾ ಇದ್ದೆ, ಇದ್ಯಾವ ಸುಡುನೀರು?'

'ಅಯ್ಯೊ ನಿಮ್ಮಜ್ಜಿ... ನನ್ನೇನು ಸುಡುನೀರಲ್ಲೇ ಸುಟ್ಟಕ್ತೀಯೇನೇ ಗಜಗೌರೀ... ಬಿಡೇ ಸಾಕು...'

ಮೊಮ್ಮಗಳನ್ನು ಮೀಯಿಸಿಕೊಂಡು ಬಂದ ಮೇಲೆ, ಅವಳು ಉಟ್ಟುತೊಟ್ಟು ಬಂದಾಗ ಅಜ್ಜಿ ನೀವಳಿಸಿ ನೆಟಿಗೆ ಮುರಿಯುತ್ತಾಳೆ. ಆಗ ಮತ್ತೊಮ್ಮೆ ಕದನ ವಿರಾಮ. ಮೊಮ್ಮಗಳ ಬೊಗಸೆ ಕಣ್ಣುಗಳಲ್ಲಿ ಕಂಬನಿಯ ತೆರೆ.

ಮನೆಯಲ್ಲಿ ಅಮ್ಮ ಮಗಳನ್ನು ಬಯ್ತಾ ಇದ್ದಾಳೆ...

'ಲೇ, ಈಚೀಚೆಗೆ ನೀನು ಗಂಡುಬೀರಿ ಆಗಿದ್ದೀಯ ಕಣೇ, ನನ್ಗೇ ತಿರೀಕೊಂಡು ಮಾತಾಡ್ತೀಯ? ನಿಮ್ಮಪ್ಪ ಬರಲಿ ಇರು ಹೇಳ್ತೀನಿ...'

ಮಗಳು ಮುಖ ಊದಿಸಿಕೊಂಡು ಮೂಲೆಯಲ್ಲಿ ಕೂತಿದ್ದ ಅಜ್ಜಿ ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಅಳುತ್ತೆ. ಆಗ ಅಜ್ಜಿ,

'ಯಾಕೇ ಮಗೀನ ಅಂಗ್ ಮೂರೊತ್ತೂ ಬಯ್ತಾನೇ ಇರ್ತಿಯ? ಅದೇನು ಮಾಡುತ್ತೆ? ಇರೋ ನಾಕ್ ದಿನ ತವರು ಮನೇಲಿ ತಂಪಾಗಿದ್ದು ಹೋಗಲಿ....'

ಇಂಥ ಮೊಮ್ಮಗಳು- ಅಜ್ಜಿ ನಮ್ಮ ನಿಮ್ಮ ಮನೆಗಳಲ್ಲಿ ಈಗಲೂ ಇದ್ದಾರಾ?

ಮನೆಗಳಿಗೆ ಈಗ ತ್ರೀ ಜಿ, ಫೋರ್ ಜಿ, ಫೈವ್ ಜಿ ಎಲ್ಲಾ ಬಂದಿದೆ. ಈ ಅಜ್ ಜೀ ಎಲ್ಲಿ ಹೋಯಿತು? ಏನೋ ಮಿಸ್ ಮಾಡ್ಕೊಳ್ತಾ ಇದೀವಿ ಅಲ್ವಾ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ | ಶುಕ್ರವಾರ ಡಿಸೆಂಬರ್ 22, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ದಶಮಿ ಗಂ.08-17 ನಕ್ಷತ್ರ: ಅಶ್ವಿನಿ ಗಂ.21-36 ಯೋಗ: ಪರಿಘ ಗಂ 11-11 ಕರಣ: ಗರ ಗಂ.08-17, ಧನು ಮಾಸದ 06ನೇ ದಿನ, ಮಳೆನಕ್ಷತ್ರ: ಮೂಲಾ 2.
ರಾಹುಕಾಲ : ಬೆಳಿಗ್ಗೆ 10-30 – 12-00, **ಸೂರ್ಯೋದಯ :** 06-53 ಸೂರ್ಯಾಸ್ತ : 06-05
ಮುಸ್ಲಿಂ ದಿನಾಂಕ : 08 ಜುಮಾದುಸ್ಸಾನಿ
ದಿನ ವಿಶೇಷ : ಉತ್ತರಾಯಣ ದಿನ, ಮೋಕ್ಷ ಏಕಾದಶಿ (ಸ್ಮಾರ್ತ), ಗೀತಾ ಜಯಂತಿ,
ಅದೃಷ್ಟ ಸಂಖ್ಯೆ : 5, 4

ಮೇಷ: ಹೊಸ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರುವುದರಿಂದ ಕಾರ್ಯದಲ್ಲಿ ಜಯ ದೊರೆಯುವುದು. ಯಾವುದೇ ಕಾರಣಗಳಿಗೂ ಉದ್ಯೋಗ ಬದಲಾವಣೆಯ ಬಗ್ಗೆ ತೀರ್ಮಾನಿಸಬೇಡಿ. ಸಾಲಬಾಧೆ ಸ್ವಲ್ಪ ಮಟ್ಟಿಗೆ ತೀರಲಿದೆ.

ವೃಷಭ: ಸಹೋದ್ಯೋಗಿಗಳೊಡನೆ ಅಥವಾ ಆಪ್ತ ಸ್ನೇಹಿತರೊಡನೆ ಹಣಕಾಸಿನ ವ್ಯವಹಾರದಿಂದಾಗಿ ಸಂಬಂಧಕ್ಕೆ ಹುಳಿ ಹಿಂಡಿದಂತಾಗಲಿದೆ. ನಂಬಿಕೆಗಳನ್ನು ಪ್ರತಿಪಾದಿಸಲು ಅಂಜಿಕೆ ಬೇಡ.

ಮಿಥುನ: ಪಾಲುದಾರಿಕೆ ವ್ಯವಹಾರದಲ್ಲಿ ನಷ್ಟವನ್ನು ಭರಿಸಬೇಕಾದ ಕ್ಲಿಷ್ಟ ಸಂದರ್ಭಗಳು ವ್ಯವಹಾರದಿಂದ ಹಿಂಬರುವ ಯೋಚನೆಗೆ ಮೂಲ ಕಾರಣ ಆಗುವುದು. ಅನಗತ್ಯ ಮಾತನ್ನು ಆಡುವುದರಿಂದ ನೆಮ್ಮದಿಗೆ ಭಂಗವಾಗಲಿದೆ.

ಕರ್ಕಾಟಕ: ಮನೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ಅನಿವಾರ್ಯ ಆಗಲಿದೆ. ಅನಿರೀಕ್ಷಿತವಾಗಿ ಸಂಘ-ಸಂಸ್ಥೆಗಳ ಜವಾಬ್ದಾರಿಯ ಅಧಿಕಾರ ವಹಿಸಬೇಕಾಗುವುದು. ಮಾಟ-ಮಂತ್ರದ ಭೀತಿ ಎದುರಾಗಲಿದೆ.

ಸಿಂಹ: ಅಧಿಕಾರದಲ್ಲಿ ಸ್ಥಾನಮಾನ ಪಡೆಯಲು ಧಾರ್ಮಿಕ ಕಾರ್ಯಗಳನ್ನು ನಡೆಸುವುದು ಒಳ್ಳೆಯದು. ಖಾದಿ ಉದ್ಯಮದವರಿಗೆ ಸರ್ಕಾರದಿಂದ ಸಹಾಯ ಸೌಲಭ್ಯ ದೊರೆಯಲಿದೆ. ಮಕ್ಕಳನ್ನು ದೂರಮಾಡಿಕೊಳ್ಳಬೇಡಿ.

ಕನ್ಯಾ: ವಾಹನಗಳ ರಿಪೇರಿಯಂತಹ ಅಥವಾ ಯಂತ್ರಗಳ ರಿಪೇರಿಯಂತಹ ಕಾರಣದಿಂದ ಖರ್ಚು ಉದ್ಭವಿಸುವುದು. ಕುಟುಂಬದ ಮಾರ್ಗಸೂಚಕರ ಮಾರ್ಗಸೂಚಿಯಂತೆ ಕಳೆದು ಹೋಗಿದ್ದ ವಸ್ತುಗಳೂ ಸಹ ಪತ್ತೆಯಾಗುವುವು.

ತುಲಾ: ವಿವಾಹ ಸಂಬಂಧ ವರಾನ್ವೇಷಣೆಗೆ ತೊಡಗುವುದಕ್ಕೆ ಸೂಕ್ತವಾದ ದಿನ, ಸುಲಭವಾಗಿ ಪ್ರಾಪ್ತಿಯಾಗುವುದು. ಅಜೀರ್ಣದ ಸಮಸ್ಯೆಯಿಂದ ಜೀವನೋತ್ಸಾಹ ಕಳೆದುಕೊಂಡು ಆಲಸ್ಯ ಹೊಂದುವಿರಿ.

ವೃಶ್ಚಿಕ: ನಿಮ್ಮ ಒತ್ತಡದ ನಡುವೆಯೂ ಇತರರಿಗೆ ಸಹಾಯ ಮಾಡುವ ಮನಸ್ಥಿತಿ ಬೆಳೆಸಿಕೊಳ್ಳಿ. ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದ ಹಣ ಇಂದು ನಿಮ್ಮ ಕೈ ಸೇರಲಿದೆ. ರಾಜಕೀಯದವರಿಗೆ ನಿರೀಕ್ಷಿತ ಕಾರ್ಯ ಸಾಧನೆ ತೃಪ್ತಿ ತರುತ್ತದೆ.

ಧನು: ಅಣ್ಣ-ತಮ್ಮಂದಿರ ವರ್ಗದವರ ಮನೆಯಲ್ಲಿನ ಶುಭಕಾರ್ಯಗಳಲ್ಲಿ ಜವಾಬ್ದಾರಿ ವಹಿಸುವಿರಿ. ಭೂ ಖರೀದಿ, ಗೃಹ ನಿರ್ಮಾಣ ಕೈಗೊಳ್ಳಲು ಉತ್ತಮವಾದ ಸಮಯ. ಯಂತ್ರೋಪಕರಣ ಮಾರಾಟದಿಂದ ಲಾಭ.

ಮಕರ: ಹಿರಿಯರ ಮಾರ್ಗದರ್ಶನದಂತೆ ಕೆಲಸಗಳನ್ನು ಮಾಡುವುದರಿಂದ ಅಡೆತಡೆಗಳು ಇರುವುದಿಲ್ಲ. ನಿಮ್ಮ ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ. ಅಗತ್ಯ ವಸ್ತುಗಳ ಖರೀದಿಗೆ ಹಣ ವಿನಿಯೋಗ ಆಗುವುದು.

ಕುಂಭ: ನಿಮ್ಮ ಮನದಲ್ಲಿರುವ ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಇಂದು ಸೂಕ್ತ ದಿನವಾಗಿದೆ. ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಒಂದು ಮಧುರ ಘಟನೆ ಈ ದಿನ ನಿಮ್ಮ ಮನೆಯಲ್ಲಿ ನಡೆಯಲಿದೆ.


ಮೀನ: ನೀವು ಮಾಡಿದ ಪರೋಪಕಾರದ ಫಲ ತಕ್ಷಣದಲ್ಲಿಯೇ ಅನುಭವಕ್ಕೆ ಬರಲಿದೆ. ಆಧ್ಯಾತ್ಮಿಕ ಚಿಂತನೆಗಳಿಂದ ಮಾನಸಿಕ ನೆಮ್ಮದಿ ಪ್ರಾಪ್ತಿಯಾಗಲಿದೆ. ಅವಶ್ಯಕತೆಗಿಂತ ಹೆಚ್ಚಾಗಿ ಹಣ ಸಂಗ್ರಹವಾಗುವುದು.

ಪದಬಂಧ 5537

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಲಕ್ಕೆ ನಿಂತಿರುವವನು ಏನೇನೂ ಕೈಲಾಗದವನು (4)
3.ವರನಿಗೆ ವನದಲ್ಲಿ ಆದಾಯವೇ? (4)
5.ಗಮನವಿಟ್ಟು ನೋಡಿ! ಅಂಬರ ಕಾಣುತ್ತಿದೆ! (3)
6.ಹರವಿಯನ್ನು ತಿರುಗಿಸಿದರೆ ಪ್ರೇಮಿಗಳ ಅಗಲಿಕೆನೋವು! (3)
8.ಲಾಂಗೂಲವಿರುವ ಹುಡುಗ! (3)
9. ಊರ ಸಮೀಪದ ತೋಟ (4)
10.ಕಾರಬಾರ ನಡೆಸಿ ಹಚ್ಚಿಕೊಂಡಿರುವ ಸೋಪು (4)
11.ನಯವಾಗಿ ಹೊಳೆಯುವ ಅಕ್ಷಿ (3)
12.ಟಕ ಟಕ ಸದ್ದು ಮಾಡುತ್ತಿರುವ ಕ್ರೂರಿ (3)
14.ಸ್ವಾಗತ ಕೋರುತ್ತಾ ತನಗೆ ತಾನೇ ಮಾತಾಡುವುದು (3)
16.ಕರದಲ್ಲಿರುವ ಹೆಣ (4)
17.ಚಾರನದ್ದು ಕರಾರುವಕ್ಕಾದ ಎಣಿಕೆ (4)

ಮೇಲಿಂದ ಕೆಳಕ್ಕೆ
1.ದುಡ್ಡಿಲ್ಲದವಳು ಅಡವಿಯಲ್ಲಿದ್ದಾಳಲ್ಲಾ? (3)
2.ನಗರದಲ್ಲಿ ಸಿಕ್ಕೀತೇ ಈ ಆಭರಣ? (2)
3.ಯೌವ್ವನವಿದ್ದಾಗ ನೋಡುತ್ತಿರುವ ಕಾಡು (2)
4.ನಡುವೆಯೇ ಶುರುವಾಯಿತಲ್ಲ ಈ ಕಂಪನ? (3)
7.ಯವನನಿಗೆ ಗೋಚರಿಸಿರುವ ತುರಗದ ಮುಖ (5)
8.ಬಾಲ ಹಿಡಿದು ಬಂದಿರುವ ಅನುಯಾಯಿ (5)
11.ಈತ ನೃತ್ಯ ಮಾಡುತ್ತಿರುವವನು (3)
13.ತರ್ಕಮಾಡದೆ ಕರ ಜೋಡಿಸಿದಾಗ ಕಾಣಿಸಿದ ದೇವರು (3)
14.ಸ್ವಯಂವರದಲ್ಲಿರುವ ನಾದ (2)
15.ತರಲೆಯ ಶಿರ (2)



5536ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಾಜಯ 3.ಸಹವಾಸ
5.ಮಧುರ 6.ಮಂಗ
7.ಮದರಂಗಿ 9.ರಸದ
10ಯಮಸ 12.ಅವಸರ
14.ಶುಕ 15.ಗೋಪಾಲ
17.ಕಡೆಗೋಲು 18.ಕ್ಷಮಾದಾನ

ಮೇಲಿಂದ ಕೆಳಕ್ಕೆ:
1.ಪರಂಧಾಮ 2.ಯಮ
3.ಸರದಾರ 4.ಸಲಗ
6.ಮಂದಹಾಸ 8.ದಣಾಯಕ
11.ಸನ್ನೆಗೋಲು 13.ರಸಾಯನ
14.ಶುನಕ 16.ಲಕ್ಷ

ಸುಡೊಕು 5923

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5922 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

ಫಲಾನುಭವಿ ವಂತಿಗೆ ಸರ್ಕಾರದಿಂದ ಪಾವತಿ • ಫೆಬ್ರುವರಿಯಲ್ಲಿ 48,796 ಮನೆಗಳ ಹಸ್ತಾಂತರ: ಜಮೀರ್ ಭರವಸೆ

ಕೊಳೆಗೇರಿವಾಸಿಗಳ ಮನೆಗೆ ₹6,170 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಂ ಆವಾಸ್ ಯೋಜನೆಯಡಿ ನಗರಪ್ರದೇಶದ ಕೊಳೆಗೇರಿ ನಿವಾಸಿಗಳಿಗೆ 1,80,253 ಮನೆಗಳ ನಿರ್ಮಾಣ ಯೋಜನೆಗೆ ಫಲಾನುಭವಿಗಳ ವಂತಿಗೆಯಾಗಿ ₹6,170 ಕೋಟಿಯನ್ನು ಪಾವತಿಸಲು ಸರ್ಕಾರ ತೀರ್ಮಾನಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆ ಬಳಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಅವರು, ಕೊಳೆಗೇರಿಯಲ್ಲಿ ವಾಸಿಸುವ ಬಡವರಿಗೆ ಮನೆ ನಿರ್ಮಿಸಿ ಕೊಡುವ ಯೋಜನೆ ದಶಕಗಳಿಂದ ಪೂರ್ಣಗೊಂಡಿರಲಿಲ್ಲ. ಫಲಾನುಭವಿಗಳ ಪಾಲಿನ ಹೆಚ್ಚಿನ ಮೊತ್ತವನ್ನು ಸರ್ಕಾರ ಭರಿಸುವ ಮೂಲಕ, ಬಡವರಿಗೆ ಮನೆ ನಿರ್ಮಿಸುವ ಯೋಜನೆಯನ್ನು ಪೂರ್ಣಗೊಳಿಸಲು ನಿರ್ಧರಿಸಲಾಗಿದೆ ಎಂದರು.



ಜಮೀರ್ ಅಹಮದ್ ಖಾನ್

ಇದಕ್ಕೆ ಮೊದಲು ಫಲಾನುಭವಿಗಳು ₹4.50 ಲಕ್ಷ ನೀಡಬೇಕಿತ್ತು. ಈಗ ಕಂತಿನ ರೂಪದಲ್ಲಿ ₹1 ಲಕ್ಷ ಪಾವತಿಸಿದರೆ ಸಾಕು ಎಂದೂ ಅವರು ಹೇಳಿದರು.

ಈ ಯೋಜನೆಯಡಿ 1.80 ಲಕ್ಷ ಮನೆಗಳ ಪೈಕಿ 48,796 ಮನೆಗಳನ್ನು ಫೆಬ್ರುವರಿಯಲ್ಲಿ ಫಲಾನುಭವಿಗಳಿಗೆ ಹಸ್ತಾಂತರಿಸಲಾಗುವುದು. ಫಲಾನುಭವಿಗಳು ತಮ್ಮ ಪಾಲಿನ ವಂತಿಗೆ ನೀಡದ ಕಾರಣ ಮನೆಗಳ ನಿರ್ಮಾಣ ಕಾರ್ಯ ವಿವಿಧ ಹಂತಗಳಲ್ಲಿ ಸ್ಥಗಿತಗೊಂಡಿತ್ತು. ಸರ್ಕಾರ ಈಗ ಬೃಹತ್ ಮೊತ್ತ ನೀಡಲು ಒಪ್ಪಿರುವ ಕಾರಣ ಅರ್ಧಕ್ಕೆ ನಿಂತಿರುವ ಕಾಮಗಾರಿಗಳಿಗೆ ಮತ್ತೆ ಚಾಲನೆ ಸಿಗಲಿದೆ ಎಂದರು.

ಈ ಹಿಂದೆ, ಸಿದ್ದರಾಮಯ್ಯ ಸರ್ಕಾರ ಇದ್ದಾಗ 2014–15 ರಲ್ಲಿ ಯೋಜನೆ ಚಾಲನೆ ನೀಡಲಾಗಿತ್ತು. 2018ರ ಬಳಿಕ ಬಂದ ಸರ್ಕಾರಗಳು ಒಂದು ಮನೆಯನ್ನೂ ಪೂರ್ಣಗೊಳಿಸಿ ಹಂಚಿಕೆ ಮಾಡಲಿಲ್ಲ. ಈ ಯೋಜನೆಯಡಿ ಒಂದು ಮನೆಗೆ ₹7.50 ಲಕ್ಷ ಖರ್ಚಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ತಲಾ ₹1.50 ಲಕ್ಷ ನೀಡಬೇಕು. ಫಲಾನುಭವಿಗಳು ₹4.50 ಲಕ್ಷ ನೀಡಬೇಕಿತ್ತು. ಫಲಾನುಭವಿಗಳು ಹಣವನ್ನೇ ಪಾವತಿ ಮಾಡಲಿಲ್ಲ. ಇದರಿಂದ ಮನೆ ನಿರ್ಮಾಣ ಕಾಮಗಾರಿ ಅರ್ಧಕ್ಕೆ ನಿಂತು ಹೋಯಿತು ಎಂದು ಹೇಳಿದರು.

ಕೇಂದ್ರ ಸರ್ಕಾರ ಕೊಡುವ ಹಣ ಜಿಎಸ್‌ಟಿಗೆ ಹೋಗುತ್ತಿದೆ. ಈ ಬಗ್ಗೆ ಕೇಂದ್ರಕ್ಕೆ ಪತ್ರ ಬರೆಯಲಾಗುವುದು ಎಂದು ಜಮೀರ್ ತಿಳಿಸಿದರು.

ಪ್ರಮುಖ ತೀರ್ಮಾನಗಳು

- ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಮತ್ತು ಪ್ರಾಂಶುಪಾಲರ ವೃಂದಕ್ಕೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಒಪ್ಪಿಗೆ. ಇದರ ಅನ್ವಯ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕೆಪಿಎಸ್‌ಸಿ ಅಥವಾ ಕೆಇಎ ಎಂಬುದರ ಬದಲಿಗೆ ಕೆಪಿಎಸ್‌ಸಿ ಅಥವಾ ಸರ್ಕಾರದಿಂದ ವಹಿಸಬಹುದಾದ ಬೇರೆ ಯಾವುದಾದರೂ ಸಂಸ್ಥೆ ಮೂಲಕ ನೇಮಕ ಮಾಡಲು ಈ ತಿದ್ದುಪಡಿ ತರಲಾಗಿದೆ
- ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ನಿರಂತರವಾಗಿ ರೋಗ ಪತ್ತೆ ಸೇವೆ ಒದಗಿಸುವ ಉದ್ದೇಶದಿಂದ ಪ್ರಯೋಗಾಲಯ ಉಪಕರಣಗಳಿಗೆ ರಾಸಾಯನಿಕಗಳು ಮತ್ತು ಕಂಪ್ಯೂಟರ್ ರೇಡಿಯಾಗ್ರಫಿ ಸಿಸ್ಟಮ್‌ಗಳಿಗೆ ಡ್ರೈಲೇಸರ್ ಎಕ್ಸ್‌ರೇ ಫಿಲಂ ಮತ್ತು ಪರಿಕರಗಳನ್ನು ಒದಗಿಸಲು ₹50.15 ಕೋಟಿ
- ರಾಜ್ಯದ 8 ಜಿಲ್ಲೆಗಳಲ್ಲಿ ವಾಸಿಸುತ್ತಿರುವ 11 ಬುಡಕಟ್ಟು ಪಂಗಡಗಳಾದ ಕೊರಗ, ಜೇನುಕುರುಬ, ಸೋಲಿಗ, ಎರವ, ಕಾಡುಕುರುಬ, ಮಲೆಕುಡಿಯ, ಸಿದ್ದಿ, ಹಸಲರು, ಗೌಡಲು, ಗೊಂಡ ಮತ್ತು ಬೆಟ್ಟ ಕುರುಬ ಜನಾಂಗದ ಕುಟುಂಬಗಳಿಗೆ ವರ್ಷವಿಡೀ ಪೌಷ್ಟಿಕ ಆಹಾರ ಸರಬರಾಜು ಮಾಡುವ ಯೋಜನೆ ಜಾರಿಗೆ ₹120 ಕೋಟಿ ನೀಡಲು ಒಪ್ಪಿಗೆ
- ಕೆಎಸ್‌ಆರ್‌ಟಿಸಿಯಿಂದ 300 ವಿದ್ಯುತ್‌ಚಾಲಿತ ಬಸ್ಸುಗಳ ಖರೀದಿ, ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ 450 ಎಲೆಕ್ಟ್ರಿಕ್ ಬಸ್ ಕಾರ್ಯಾಚರಣೆಗೊಳಿಸಲು ಒಪ್ಪಿಗೆ
- ಎಡಿಬಿ ನೆರವಿನಿಂದ ಮಂಗಳೂರು ನಗರದಲ್ಲಿ ಜಾರಿ ಆಗುತ್ತಿರುವ 24x7 ನೀರು ಸರಬರಾಜು ಯೋಜನೆಗೆ 125 ಎಂಎಲ್‌ಡಿ ನೀರು ಶುದ್ಧೀಕರಣ ಘಟಕವನ್ನು ಸ್ಥಾಪಿಸಲು ₹127.70 ಕೋಟಿಗೆ ಅನುಮೋದನೆ

ಸುದ್ದಿ 2 ನಿಮಿಷ

ನಾ.ಡಿಸೋಜಾ ಸಾಹಿತ್ಯೋತ್ಸವ 31ಕ್ಕೆ

ಶಿವಮೊಗ್ಗ: ಇಲ್ಲಿನ ಕರ್ನಾಟಕ ಸಂಘ, ಶಿಕಾರಿಪುರದ ಜನಸ್ಪಂದನ ಟ್ರಸ್ಟ್ ಹಾಗೂ ಸುವ್ವೀ ಪ್ರಕಾಶನದ ಆಶ್ರಯದಲ್ಲಿ ಡಿ.31ರಂದು ಸಾಹಿತಿ ನಾ.ಡಿಸೋಜಾ ಅವರ ಬದುಕು–ಬರಹ ಕುರಿತು 'ಕನ್ನಡದ ನಾಡಿ ಸಾಹಿತ್ಯೋತ್ಸವ' ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 10.30ಕ್ಕೆ ಕರ್ನಾಟಕ ಸಂಘದ ಸಭಾ ಭವನದಲ್ಲಿ ನಡೆಯಲಿರುವ ಸಾಹಿತ್ಯೋತ್ಸವದ ಉದ್ಘಾಟನೆ ವೇಳೆ ನಾ.ಡಿಸೋಜಾ ಅವರ 44 ಕಾದಂಬರಿಗಳ 9 ಸಮಗ್ರ ಸಂಪುಟಗಳು ಹಾಗೂ ಅವರ ಕಥೆಯಾಧಾರಿತ 'ಸೆಲ್ವಿಯಾ ಎಂಬ ಹುಡುಗಿ' ಕಿರುಚಿತ್ರವನ್ನು ಸಾಹಿತಿ ಹಂಪಾ ನಾಗರಾಜಯ್ಯ ಬಿಡುಗಡೆ ಮಾಡುವರು. ಸಾಹಿತ್ಯೋತ್ಸವದಲ್ಲಿ ನಾ.ಡಿಸೋಜಾ ಬದುಕು–ಬರಹ ಕುರಿತ 6 ಗೋಷ್ಠಿಗಳು ನಡೆಯಲಿವೆ.



ಮಕ್ಕಳ ಸಾಹಿತಿ ಹಾಫೀಜ್ ಕರ್ನಾಟಕಿ, ಜಿಲ್ಲಾಧಿಕಾರಿ ಡಾ.ಆರ್.ಸೆಲ್ವಮಣಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಮಂಜುನಾಥ್, ಹಿರಿಯ ಪತ್ರಕರ್ತ ಕೆ.ಎಸ್. ಹುಚ್ರಾಯಪ್ಪ, ಚಿತ್ರ ನಿರ್ದೇಶಕ ನವೀನ್ ಡಿಸೋಜಾ, ಕರ್ನಾಟಕ ಸಂಘದ ಅಧ್ಯಕ್ಷ ಎಂ.ಎನ್.ಸುಂದರರಾಜ್, ಸುವ್ವೀ ಪ್ರಕಾಶನದ ಡಿ.ಎನ್. ಸುನೀಲ್‌ಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಗೂಳಿಹಟ್ಟಿ ಶೇಖರ್ ಪಿಐಎಲ್ ವಜಾ

ಬೆಂಗಳೂರು: 'ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ಕೋಟ್ಯಂತರ ರೂಪಾಯಿಗಳ ವಂಚನೆ ನಡೆದಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖಾಧಿಕಾರಿ ವರ್ಗಾವಣೆ ರದ್ದುಪಡಿಸಬೇಕು' ಎಂದು ಕೋರಿ ಮಾಜಿ ಸಚಿವ ಗೂಳಿಹಟ್ಟಿ ಡಿ.ಶೇಖರ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, 'ಅಧಿಕಾರಿಗಳನ್ನು ಯಾವ ಸ್ಥಳಕ್ಕೆ ವರ್ಗಾಯಿಸಬೇಕು, ಯಾವ ಹುದ್ದೆಯಲ್ಲಿ ಉಳಿಸಿಕೊಳ್ಳಬೇಕು ಎಂಬುದು ಸರ್ಕಾರದ ವಿವೇಚನೆಗೆ ಬಿಟ್ಟ ಅಧಿಕಾರ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ಅಧಿಕಾರಿಗಳ ವಗಾವಣೆಗೆ ಅದರದ್ದೇ ಆದ ಪ್ರತ್ಯೇಕ ಮಾರ್ಗಸೂಚಿಗಳಿವೆ. ಈ ಪ್ರಕರಣದಲ್ಲಿ ಅರ್ಜಿದಾರರು ಮೂರನೇ ವ್ಯಕ್ತಿಯಾಗಿದ್ದು, ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲು ಅವಕಾಶವಿಲ್ಲ' ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?: 'ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಕೋಟ್ಯಂತರ ರೂಪಾಯಿ ವಂಚನೆ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ಪ್ರಗತಿಯಲ್ಲಿದ್ದು, ಸರ್ಕಾರ ತನಿಖಾಧಿಕಾರಿಯ ವರ್ಗಾವಣೆ ಮಾಡಿದೆ. ಇದು ರಾಜಕೀಯ ಪ್ರೇರಿತವಾಗಿದ್ದು, ಪ್ರಕರಣದಲ್ಲಿ ಕೆಲವು ರಾಜಕೀಯ ಪ್ರಭಾವಿಗಳನ್ನು ರಕ್ಷಣೆ ಮಾಡುವ ಉದ್ದೇಶವಿದೆ' ಎಂದು ಗೂಳಿಹಟ್ಟಿ ಶೇಖರ್ ಆರೋಪಿಸಿದ್ದರು.

ಹೊರ ಗುತ್ತಿಗೆಯಲ್ಲೂ ಮೀಸಲಾತಿ: ನಿರ್ಧಾರ

ಒಂದನೇ ಪುಟದಿಂದ

ಈ ಹಿಂದೆ ಸರ್ಕಾರಿ ಹುದ್ದೆಗಳ ಹೊರಗುತ್ತಿಗೆಯಲ್ಲಿ ಮೀಸಲಾತಿ ಇರಲಿಲ್ಲ. ಹೊರಗುತ್ತಿಗೆಯಲ್ಲೂ ಮೀಸಲಾತಿ ನೀಡಬೇಕು ಎಂದು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಂಘಟನೆಗಳು ಸರ್ಕಾರದ ಮುಂದೆ ಬೇಡಿಕೆ ಇಟ್ಟಿದ್ದವು.

ಫೆಬ್ರುವರಿಯಲ್ಲಿ ಅಧಿವೇಶನ: 2024ರ ಫೆಬ್ರುವರಿಯಲ್ಲಿ ವಿಧಾನಮಂಡಲದ ಜಂಟಿ ಅಧಿವೇಶನ ಮತ್ತು ಬಜೆಟ್ ಅಧಿವೇಶನ ನಡೆಯಲಿದೆ ಎಂದು ಪಾಟೀಲ ಹೇಳಿದರು.

'ಯೂನಿವರ್ಸ್ ಇನ್ ದ ಕ್ಲಾಸ್ ರೂಂ'

ಬೆಂಗಳೂರು: ಜವಾಹರ್ ಲಾಲ್ ನೆಹರೂ ತಾರಾಲಯ ಇದೇ 22 ರಿಂದ (ಶುಕ್ರವಾರ) 24ರವರೆಗೆ 'ಯೂನಿವರ್ಸ್ ಇನ್ ದ ಕ್ಲಾಸ್ ರೂಂ' ಕಾರ್ಯಕ್ರಮ ಏರ್ಪಡಿಸಿದೆ. 13 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ನೋಂದಣಿಗಾಗಿ 08022379725/22266084 ಸಂಪರ್ಕಿಸಬಹುದು.

ಕೋವಿಡ್ ನಿರ್ವಹಣೆಗೆ ಸಂಪುಟ ಉಪಸಮಿತಿ

ಹೊಸ ವರ್ಷಾಚರಣೆ, ಕ್ರಿಸ್ ಮಸ್‌ಗೆ ಪ್ರತ್ಯೇಕ ಮಾರ್ಗಸೂಚಿ ಇಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಸಮರ್ಪಕ ನಿರ್ವಹಣೆ ಹಾಗೂ ಪಾರದರ್ಶಕತೆಗಾಗಿ ಸಚಿವ ಸಂಪುಟ ಉಪ ಸಮಿತಿ ರಚಿಸಲಾಗುವುದು. ಈ ಸಮಿತಿಯು ತಾಂತ್ರಿಕ ಸಲಹಾ ಸಮಿತಿ ಜತೆ ಸಂಪರ್ಕದಲ್ಲಿದ್ದು ನಿರಂತರ ನಿಗಾ ಇಡಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚಳವಾಗುತ್ತಿರುವ ಮತ್ತು ಮೂವರು ಮೃತಪಟ್ಟಿದ್ದಾರೆ. ಹೀಗಾಗಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಚರ್ಚಿಸಲು ಗುರುವಾರ ಉನ್ನತ ಮಟ್ಟದ ಸಭೆ ನಡೆಯಿತು.

ಸಭೆಯ ಬಳಿಕ ಮಾತನಾಡಿದ ಮುಖ್ಯಮಂತ್ರಿ, 'ಓಮೈಕ್ರಾನ್ ಉಪತಳಿ ಜೆಎನ್.1 ತಳಿಗೆ ಆತಂಕಪಡುವ ಅಗತ್ಯವಿಲ್ಲ. ಆದರೆ, ಎಚ್ಚರಿಕೆ ಇರಬೇಕು. ಸದ್ಯ 60ವರ್ಷಕೆಳಗಿನವರಿಗೆ ಮಾಸ್ಕ್ ಕಡ್ಡಾಯವಿಲ್ಲ. ಜನಸಂದಣಿಯಲ್ಲಿ ಮಾಸ್ಕ್ ಧರಿಸಿದರೆ ಒಳ್ಳೆಯದು' ಎಂದರು.

'ಲಸಿಕೆ ಸಿದ್ಧ ಇಟ್ಟುಕೊಳ್ಳಲು ಸೂಚಿಸಲಾಗಿದೆ. ಅಗತ್ಯ ಇದ್ದರೆ ಲಸಿಕೆ ಖರೀದಿ ಮಾಡುತ್ತೇವೆ. ಕೇಂದ್ರ ಸರ್ಕಾರ ಪೂರೈಸುವ ಮೊದಲು ಖರೀದಿಸುವಂತೆ ಹೇಳಿದ್ದೇನೆ' ಎಂದರು.

'ಹೊಸ ವರ್ಷಾಚರಣೆ, ಕ್ರಿಸ್‌ಮಸ್ ಹಬ್ಬಕ್ಕೆ ಪ್ರತ್ಯೇಕ ನಿಯಮ ಇಲ್ಲ. ಮುಂದಿನ ದಿನಗಳಲ್ಲಿ ಮಾರ್ಗಸೂಚಿ ಹೊರಡಿಸುವ ಕುರಿತು ಸಚಿವ ಸಂಪುಟ ಉಪ ಸಮಿತಿ ನಿರ್ಧರಿಸಲಿದೆ' ಎಂದರು.

'ಈ ಹಿಂದೆ ಮಾಡಿದ ತಪ್ಪು ಮರುಕಳಿಸಬಾರದೆಂದು ಅಧಿಕಾರಿಗಳಿಗೆ ಹೇಳಿದ್ದೇನೆ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ. ಆಕ್ಸಿಜನ್, ವೆಂಟಿಲೇಟರ್, ಹಾಸಿಗೆ, ಔಷಧಿ ಸೇರಿ ಯಾವೆಲ್ಲ ವಸ್ತು ಬೇಕೋ ಅದನ್ನು ಖರೀದಿಸಲು ಸೂಚನೆ ನೀಡಲಾಗಿದೆ' ಎಂದರು.

'ಸಂಪುಟ ಉಪ ಸಮಿತಿಯು ತಜ್ಞರ ಜೊತೆ ಸಮನ್ವಯದಿಂದ ನಿರಂತರ ಕೆಲಸ ಮಾಡಬೇಕು. ತಾಂತ್ರಿಕ ಸಲಹಾ ಸಮಿತಿಯ ಶಿಫಾರಸು ಜಾರಿ ಮಾಡಬೇಕು. ಗಡಿ ಜಿಲ್ಲೆಗಳಲ್ಲಿ ಹೆಚ್ಚು ಪರೀಕ್ಷೆ ಮಾಡಬೇಕು' ಎಂದು ಸೂಚನೆ ನೀಡಿದ್ದು, 'ಶನಿವಾರದಿಂದ ಪ್ರತಿದಿನ ಐದು ಸಾವಿರ ತಪಾಸಣೆ ನಡೆಸಲಾಗುವುದು. 60 ವರ್ಷ ದಾಟಿದವರು ಮಾಸ್ಕ್ ಹಾಕಬೇಕು' ಎಂದರು.

'ಎಲ್ಲ ಕಡೆ ತಪಾಸಣೆ ನಡೆಸಿದ ಬಳಿಕ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ ಆಗಬಹುದು. ಖಾಸಗಿ ಆಸ್ಪತ್ರೆಗಳಲ್ಲಿ ತಪಾಸಣೆಗೆ ದರ ಇನ್ನೂ ನಿಗದಿಪಡಿಸಿಲ್ಲ. ಕೋವಿಡ್ ನಿರ್ವಹಣೆಗೆ ಹಣದ ಕೊರತೆ ಇಲ್ಲ' ಎಂದು ಹೇಳಿದರು.

ಸಕ್ರಿಯ ಪ್ರಕರಣ 105ಕ್ಕೆ ಏರಿಕೆ

ರಾಜ್ಯದಲ್ಲಿ ಗುರುವಾರ 24 ಕೋವಿಡ್ ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ ನೂರರ ಗಡಿ (105) ದಾಟಿದೆ.

ಬೆಂಗಳೂರಿನಲ್ಲಿಯೇ 93 ಸಕ್ರಿಯ ಪ್ರಕರಣಗಳಿವೆ. ರಾಜ್ಯದಲ್ಲಿ 24 ಗಂಟೆಗಳಲ್ಲಿ 2,263 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 1.06 ರಷ್ಟಿದೆ. ಬೆಂಗಳೂರಿನಲ್ಲಿ ಒಂದು ದಿನದಲ್ಲಿ 1,540 ಪರೀಕ್ಷೆ ನಡೆಸಲಾಗಿದ್ದು, ಹೊಸದಾಗಿ 23 ಪ್ರಕರಣ ದೃಢಪಟ್ಟಿವೆ.

ಸೋಂಕಿತರಲ್ಲಿ 85 ಮಂದಿ ಮನೆ ಆರೈಕೆಗೆ ಒಳಗಾದರೆ, 20 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರಲ್ಲಿ 9 ಮಂದಿ ತೀವ್ರ ನಿಗಾ ಘಟಕದಲ್ಲಿ, ಉಳಿದ 11 ಮಂದಿ ಸಾಮಾನ್ಯ ವಾರ್ಡ್‌ನಲ್ಲಿ ಇದ್ದಾರೆ. ಸೋಂಕಿತರಲ್ಲಿ 11 ಮಂದಿ ಚೇತರಿಸಿಕೊಂಡಿದ್ದಾರೆ.

ಚಿತ್ರದುರ್ಗ ಪೋಕ್ಸೊ ಪ್ರಕರಣ ಆರೋಪಿ ಮಹಿಳೆಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಮುರುಘಾಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿನ ಎರಡನೇ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿದ್ದ ಎಸ್.ರಶ್ಮಿ ಅವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಎಸ್.ರಶ್ಮಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಮೊಹಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪುರಸ್ಕರಿಸಿ ಆದೇಶಿಸಿದೆ. ಅರ್ಜಿದಾರರು ₹2 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ನೀಡಬೇಕು. ಅಷ್ಟೇ ಮೊತ್ತಕ್ಕೆ ಇಬ್ಬರ ಭದ್ರತಾ ಖಾತರಿ ನೀಡಬೇಕು. ಸಾಕ್ಷ್ಯ ನಾಶಕ್ಕೆ ಯತ್ನಿಸಬಾರದು. ನ್ಯಾಯಾಲಯದ ವಿಚಾರಣೆಗೆ ಹಾಜರಾಗಬೇಕು ಹಾಗೂ ಸಹಕರಿಸಬೇಕು ಎಂದು ಷರತ್ತು ವಿಧಿಸಲಾಗಿದೆ. ಈ ಪ್ರಕರಣದ ಪ್ರಮುಖ ಆರೋಪಿ ಶಿವಮೂರ್ತಿ ಶರಣರಿಗೆ ಹೈಕೋರ್ಟ್ ಇತ್ತೀಚೆಗಷ್ಟೇ ಜಾಮೀನು ಮಂಜೂರು ಮಾಡಿತ್ತು.

ಪ್ರಕರಣವೇನು?: 'ಶರಣರು ನಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿ ಇಬ್ಬರು ಬಾಲಕಿಯರು ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ 2022ರ ಆಗಸ್ಟ್ 26ರಂದು ದೂರು ದಾಖಲಿಸಿದ್ದರು. ದೂರಿನಲ್ಲಿ ಎಸ್. ರಶ್ಮಿ, 'ಬಾಲಕಿಯರನ್ನು ಸ್ವಾಮೀಜಿಯ ಖಾಸಗಿ ಕೊಠಡಿಗೆ ಕರೆದುಕೊಂಡು ಹೋಗಿ ಬಿಡುತ್ತಿದ್ದರು ಮತ್ತು ಲೈಂಗಿಕ ದೌರ್ಜನ್ಯ ಎಸಗುತ್ತಿದ್ದ ಸ್ವಾಮೀಜಿಯ ಕುಕೃತ್ಯಕ್ಕೆ ಸಹಕರಿಸುತ್ತಿದ್ದರು' ಎಂದು ಆರೋಪಿಸಲಾಗಿತ್ತು. ಹೀಗಾಗಿ, ರಶ್ಮಿ ವಿರುದ್ಧ ಭಾರತೀಯ ದಂಡ ಸಂಹಿತೆ-1860 ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012ರ (ಪೋಕ್ಸೊ) ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸಿ 2022ರ ಸೆಪ್ಟೆಂಬರ್ 1ರಂದು ಬಂಧಿಸಲಾಗಿತ್ತು.



ನೃತ್ಯ ವೈಭವ

ಮೈಸೂರಿನ ಕಿರುರಂಗಮಂದಿರದಲ್ಲಿ ಆಯೋಜಿಸಿದ್ದ ನಿರಂತರ ರಂಗ ಉತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಂಚೆ ಮದ್ದೇ ಕಲಾತಂಡದವರು 'ಸಿದ್ದಿ ಡಮಾಮಿ ಜಾನಪದ ನೃತ್ಯ' ಪ್ರದರ್ಶನ ನೀಡಿದರು ಪ್ರಜಾವಾಣಿ ಚಿತ್ರ

ಜ್ಯೋತಿಷಿ ಮಾತು ಕೇಳಿ 120 ದಿನ ಗೃಹಬಂಧನ: ಯುವತಿ ರಕ್ಷಣೆ

ಬೆಂಗಳೂರು: 'ಮೈ ಮೇಲೆ ದೆವ್ವ ಬರುತ್ತಿದೆ' ಎಂದಿದ್ದ ಜ್ಯೋತಿಷಿ ಮಾತು ಕೇಳಿ 120 ದಿನ ಗೃಹಬಂಧನದಲ್ಲಿರಿಸಿದ್ದ ಯುವತಿಯನ್ನು ರಕ್ಷಿಸಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿ ನೇತೃತ್ವದ ತಂಡ, ಪುನರ್ವಸತಿ ಕಲ್ಪಿಸಿದೆ.

'ಲಗ್ಗೆರೆಯ ಮನೆಯೊಂದರಲ್ಲಿ ಯುವತಿಯನ್ನು ಕೂಡಿ ಹಾಕಲಾಗಿತ್ತು. ಈ ಬಗ್ಗೆ ಮಾಹಿತಿ ತಿಳಿದ ಸ್ಥಳೀಯರು, ಬೆಂಗಳೂರು ಉತ್ತರ ವಲಯದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ನೇತೃತ್ವದ ತಂಡದ ಮೂಲಕ ಯುವತಿಯನ್ನು ರಕ್ಷಿಸಿದ್ದಾರೆ. ಯುವತಿಯನ್ನು ಅಕ್ರಮ ಬಂಧನದಲ್ಲಿರಿಸಿದ್ದ ಬಗ್ಗೆ ಸದ್ಯಕ್ಕೆ ಯಾವುದೇ ದೂರು ದಾಖಲಾಗಿಲ್ಲ' ಎಂದು ನಂದಿನಿ ಲೇಔಟ್ ಠಾಣೆ ಪೊಲೀಸರು ತಿಳಿಸಿದರು.

'ಚನ್ನರಾಯಪಟ್ಟಣದ ನಿವಾಸಿಯಾಗಿರುವ ಯುವತಿ, ಪದವಿ ಮುಗಿಸಿದ್ದಾರೆ. ಹಲವು ತಿಂಗಳ ಹಿಂದೆ ಅವರಿಗೆ ಬೆನ್ನು ನೋವು ಕಾಣಿಸಿಕೊಂಡಿತ್ತು. ಕುಟುಂಬಸ್ಥರು ಯುವತಿಯನ್ನು ವೈದ್ಯರ ಬಳಿ ಕರೆದೊಯ್ದಿರಲಿಲ್ಲ. ಬದಲಿಗೆ, ಜ್ಯೋತಿಷಿ ಒಬ್ಬರ ಬಳಿ ಕರೆದುಕೊಂಡು ಹೋಗಿದ್ದರು' ಎಂದು ಸ್ಥಳೀಯರೊಬ್ಬರು ಹೇಳಿದ್ದಾರೆ.

'ಯುವತಿ ಮೈ ಮೇಲೆ ದೆವ್ವ ಬರುತ್ತಿದೆ. ಇದುವೇ ಬೆನ್ನು ನೋವಿಗೆ ಕಾರಣ' ಎಂದಿದ್ದ ಜ್ಯೋತಿಷಿ, ನಿತ್ಯವೂ ಊಟದ ಸಮಯದಲ್ಲಿ ಅರಿಸಿನ ಮಿಶ್ರಿತ ನೀರು ಹಾಗೂ ನಿಂಬೆ ಹಣ್ಣಿನ ರಸ ಮಾತ್ರ ನೀಡುವಂತೆ ಹೇಳಿದ್ದ. ಕೊಠಡಿಯಲ್ಲಿ ಕೂಡಿ ಹಾಕುವಂತೆ ತಿಳಿಸಿದ್ದ' ಎಂದು ಅವರು ತಿಳಿಸಿದ್ದಾರೆ.

'ಇದನ್ನು ನಂಬಿದ್ದ ಕುಟುಂಬಸ್ಥರು, ಯುವತಿಯನ್ನು ಮನೆಯಲ್ಲಿ ಕೂಡಿ ಹಾಕಿದ್ದರು. ಯುವತಿಯ ಆರೋಗ್ಯ ಸ್ಥಿತಿ ಹದಗೆಟ್ಟಿತ್ತು. ಹೊಟ್ಟೆ ನೋವಿನಿಂದ ಯುವತಿ ಕಿರುಚಾಡಲಾರಂಭಿಸಿದ್ದರು. ಇದೇ ವೇಳೆ ಯುವತಿ ಮೇಲೆ ಹಲ್ಲೆ ಮಾಡಲಾಗಿತ್ತು. ಸ್ಥಳೀಯರೊಬ್ಬರ ಮೊಬೈಲ್‌ಗೆ ಸಂದೇಶ ಕಳುಹಿಸಿದ್ದ ಯುವತಿ, ತಮ್ಮನ್ನು ರಕ್ಷಿಸುವಂತೆ ಕೋರಿದ್ದರು' ಎಂದು ತಿಳಿಸಿದರು.

ಹಣ ದೋಚಲು 'ಎ.ಐ ಕರೆ'

ಒಂದನೇ ಪುಟದಿಂದ

ಎದುರಿನ ವ್ಯಕ್ತಿ ಹಣ ಕಳುಹಿಸಲು ಸಿದ್ಧವಾದಾಗ, 'ನನ್ನ ಬ್ಯಾಂಕ್ ಹಾಗೂ ಯುಪಿಐನಲ್ಲಿ ತಾಂತ್ರಿಕ ಕಾರಣದಿಂದ ಬಂದ್ ಆಗಿದೆ. ನನ್ನ ಸ್ನೇಹಿತರ ಬ್ಯಾಂಕ್ ಖಾತೆ ಅಥವಾ ಡಿಜಿಟಲ್ ವ್ಯಾಲೆಟ್‌ಗೆ ಹಣ ಹಾಕಿ' ಎಂದು ವಂಚಕರು ತಿಳಿಸುತ್ತಾರೆ. ಹಣ ಜಮೆ ಆದ ನಂತರ, ಡ್ರಾ ಮಾಡಿಕೊಂಡು ಖಾತೆಯನ್ನೇ ನಿಷ್ಕ್ರಿಯಗೊಳಿಸುತ್ತಾರೆ' ಎಂದು ತಿಳಿಸಿದರು.

ಒಂದೇ ತಿಂಗಳಿನಲ್ಲಿ 560 ಪ್ರಕರಣ: 'ಎಐ ಮಿಮಿಕ್ರಿ ಕರೆ ಮಾಡಿ ವಂಚಿಸಿರುವ ಬಗ್ಗೆ ಭೋಪಾಲ್‌ನಲ್ಲಿ ನವೆಂಬರ್‌ನಲ್ಲಿ ಮೊದಲ ಪ್ರಕರಣ ವರದಿಯಾಗಿದೆ. ಇದಾದ ನಂತರ, ಒಂದೇ ತಿಂಗಳಿನಲ್ಲಿ ದೇಶದಾದ್ಯಂತ 560 ಪ್ರಕರಣಗಳು ದಾಖಲಾಗಿವೆ. ₹1 ಕೋಟಿಗೂ ಹೆಚ್ಚು ವಂಚನೆಯಾಗಿರುವ ಬಗ್ಗೆ ಮಾಹಿತಿ ಇದೆ' ಎಂದು ಇನ್‌ಸ್ಪೆಕ್ಟರ್ ಹೇಳಿದರು.

'ಬೆಂಗಳೂರಿನಲ್ಲೂ ಒಂದೊಂದಾಗಿ ಪ್ರಕರಣಗಳು ವರದಿಯಾಗುತ್ತಿವೆ. ಕೆಲವರು ಠಾಣೆಗೆ ದೂರು ನೀಡುತ್ತಿದ್ದಾರೆ. ಬಹುತೇಕರು ಠಾಣೆಗೆ ಬರುತ್ತಿಲ್ಲ' ಎಂದು ತಿಳಿಸಿದರು.

ಅಸಲಿ ಸಂಖ್ಯೆ ಹೋಲುವಂತೆ ಕರೆ: 'ಕೆಲ ಪ್ರಕರಣಗಳಲ್ಲಿ ಅಸಲಿ ಮೊಬೈಲ್ ಸಂಖ್ಯೆಯನ್ನು ಹೋಲುವ ಸಂಖ್ಯೆಯಿಂದಲೇ ಕರೆ ಮಾಡಿ ಹಣ ದೋಚಲಾಗಿದೆ. ನಕಲಿ ದಾಖಲೆಗಳನ್ನು ಸೃಷ್ಟಿಸಿ ಸಿಮ್ ಕಾರ್ಡ್ ಮಾರುವ ಜಾಲವೂ ಈ ಕೃತ್ಯದ ಹಿಂದಿರುವ ಶಂಕೆ ಇದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಜಾಗೃತಿಯೇ ಪರಿಹಾರ'

'ವೈಯಕ್ತಿಕ ಮಾಹಿತಿ ವಿನಿಮಯವೇ ಸೈಬರ್ ವಂಚನೆಗೆ ಪ್ರಮುಖ ಕಾರಣ. ಅಪರಿಚಿತರ ಜೊತೆ ವೈಯಕ್ತಿಕ ಮಾಹಿತಿ ಹಂಚಿಕೊಳ್ಳದಂತೆ ಎಲ್ಲರೂ ಜಾಗೃತಿ ವಹಿಸಿದರೆ, ಸೈಬರ್ ವಂಚನೆ ಪ್ರಕರಣಗಳು ಕಡಿಮೆಯಾಗುತ್ತವೆ' ಎಂದು ಬೆಂಗಳೂರು ಸೈಬರ್ ಕ್ರೈಂ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಆಧಾರ್, ಪಾನ್ ಕಾರ್ಡ್, ಬ್ಯಾಂಕ್ ಖಾತೆ, ಒಟಿಪಿ ಹಾಗೂ ಇತರೆ ಮಾಹಿತಿಯನ್ನು ಆದಷ್ಟು ಗೌಪ್ಯವಾಗಿರಿಸಿಕೊಳ್ಳಿ. ಬ್ಯಾಂಕ್ ಪ್ರತಿನಿಧಿ ಸೋಗಿನಲ್ಲಿ ಕರೆ ಮಾಡಿ ಯಾರಾದರೂ ಮಾಹಿತಿ ಕೇಳಿದರೆ ನಿರಾಕರಿಸಬೇಕು. ಖುದ್ದು ಬ್ಯಾಂಕ್‌ಗೆ ಹೋಗಿ ವಿಚಾರಿಸಬೇಕು' ಎಂದು ತಿಳಿಸಿದರು.

ಇತ್ತೀಚಿನ ಕೆಲ ಪ್ರಕರಣಗಳು

- ಕಂಪನಿಯ ಸಭೆಯಲ್ಲಿ ಕುಳಿತಿದ್ದ ಉದ್ಯಮಿಯೊಬ್ಬರಿಗೆ ಅವರ ಮಗಳ ಧ್ವನಿಯಲ್ಲಿ ಕರೆ ಮಾಡಿದ್ದ ಸೈಬರ್ ವಂಚಕರು, 'ಸ್ನೇಹಿತೆಗೆ ಅಪಘಾತವಾಗಿದ್ದು, ತುರ್ತಾಗಿ ₹5 ಲಕ್ಷ ಬೇಕಿದೆ' ಎಂದು ಹೇಳಿ ಹಣ ದೋಚಿದ್ದಾರೆ
- 'ಮನೆಯಲ್ಲಿ ಕುಸಿದು ಬಿದ್ದು, ಆಸ್ಪತ್ರೆಗೆ ಬಂದಿದ್ದೇನೆ. ಚಿಕಿತ್ಸೆಗೆ ತುರ್ತಾಗಿ ಹಣ ಬೇಕು' ಎಂದು ತಾಯಿಯ ಧ್ವನಿಯಲ್ಲಿ ವಿದೇಶಿ ಕಂಪನಿಯೊಂದರ ಕಾರ್ಯ ನಿರ್ವಾಹಕ ಅಧಿಕಾರಿಯೂ (ಸಿಇಒ) ಆಗಿರುವ ಮಗನಿಗೆ ಕರೆ ಮಾಡಿದ್ದ ಸೈಬರ್ ವಂಚಕರು, ₹2 ಲಕ್ಷ ಕಿತ್ತಿದ್ದಾರೆ
- ವಿದೇಶದ ಕಾಲೇಜೊಂದರಲ್ಲಿ ಓದುತ್ತಿರುವ ಮಗನ ಧ್ವನಿಯಲ್ಲಿ ಅವರ ತಂದೆಗೆ ಕರೆ ಮಾಡಿದ್ದ ವಂಚಕರು, 'ಅಪಘಾತವಾಗಿದೆ. ಆಸ್ಪತ್ರೆಗೆ ದಾಖಲಾಗಿದ್ದು, ಹಣ ಕಳುಹಿಸಿ' ಎಂದು ಹೇಳಿ ₹2 ಲಕ್ಷ ಪಡೆದು ವಂಚಿಸಿದ್ದಾರೆ

'ಸೂಕ್ಷ್ಮವಾಗಿ ಆಲಿಸಿ'

'ಪರಿಚಯಸ್ಥರ ಹೆಸರಿನಲ್ಲಿ ಯಾರಾದರೂ ಕರೆ ಮಾಡಿ ಹಣ ಕೇಳಿದರೆ, ಪ್ರತಿಯೊಂದು ಶಬ್ದವನ್ನು ಸೂಕ್ಷ್ಮವಾಗಿ ಆಲಿಸಬೇಕು. ಪದಗಳ ನಡುವಿನ ಅಂತರ ಹಾಗೂ ಪದಗಳ ಉಚ್ಚಾರ ಗಮನಿಸಿದಾಗ, ಅದು ಪರಿಚಯಸ್ಥರ ಕರೆಯೋ ಅಥವಾ ಕೃತಕ ಕರೆಯೋ ಎಂಬುದು ಸ್ಪಷ್ಟವಾಗುತ್ತದೆ. ಅಂಥ ಅನುಮಾನ ಹುಟ್ಟಿಸುವ ಕರೆಗಳನ್ನು ಕಡಿತಗೊಳಿಸಿ, ನೈಜ ವ್ಯಕ್ತಿಗೆ ಕರೆ ಮಾಡಿ ವಿಚಾರಿಸುವುದು ಸೂಕ್ತ' ಎಂದು ಪೊಲೀಸ್ ಅಧಿಕಾರಿ ಸಲಹೆ ನೀಡಿದರು. 'ಇಂಗ್ಲಿಷ್, ಹಿಂದಿ ಭಾಷೆಗಳಿಂದ ಎಐ ಮಿಮಿಕ್ರಿ ಕರೆಗಳು ಬರುತ್ತಿವೆ. ಮುಂಬರುವ ದಿನಗಳಲ್ಲಿ ಬೇರೆ ಪ್ರಾದೇಶಿಕ ಭಾಷೆಗಳಲ್ಲೂ ಕರೆಗಳು ಬರಬಹುದು' ಎಂದು ಅವರು ಎಚ್ಚರಿಸಿದ್ದಾರೆ.

ಕೈಗಾರಿಕೆಗಳ ನೀರು ಬಳಕೆ ಶುಲ್ಕ ₹3 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮೂಲಗಳಿಂದ ಕೈಗಾರಿಕೆಗಳು ಬಳಸುವ ನೀರಿನ ಶುಲ್ಕವನ್ನು ಪ್ರತಿ ದಶಲಕ್ಷ ಕ್ಯುಬಿಕ್ ಅಡಿಗೆ (ಎಂಸಿಎಫ್‌ಟಿ) ಈಗ ಇದ್ದ ₹50 ಸಾವಿರ ಶುಲ್ಕವನ್ನು ₹3 ಲಕ್ಷಕ್ಕೆ ಏರಿಸಲು ಸರ್ಕಾರ ನಿರ್ಧರಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು, ನದಿ, ಕೆರೆ, ಜಲಾಶಯಗಳಿಂದ ಕೈಗಾರಿಕೆಗಳು ಬಳಸುವ ನೀರಿಗೆ ಈ ಶುಲ್ಕ ಅನ್ವಯವಾಗಲಿದೆ ಎಂದರು.


ಶುಲ್ಕದ ಪ್ರಮಾಣದ ತುಂಬಾ ಕಡಿಮೆ ಇತ್ತು. ನೀರಿನ ನಿರ್ವಹಣೆಯ ವೆಚ್ಚ ಹೆಚ್ಚಾಗಿರುವ ಕಾರಣಕ್ಕೆ ಈ ಮೊತ್ತವನ್ನು ಹೆಚ್ಚಿಸುವ ತೀರ್ಮಾನ ಕೈಗೊಳ್ಳಲಾಯಿತು ಎಂದೂ ಹೇಳಿದರು.

ಇದೇ 26ರಿಂದ ಯೋಜನೆಗೆ ಚಾಲನೆ: ಸಚಿವ

5.29 ಲಕ್ಷ ಮಂದಿಗೆ 'ಯುವನಿಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ 'ಯುವನಿಧಿ' ಯೋಜನೆಗೆ ಇದೇ 26ರಿಂದ ನೋಂದಣಿ ಆರಂಭವಾಗಲಿದ್ದು, ರಾಜ್ಯದಾದ್ಯಂತ 4.81 ಲಕ್ಷ ಪದವೀಧರರು ಹಾಗೂ ಡಿಪ್ಲೊಮಾ ಉತ್ತೀರ್ಣರಾದ 48,153 ಸೇರಿ ಒಟ್ಟು 5,29,153 ಫಲಾನುಭವಿಗಳನ್ನು ಅಂದಾಜಿಸಲಾಗಿದೆ' ಎಂದು ಕೌಶಲಾಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದರು.



ಶರಣಪ್ರಕಾಶ ಪಾಟೀಲ

ಯೋಜನೆಯ ಕುರಿತು ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದ ಅವರು, 'ನೋಂದಣಿಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮುಖ್ಯಮಂತ್ರಿ ಚಾಲನೆ ನೀಡಲಿದ್ದಾರೆ. ವಿವೇಕಾನಂದ ಜಯಂತಿ ದಿನವಾದ ಜ. 12ರಂದು ಶಿವಮೊಗ್ಗದಲ್ಲಿ ಫಲಾನುಭವಿಗಳಿಗೆ ಸಾಂಕೇತಿಕವಾಗಿ ಮೊತ್ತ ಬಿಡುಗಡೆ ಮಾಡಲಾಗುವುದು. ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಯೋಜನೆಯನ್ನು ಅನುಷ್ಠಾನಗೊಳಿಸಲಿದೆ' ಎಂದರು.

ಮುಖ್ಯಾಂಶಗಳು

- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಯೋಜನೆಗೆ ಚಾಲನೆ
- ಜನವರಿ 12ರಂದು ಫಲಾನುಭವಿಗಳಿಗೆ ಸಾಂಕೇತಿಕವಾಗಿ ಮೊತ್ತ ಬಿಡುಗಡೆ

'ಪದವಿ, ಡಿಪ್ಲೊಮಾ ವಿದ್ಯಾರ್ಹತೆ ಹೊಂದಿರುವ, 2022-23ನೇ ಶೈಕ್ಷಣಿಕ ವರ್ಷದಲ್ಲಿ ಕಲಿತು 2023ರಲ್ಲಿ ತೇರ್ಗಡೆ ಹೊಂದಿದ, ಕನಿಷ್ಠ ಆರು ವರ್ಷ ಕರ್ನಾಟಕದಲ್ಲಿ ಓದಿದವರು ಯೋಜನೆಗೆ ಅರ್ಹರು' ಎಂದು ಸಚಿವರು ತಿಳಿಸಿದರು.

'ಅರ್ಹ ಅಭ್ಯರ್ಥಿಗಳು ಸೇವಾಸಿಂಧು ಜಾಲತಾಣದಲ್ಲಿ (https://sevasindhugs.karnataka.gov.in/) ಲಾಗಿನ್ ಆಗಿ ಅರ್ಜಿ ಸಲ್ಲಿಸಬಹುದು. ಕರ್ನಾಟಕ ಒನ್, ಬಾಪೂಜಿ ಸೇವಾ ಕೇಂದ್ರಗಳು, ಗ್ರಾಮ-ಒನ್ ಕೇಂದ್ರಗಳನ್ನು ಬಳಸಿಕೊಂಡು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ತಮ್ಮ ಜಿಲ್ಲೆ ಮತ್ತು ತಾಲ್ಲೂಕು ಆಯ್ಕೆ ಮಾಡಿಕೊಳ್ಳಬೇಕು' ಎಂದೂ ವಿವರಿಸಿದರು.

ಸಹಾಯಧನ ಸೌಲಭ್ಯದ ಬೆಲೆ ಏರಿಕೆ

ಸ್ಪ್ರಿಂಕ್ಲರ್ ದರ ದುಪ್ಪಟ್ಟು

● ಚಂದ್ರಶೇಖರ ಆರ್.



ದಾವಣಗೆರೆ: ಬರದಿಂದಾಗಿ ರಾಜ್ಯದ ರೈತರು ಸಂಕಷ್ಟಕ್ಕೆ ಸಿಲುಕಿರುವ ಹೊತ್ತಿನಲ್ಲೇ ಕೃಷಿ ಇಲಾಖೆಯು ಹನಿ ನೀರಾವರಿ ಘಟಕ ಯೋಜನೆಯಡಿ ನೀಡುವ ಹನಿ ನೀರಾವರಿ ಪರಿಕರಗಳ ದರವನ್ನು ದುಪ್ಪಟ್ಟುಗೊಳಿಸಿದೆ.

ಒಂದೆಡೆ ವಿವಿಧ ಯೋಜನೆಯಡಿ ಸೌಲಭ್ಯ ಪಡೆದುಕೊಳ್ಳಲು ರೈತರನ್ನು ಉತ್ತೇಜಿಸುತ್ತಿರುವ ಸರ್ಕಾರ, ಮತ್ತೊಂದೆಡೆ ಸಹಾಯಧನದಲ್ಲಿ ನೀಡುವ ಕೃಷಿ ಪರಿಕರಗಳ ಬೆಲೆಯನ್ನು ಹೆಚ್ಚಿಸಿದೆ.

ಹನಿ ನೀರಾವರಿ ಘಟಕ ಯೋಜನೆಯ ಸಹಾಯಧನ ಸೌಲಭ್ಯವನ್ನು ಮೂರು ವರ್ಷಗಳ ಕಾಲ ಸ್ಥಗಿತಗೊಳಿಸಲಾಗಿತ್ತು. ಈ ವರ್ಷ ಪುನರಾರಂಭಿಸಿರುವುದು ರೈತರಲ್ಲಿ ಹರ್ಷ ತಂದಿದೆ. ಆದರೆ, ದರ ಏರಿಕೆಯು ಸಂಕಷ್ಟ ತಂದೊಡ್ಡಿದೆ.

ಮೂರು ವರ್ಷದ ಹಿಂದೆ ಎರಡು ಇಂಚಿನ ಸ್ಪ್ರಿಂಕ್ಲರ್ ಸೆಟ್‌ಗೆ ₹1,746 ಮತ್ತು ಎರಡೂವರೆ ಇಂಚಿನ ಸ್ಪ್ರಿಂಕ್ಲರ್ ಸೆಟ್‌ಗೆ ₹1,876 ದರ ಇತ್ತು. ಈ ವರ್ಷ ಎರಡು ಇಂಚಿನ ಸೆಟ್‌ಗೆ ₹4,139 ಮತ್ತು ಎರಡೂವರೆ ಇಂಚಿನ ಸೆಟ್‌ಗೆ ₹4,667 ಬೆಲೆ ನಿಗದಿಪಡಿಸಿದೆ.

ಈ ಬಾರಿ ವಾಡಿಕೆಗಿಂತಲೂ ಕಡಿಮೆ ಮಳೆ ಬಿದ್ದಿರುವುದರಿಂದ ಬೆಳೆ ರಕ್ಷಿಸಲು ಕೆರೆ, ಬಾವಿ, ಹಳ್ಳ ಸೇರಿದಂತೆ ಇತರೆ ಜಲಮೂಲಗಳನ್ನು ರೈತರು ಅವಲಂಬಿಸಿದ್ದಾರೆ. ಸಿಗುವ ಅಲ್ಪಸ್ವಲ್ಪ ನೀರನ್ನು ಹನಿ ನೀರಾವರಿ ಪದ್ಧತಿಯಡಿ ಜಮೀನಿಗೆ ಹರಿಸಿ ಬೆಳೆ ಉಳಿಸಿಕೊಳ್ಳಬೇಕು ಎಂದುಕೊಂಡರೆ ದರ ದುಪ್ಪಟ್ಟಾಗಿದೆ. ಖಾಸಗಿಯಾಗಿ ಖರೀದಿಸಲು ಇನ್ನೂ ಹೆಚ್ಚಿನ ಹಣ ನೀಡಬೇಕು ಎಂದು ರೈತರು ದೂರುತ್ತಾರೆ.

ಈಗಿನ ದರ ರೈತರಿಗೆ ಅಷ್ಟೇನು ಹೊರೆಯಾಗುವುದಿಲ್ಲ. ಇದೇ ಸೆಟ್ ಅನ್ನು ಖಾಸಗಿಯಾಗಿ ಖರೀದಿಸಿದರೆ ₹ 23,000 ನೀಡಬೇಕು
ಶ್ರೀನಿವಾಸ್ ಚಿಂತಾಲ್, ಜಂಟಿ ಕೃಷಿ ನಿರ್ದೇಶಕ, ದಾವಣಗೆರೆ

'ಸಹಾಯಧನದಡಿ ಸ್ಪ್ರಿಂಕ್ಲರ್ ಸೆಟ್ ನೀಡುತ್ತಿರುವುದರಿಂದ ಬಡ ರೈತರಿಗೆ ಅನುಕೂಲವಾಗಿತ್ತು. ಕಳೆದ 10 ವರ್ಷಗಳ ಅವಧಿಯಲ್ಲಿ ದರ ₹2,000 ಆಸುಪಾಸಿನಲ್ಲಿತ್ತು. ಈಗ ಒಮ್ಮೆಲೇ ಏರಿಕೆ ಮಾಡಲಾಗಿದೆ. ಇದು ಹೊರೆಯಾಗಿ ಪರಿಣಮಿಸಿದೆ' ಎಂದು ಮಾಯಕೊಂಡದ ರೈತ ರಾಘವೇಂದ್ರ ಅಳಲು ತೋಡಿಕೊಂಡರು.

'ಶ್ರಮಪಟ್ಟು ಬೆಳೆದ ಅಲ್ಪಸ್ವಲ್ಪ ಬೆಳೆಗೂ ಉತ್ತಮ ದರ ಸಿಗುತ್ತಿಲ್ಲ. ಈಗ ತರಕಾರಿ ಬೆಳೆಯಲು ಹನಿ ನೀರಾವರಿ ಅಳವಡಿಸೋಣ ಎಂದು ಇಲಾಖೆಯ ಮೊರೆ ಹೋದರೆ ದರ ದುಪ್ಪಟ್ಟಾಗಿದೆ' ಎಂದು ರೈತ ಪ್ರತಾಪ್ ರಾಮಜೋಗಿ ನೋವು ತೋಡಿಕೊಂಡರು.

ಜನವರಿ ಅಂತ್ಯದೊಳಗೆ ಜೆಡಿಎಸ್–ಬಿಜೆಪಿ ಸೀಟು ಹಂಚಿಕೆ ಪೂರ್ಣ: ಎಚ್‌.ಡಿ. ಕುಮಾರಸ್ವಾಮಿ ಹೇಳಿಕೆ

ಪ್ರಧಾನಿ ಭೇಟಿಯಾದ ಜೆಡಿಎಸ್ 'ಕುಟುಂಬ'


ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ ಭವನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರು ರಾಜ್ಯದ ರಾಜಕೀಯ ಪರಿಸ್ಥಿತಿ ಹಾಗೂ ಜೆಡಿಎಸ್–ಬಿಜೆಪಿ ಸೀಟು ಹಂಚಿಕೆ ಕುರಿತು ಸಮಾಲೋಚನೆ ನಡೆಸಿದರು.

ಕೊಬ್ಬರಿ ಖರೀದಿ, ಕಾಡುಗೊಲ್ಲ ಜಾತಿಗೆ ಮೀಸಲಾತಿ ಸೌಲಭ್ಯ ಹಾಗೂ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ನಡೆಸಲಾಯಿತು ಎಂದು ಕುಮಾರಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

ಕೊಬ್ಬರಿಗೆ ಬೆಂಬಲ ಬೆಲೆ ನೀಡಬೇಕು ಹಾಗೂ ನಾಫೆಡ್ ಮೂಲಕ ಖರೀದಿ ಮಾಡಬೇಕು ಎಂದು ಒತ್ತಾಯಿಸಿ ಪ್ರಧಾನಿ ಅವರಿಗೆ ಮನವಿ ಸಲ್ಲಿಸಲಾಯಿತು. ಇದಕ್ಕೆ ಪ್ರಧಾನಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಅವರು ತಿಳಿಸಿದರು.

'ಜೆಡಿಎಸ್ ಮತ್ತು ಬಿಜೆಪಿ ನಡುವೆ ಕ್ಷೇತ್ರ ಹಂಚಿಕೆ ವಿಚಾರದಲ್ಲಿ ಯಾವುದೇ ಸಮಸ್ಯೆ, ಗೊಂದಲ ಇಲ್ಲ. ಯಾವ ಕ್ಷೇತ್ರದಲ್ಲಿ ಯಾರು ಸ್ಪರ್ಧೆ ಮಾಡುತ್ತಾರೆ ಎನ್ನುವುದನ್ನು ನಾವೇ ಪರಸ್ಪರ ಕೂತು ಅಂತಿಮಗೊಳಿಸುತ್ತೇವೆ. ಆ ಬಗ್ಗೆ ಯಾವುದೇ ಸಮಸ್ಯೆ ಇಲ್ಲ. ಒಂದು ಕ್ಷೇತ್ರ ಹೆಚ್ಚೂ ಕಡಿಮೆ ಆಗಬಹುದು ಅಷ್ಟೇ. ಮುಖ್ಯವಾಗಿ ಪರಸ್ಪರ ವಿಶ್ವಾಸ ಬೇಕು ಅಷ್ಟೇ, ಅದನ್ನು ನಾವು ಉಳಿಸಿಕೊಳ್ಳಬೇಕು. ಅದಕ್ಕೆ ಏನೆಲ್ಲಾ ಮಾಡಬೇಕೋ ಅದನ್ನು ಮಾಡುತ್ತೇನೆ. ಜನವರಿ ಅಂತ್ಯದ ಒಳಗೆ ನಾವು ಎಲ್ಲ ನಿರ್ಧಾರ ಮಾಡುತ್ತೇವೆ' ಎಂದು ಅವರು ಹೇಳಿದರು.



ಸಂಸತ್ ಭವನದಲ್ಲಿರುವ ಪ್ರಧಾನಿ ಕಾರ್ಯಾಲಯದಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ, ಜೆಡಿಎಲ್‌ಪಿ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಶಾಸಕರಾದ ಸಿ.ಎನ್‌. ಬಾಲಕೃಷ್ಣ, ಎಚ್‌.ಡಿ.ರೇವಣ್ಣ, ಸಂಸದ ಪ್ರಜ್ವಲ್ ರೇವಣ್ಣ ಜೊತೆಯಲ್ಲಿದ್ದರು

'ಯಾವ ಕ್ಷೇತ್ರದಲ್ಲಿ ಗೆಲ್ಲಲು ಸಾಧ್ಯವಿದೆಯೋ ಅದನ್ನು ಮಾತ್ರ ಕೇಳುತ್ತೇವೆ. ನಾವು ಎಲ್ಲೆಲ್ಲಿ ಗೆಲ್ಲುತ್ತೇವೆ ಎಂಬ ವರದಿ ನನ್ನಲ್ಲಿದೆ. ಆ ವರದಿ ಪ್ರಕಾರ ನಾವು ಕೆಲಸ ಮಾಡುತ್ತೇವೆ. ಇಲ್ಲಿ ಸೀಟು ಹಂಚಿಕೆ ಒಂದೇ ಪ್ರಮುಖ ಅಲ್ಲ. ನಾವು ಪರಸ್ಪರ ವಿಶ್ವಾಸ, ನಂಬಿಕೆಯಿಂದ ಕೆಲಸ ಮಾಡುತ್ತೇವೆ' ಎಂದರು.

ಕರ್ನಾಟಕದ ರಾಜಕೀಯ ಪರಿಸ್ಥಿತಿ ಕುರಿತು ಪ್ರತಿಕ್ರಿಯಿಸಿದ ಅವರು, 'ಕರ್ನಾಟಕದ ರಾಜಕೀಯದಲ್ಲಿ ಶಿಂದೆಯೂ ಇದ್ದಾರೆ, ಅಜಿತ್ ಪವಾರ್ ಸಹ ಇದ್ದಾರೆ. ಯಾರು ಮೊದಲು ಮುಂದೆ ಬರುತ್ತಾರೋ ಕಾದು ನೋಡಬೇಕು. ಸದ್ಯದ ಪರಿಸ್ಥಿತಿಯಲ್ಲಿಏನು ಬೇಕಾದರೂ ಆಗಬಹುದು' ಎಂದರು.

'ಲೋಕಸಭಾ ಕಲಾಪದ ಸಂದರ್ಭದಲ್ಲಿ ಸದನಕ್ಕೆ ನುಗ್ಗಿದ ಪ್ರಕರಣವನ್ನೇ ದೊಡ್ಡದು ಮಾಡಿ ಕಾಂಗ್ರೆಸ್ ಪಕ್ಷ ಸಂಸತ್ ಕಲಾಪವನ್ನು ಹಾಳು ಮಾಡುತ್ತಿರುವುದು ಸರಿಯಲ್ಲ. ಸಂಸತ್ ಘಟನೆಯನ್ನೇ ಭದ್ರತಾ ವೈಫಲ್ಯ ಅನ್ನುವುದಾದರೆ ವಿಧಾನಸಭೆಯ ಅಧಿವೇಶನದ ವೇಳೆ ಒಬ್ಬ ವ್ಯಕ್ತಿ ಸದನದ ಒಳಕ್ಕೆ ಬಂದು ಒಂದೂವರೆ ಗಂಟೆ ಕಲಾಪದಲ್ಲಿ ಭಾಗಿಯಾಗಿದ್ದ. ಅದನ್ನು ಏನೆಂದು ಕರೆಯಬೇಕು' ಎಂದು ಅವರು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಚ್‌.ಡಿ.ರೇವಣ್ಣ, ಮಾಜಿ ಸಂಸದ ಕುಪೇಂದ್ರ ರೆಡ್ಡಿ, ಸಂಸದ ಪ್ರಜ್ವಲ್ ರೇವಣ್ಣ, ಶಾಸಕ ಸಿ.ಎನ್‌.ಬಾಲಕೃಷ್ಣ ಜತೆಯಲ್ಲಿದ್ದರು.

ಪ್ರಧಾನಿಗೆ ದೇವೇಗೌಡರ ಮನವಿ

- ಕಾಡುಗೊಲ್ಲ/ಅಡವಿಗೊಲ್ಲ/ಹಟ್ಟಿಗೊಲ್ಲ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು
- ತೆಂಗಿನ ಕೃಷಿಗೆ ಹೊಸ ನೀತಿ ರೂಪಿಸಬೇಕು
- ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹುತ್ರಿ ದುರ್ಗವನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ ಪಡಿಸಬೇಕು

ಲೋಕಸಭಾ ಚುನಾವಣೆಗೆ ಎಚ್‌ಡಿಕೆ, ನಿಖಿಲ್ ಸ್ಪರ್ಧೆ ಇಲ್ಲ

'ಲೋಕಸಭಾ ಚುನಾವಣೆಯಲ್ಲಿ ನಾನು ಹಾಗೂ ಪುತ್ರ ನಿಖಿಲ್ ಕುಮಾರಸ್ವಾಮಿ ಸ್ಪರ್ಧೆ ಮಾಡುವುದಿಲ್ಲ' ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

'ನಿಖಿಲ್ ಅವರು ಎಲ್ಲ 28 ಕ್ಷೇತ್ರಗಳಲ್ಲಿಯೂ ಪ್ರಚಾರ ಮಾಡುತ್ತಾರೆ. ಜನರು ಚುನಾವಣೆಗೆ ನಿಲ್ಲಿ ಎಂದು ಹೇಳುತ್ತಿದ್ದಾರೆ. ಮಂಡ್ಯ ಕ್ಷೇತ್ರದಿಂದಲೇ ಕಣಕ್ಕೆ ಇಳಿಯಲಿ ಎಂದು ಬಯಸುತ್ತಿದ್ದಾರೆ. ಎರಡು ಬಾರಿ ಅವರು ಸೋತಿದ್ದಾರೆ. ಹೀಗಾಗಿ ಜನರ ಅನುಕಂಪವೂ ಇದೆ. ಆದರೆ, ಅವರಿಗೆ ಸ್ಪರ್ಧೆ ಮಾಡುವ ಉದ್ದೇಶವಿಲ್ಲ' ಎಂದು ತಿಳಿಸಿದರು.

'ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧೆ ಮಾಡುವ ಉದ್ದೇಶ ನನ್ನ ಮುಂದೆ ಇಲ್ಲ. ನಾನೇನಿದ್ದರೂ ರಾಜ್ಯ ರಾಜಕಾರಣಕ್ಕೆ ಸೀಮಿತ. ನಾನು ಇಲ್ಲಿಯೇ ಇದ್ದರೆ ರಾಜ್ಯಕ್ಕೆ ಒಳ್ಳೆಯದು ಎನ್ನುವುದು ಅನೇಕ ಜನರ ಅಭಿಪ್ರಾಯ. ನನ್ನ ಅಭಿಪ್ರಾಯವೂ ಅದೇ ಆಗಿದೆ. ನಾನು ಕರ್ನಾಟಕ ರಾಜಕಾರಣದಲ್ಲೇ ಇರಲು ತೀರ್ಮಾನ ಮಾಡಿದ್ದೇನೆ' ಎಂದರು.

ಸಂಘಟನೆ ಬಲಪಡಿಸಲು ವರಿಷ್ಠರ ಸೂಚನೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಗುರುವಾರ ಭೇಟಿ ಮಾಡಿ ಚರ್ಚಿಸಿದರು.

ಅಮಿತ್ ಶಾ ಅವರನ್ನು ಭೇಟಿ ಮಾಡಿ ಪಂಚ ರಾಜ್ಯ ಚುನಾವಣೆಯಲ್ಲಿ ಬಿಜೆಪಿ ಗೆಲುವಿನ ಸಾಧನೆಗಾಗಿ ಅಭಿನಂದನೆ ಸಲ್ಲಿಸಿ ಆಶೀರ್ವಾದ ಪಡೆಯಲಾಯಿತು ಎಂದು ವಿಜಯೇಂದ್ರ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಲೋಕಸಭಾ ಚುನಾವಣೆಗೆ ರಾಜ್ಯದಲ್ಲಿ ಈಗಿನಿಂದಲೇ ಸಿದ್ಧತೆ ಆರಂಭಿಸಬೇಕು. ಭಿನ್ನಮತೀಯ ಚಟುವಟಿಕೆಗೆ ಅವಕಾಶ ನೀಡಬಾರದು' ಎಂದು ವಿಜಯೇಂದ್ರ ಅವರಿಗೆ ಪಕ್ಷದ ವರಿಷ್ಠರು ಸೂಚಿಸಿದರು ಎಂದು ಮೂಲಗಳು ಹೇಳಿವೆ.

ಪಕ್ಷದ ಆಂತರಿಕ ವಿಷಯಗಳ ಕುರಿತು ಕೆಲವು ನಾಯಕರು ಬಹಿರಂಗವಾಗಿ ಹೇಳಿಕೆ ನೀಡುತ್ತಿರುವುದನ್ನು ಗಮನಿಸಿದ್ದೇವೆ. ಪಕ್ಷ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ಉಭಯ ನಾಯಕರು ಹೇಳಿದರು.

ಬೂತ್ ಮಟ್ಟದಿಂದಲೇ ಪಕ್ಷ ಸಂಘಟನೆ ಬಲಪಡಿಸಲು ಕಾರ್ಯೋನ್ಮುಖವಾಗಬೇಕು ಎಂದೂ ಸೂಚಿಸಿದರು. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕಲ್ಯಾಣ ಕಾರ್ಯಕ್ರಮಗಳನ್ನು ಮತದಾರರಿಗೆ ತಲುಪಿಸುವ ಕೆಲಸ ಮಾಡಬೇಕು ಎಂದು ಪ್ರಧಾನಿ ಹೇಳಿದರು ಎಂದು ಗೊತ್ತಾಗಿದೆ.

ರಾಷ್ಟ್ರೀಯ ನಾಯಕರು ಕರೆದಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಸಭೆಯಲ್ಲಿ ಪಾಲ್ಗೊಳ್ಳಲು ವಿಜಯೇಂದ್ರ ಅವರು ನವದೆಹಲಿಗೆ ಬಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಲೋಕಾಯುಕ್ತ ಬಲೆಗೆ ಮೆಸ್ಕಾಂ ಎಇಇ



ಜಿ.ರಮೇಶ್

ಶಿವಮೊಗ್ಗ: ಮೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಜಿ.ರಮೇಶ್ ಗುತ್ತಿಗೆದಾರರೊಬ್ಬರಿಂದ ₹20,000 ಲಂಚ ಪಡೆಯುವಾಗ ಸೊರಬ ತಾಲ್ಲೂಕಿನ ಆನವಟ್ಟಿಯಲ್ಲಿ ಗುರುವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಅಕ್ರಮ–ಸಕ್ರಮ ಯೋಜನೆಯಡಿ ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗೆ ಸೊರಬ ತಾಲ್ಲೂಕಿನ ಬೆಟ್ಟದಕೂರ್ಲಿ ಗ್ರಾಮದ ಪ್ರಥಮದರ್ಜೆ ಗುತ್ತಿಗೆದಾರ ಜಿ.ಪ್ರದೀಪ್ ಅವರಿಗೆ ಟ್ರಾನ್ಸ್‌ಫಾರ್ಮರ್ ನೀಡಲು ಇವರು ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಲಂಚದ ಹಣ ಪಡೆಯುವಾಗ ನಡೆಸಿದ ದಾಳಿಯಲ್ಲಿ ಸಿಕ್ಕಿಬಿದ್ದಿದ್ದಾರೆ.

ಲಂಚಕ್ಕೆ ಬೇಡಿಕೆ ಇಟ್ಟಿದ್ದರ ಕುರಿತು ಗುತ್ತಿಗೆದಾರ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಆನವಟ್ಟಿಯಲ್ಲಿರುವ ಮೆಸ್ಕಾಂ ಕಚೇರಿಯಲ್ಲಿ ರಮೇಶ್ ಲಂಚದ ಹಣ ಪಡೆಯುವಾಗ ದಾಳಿ ನಡೆಸಿದ ಲೋಕಾಯುಕ್ತ ಡಿವೈಎಸ್‌ಪಿ ಉಮೇಶ ನಾಯ್ಕ ಹಾಗೂ ಇನ್‌ಸ್ಪೆಕ್ಟರ್ ಎಚ್‌.ಎಸ್‌. ಸುರೇಶ್ ನೇತೃತ್ವದ ತಂಡ ಹಣದ ಸಮೇತ ಆರೋಪಿಯನ್ನು ಬಂಧಿಸಿದೆ.

29 ಟನ್ ಅಡಿಕೆ ಕಳ್ಳಸಾಗಣೆ ಪತ್ತೆ: ಕೇಂದ್ರ ಹೇಳಿಕೆ

ನವದೆಹಲಿ: ವಿಮಾನ ನಿಲ್ದಾಣಗಳ ಮೂಲಕ ಅಕ್ರಮವಾಗಿ ಅಡಿಕೆ ಸಾಗಣೆ ಮಾಡುತ್ತಿದ್ದ 16 ಪ್ರಕರಣಗಳನ್ನು ಪತ್ತೆ ಹಚ್ಚಿ 29.48 ಟನ್ ಅಡಿಕೆ ವಶಪಡಿಸಿಕೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರವು ಲೋಕಸಭೆಗೆ ತಿಳಿಸಿದೆ.

ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಸಂಸದರಾದ ಡಿ.ಕೆ. ಸುರೇಶ್ ಹಾಗೂ ನಳಿನ್ ಕುಮಾರ್ ಕಟೀಲು ಕೇಳಿರುವ ಪ್ರಶ್ನೆಗೆ ನಾಗರಿಕ ವಿಮಾನಯಾನ ಖಾತೆಯ ರಾಜ್ಯ ಸಚಿವ ವಿ.ಕೆ. ಸಿಂಗ್ ಈ ಉತ್ತರ ನೀಡಿದ್ದಾರೆ.

'2021–22 ಹಾಗೂ 2022–23ರ ಅವಧಿಯಲ್ಲಿ ಕೇಂದ್ರೀಯ ಪರೋಕ್ಷ ತೆರಿಗೆ ಹಾಗೂ ಸುಂಕ ಮಂಡಳಿಯ ತನಿಖಾ ತಂಡವು ಕಾರ್ಯಾಚರಣೆ ನಡೆಸಿ ₹1.08 ಕೋಟಿ ಮೌಲ್ಯದ ಅಡಿಕೆಯನ್ನು ವಶಪಡಿಸಿಕೊಂಡಿದೆ. ಈ ಆರ್ಥಿಕ ವರ್ಷದಲ್ಲಿ ನವೆಂಬರ್ ತಿಂಗಳಿನ ತನಕ ಯಾವುದೇ ಪ್ರಕರಣ ಪತ್ತೆಯಾಗಿಲ್ಲ. ತನಿಖಾ ತಂಡವು ಅಡಿಕೆಯ ಅಕ್ರಮ ಸಾಗಣೆ ಮೇಲೆ ನಿಗಾ ಇಟ್ಟಿದೆ. ದೇಶದ ರೈತರ ಹಿತ ರಕ್ಷಿಸಲು ಬದ್ಧವಾಗಿದೆ' ಎಂದು ಅವರು ತಿಳಿಸಿದ್ದಾರೆ.

ಜೀಪ್– ಲಾರಿ ಡಿಕ್ಕಿ: ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ: ಅಫಜಲಪುರ ಸಮೀಪದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ತಡರಾತ್ರಿ ಸಂಭವಿಸಿದ ಅಪಘಾತದಲ್ಲಿ ಬಾಲಕ ಸೇರಿ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದು, ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಆಳಂದ ತಾಲ್ಲೂಕಿನ ಮಾಡಿಯಾಳ ಗ್ರಾಮದ ಜೀಪ್ ಚಾಲಕ ಸಂತೋಷ ಹುವಣ್ಣ ಗೌಡಗಾಂವ (40), ಶಂಕರ ದೇವಪ್ಪ ಝುಳಕಿ (55), ಸಿದ್ದಮ್ಮ ಶಂಕರ ಝುಳಕಿ (50) ಮತ್ತು ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಬಳಗಾನೂರ ಗ್ರಾಮದ ಹುಚ್ಚಪ್ಪ ಮಹಾಂತೇಶ (5) ಮೃತರು. ಹುಚ್ಚಪ್ಪ ತಾಯಿ ಪೂಜಾ ಮಹಾಂತೇಶ ಅವರು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಳಗಾನೂರಿನಲ್ಲಿದ್ದ ಗಂಡನ ಮನೆಯಿಂದ ಅಫಜಲಪುರ ತಾಲ್ಲೂಕಿನ ಘತ್ತರಗಿಗೆ ಬಂದಿದ್ದ ಪುತ್ರಿ ಪೂಜಾ ಹಾಗೂ ಮೊಮ್ಮಗನನ್ನು ಕರೆದುಕೊಂಡು ಶಂಕರ ದಂಪತಿ ಮಾಡಿಯಾಳಕ್ಕೆ ವಾಪಸ್ ಬರುತ್ತಿದ್ದರು. ಅಫಜಲಪುರ– ಕಲಬುರಗಿ ರಾಷ್ಟ್ರೀಯ ಹೆದ್ದಾರಿಯ ನೀರಾವರಿ ಕಚೇರಿ ಸಮೀಪದಲ್ಲಿ ಕಲಬುರಗಿ ಕಡೆಯಿಂದ ಬರುತ್ತಿದ್ದ ಲಾರಿಯೊಂದು ಜೀಪ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಜೀಪ್ ನಜ್ಜುಗುಜ್ಜಾಗಿದ್ದು, ಅದರಲ್ಲಿ ಪ್ರಯಾಣಿಸುತ್ತಿದ್ದ ಐವರ ಪೈಕಿ ನಾಲ್ವರು ಸ್ಥಳದಲ್ಲೇ ಮೃತಪಟ್ಟರು. ಲಾರಿ ಚಾಲಕ ಪರಾರಿಯಾಗಿದ್ದಾನೆ ಎಂದು ಮಾಹಿತಿ ನೀಡಿದ್ದಾರೆ.

ಅಫಜಲಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬರ: ಕೇಂದ್ರದ ನೆರವಿಗೆ ಸಂಸದ ಕಡಾಡಿ ಆಗ್ರಹ

ನವದೆಹಲಿ: ಕರ್ನಾಟಕದಲ್ಲಿ ಬರಗಾಲದಿಂದ ರೈತರು ಸಂಕಷ್ಟದ ಪರಿಸ್ಥಿತಿಯಲ್ಲಿದ್ದು, ಕೇಂದ್ರ ಸರ್ಕಾರವು ನೆರವಿಗೆ ಬರಬೇಕು ಎಂದು ಬಿಜೆಪಿಯ ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ ಆಗ್ರಹಿಸಿದರು.

ರಾಜ್ಯಸಭೆಯಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ರಾಜ್ಯದಲ್ಲಿ ಈ ವರ್ಷ ಶೇ 65ರಷ್ಟು ಮಳೆ ಕೊರತೆಯಾಗಿದೆ. ರಾಜ್ಯದ 14 ಜಲಾಶಯಗಳಲ್ಲಿ ಶೇ45ರಷ್ಟು ನೀರಿದೆ. ಬರಗಾಲದಿಂದಾಗಿ ಅಂತರ್ಜಲ ಮಟ್ಟ ಶೇ 11ರಷ್ಟು ಕುಸಿದಿದೆ' ಎಂದು ಗಮನ ಸೆಳೆದರು. ಈ ಆರ್ಥಿಕ ವರ್ಷದಲ್ಲಿ 456 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ, ರಾಜ್ಯ ಸರ್ಕಾರ ಜನರ ನೆರವಿಗೆ ಧಾವಿಸದೆ ಕೇಂದ್ರದ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿದೆ ಎಂದು ದೂರಿದರು.

ಪಿಎಸ್‌ಐ ನೇಮಕಾತಿ ಅಕ್ರಮ ಸಿಐಡಿ ಪರ ವಕೀಲ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ 545 ಹುದ್ದೆಗಳ ನೇಮಕಾತಿ ಅಕ್ರಮದ ಬಗ್ಗೆ ವಿಚಾರಣೆ ನಡೆಸುತ್ತಿರುವ ನಿವೃತ್ತ ನ್ಯಾಯಮೂರ್ತಿ ಬಿ. ವೀರಪ್ಪ ನೇತೃತ್ವದ ಏಕಸದಸ್ಯ ಆಯೋಗದ ಎದುರು ಸಿಐಡಿ ಪರ ವಾದ ಮಂಡಿಸಲು ವಕೀಲ ಸುಧನ್ವ ಡಿ.ಎಸ್‌. ಅವರನ್ನು ನೇಮಕ ಮಾಡಿ ಗೃಹ ಇಲಾಖೆ ಆದೇಶ ಹೊರಡಿಸಿದೆ.


ನೇಮಕಾತಿ ಅಕ್ರಮ ಸಂಬಂಧ ತನಿಖೆ ನಡೆಸಿದ್ದ ಸಿಐಡಿ ಅಧಿಕಾರಿಗಳು, ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಸೇರಿದಂತೆ ಹಲವರನ್ನು ಬಂಧಿಸಿ ನ್ಯಾಯಾಲಯಕ್ಕೆ ಈಗಾಗಲೇ ಆರೋಪ ಪಟ್ಟಿ ಸಲ್ಲಿಸಿದ್ದಾರೆ.



ಸುಧನ್ವ ಡಿ.ಎಸ್‌.

ಏಕ ಸದಸ್ಯ ಆಯೋಗ ರಚನೆಯಾಗುತ್ತಿದ್ದಂತೆ, ಅದರ ಎದುರು ಸಿಐಡಿ ಪರ ವಾದ ಮಂಡಿಸಲು ವಕೀಲ ಅಶೋಕ ನಾಯ್ಕ್ ಅವರನ್ನು ಈ ಹಿಂದೆ ನೇಮಿಸಲಾಗಿತ್ತು. ಒಬ್ಬರಿಂದ ಪರಿಣಾಮಕಾರಿ ವಾದ ಮಂಡಿಸಲು ಕಷ್ಟವೆಂದು ಸಿಐಡಿ ಹಿರಿಯ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದರು. ಇನ್ನೊಬ್ಬ ವಕೀಲರನ್ನು ನೇಮಿಸುವಂತೆ ಕೋರಿದ್ದರು. ಇದರ ಬೆನ್ನಲ್ಲೇ ವಕೀಲ ಸುಧನ್ವ ಅವರನ್ನು ನೇಮಕ ಮಾಡಲಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,150
ಇಂದಿನ ಅಂತ್ಯ	21,280
▲	130
ದಿನದ ಗರಿಷ್ಠ	21,288

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹610
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹612

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1610)
ಸೋಯಾ (ರಿಫೈನ್ಡ್)	₹890 (900)
ಸೂರ್ಯಕಾಂತಿ (ರಿಫೈನ್ಡ್)	₹905 (905)
ಪಾಮೋಲಿನ್	₹825 (827)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹136-460
ದ್ವಿತಳಿ (ಬಿ.ವಿ)	₹300-588

ಎನ್‌.ಆರ್‌.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹148.50
ಆರ್‌ಎಸ್‌ಎಸ್‌-5	₹144.50
ಗುಡ್ ಲಾಟ್	₹127.50

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2400-2700
ಮಧ್ಯಮ	₹1800-2000
ಸಣ್ಣ	₹1000-1800

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್‌. ಪೇಟೆ	₹8159-8159
ಪುತ್ತೂರು	₹5500-9100
ತಿಪಟೂರು	₹7500-8100
ತುರುವೇಕೆರೆ	₹8000-8000

ಬ್ಯಾಡಗಿ ಮಾರುಕಟ್ಟೆಯಲ್ಲಿ ಮತ್ತೆ ಆವಕ ಹೆಚ್ಚಳ

ಕಡ್ಡಿ ಮೆಣಸಿನಕಾಯಿಗೆ ದಾಖಲೆ ದರ

ಪ್ರಜಾವಾಣಿ ವಾರ್ತೆ

ಬ್ಯಾಡಗಿ (ಹಾವೇರಿ ಜಿಲ್ಲೆ): ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆಗೆ ಗುರುವಾರ 13,417 ಕ್ವಿಂಟಲ್ (53,669 ಚೀಲ) ಮೆಣಸಿನಕಾಯಿಯನ್ನು ಮಾರಾಟಕ್ಕೆ ತರಲಾಗಿದ್ದು, ನಾಲ್ಕು ಚೀಲ ಕಡ್ಡಿ ಮೆಣಸಿನಕಾಯಿ ₹70,080ರಂತೆ ಗರಿಷ್ಠ ಬೆಲೆಗೆ ಮಾರಾಟವಾಗಿದೆ. ಕಳೆದ ಗುರುವಾರಕ್ಕಿಂತ ₹5 ಸಾವಿರ ಹೆಚ್ಚಳವಾಗಿದೆ.

ಮೊದಲ ಬಾರಿಗೆ ಕಡ್ಡಿ ಮೆಣಸಿನಕಾಯಿ ದಾಖಲೆಯ ದರದಲ್ಲಿ ಮಾರಾಟವಾಗಿದೆ. ಗುಂಟೂರು ತಳಿ ಮೆಣಸಿನಕಾಯಿ ₹19,289ರಂತೆ ಗರಿಷ್ಠ ಬೆಲೆಗೆ ಮಾರಾಟವಾಗಿದ್ದು, ಸ್ಥಿರತೆ ಕಾಯ್ದುಕೊಂಡಿದೆ.

2 ಚೀಲ ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹62,399ರಂತೆ ಗರಿಷ್ಠ ಬೆಲೆಗೆ ಮಾರಾಟವಾಗಿದ್ದು, ಕಳೆದ ಸೋಮವಾರಕ್ಕಿಂತ ₹2 ಸಾವಿರ ಇಳಿಕೆಯಾಗಿದೆ. ಕಳೆದ ಗುರುವಾರ ಮಾರುಕಟ್ಟೆಗೆ 12,942 ಕ್ವಿಂಟಲ್ (51,765 ಚೀಲ) ಮೆಣಸಿನಕಾಯಿ ಆವಕವಾಗಿತ್ತು. ತೇವಾಂಶ ಹೆಚ್ಚಿರುವ 272 ಲಾಟ್‌ಗಳಿಗೆ ಟೆಂಡರ್ ನಮೂದಿಸಿಲ್ಲ.

'ಸರಾಸರಿ ಬೆಲೆಯಲ್ಲಿ ಬ್ಯಾಡಗಿ ಡಬ್ಬಿ ₹43,699, ಕಡ್ಡಿ ₹44,509 ಹಾಗೂ ಗುಂಟೂರು ತಳಿ ₹16,209 ರಂತೆ ಮಾರಾಟವಾಗಿದೆ. ಗುರುವಾರದ ಟೆಂಡರ್ ಪ್ರಕ್ರಿಯೆಯಲ್ಲಿ ಒಟ್ಟು 292 ಖರೀದಿದಾರರು ಪಾಲ್ಗೊಂಡಿದ್ದರು' ಎಂದು ಎಪಿಎಂಸಿ ಮೂಲಗಳು ತಿಳಿಸಿವೆ.

ಗುರುವಾರದ ಮಾರುಕಟ್ಟೆ ದರ (₹ಗಳಲ್ಲಿ)

ತಳಿ	ಕನಿಷ್ಠ	ಗರಿಷ್ಠ
ಬ್ಯಾಡಗಿ ಕಡ್ಡಿ	3,689	70,080
ಬ್ಯಾಡಗಿ ಡಬ್ಬಿ	3,429	62,399
ಗುಂಟೂರು ತಳಿ	1,629	19,289

358 ಅಂಶ ಜಿಗಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಬುಧವಾರ ಭಾರಿ ಇಳಿಕೆ ಕಂಡಿದ್ದ ಷೇರು ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಗುರುವಾರ ಉತ್ತಮ ಚೇತರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 358 ಅಂಶ ಏರಿಕೆಯಾಗಿ, 70,865ಕ್ಕೆ ವಹಿವಾಟು ಮುಕ್ತಾಯಗೊಂಡಿತು. 21 ಷೇರುಗಳು ಲಾಭ ಗಳಿಸಿದ್ದರೆ, ಉಳಿದ 9 ಷೇರುಗಳು ಇಳಿಕೆ ಕಂಡಿವೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 130 ಅಂಶ ಏರಿಕೆಯಾಗಿ 21,280ಕ್ಕೆ ಸ್ಥಿರಗೊಂಡಿತು. 38 ಷೇರುಗಳು ಗಳಿಕೆ ಕಂಡಿದ್ದರೆ, 12 ಇಳಿಕೆ ಕಂಡಿವೆ.

ಹೂಡಿಕೆದಾರರು ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಖರೀದಿಗೆ ಉತ್ಸಾಹ ತೋರಿದರು. ಹಾಗಾಗಿ, ಸೂಚ್ಯಂಕಗಳು ದಿನದ ಕನಿಷ್ಠ ಮಟ್ಟದಿಂದ ಚೇತರಿಸಿಕೊಳ್ಳಲು ಸಹಾಯವಾಯಿತು ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಎಚ್‌ಡಿಎಫ್‌ಸಿ ಸೆನ್ಸೆಕ್ಸ್ ಗಳಿಕೆಗೆ 300 ಅಂಶಗಳಿಗಿಂತ ಹೆಚ್ಚು ಕೊಡುಗೆ ನೀಡಿವೆ.

ಪವರ್ ಗ್ರಿಡ್ (ಶೇ 2.27), ಎಚ್‌ಡಿಎಫ್‌ಸಿ ಬ್ಯಾಂಕ್ (ಶೇ 1.82), ಕೋಟಕ್ ಬ್ಯಾಂಕ್ (ಶೇ 1.66), ರಿಲಯನ್ಸ್ ಇಂಡಸ್ಟ್ರೀಸ್ (ಶೇ 1.38), ಎನ್‌ಟಿಪಿಸಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟಾಟಾ ಸ್ಟೀಲ್ ಮತ್ತು ಭಾರ್ತಿ ಏರ್‌ಟೆಲ್ ಗಳಿಕೆ ಕಂಡಿವೆ. ಬಜಾಜ್ ಫೈನಾನ್ಸ್, ಆಕ್ಸಿಸ್ ಬ್ಯಾಂಕ್, ಎಚ್‌ಸಿಎಲ್ ಟೆಕ್ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಇಳಿಕೆ ಕಂಡಿವೆ.

ಬಿಎಸ್‌ಇ ಸ್ಮಾಲ್‌ಕ್ಯಾಪ್ ಗೇಜ್ ಶೇ1.69 ಮತ್ತು ಮಿಡ್‌ಕ್ಯಾಪ್ ಸೂಚ್ಯಂಕಗಳು ಶೇ 1.61 ಏರಿಕೆ ಕಂಡಿವೆ. ಯುಟಿಲಿಟಿ (ಶೇ 2.46), ವಿದ್ಯುತ್ (ಶೇ 2.43), ತೈಲ ಮತ್ತು ಅನಿಲ (ಶೇ 1.72), ಟೆಲಿ ಕಮ್ಯುನಿಕೇಷನ್ (ಶೇ 1.64) ಮತ್ತು ಇಂಧನ (ಶೇ 1.62) ಷೇರುಗಳು ಏರಿಕೆ ಕಂಡಿದ್ದರೆ, ಆಟೊಮೊಬೈಲ್ ಷೇರುಗಳು ಇಳಿಕೆ ಕಂಡಿವೆ. ಏಷ್ಯಾ ಮಾರುಕಟ್ಟೆಯಲ್ಲಿ ಸಿಯೋಲ್ ಮತ್ತು ಟೋಕಿಯೊ ಇಳಿಕೆ ಕಂಡಿದ್ದರೆ, ಶಾಂಘೈ ಮತ್ತು ಹಾಂಗ್‌ಕಾಂಗ್ ಗಳಿಕೆ ಕಂಡಿವೆ.

ಬೆಳ್ಳಿ: ₹600 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಬೆಳ್ಳಿ ಧಾರಣೆ ಕೆ.ಜಿಗೆ ₹600 ಏರಿಕೆಯಾಗಿ, ₹79,100ಕ್ಕೆ ತಲುಪಿದೆ. ಚಿನ್ನವು 10 ಗ್ರಾಂಗೆ ₹50 ಇಳಿಕೆಯಾಗಿ, ₹63,050ರಂತೆ ಮಾರಾಟವಾಗಿದೆ.

ಮದ್ಯ ರಫ್ತು ಹೆಚ್ಚಳ ನಿರೀಕ್ಷೆ: ಕೇಂದ್ರ

ನವದೆಹಲಿ (ಪಿಟಿಐ): 'ದೇಶದಲ್ಲಿ ತಯಾರಾಗುವ ಮದ್ಯಕ್ಕೆ ಜಾಗತಿಕ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ. ಹಾಗಾಗಿ, ಮದ್ಯ ರಫ್ತು ವಹಿವಾಟು ಕೆಲವೇ ವರ್ಷಗಳಲ್ಲಿ ₹8,300 ಕೋಟಿ ದಾಟುವ ನಿರೀಕ್ಷೆಯಿದೆ' ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

21-12-2023

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1620)
ಒಂದು ವಾರದ ಡೆಲಿವರಿ	1605 (1615)
ಸೋಯಾ ಕಚ್ಚಾ	860 (862)
ಪಾಮ್ ವಾರದ ಡೆಲಿವರಿ	823 (825)
ಸೂರ್ಯಕಾಂತಿ ಎಣ್ಣೆ ಕಚ್ಚಾ	840 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,200 (62,100)
ಬೆಳ್ಳಿ ಕೆ.ಜಿ 74,650 (73,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಷ್ಟ್ರೀಯ ಹೆದ್ದಾರಿಯಲ್ಲಿ

551 ಬ್ಲ್ಯಾಕ್ ಸ್ಪಾಟ್ ಗುರುತು

ನವದೆಹಲಿ (ಪಿಟಿಐ): ದೇಶದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅತಿಹೆಚ್ಚು ಅಪಘಾತ ಸಂಭವಿಸುವ 5,803 ಬ್ಲ್ಯಾಕ್ ಸ್ಪಾಟ್‌ಗಳನ್ನು (ಅಪಘಾತ ವಲಯ) ಗುರುತಿಸಲಾಗಿದೆ ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ.

2018ರಿಂದ 2020ರವರೆಗೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ನೀಡಿರುವ ಅಂಕಿ–ಅಂಶ ಆಧರಿಸಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರು, ಸಂಸತ್‌ನ ಕೆಳಮನೆಗೆ ಸಲ್ಲಿಸಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ನೀಡಿದ್ದಾರೆ.

ತಮಿಳುನಾಡಿನಲ್ಲಿ ಅತಿಹೆಚ್ಚು ಅಂದರೆ 748 ಬ್ಲ್ಯಾಕ್ ಸ್ಪಾಟ್‌ಗಳಿವೆ. ಉಳಿದಂತೆ ಪಶ್ಚಿಮ ಬಂಗಾಳ 701, ತೆಲಂಗಾಣದಲ್ಲಿ 485 ಇವೆ ಎಂದು ಹೇಳಿದ್ದಾರೆ.

ದೇಶದಲ್ಲಿ ಗುರುತಿಸಿರುವ ಬ್ಲ್ಯಾಕ್ ಸ್ಪಾಟ್‌ಗಳ ದುರಸ್ತಿ ಮತ್ತು ನಿರ್ವಹಣೆಗೆ ಕೇಂದ್ರವು ಅಗತ್ಯ ಕ್ರಮವಹಿಸಿದೆ. ಇದಕ್ಕಾಗಿ 2018ರಿಂದ 2023ರವರೆಗೆ ಎನ್‌ಎಚ್‌ಎಐ ₹15,702.80 ಕೋಟಿ ವ್ಯಯಿಸಿದೆ
ನಿತಿನ್ ಗಡ್ಕರಿ, ಕೇಂದ್ರ ಸಾರಿಗೆ ಸಚಿವ

ಕರ್ನಾಟಕದಲ್ಲಿ 551 ಬ್ಲ್ಯಾಕ್ ಸ್ಪಾಟ್‌ಗಳಿವೆ. ಈ ಪೈಕಿ 367 ಬ್ಲ್ಯಾಕ್ ಸ್ಪಾಟ್‌ಗಳನ್ನು ಸಂಚಾರಕ್ಕೆ ಸುರಕ್ಷಿತ ಸ್ಥಳಗಳನ್ನಾಗಿ ದುರಸ್ತಿಪಡಿಸಲಾಗಿದೆ. 2018ರಿಂದ 2020ರವರೆಗೆ ಈ ಸ್ಥಳಗಳಲ್ಲಿ ಸಂಭವಿಸಿದ ಅಪಘಾತದಲ್ಲಿ 4,110 ಮಂದಿ ಮೃತಪಟ್ಟಿದ್ದು, 1,694 ಮಂದಿ ಗಾಯಗೊಂಡಿದ್ದಾರೆ ಎಂದು ವಿವರಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	570
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36000
ಹಳತು	41500-44000
ಚಿತ್ರದುರ್ಗ	
ಅಪಿ	47919-48329
ಬೆಟ್ಟೆ	36939-37369
ಕೆಂಪುಗೋಟು	30400-30800
ರಾಶಿ	47499-47889
ಹೊನ್ನಾವರ	
ಹಳೆಚಾಲಿ	36000-38000
ಕುಮಟ	
ಚಿಪ್ಪು	25569-35559
ಕೋಕ	17660-32001
ಹಳೆಚಾಲಿ	36369-38269
ಹೊಸಚಾಲಿ	31111-34500
ಪುತ್ತೂರು	
ಕೋಕ	11000-25000
ಹೊಸತು	27000-36500
ಸಾಗರ	
ಬಿಳಿಗೋಟು	22289-33299
ಚಾಲಿ	33989-38299
ಕೋಕ	19899-34699
ಕೆಂಪುಗೋಟು	20169-35799
ರಾಶಿ	39000-48470
ಸಿಪ್ಪೆಗೋಟು	11399-20879
ಶಿವಮೊಗ್ಗ	
ಬೆಟ್ಟೆ	46500-53500
ಗೊರಬಲು	17990-41099
ಹೊಸತು	40099-48859
ರಾಶಿ	35609-48359
ಸರಕು	51100-81096
ಸಿದ್ದಾಪುರ	
ಬಿಳಿಗೋಟು	30619-32122
ಚಾಲಿ	37309-38249
ಕೋಕ	30669-32909
ಕೆಂಪುಗೋಟು	30469-30469
ರಾಶಿ	43689-47599
ತಟ್ಟಿಬೆಟ್ಟೆ	44599-44599
ಶಿರಸಿ	
ಬೆಟ್ಟೆ	38409-44899
ಬಿಳಿಗೋಟು	30999-35509
ಚಾಲಿ	36518-39008
ಕೆಂಪುಗೋಟು	28099-28099
ರಾಶಿ	45809-47589
ಯಲ್ಲಾಪುರ	
ಅಪಿ	60619-60619
ಬಿಳಿಗೋಟು	24899-34900
ಚಾಲಿ	35812-38920
ಕೋಕ	17099-30299
ಕೆಂಪುಗೋಟು	24899-33699
ರಾಶಿ	45109-55100
ತಟ್ಟಿಬೆಟ್ಟೆ	38299-44119

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	13800	-	190.60
ಎಸಿ	-	7500	-	
ಆರ್‌ಪಿ	-	11000	-	ಲಂಡನ್
ಆರ್‌ಸಿ	-	6500	-	2870 ಡಾಲರ್ಸ್

ಜಾತಿ ವಿಷಯವನ್ನು ಸಂಸತ್ತಿನವರೆಗೆ ತಂದ ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್: ಖರ್ಗೆ, ಪವಾರ್ ಆರೋಪ

ಸಂಸದರ ಅಮಾನತು ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರು ಜಾತಿ ವಿಷಯವನ್ನು ಸಂಸತ್ತಿನವರೆಗೆ ತಂದಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಗುರುವಾರ ಆರೋಪಿಸಿದರು.

ಟಿಎಂಸಿ ನಾಯಕ ಕಲ್ಯಾಣ್ ಬ್ಯಾನರ್ಜಿ ಅವರು ಈಚೆಗೆ ಪ್ರತಿಭಟನೆ ವೇಳೆ ತಮ್ಮ ಬಗ್ಗೆ ಅಣಕವಾಡುವ ಮೂಲಕ ರೈತ ಮತ್ತು ಜಾಟ್ ಜಾತಿಯ ತಮ್ಮ ಹಿನ್ನೆಲೆಯನ್ನು ಅವಮಾನಿಸಿದ್ದಾರೆ ಎಂದು ಧನಕರ್ ಆಪಾದಿಸಿದ್ದರು.

ಪ್ರತಿಪಕ್ಷಗಳ ಸಂಸದರು ಸಂಸತ್ತಿನಿಂದ ವಿಜಯ್‌ಚೌಕ್‌ವರೆಗೆ ಪ್ರತಿಭಟನೆ ನಡೆಸಿದ ಬಳಿಕ ಖರ್ಗೆ ಮತ್ತು ಪವಾರ್ ಮಾತನಾಡಿದರು. ಸಂಸತ್ತಿನಲ್ಲಿ ಭದ್ರತಾ ಉಲ್ಲಂಘನೆ ಮತ್ತು 143 ಸಂಸದರ ಅಮಾನತು ವಿರುದ್ಧ ಗೃಹ ಸಚಿವ ಅಮಿತ್ ಶಾ ಅವರು ಹೇಳಿಕೆ ನೀಡಬೇಕೆಂದು ಪ್ರತಿಭಟನಕಾರರು ಒತ್ತಾಯಿಸಿದರು.

ಸದನದಲ್ಲಿ ಮಾತನಾಡದೆ ಪ್ರಧಾನಿ ಮತ್ತು ಗೃಹಸಚಿವರು ಸಂಸತ್ತನ್ನು ಅವಮಾನಿಸಿದ್ದಾರೆ. ಪ್ರಧಾನಿ ಅವರು ಲೋಕಸಭೆ ಮತ್ತು ರಾಜ್ಯಸಭೆ ಹೊರತು ಪಡಿಸಿ ವಾರಾಣಸಿ ಸೇರಿದಂತೆ ಎಲ್ಲ ಕಡೆ ಮಾತನಾಡುತ್ತಾರೆ. ಇದು ಹಕ್ಕುಚ್ಯುತಿ ವಿಷಯ. ಸರ್ಕಾರ ಪ್ರಜಾಸತ್ತಾತ್ಮಕವಾಗಿ ವರ್ತಿಸಬೇಕು ಎಂದು ಖರ್ಗೆ ಅವರು ಹೇಳಿದರು.



ಅಮಾನತುಗೊಂಡ ಸಂಸದರ ಜತೆ ರಾಜ್ಯಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ದೆಹಲಿಯಲ್ಲಿ ಮಹಾತ್ಮಾ ಗಾಂಧಿ ಪ್ರತಿಮೆ ಬಳಿ ಗುರುವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

> **ಇದು ವಿರೋಧಪಕ್ಷ ಮುಕ್ತ ಸಂಸತ್. ಇದು ಬಹುತೇಕ ಅರಸೊತ್ತಿಗೆಯಂತೆ. ಭಾರತವು ರಾಜಪ್ರಭುತ್ವ ಎನ್ನಲು ಅವರು ಸಂವಿಧಾನಕ್ಕೆ ತಿದ್ದುಪಡಿ ತರಬೇಕು**
> **ಜಾನ್ ಬ್ರಿಟ್ಟಾಸ್**
> ರಾಜ್ಯಸಭೆಯ ಸಿಪಿಎಂ ಸದಸ್ಯ

> **ಜಾಟ್ ಕುಟುಂಬಕ್ಕೆ ಸೇರಿದ ಮಹಿಳಾ ಕುಸ್ತಿಪಟುಗಳು ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗಿ ಪ್ರತಿಭಟನೆ ನಡೆಸಿದಾಗ ಅವಮಾನವಾಗಿರಲಿಲ್ಲವೇ?**
> **ರಂಜೀತ್ ರಂಜನ್**
> ಕಾಂಗ್ರೆಸ್ ಸಂಸದ

‘ಇಂಡಿಯಾ ಮೈತ್ರಿಕೂಟದ ನಾಯಕರು ಶುಕ್ರವಾರವೂ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲಿದ್ದಾರೆ. ಈ ಸರ್ಕಾರದ ನಡವಳಿಕೆ ವಿರುದ್ಧ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಪ್ರತಿಭಟನೆ ನಡೆಯಲಿದೆ ಎಂದರು.

ಪವಾರ್ ಅವರು, ‘ಆರೋಪಿಗಳು ಸದನದೊಳಗೆ ಹೇಗೆ ಬಂದರು ಮತ್ತು ಅವರಿಗೆ ಪಾಸ್‌ಗಳನ್ನು ನೀಡಿದ್ದು ಯಾರು ಎಂಬ ಬಗ್ಗೆ ಸರ್ಕಾರದ ಕಡೆಯಿಂದ ಹೇಳಿಕೆ ನೀಡಬೇಕು ಎಂಬ ಒಂದೇ ಬೇಡಿಕೆ ಇದ್ದಿದ್ದು’ ಎಂದರು.

‘ಸಂಸತ್ತಿನ ಹೊರಗೆ ಯಾರೊ ಏನೊ ಮಾಡಿದ್ದನ್ನು ಇಲ್ಲಿಯವರೆಗೆ ತಂದು ವಿಷಯವನ್ನು ದೊಡ್ಡದು ಮಾಡುವುದು ಸರಿಯಲ್ಲ. ನನ್ನ ವಿರುದ್ಧ ಯಾರೊ ಏನೊ ಹೇಳಿದರೆ, ಅದು ಮರಾಠರಿಗೆ, ರೈತರಿಗೆ ಮಾಡಿದ ಅವಮಾನ ಎಂದು ನಾನು ಹೇಳಿದರೆ ಹೇಗೆ? ಆದರೆ ನಾನು ಎಂದಿಗೂ ಹಾಗೆ ಹೇಳುವುದಿಲ್ಲ’ ಎಂದು ನುಡಿದರು.

‘ಜಾಟ್ ಸಮುದಾಯದ ರೈತರು ಗಾಜಿಪುರದಲ್ಲಿ ಪ್ರತಿಭಟನೆ ಮಾಡುತ್ತಿದ್ದಾಗ ಬಿಜೆಪಿಯು ದಂಡ ಪ್ರಯೋಗಿಸಲು ಪೊಲೀಸರಿಗೆ ಹೇಳಿತ್ತು. ಆಗ ಜಾಟ್ ಜಾತಿಗಾಗಲೀ, ರೈತರಿಗಾಗಲೀ ಅವಮಾನ ಆಗಿರಲಿಲ್ಲ’ ಎಂದು ಕಾಂಗ್ರೆಸ್ ಸಂಸದ ರಂಜೀತ್ ರಂಜನ್ ಅವರು ಹೇಳಿದರು.

‘ಮೀರಾಕುಮಾರ್ ಅವರು ಸ್ಪೀಕರ್ ಆಗಿದ್ದ ವೇಳೆ ಅವರನ್ನು ಕುರಿತ ಅಣಕಗಳು ಚಾನೆಲ್‌ಗಳಲ್ಲೂ ಪ್ರಸಾರವಾಗಿತ್ತು. ಅವರು ಅದು ದಲಿತರಿಗೆ ಆದ ಅವಮಾನ ಎಂದಿರಲಿಲ್ಲ. ಭದ್ರತೆ ಉಲ್ಲಂಘನೆ ಮತ್ತು ತಮ್ಮ ದೌರ್ಬಲ್ಯ ಮುಚ್ಚಿಕೊಳ್ಳಲು ಬಿಜೆಪಿಯವರು ಕ್ಷುದ್ರ ರಾಜಕೀಯ ಮಾಡುತ್ತಿದ್ದಾರೆ. ನಮ್ಮ ಇತಿಹಾಸಕ್ಕೆ ಇದೊಂದು ಕಪ್ಪು ಚುಕ್ಕೆ’ ಎಂದು ಅವರು ಹೇಳಿದರು.

ಕಾಂಗ್ರೆಸ್‌ನ ಹಿರಿಯ ನಾಯಕ ಶಶಿ ತರೂರ್ ಅವರು, ಭಾರತದಲ್ಲಿ ಸಂಸದೀಯ ಪ್ರಜಾಸತ್ತೆಯ ನಿಧನದ ಸುದ್ದಿ ಬರೆಯಬೇಕಾದ ಕ್ಷಣ ಬಂದಿದೆ ಎಂದು ಪ್ರತಿಕ್ರಿಯಿಸಿದರು.

ಬ್ಯಾನರ್ಜಿ, ರಾಹುಲ್ ವಿರುದ್ಧ ಕ್ರಮಕ್ಕೆ ಜಾಟ್ ಮಹಾಸಭಾ ಒತ್ತಾಯ

ನವದೆಹಲಿ (ಪಿಟಿಐ): ಉಪ ರಾಷ್ಟ್ರಪತಿಯೂ ಆಗಿರುವ ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರ ಬಗ್ಗೆ ಅಣಕವಾಡಿದ ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ಮತ್ತು ಇದನ್ನು ವಿಡಿಯೊ ಮಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅಖಿಲ ಭಾರತ ಜಾಟ್ ಮಹಾಸಭಾದ ಸದಸ್ಯರು ಒತ್ತಾಯಿಸಿದ್ದಾರೆ.

ಮಂಗಳವಾರ ಸಂಸದರ ಅಮಾನತು ವಿರೋಧಿಸಿ ಪ್ರತಿಪಕ್ಷಗಳು ಪ್ರತಿಭಟನೆ ನಡೆಸುತ್ತಿದ್ದ ವೇಳೆ ಬ್ಯಾನರ್ಜಿ ಅವರು ಧನಕರ್ ಅವರನ್ನು ಕುರಿತಂತೆ ಅಣಕ ಮಾಡಿದ್ದರು. ಇವರನ್ನು ರಾಹುಲ್ ಅವರು ತಮ್ಮ ಮೊಬೈಲ್‌ನಲ್ಲಿ ವಿಡಿಯೊ ಮಾಡುತ್ತಿದ್ದುದು ಕಂಡು ಬಂದಿತ್ತು.

ಈ ಇಬ್ಬರು ಸಂಸದರ ವಿರುದ್ಧ ಘೋಷಣೆ ಕೂಗಿ ಕ್ರಮಕ್ಕೆ ಒತ್ತಾಯಿಸಿದ ಪ್ರತಿಭಟನಕಾರರು ಸತತ ಎರಡನೇ ದಿನ ಗುರುವಾರವೂ ಪ್ರತಿಭಟನೆ ನಡೆಸಿದರು. ಬುಧವಾರ ಕಾಂಗ್ರೆಸ್ ಕೇಂದ್ರ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗಿತ್ತು.

ಜಂತರ್‌ಮಂತರ್ ಬಳಿ ಪ್ರತಿಭಟನೆ ನಡೆಸಿದ ವೇಳೆ ಜಾಟ್ ಸಮುದಾಯದ ರಾಷ್ಟ್ರೀಯ ಕಾರ್ಯದರ್ಶಿ ಅಶೋಕ್ ಬಲ್ಯಾನ್ ಮಾತನಾಡಿ, ರಾಹುಲ್ ಗಾಂಧಿ ಮತ್ತು ಬ್ಯಾನರ್ಜಿ ಅವರನ್ನು ಸಂಸತ್ತಿನಿಂದ ಶಾಶ್ವತವಾಗಿ ಅಮಾನತು ಮಾಡಬೇಕು ಎಂದು ಒತ್ತಾಯಿಸಿದರು.

ದೂರಸಂಪರ್ಕ ಮಸೂದೆಗೆ ಅಸ್ತು

ನವದೆಹಲಿ (ಪಿಟಿಐ): ದೂರಸಂಪರ್ಕ ಸೇವೆಗಳನ್ನು ರಾಷ್ಟ್ರದ ಭದ್ರತೆಯ ಹಿತದೃಷ್ಟಿಯಿಂದ ತಾತ್ಕಾಲಿಕ ಅವಧಿಗೆ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಕೇಂದ್ರ ಸರ್ಕಾರಕ್ಕೆ ಅವಕಾಶ ಕಲ್ಪಿಸುವ ದೂರಸಂಪರ್ಕ ಮಸೂದೆ 2023ಕ್ಕೆ ಸಂಸತ್ತು ಗುರುವಾರ ಅಂಗೀಕಾರ ನೀಡಿದೆ. ಉಪಗ್ರಹ ತರಂಗಾಂತರಗಳ ಹಂಚಿಕೆಯನ್ನು ಹರಾಜೇತರ ಮಾರ್ಗದ ಮೂಲಕ ನಡೆಸಲು ಕೂಡ ಈ ಮಸೂದೆಯು ಕೇಂದ್ರಕ್ಕೆ ಅವಕಾಶ ಕಲ್ಪಿಸಲಿದೆ.

ರಾಜ್ಯಸಭೆಯು ಈ ಮಸೂದೆಗೆ ಗುರುವಾರ ಧ್ವನಿಮತದ ಮೂಲಕ ಅಂಗೀಕಾರ ನೀಡಿತು. ಮಸೂದೆಗೆ ಲೋಕಸಭೆಯು ಬುಧವಾರ ಅಂಗೀಕಾರ ನೀಡಿತ್ತು. ಸಾರ್ವಜನಿಕ ತುರ್ತು ಸಂದರ್ಭಗಳಲ್ಲಿ ಅಥವಾ ಸಾರ್ವಜನಿಕರ ರಕ್ಷಣೆಗಾಗಿ ದೂರಸಂಪರ್ಕ ಜಾಲವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಈ ಮಸೂದೆಯು ಕೇಂದ್ರಕ್ಕೆ ಅವಕಾಶ ಕಲ್ಪಿಸುತ್ತದೆ. ಸಾರ್ವಜನಿಕ ತುರ್ತು ಸಂದರ್ಭಗಳಲ್ಲಿ ಸಂದೇಶವೊಂದರ ರವಾನೆಯನ್ನು ತಡೆಹಿಡಿಯಲು ಹಾಗೂ ಸಂದೇಶವನ್ನು ಕದ್ದಾಲಿಸಲು ಕೂಡ ಮಸೂದೆಯು ಅವಕಾಶ ಕಲ್ಪಿಸುತ್ತದೆ.

ಸಿ.ಇ.ಸಿ ನೇಮಕ ಮಸೂದೆ ಅಂಗೀಕಾರ: ಮುಖ್ಯ ಚುನಾವಣಾ ಆಯುಕ್ತ (ಸಿ.ಇ.ಸಿ) ಹಾಗೂ ಚುನಾವಣಾ ಆಯುಕ್ತರ (ಇ.ಸಿ) ನೇಮಕಕ್ಕೆ ತ್ರಿಸದ್ಯ ಸಮಿತಿಯೊಂದನ್ನು ರಚಿಸುವ ಮಸೂದೆಗೆ ಲೋಕಸಭೆಯು ಗುರುವಾರ ಧ್ವನಿಮತದ ಮೂಲಕ ಅಂಗೀಕಾರ ನೀಡಿದೆ. ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರ (ನೇಮಕ, ಸೇವಾ ನಿಯಮಗಳು ಮತ್ತು ಸೇವಾ ಅವಧಿ) ಮಸೂದೆ 2023ಕ್ಕೆ ರಾಜ್ಯಸಭೆಯ ಅಂಗೀಕಾರ ಈಗಾಗಲೇ ದೊರೆತಿದೆ.

ಲೋಕಸಭೆಯಲ್ಲಿ ಚರ್ಚೆಗೆ ಉತ್ತರ ನೀಡಿದ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್, ‘ಸಿ.ಇ.ಸಿ ಮತ್ತು ಇ.ಸಿ. ಸೇವಾ ನಿಯಮಗಳಿಗೆ ಸಂಬಂಧಿಸಿದ 1991ರ ಕಾಯ್ದೆಯು ಅರೆಬೆಂದ ಕಾನೂನಾಗಿತ್ತು. ಈಗಿನ ಮಸೂದೆಯು ಆ ಕಾಯ್ದೆಯಲ್ಲಿ ಇಲ್ಲದಿದ್ದ ಆಯಾಮಗಳನ್ನೂ ಒಳಗೊಂಡಿದೆ’ ಎಂದು ತಿಳಿಸಿದರು.

ಅಪರಾಧ ಮಸೂದೆಗಳಿಗೆ ಅಂಗೀಕಾರ

ನವದೆಹಲಿ (ಪಿಟಿಐ): ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದ, ಬ್ರಿಟಿಷ್ ಕಾಲದ ಕಾನೂನುಗಳ ಬದಲಿಗೆ ಜಾರಿಗೆ ತರಲು ಉದ್ದೇಶಿಸಿರುವ ಮೂರು ಮಸೂದೆಗಳಿಗೆ ರಾಜ್ಯಸಭೆಯು ಗುರುವಾರ ಧ್ವನಿಮತದ ಅಂಗೀಕಾರ ನೀಡಿದೆ. ಈ ಮೂರು ಮಸೂದೆಗಳಿಗೆ ಲೋಕಸಭೆಯು ಬುಧವಾರ ಅಂಗೀಕಾರ ನೀಡಿತ್ತು.

ಭಾರತೀಯ ದಂಡ ಸಂಹಿತೆ, ಅಪರಾಧ ದಂಡಪ್ರಕ್ರಿಯಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯ ಬದಲಿಗೆ ಜಾರಿಗೆ ತರಲು ಸಂಸತ್ತು ಅನುಮೋದನೆ ನೀಡಿರುವ ಭಾರತೀಯ ನ್ಯಾಯ (ಎರಡನೆಯ) ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ (ಎರಡನೆಯ) ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ (ಎರಡನೆಯ) ಮಸೂದೆ ಅಂಕಿತಕ್ಕಾಗಿ ರಾಷ್ಟ್ರಪತಿಯವರಿಗೆ ರವಾನೆ ಆಗಲಿವೆ. ಅವರ ಅಂಕಿತ ದೊರೆತ ನಂತರ ಇವು ಕಾನೂನಾಗಿ ಜಾರಿಗೆ ಬರಲಿವೆ.

ಆದಾಯ ಮೀರಿ ಆಸ್ತಿ ಗಳಿಸಿದ ಪ್ರಕರಣ

ಪೊನ್ಮುಡಿಗೆ 3 ವರ್ಷ ಸಜೆ

ಚೆನ್ನೈ (ಪಿಟಿಐ): ಆದಾಯ ಮೀರಿ ಆಸ್ತಿ ಗಳಿಸಿದ ಪ್ರಕರಣದಲ್ಲಿ ತಮಿಳುನಾಡು ಉನ್ನತ ಶಿಕ್ಷಣ ಸಚಿವರಾಗಿದ್ದ ಕೆ. ಪೊನ್ಮುಡಿ ಅವರಿಗೆ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಮೂರು ವರ್ಷಗಳ ಜೈಲು ಶಿಕ್ಷೆಯನ್ನು ಮದ್ರಾಸ್ ಹೈಕೋರ್ಟ್ ಗುರುವಾರ ವಿಧಿಸಿದೆ.

ಪೊನ್ಮುಡಿ ಅವರ ಪತ್ನಿ ಪಿ. ವಿಶಾಲಾಕ್ಷ್ಮಿ ಅವರಿಗೂ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಿದ ನ್ಯಾಯಮೂರ್ತಿ ಜೆ. ಜಯಚಂದ್ರನ್ ಅವರು, ಇಬ್ಬರೂ ಅಪರಾಧಿಗಳಿಗೆ ತಲಾ ₹ 50 ಲಕ್ಷ ದಂಡವನ್ನೂ ವಿಧಿಸಿ ತೀರ್ಪು ನೀಡಿದರು.

ಈ ಪ್ರಕರಣದಲ್ಲಿ ಸಚಿವ ಮತ್ತು ಅವರ ಪತ್ನಿಯನ್ನು ದೋಷಿ ಎಂದು ಮಂಗಳವಾರ ಘೋಷಿಸಿದ್ದ ಹೈಕೋರ್ಟ್, ಗುರುವಾರ ತೀರ್ಪು ಪ್ರಕಟಿಸಿದೆ.



ಪೊನ್ಮುಡಿ

ದೋಷಿ ಎಂದು ನ್ಯಾಯಾಲಯ ತೀರ್ಪು ಘೋಷಿಸಿದ ಕ್ಷಣದಿಂದಲೇ ಪೊನ್ಮುಡಿ ಅವರು ಶಾಸಕ ಸ್ಥಾನದಿಂದ ಅನರ್ಹಗೊಂಡಿದ್ದು, ಸಚಿವ ಸ್ಥಾನವನ್ನೂ ಕಳೆದುಕೊಂಡಿದ್ದಾರೆ.

ಸುಪ್ರೀಂಕೋರ್ಟ್‌ನಲ್ಲಿ ವಿಶೇಷ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಬೇಕು ಮತ್ತು ಶಿಕ್ಷೆಯನ್ನು ಅಮಾನತುಗೊಳಿಸುವಂತೆ ಪೊನ್ಮುಡಿ ಪರ ವಕೀಲ ಎನ್. ಆರ್. ಎಲ್ಲಂಗೊ ಮನವಿ ಮಾಡಿದರು. ಈ ಮನವಿ ತಿರಸ್ಕರಿಸಿದ ನ್ಯಾಯಮೂರ್ತಿ ಜಯಚಂದ್ರನ್ ಅವರು, ಆರೋಗ್ಯದ ಸ್ಥಿತಿಯ ಕಾರಣಕ್ಕೆ ಪೊನ್ಮುಡಿ ಮತ್ತು ವಿಶಾಲಾಕ್ಷಿ ಅವರಿಗೆ ವಿಚಾರಣಾ ನ್ಯಾಯಾಲಯದ ಮುಂದೆ ಶರಣಾಗಲು 30 ದಿನಗಳ ಕಾಲಾವಕಾಶ ನೀಡಿದರು.

2024ರ ಜ.22ರಂದು ಶರಣಾಗದಿದ್ದರೆ ವಾರಂಟ್ ಜಾರಿಗೊಳಿಸಿ ಅಪರಾಧಿಗಳನ್ನು ವಶಕ್ಕೆ ಪಡೆದುಕೊಳ್ಳಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಪೊನ್ಮುಡಿ ಖಾತೆ ರಾಜಕಣ್ಣಪ್ಪನ್‌ಗೆ: ಕೆ. ಪೊನ್ಮುಡಿ ಶಾಸಕ ಸ್ಥಾನದಿಂದ ಅನರ್ಹರಾಗಿದ್ದರಿಂದ, ಉನ್ನತ ಶಿಕ್ಷಣ ಖಾತೆಯನ್ನು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಆರ್.ಎಸ್.ರಾಜಕಣ್ಣಪ್ಪನ್ ಅವರಿಗೆ ಗುರುವಾರ ಹಂಚಿಕೆ ಮಾಡಿದ್ದಾರೆ.

2006ರಿಂದ 2011ರ ಅವಧಿಯ ಡಿಎಂಕೆ ಸರ್ಕಾರದಲ್ಲಿ ಸಚಿವರಾಗಿದ್ದಾಗ ಪೊನ್ಮುಡಿ, ತಮ್ಮ ಮತ್ತು ಪತ್ನಿ ಹೆಸರಿನಲ್ಲಿ ಆದಾಯಕ್ಕೂ ಮೀರಿ ಸುಮಾರು ₹1.75 ಕೋಟಿ ಗಳಿಸಿದ್ದಾರೆ ಎಂದು ಆರೋಪಿಸಲಾಗಿತ್ತು. ಹಿಂದಿನ ಎಐಎಡಿಎಂಕೆ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಮತ್ತು ಜಾಗೃತ ದಳ ನಿರ್ದೇಶನಾಲಯ ಈ ಬಗ್ಗೆ ಪ್ರಕರಣ ದಾಖಲಿಸಿದ್ದವು.



ಸಂತ್ರಸ್ತರಿಗೆ ನೆರವು

ಪ್ರವಾಹದಿಂದ ತತ್ತರಿಸಿರುವ ತಮಿಳುನಾಡಿನ ತೂತುಕುಡಿಯಲ್ಲಿ ಭಾರತೀಯ ನೌಕಾಪಡೆ ಸಿಬ್ಬಂದಿ ಹೆಲಿಕಾಪ್ಟರ್ ಮೂಲಕ ಸಂತ್ರಸ್ತರಿಗೆ ಆಹಾರ ಸಾಮಗ್ರಿಗಳನ್ನು ವಿತರಿಸಿದರು –ಪಿಟಿಐ ಚಿತ್ರ

ಭದ್ರತಾ ವೈಫಲ್ಯ: ಮತ್ತಿಬ್ಬರ ವಿಚಾರಣೆ

ನವದೆಹಲಿ/ಬಾಗಲಕೋಟೆ (ಪಿಟಿಐ): ಸಂಸತ್‌ನ ಭದ್ರತಾ ಲೋಪ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಕರ್ನಾಟಕದ ಒಬ್ಬ ವ್ಯಕ್ತಿ ಸೇರಿ ಇಬ್ಬರನ್ನು ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ವಿಚಾರಣೆಗೆ ಒಳಪಟ್ಟ ಇಬ್ಬರಲ್ಲಿ ಒಬ್ಬರಾದ ಶ್ರೀಕೃಷ್ಣ ಜಗಳಿ ಕರ್ನಾಟಕದವರು. ಪ್ರಕರಣದ ಆರೋಪಿ ಮನೋರಂಜನ್ ಡಿ. ಅವರ ಸ್ನೇಹಿತ ಎನ್ನಲಾಗಿದೆ. ಮತ್ತೊಬ್ಬರು ಉತ್ತರ ಪ್ರದೇಶದವರು. ಪೊಲೀಸರ ತಂಡವೊಂದು ಅವರಿಬ್ಬರನ್ನು ಬುಧವಾರ ವಿಚಾರಣೆಗೆ ಒಳಪಡಿಸಿತು ಎಂದು ಪೊಲೀಸ್ ಮೂಲಗಳು ಹೇಳಿವೆ.

ಶ್ರೀಕೃಷ್ಣ ಜಗಳಿ ಅವರು ನಿವೃತ್ತ ಎಸ್‌ಪಿ ಮಗ. ಬೆಂಗಳೂರಿನ ಸಾಫ್ಟ್‌ವೇರ್ ಸಂಸ್ಥೆಯೊಂದರ ಉದ್ಯೋಗಿ. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ವೇಳೆ ಅವರು ಮತ್ತು ಆರೋಪಿ ಮನೋರಂಜನ್ ಒಂದೇ ಕೊಠಡಿಯಲ್ಲಿ ವಾಸವಿದ್ದರು ಎಂದು ಅವರ ಸಹೋದರಿ ಸ್ಪಂದನಾ ತಿಳಿಸಿದ್ದಾರೆ.

ಬಾಗಲಕೋಟೆಯ ತಮ್ಮ ಮನೆಯಿಂದ ಜಗಳಿಯನ್ನು ಬುಧವಾರ ರಾತ್ರಿ ವಶಪಡಿಸಿಕೊಂಡ ದೆಹಲಿ ಪೊಲೀಸರ ತಂಡವೊಂದು ಅವರನ್ನು ವಿಚಾರಣೆಗೆ ಒಳಪಡಿಸಿದೆ ಎಂದು ಸ್ಪಂದನಾ ಅವರು ಮಾಹಿತಿ ನೀಡಿದ್ದಾರೆ.

ಫೇಸ್‌ಬುಕ್‌ನಲ್ಲಿ ಆರೋಪಿಗಳು ತೆರೆದಿದ್ದ ‘ಭಗತ್ ಸಿಂಗ್ ಫ್ಯಾನ್ ಕ್ಲಬ್’ ಪುಟದಲ್ಲಿ ಈ ಇಬ್ಬರೂ ಸದಸ್ಯರಾಗಿದ್ದರು ಎಂಬ ಶಂಕೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಬಂಧನ ಅವಧಿ ಜ.5ರ ವರೆಗೆ ವಿಸ್ತರಣೆ

ಸಂಸತ್ತಿನ ಭದ್ರತಾ ಲೋಪ ಪ್ರಕರಣದ ನಾಲ್ವರು ಆರೋಪಿಗಳ ಪೊಲೀಸ್ ವಶದ ಅವಧಿಯನ್ನು ಜನವರಿ 5ರವರೆಗೆ ವಿಸ್ತರಿಸಿ ದೆಹಲಿಯ ನ್ಯಾಯಾಲಯವೊಂದು ಆದೇಶ ಹೊರಡಿಸಿದೆ.

ಆರೋಪಿಗಳಾದ ಮನೋರಂಜನ್ ಡಿ., ಸಾಗರ್ ಶರ್ಮಾ, ಅಮೋಲ್ ಧನರಾಜ್ ಶಿಂದೆ ಮತ್ತು ನೀಲಂ ದೇವಿ ಅವರನ್ನು ಏಳು ದಿನಗಳ ಅವಧಿಗೆ ಪೊಲೀಸ್ ವಶಕ್ಕೆ ನೀಡಲಾಗಿತ್ತು. ಅವಧಿಯನ್ನು ಇನ್ನೂ 15 ದಿನಗಳಿಗೆ ವಿಸ್ತರಿಸುವಂತೆ ದೆಹಲಿ ಪೊಲೀಸರು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ವಿಶೇಷ ನ್ಯಾಯಾಧೀಶೆ ಹರದೀಪ್ ಕೌರ್ ಅವರು ಈ ಆದೇಶ ಹೊರಡಿಸಿದ್ದಾರೆ.

ಭದ್ರತೆ ಹೊಣೆ ಸಿಐಎಸ್‌ಎಫ್‌ಗೆ ಶೀಘ್ರ

ನವದೆಹಲಿ: ಸಂಸತ್ ಭವನದ ಭದ್ರತೆಯ ಜವಾಬ್ದಾರಿಯನ್ನು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯು (ಸಿಐಎಸ್‌ಎಫ್) ಶೀಘ್ರದಲ್ಲೇ ವಹಿಸಿಕೊಳ್ಳಲಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಸಂಸತ್ ಭವನದ ಆವರಣದಲ್ಲಿ ತಜ್ಞರಿಂದ ಸಮೀಕ್ಷೆ ನಡೆಸಲು ಕೇಂದ್ರ ಗೃಹ ಸಚಿವಾಲಯ ಸೂಚನೆ ನೀಡಿದೆ. ತಜ್ಞರು ಸಮೀಕ್ಷೆ ನಡೆಸಿ ವರದಿ ನೀಡಿದ ಬಳಿಕ ಹೊಣೆಗಾರಿಕೆಯನ್ನು ವರ್ಗಾಯಿಸುವ ಪ್ರಕ್ರಿಯೆ ಆರಂಭಿಸಲಾಗುತ್ತದೆ. ತರುವಾಯ ಸಂಸತ್ ಭದ್ರತಾ ಸೇವೆಯ (ಪಿಎಸ್‌ಎಸ್) ಸಹಯೋಗದಲ್ಲಿ ಸಿಐಎಸ್‌ಎಫ್ ಕಾರ್ಯನಿರ್ವಹಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಮೀಕ್ಷೆ ನಡೆಸಲು ಸಿಐಎಸ್‌ಎಫ್‌ಗೆ ಗೃಹ ಸಚಿವಾಲಯವು ಬುಧವಾರ ಸೂಚಿಸಿದೆ. ಅದರಂತೆ ಸಿಐಎಸ್‌ಎಫ್‌ನ ಸರ್ಕಾರಿ ಕಟ್ಟಡಗಳ ಭದ್ರತೆ (ಜಿಬಿಎಸ್), ಅಗ್ನಿಶಾಮಕ ದಳ ಮತ್ತು ಸಂಸತ್ ಭದ್ರತಾ ಸೇವೆಯ ಅಧಿಕಾರಿಗಳು ಸಮೀಕ್ಷೆ ನಡೆಸಿದ್ದಾರೆ.

ಸರ್ಕಾರಿ ಕಟ್ಟಡಗಳಿಗೆ ಭದ್ರತೆ ಒದಗಿಸುವ ವಿಚಾರದಲ್ಲಿ ಸಿಐಎಸ್‌ಎಫ್ ಪರಿಣತಿ ಹೊಂದಿದೆ. ಸಂಸತ್ತಿಗೆ ಭದ್ರತೆ ಒದಗಿಸುವ ವಿಚಾರದಲ್ಲೂ ಅವರ ಪರಿಣತಿ ಸಹಾಯಕ್ಕೆ ಬರಲಿದೆ ಎಂದು ಮೂಲಗಳು ಹೇಳಿವೆ.
ದೆಹಲಿ ಪೊಲೀಸರು, ಪಿಎಸ್‌ಎಸ್ ಮತ್ತು ಸಿಆರ್‌ಪಿಎಫ್‌ನ ಸಂಸತ್ ಕರ್ತವ್ಯ ಪಡೆ (ಪಿಡಿಜಿ) ಸದ್ಯ ಸಂಸತ್ ಭವನದ ಭದ್ರತಾ ಕರ್ತವ್ಯ ನಿರ್ವಹಿಸುತ್ತಿವೆ.

ಇಬ್ಬರು ಯುವಕರು ಲೋಕಸಭೆಯಲ್ಲಿ ಡಿಸೆಂಬರ್ 13ರಂದು ಸ್ಮೋಕ್ ಕ್ಯಾನ್ ಬಳಸಿ ದಾಂದಲೆ ಎಬ್ಬಿಸಿದ ಪ್ರಕರಣದ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವಾಲಯ ಈ ಕ್ರಮಕ್ಕೆ ಮುಂದಾಗಿದೆ.

‘ದೇಶದಲ್ಲಿ 10 ಕಪ್ಪು ಹುಲಿ’

ನವದೆಹಲಿ (ಪಿಟಿಐ): ದೇಶದಲ್ಲಿ ಸದ್ಯ 10 ಕಪ್ಪು ಹುಲಿಗಳು ಇವೆ. ಅವೆಲ್ಲವೂ ಒಡಿಶಾದ ಸಿಂಪ್ಲಿಪಾಲ್‌ನಲ್ಲಿಯೇ ಇವೆ ಎಂದು ಸರ್ಕಾರವು ಸಂಸತ್ತಿಗೆ ಗುರುವಾರ ತಿಳಿಸಿತು.

2022ರಲ್ಲಿ ದೇಶದಾದ್ಯಂತ ನಡೆಸಿದ್ದ ಹುಲಿ ಗಣತಿ ಪ್ರಕಾರ, ಸಿಂಪ್ಲಿಪಾಲ್ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಒಟ್ಟು 16 ಹುಲಿಗಳಿವೆ. ಅವುಗಳಲ್ಲಿ 10 ಹುಲಿಗಳು ಮೆಲಾನಿಸಮ್ (ಕಪ್ಪು ಪಟ್ಟಿಗಳು ಪ್ರಧಾನವಾಗಿ ಗೋಚರಿಸುವುದು) ಲಕ್ಷಣ ಹೊಂದಿವೆ ಎಂದು ಕೇಂದ್ರ ಪರಿಸರ ಖಾತೆ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ ಅವರು ರಾಜ್ಯಸಭೆಗೆ ತಿಳಿಸಿದರು.



ವಂಶವಾಹಿ ಸಂರಚನೆಯಲ್ಲಿಯ ವ್ಯತ್ಯಾಸದ ಕಾರಣದಿಂದಾಗಿ ಸಿಂಪ್ಲಿಪಾಲ್‌ನಲ್ಲಿರುವ ಹುಲಿಗಳು ಭಿನ್ನವಾದ ರೂಪ ಹೊಂದಿವೆ ಎಂದು ಅಶ್ವಿನಿ ಕುಮಾರ್ ಚೌಬೆ ಅವರು ಹೇಳಿದರು.

ಅಧಿವೇಶನ ಮೊದಲೇ ಅಂತ್ಯ

ಒಂದನೇ ಪುಟದಿಂದ

ಸದನವು ಶೇ 74ರಷ್ಟು ಫಲಪ್ರದವಾಗಿದ್ದು ಕ್ರಿಮಿನಲ್ ಅಪರಾಧಕ್ಕೆ ಸಂಬಂಧಿಸಿದ ಕಾನೂನುಗಳು ಸೇರಿದಂತೆ 18 ಮಸೂದೆಗಳನ್ನು ಅಂಗೀಕರಿಸಲಾಗಿದೆ ಎಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಹೇಳಿದರು.

ಚಳಿಗಾಲದ ಅಧಿವೇಶನವು ಹೊಸ ಸಂಸತ್ ಕಟ್ಟಡದಲ್ಲಿ ಪೂರ್ಣ ಪ್ರಮಾಣದಲ್ಲಿ ನಡೆದ ಮೊದಲ ಅಧಿವೇಶನ ಎನಿಸಿತು.

ಇದೇ 13ರಂದು ನಡೆದ ಭದ್ರತಾ ಲೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಚರ್ಚೆಗೆ ಒತ್ತಾಯಿಸಿದವು ಅಲ್ಲದೆ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಬೇಕೆಂದು ಆಗ್ರಹಿಸಿದವು. ಒಟ್ಟು 14 ದಿನಗಳು ಕಲಾಪ ನಡೆದಿದ್ದು 61 ಗಂಟೆ 50 ನಿಮಿಷ ಸದನ ಕಾರ್ಯ ನಿರ್ವಹಿಸಿದೆ ಎಂದು ಕಲಾಪ ಮುಂದೂಡಿಕೆಗೆ ಮುನ್ನ ಮುಕ್ತಾಯ ಭಾಷಣದಲ್ಲಿ ಓಂ ಬಿರ್ಲಾ ಹೇಳಿದರು.

ವಿಚಾರಣೆಗೆ ಗೈರು: ಧ್ಯಾನಕ್ಕೆ ಕೇಜ್ರಿವಾಲ್

ನವದೆಹಲಿ (ಪಿಟಿಐ): ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ಜಾರಿಗೊಳಿಸಿದ್ದರೂ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಗುರುವಾರ ಹಾಜರಾಗಲಿಲ್ಲ.

‘ವಿರೋಧ ಪಕ್ಷಗಳ ಧ್ವನಿ ಅಡಗಿಸುವ ಕಾನೂನುಬಾಹಿರ ಕ್ರಮವಿದು’ ಎಂದು ಅವರು ಆರೋಪಿಸಿದ್ದಾರೆ.

ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗುರುವಾರ (ಡಿ.21) ವಿಚಾರಣೆಗೆ ಹಾಜರಾಗುವಂತೆ ಕೇಜ್ರಿವಾಲ್ ಅವರಿಗೆ ಇ.ಡಿ ಸಮನ್ಸ್ ಜಾರಿಗೊಳಿಸಿತ್ತು. ಅರವಿಂದ ಕೇಜ್ರಿವಾಲ್ ಬುಧವಾರವೇ ಅಜ್ಞಾತಸ್ಥಳಕ್ಕೆ 10 ದಿನಗಳ ವಿಪಶ್ಯನ ಧ್ಯಾನಕ್ಕಾಗಿ ತೆರಳಿದ್ದಾರೆ.

‘ಸಾಕ್ಷಿ ಅಥವಾ ಶಂಕಿತ, ದೆಹಲಿ ಮುಖ್ಯಮಂತ್ರಿ ಅಥವಾ ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ’ ಎಂದು ಕರೆಯಲಾಗುತ್ತಿದೆಯೇ ಎಂಬುದನ್ನು ಸಮನ್ಸ್ ನಿರ್ದಿಷ್ಟಪಡಿಸುವುದಿಲ್ಲ ಎಂದು ಕೇಜ್ರಿವಾಲ್ ಬುಧವಾರ ಇ.ಡಿ ಗೆ ಕಳಿಸಿರುವ ತಮ್ಮ ಉತ್ತರದಲ್ಲಿ ಉಲ್ಲೇಖಿಸಿದ್ದಾರೆ. ಡಿ.18ರಂದು ಹೊರಡಿಸಲಾಗಿರುವ ಹೊಸ ಸಮನ್ಸ್ ಅನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

‘ಪೂರ್ವ ನಿಗದಿಯಂತೆ ಕೇಜ್ರಿವಾಲ್ ಮಂಗಳವಾರವೇ ವಿಪಶ್ಯನ ಧ್ಯಾನಕ್ಕಾಗಿ ಹೋಗಬೇಕಿತ್ತು. ಇಂಡಿಯಾ ಸಭೆಯಲ್ಲಿ ಭಾಗಿಯಾಗಿದ್ದರಿಂದ ಬುಧವಾರ ಮಧ್ಯಾಹ್ನ 1.30ರ ವೇಳೆಗೆ ಧ್ಯಾನ ಶಿಬಿರಕ್ಕೆ ತೆರಳಿದರು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಾಗ್ ವಿ.ವಿಯಲ್ಲಿ ಗುಂಡಿನ ದಾಳಿ: 15 ಮಂದಿ ಸಾವು

ಪ್ರಾಗ್ (ರಾಯಿಟರ್ಸ್/ಎಪಿ): ಪ್ರಾಗ್‌ನ ಚಾರ್ಲ್ಸ್ ವಿಶ್ವವಿದ್ಯಾಲಯದಲ್ಲಿ ಬಂದೂಕುಧಾರಿಯೊಬ್ಬ ಗುರುವಾರ ನಡೆಸಿದ ಗುಂಡಿನ ದಾಳಿಯಲ್ಲಿ 15 ಮಂದಿ ನಾಗರಿಕರ ಸಾವಿಗೀಡಾಗಿದ್ದು, 30ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಗಾಯಾಳುಗಳ ಪೈಕಿ ಒಂಬತ್ತು ಜನರ ಸ್ಥಿತಿ ಗಂಭೀರವಾಗಿದೆ.

ಜನ್ ಪಲಾಚ್ ಚೌಕದ ಸಮೀಪದಲ್ಲಿರುವ ಚಾರ್ಲ್ಸ್ ವಿಶ್ವವಿದ್ಯಾಲಯದಲ್ಲಿ ಈ ಘಟನೆ ನಡೆದಿದೆ. ಬಂದೂಕುಧಾರಿಯನ್ನು ಹತ್ಯೆ ಮಾಡಲಾಗಿದೆ ಎಂದು ಜೆಕ್ ಪೊಲೀಸರು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

‘ಬಂದೂಕುಧಾರಿ ಕಟ್ಟಡದಲ್ಲೇ ಇದ್ದಾನೆ. ಯಾರು ಕೂಡ ತಮ್ಮ ಕೊಠಡಿಯಿಂದ ಹೊರಬರಬೇಡಿ’ ಎಂಬ ಇ-ಮೇಲ್ ಸಂದೇಶ ಚಾರ್ಲ್ಸ್ ವಿಶ್ವವಿದ್ಯಾಲಯದ ಕಲಾ ವಿಭಾಗದ ಬೋಧಕ ಸಿಬ್ಬಂದಿಗೆ ರವಾನೆಯಾಗಿತ್ತು.

‘ಸದ್ಯ ನಾನು ನೋಡಿರುವ ಪ್ರಕಾರ, ಬಂದೂಕುಧಾರಿ ಸೇರಿ 15 ಮಂದಿ ಸತ್ತಿದ್ದಾರೆ’ ಎಂದು ಜೆಕ್‌ನ ತುರ್ತು ಸೇವೆಗಳ ವಕ್ತಾರೆ ಜನಾ ಪೋಸ್ತೊವಾ ಪಬ್ಲಿಕ್ ಜೆಕ್ ಟಿವಿಗೆ ತಿಳಿಸಿದರು.

‘ಈ ಘಟನೆಯಿಂದ ತೀವ್ರ ಗಾಸಿಗೊಂಡಿದ್ದೇನೆ’ ಎಂದಿರುವ ಜೆಕ್ ಅಧ್ಯಕ್ಷ ಪೀಟರ್ ಪಾವೆಲ್, ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಆಧಾರ್ ಜೋಡಣೆ ಪರಿಶೀಲಿಸಿ

ನವದೆಹಲಿ (ಪಿಟಿಐ): ಭ್ರಷ್ಟಾಚಾರ, ಕಪ್ಪುಹಣ ಮತ್ತು ಬೇನಾಮಿ ವಹಿವಾಟುಗಳನ್ನು ತಡೆಯುವ ಸಂಬಂಧ ಜನರ ಸ್ಥಿರ ಮತ್ತು ಚರ ಆಸ್ತಿಯ ದಾಖಲೆಗಳನ್ನು ಅವರ ಆಧಾರ್ ಸಂಖ್ಯೆಗಳೊಂದಿಗೆ ಜೋಡಿಸುವ ಕುರಿತು ಸಲ್ಲಿಕೆಯಾಗಿರುವ ಅರ್ಜಿಯನ್ನು ಪರಿಶೀಲಿಸುವಂತೆ ದೆಹಲಿ ಹೈಕೋರ್ಟ್ ಗುರುವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

‘ಇದೆಲ್ಲ ನೀತಿ ನಿರೂಪಕ ವಿಷಯಗಳಾಗಿದ್ದು, ಹೀಗೇ ಮಾಡಬೇಕು ಎಂದು ನ್ಯಾಯಾಲಯಗಳು ಸರ್ಕಾರಕ್ಕೆ ಸೂಚಿಸಲು ಆಗುವುದಿಲ್ಲ’ ಎಂದು ನ್ಯಾಯಮೂರ್ತಿಗಳಾದ ರಾಜೀವ್ ಶಕ್ದೇರ್, ಗಿರೀಶ್ ಕಠ್ಪಾಲಿಯಾ ಅವರ ಪೀಠ ಹೇಳಿತು.

ಈ ಅರ್ಜಿಯ ಕುರಿತು ಮೂರು ತಿಂಗಳಲ್ಲಿ ನಿರ್ಧಾರ ಕೈಗೊಳ್ಳುವಂತೆ ಪೀಠ ಕೇಂದ್ರ ಸರ್ಕಾರಕ್ಕೆ ತಿಳಿಸಿತು. ಈ ಕುರಿತು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅರ್ಜಿ ಸಲ್ಲಿಸಿದ್ದರು.

‘ಕಿಸೆಗಳ್ಳ’ ಆರೋಪ: ಕ್ರಮಕ್ಕೆ ಗಡುವು

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು ‘ಕಿಸೆಗಳ್ಳ’ ಎಂದು ಆರೋಪಿಸಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ನೀಡಿರುವ ನೋಟಿಸ್ ಸಂಬಂಧ ಎಂಟು ವಾರಗಳ ಒಳಗೆ ಕ್ರಮ ತೆಗೆದುಕೊಳ್ಳುವಂತೆ ಚುನಾವಣಾ ಆಯೋಗಕ್ಕೆ (ಇ.ಸಿ) ದೆಹಲಿ ಹೈಕೋರ್ಟ್ ಗುರುವಾರ ಸೂಚಿಸಿದೆ.

ರಾಹುಲ್ ವಿರುದ್ಧ ಕ್ರಮಕ್ಕೆ ಹಾಗೂ ರಾಜಕೀಯ ಮುಖಂಡರಿಂದ ಇಂತಹ ಹೇಳಿಕೆ ತಡೆಯಲು ಮಾರ್ಗಸೂಚಿಗಳನ್ನು ರೂಪಿಸುವಂತೆ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಮತ್ತು ನ್ಯಾಯಮೂರ್ತಿ ಮಿನಿ ಪುಷ್ಕರ್ಣ ಅವರಿದ್ದ ಪೀಠವು ಈ ಸೂಚನೆ ನೀಡಿದೆ. ನವೆಂಬರ್ 22 ರಂದು ರಾಜಸ್ಥಾನದಲ್ಲಿ ನಡೆದ ರ್‍ಯಾಲಿಗಳಲ್ಲಿ ರಾಹುಲ್ ಗಾಂಧಿಯವರು, ಪ್ರಧಾನಿ ಮತ್ತು ಗೃಹ ಸಚಿವರು ಸೇರಿ ಹಲವು ಪ್ರಮುಖ ಸಚಿವರ ವಿರುದ್ಧ ಕೀಳುಮಟ್ಟದ ಆರೋಪ ಮಾಡಿದ್ದಾರೆ ಎಂದು ಅರ್ಜಿದಾರ ಭಾರತ್ ನಗರ್ ಹೈಕೋರ್ಟ್‌ಗೆ ತಿಳಿಸಿದ್ದರು. ಅರ್ಜಿದಾರರ ಪರ ಹಿರಿಯ ವಕೀಲರಾದ ಕೀರ್ತಿ ಉಪ್ಪಳ್ ವಾದಿಸಿದರು.

ಪ್ರಧಾನಿ ನರೇಂದ್ರ ಮೋದಿಯವರನ್ನು ಪಿಕ್ ಪಾಕೆಟರ್ (ಕಿಸೆಗಳ್ಳ) ಮತ್ತು ಪನೌತಿ (ಅಪಶಕುನ) ಎಂದು ಕರೆದಿರುವುದಕ್ಕಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಚುನಾವಣಾ ಆಯೋಗವು ನ.23ರಂದು ನೋಟಿಸ್ ನೀಡಿತ್ತು.

‘ಅಂಗವಿಕಲರ ಅವಹೇಳನ ಬೇಡ’

ನವದೆಹಲಿ (ಪಿಟಿಐ): ರಾಜಕಾರಣಿಗಳು ಸಾರ್ವಜನಿಕ ಭಾಷಣಗಳಲ್ಲಿ ಅಂಗವಿಕಲರಿಗೆ ಸಂಬಂಧಿಸಿದಂತೆ ಅವಹೇಳನಕಾರಿ ಪದಗಳನ್ನು ಬಳಸಬಾರದು ಎಂದು ಚುನಾವಣಾ ಆಯೋಗ ಸೂಚಿಸಿದೆ.

ಯಾವುದೇ ರಾಜಕೀಯ ಪಕ್ಷಗಳ ಸದಸ್ಯರು ಮತ್ತು ಅಭ್ಯರ್ಥಿಗಳು ತಮ್ಮ ಭಾಷಣದಲ್ಲಿ ಅಂಗವಿಕಲರಿಗೆ ಅವಹೇಳನಕಾರಿ ಪದಗಳನ್ನು ಬಳಸಿದರೆ ಅದನ್ನು ಅವರಿಗೆ ಅವಮಾನ ಮಾಡಿದಂತೆ ಎಂದು ಅರ್ಥೈಸಬಹುದಾಗಿದೆ ಎಂದು ಆಯೋಗ ಹೇಳಿದೆ.

ಚುನಾವಣಾ ಪ್ರಕ್ರಿಯೆಯಲ್ಲಿ ಎಲ್ಲ ಸಮುದಾಯಗಳ ಪ್ರಾತಿನಿಧ್ಯ ಇರುವಂತೆ ನೋಡಿಕೊಳ್ಳಬೇಕು. ಇದು ಪ್ರಜಾಪ್ರಭುತ್ವದ ಅಡಿಪಾಯ ಆಗಿದೆ ಎಂದು ಆಯೋಗವು ರಾಜಕೀಯ ಪಕ್ಷಗಳಿಗೆ ಬುಧವಾರ ನೀಡಿರುವ ಸಲಹೆಯಲ್ಲಿ ತಿಳಿಸಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಅಂಗವಿಕಲರಿಗೆ ಸಮಾನವಾಗಿ ಭಾಗವಹಿಸುವಿಕೆಯನ್ನು ಭಾರತೀಯ ಚುನಾವಣಾ ಆಯೋಗವು ಪ್ರೋತ್ಸಾಹಿಸುತ್ತದೆ ಎಂದು ಆಯೋಗ ಹೇಳಿದೆ.

ಸಂತ್ರಸ್ತೆಯನ್ನು ಗುರುತಿಸುವ ಚಿತ್ರ ತೆಗೆಯಲು ಸೂಚನೆ

ನವದೆಹಲಿ (ಪಿಟಿಐ): 2021ರಲ್ಲಿ ಅತ್ಯಾಚಾರ ಮತ್ತು ಕೊಲೆಯಾದ ದಲಿತ ಬಾಲಕಿಯ ಗುರುತು ಬಹಿರಂಗಪಡಿಸಿರುವ ತಮ್ಮ ಸಾಮಾಜಿಕ ಜಾಲತಾಣದ ಪೋಸ್ಟ್‌ವೊಂದನ್ನು ತೆಗೆದುಹಾಕುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ದೆಹಲಿ ಹೈಕೋರ್ಟ್ ಗುರುವಾರ ಸೂಚನೆ ನೀಡಿದೆ.

ಈ ಸಂಬಂಧದ ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯನ್ಯಾಯಮೂರ್ತಿ ಮನಮೋಹನ್ ಅವರ ನೇತೃತ್ವದ ಪೀಠವು, ಚಿತ್ರವನ್ನು ಈಗಿನ ‘ಎಕ್ಸ್’ ಖಾತೆಯಿಂದ ತೆಗೆದು ಹಾಕಲಾಗಿದೆ ಎಂದು ಹೇಳಲಾಗಿದ್ದರೂ ಅದು ಭಾರತದ ಹೊರಗೆ ಲಭ್ಯವಿದೆ. ಅದನ್ನು ವಿಶ್ವದೆಲ್ಲೆಡೆ ತೆಗೆದುಹಾಕುವಂತೆ ರಾಹುಲ್ ಗಾಂಧಿ ಪರ ವಕೀಲರಿಗೆ ಹೇಳಿದೆ.

‘ನೀವು ಆ ಚಿತ್ರವನ್ನು ಖಾತೆಯಿಂದ ಏಕೆ ತೆಗೆದಿಲ್ಲ? ಅದು ವಿಶ್ವದಾದ್ಯಂತ ಲಭ್ಯವಾಗಬಾರದೆಂದರೆ ನಿಮ್ಮ ಪೋಸ್ಟ್ ಅನ್ನು ಹಿಂತೆಗೆದುಕೊಳ್ಳಿ. ಈ ಸೂಚನೆ ಪಾಲಿಸಿ. ಇಲ್ಲದಿದ್ದರೆ ಅದು ಮಾಧ್ಯಮ ಮೂಲಕ ವಿಶ್ವದಾದ್ಯಂತ ಹಂಚಿಕೆಯಾಗುತ್ತಲೇ ಇರುತ್ತದೆ. ಈ ರೀತಿ ಮಾಡುವುದು ಸರಿಯಲ್ಲ’ ಎಂದು ನ್ಯಾಯಮೂರ್ತಿ ಮಿನಿ ಪುಷ್ಕರ್ಣ ಅವರೂ ಇದ್ದ ಪೀಠವು, ರಾಹುಲ್ ಗಾಂಧಿ ಪರ ವಕೀಲ ತರನ್ನುಮ್ ಚೀಮಾ ಅವರಿಗೆ ಸೂಚಿಸಿತು.

ಮೃತ ಬಾಲಕಿಯ ಪೋಷಕರನ್ನು ಭೇಟಿ ಮಾಡಿದ ಚಿತ್ರವನ್ನು ಟ್ವಿಟರ್‌ನಲ್ಲಿ ಪ್ರಕಟಿಸುವ ಮೂಲಕ ಸಂತ್ರಸ್ತೆಯ ಗುರುತನ್ನು ಬಹಿರಂಗಪಡಿಸಿದ್ದಕ್ಕಾಗಿ ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಸಾಮಾಜಿಕ ಕಾರ್ಯಕರ್ತ ಮಕರಂದ್ ಸುರೇಶ್ ಮ್ಹಡ್ಲೇಕರ್ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯವು ವಿಚಾರಣೆ ನಡೆಸುತ್ತಿದೆ.

ಸಂಸದರ ವಿರುದ್ಧ ಕ್ರಮಕ್ಕೆ ಸಿಡಬ್ಲ್ಯುಸಿ ಅಸಮಾಧಾನ

ಬಿಜೆಪಿ ವಿರುದ್ಧ ‘ಇಂಡಿಯಾ’ ಕೋಟೆ: ನಿರ್ಣಯ

ನವದೆಹಲಿ (ಪಿಟಿಐ): ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ವಿರುದ್ಧ ‘ಇಂಡಿಯಾ’ ಮೈತ್ರಿಕೂಟವನ್ನು ರಕ್ಷಣಾ ಕೋಟೆಯಂತೆ ನಿಲ್ಲಿಸಲು ಕಾಂಗ್ರೆಸ್ ಬದ್ಧವಾಗಿದೆ ಎಂಬ ನಿರ್ಣಯವನ್ನು ದೆಹಲಿಯ ಎಐಸಿಸಿ ಕಚೇರಿಯಲ್ಲಿ ಗುರುವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯಲ್ಲಿ ಅವಿರೋಧವಾಗಿ ತೆಗೆದುಕೊಳ್ಳಲಾಯಿತು.

‘ಇಂಡಿಯಾ’ ಮೈತ್ರಿಕೂಟದ ಸಂಸದರನ್ನು ಸಂಸತ್ತಿನಿಂದ ಅಮಾನತು ಮಾಡಿರುವ ಕ್ರಮವನ್ನು ಕಟು ಶಬ್ದಗಳಿಂದ ಖಂಡಿಸುವ ನಿರ್ಣಯವನ್ನೂ ತೆಗೆದುಕೊಳ್ಳಲಾಯಿತು. ನಾಲ್ಕು ಗಂಟೆ ಕಾಲ ಈ ಸಭೆ ನಡೆಯಿತು.

ಸಂಸತ್‌ನ ಭದ್ರತಾ ಲೋಪದ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳಿಕೆ ನೀಡುವಂತೆ ವಿಪಕ್ಷಗಳ ಸಂಸದರು ಆಗ್ರಹಿಸಿದ್ದರು. ಇದಕ್ಕಾಗಿ ಸಂಸದರನ್ನು ಅಮಾನತಿನಲ್ಲಿ ಇರಿಸಲಾಗಿದೆ. ಸಂಸದರು ಅಮಾನತಿನಲ್ಲಿರುವ ಕಾರಣ ಕೇಂದ್ರ ಸರ್ಕಾರದ ಮೂರು ಕರಾಳ ಮಸೂದೆಗಳ ಅಂಗೀಕಾರಕ್ಕೆ ಸವಾಲು ಒಡ್ಡಲು ವಿಪಕ್ಷಗಳಿಗೆ ಸಾಧ್ಯವಾಗಲಿಲ್ಲ ಎಂದು ನಿರ್ಣಯದಲ್ಲಿ ಹೇಳಲಾಗಿದೆ.

ಸ್ವತಂತ್ರ ಪಕ್ಷವಾಗಿ ಮತ್ತು ‘ಇಂಡಿಯಾ’ ಮೈತ್ರಿಕೂಟದ ಸದಸ್ಯ ಪಕ್ಷವಾಗಿ ಲೋಕಸಭೆ ಚುನಾವಣೆಯಲ್ಲಿ ಹೋರಾಡಲು ಕಾಂಗ್ರೆಸ್ ಸಂಪೂರ್ಣವಾಗಿ ಸಿದ್ಧವಾಗಬೇಕು ಎಂದು ನಿರ್ಣಯ ಹೇಳಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿ ಪಕ್ಷದ 76 ನಾಯಕರು ಸಭೆಯಲ್ಲಿದ್ದರು.



ದೆಹಲಿಯ ಎಐಸಿಸಿ ಮುಖ್ಯಕಚೇರಿಯಲ್ಲಿ ಗುರುವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್ ಅವರು ಭಾಗಿಯಾಗಿದ್ದರು –ಪಿಟಿಐ ಚಿತ್ರ

ಚುನಾವಣಾ ಮನಸ್ಥಿತಿಗೆ ಕಾಂಗ್ರೆಸ್

ತಡ ಮಾಡದೇ ಕಾಂಗ್ರೆಸ್ ಚುನಾವಣಾ ಮನಸ್ಥಿತಿಗೆ ಜಾರಲಿದೆ. ಈ ತಿಂಗಳೇ ಸ್ಕ್ರೀನಿಂಗ್ ಸಮಿತಿಯನ್ನು ರಚಿಸಿ ಲೋಕಸಭೆ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಕುರಿತು ನಿರ್ಧರಿಸಲಾಗುವುದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು ಸಿಡಬ್ಲ್ಯುಸಿ ಸಭೆ ಬಳಿಕ ಹೇಳಿದರು. ಪ್ರಣಾಳಿಕೆ ಸಮಿತಿಯನ್ನು ಶೀಘ್ರವೇ ಘೋಷಿಸಲಾಗುವುದು ಎಂದರು.

‘ಪಾಠ ಕಲಿತಿದೆ’: ‘ಈಚೆಗೆ ನಡೆದ ವಿಧಾನಸಭೆ ಚುನಾವಣೆಗಳ ಫಲಿತಾಂಶದಿಂದ ಕಾಂಗ್ರೆಸ್ ಪಾಠ ಕಲಿತಿದೆ. ಹಿಂದೆ ಎಸಗಿರುವ ತಪ್ಪುಗಳನ್ನು ಪುನರಾವರ್ತನೆ ಮಾಡದಂತೆ ಪಕ್ಷವು ಬದ್ಧವಾಗಿದೆ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಭೆಯಲ್ಲಿ ಹೇಳಿದರು.

‘ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಲು ಕಾರಣವೇನೆಂಬ ಕುರಿತು ವಿಶ್ಲೇಷಿಸಲಾಗಿದೆ. ಈ ರಾಜ್ಯಗಳಲ್ಲಿ ಮತಹಂಚಿಕೆ ಪ್ರಮಾಣವು ನಮಗೆ ಆಶಾದಾಯಕವಾಗಿದೆ. ಹೆಚ್ಚಿನ ಗಮನ ನೀಡಿದರೆ ಪರಿಸ್ಥಿತಿಯನ್ನು ಅನುಕೂಲವಾಗುವಂತೆ ಬದಲಿಸಬಹುದು ಎಂದು ಮತಹಂಚಿಕೆಯಿಂದ ತಿಳಿಯುತ್ತದೆ’ ಎಂದರು.

ರಾಹುಲ್ ಅವರು ಭಾರತ ಜೋಡೊ ಯಾತ್ರೆ–2 ಕೈಗೊಳ್ಳಬೇಕು ಎಂದು ಹಲವು ನಾಯಕರು ಬಯಸುತ್ತಿದ್ದಾರೆ. ಆದರೆ ಈ ನಿರ್ಧಾರವು ರಾಹುಲ್ ಮತ್ತು ಸಿಡಬ್ಲ್ಯುಸಿಗೆ ಬಿಟ್ಟದ್ದು’ ಎಂದರು.

ಹೋಟೆಲ್‌ನಲ್ಲಿ ಸಭೆ ಸೇರಿ ಚರ್ಚಿಸಿದ ಡಬ್ಲ್ಯುಎಫ್‌ಐ ನೂತನ ಸದಸ್ಯರು

ಅಡ್‌ಹಾಕ್ ಸಮಿತಿ ನಿರ್ಣಯ ರದ್ದು

ನವದೆಹಲಿ (ಪಿಟಿಐ): ಭೂಪೇಂದರ್ ಸಿಂಗ್ ಬಜ್ವಾ ನೇತೃತ್ವದ ಅಡ್‌ಹಾಕ್ ಸಮಿತಿಯು ತೆಗೆದುಕೊಂಡಿದ್ದ ಎಲ್ಲಾ ನಿರ್ಧಾರಗಳನ್ನು ಗುರುವಾರ ಹೊಸದಾಗಿ ಚುನಾಯಿತಗೊಂಡ ಭಾರತ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಸಮಿತಿಯು ರದ್ದುಗೊಳಿಸಿತು.

ಡಬ್ಲ್ಯುಎಫ್‌ಐ ಚುನಾವಣೆಯಲ್ಲಿ ಗೆದ್ದ ಕೆಲವೇ ಗಂಟೆಗಳ ನಂತರ, ನಗರದ ಹೋಟೆಲ್‌ನಲ್ಲಿ ಸಭೆ ಸೇರಿದ ನೂತನ ಅಧ್ಯಕ್ಷ ಸಂಜಯಕುಮಾರ್ ಸಿಂಗ್ ನೇತೃತ್ವದ ಸಮಿತಿಯು ಅಡ್‌ಹಾಕ್ ಸಮಿತಿಯ ನಿರ್ಧಾರಗಳನ್ನು ರದ್ದುಗೊಳಿಸಿತು. ಒಟ್ಟು 15 ಚುನಾಯಿತ ಸದಸ್ಯರಲ್ಲಿ 13 ಮಂದಿ ಈ ಸಭೆಯಲ್ಲಿದ್ದರು.

ನೂತನ ಪ್ರಧಾನ ಕಾರ್ಯದರ್ಶಿ ಪ್ರೇಮ್ ಚಂದ್ ಲೋಚಬ್ ಮತ್ತು ಹಿರಿಯ ಉಪಾಧ್ಯಕ್ಷ ದೇವೇಂದರ್ ಸಿಂಗ್ ಕಡಿಯಾನ್ ಸಭೆಯಲ್ಲಿ ಭಾಗವಹಿಸಲಿಲ್ಲ. ಇಬ್ಬರೂ ಅನಿತಾ ಶೆರಾನ್ ಬಣಕ್ಕೆ ಸೇರಿದವರು. ಈ ಬಣಕ್ಕೆ 15 ಸ್ಥಾನಗಳ ಪೈಕಿ ಕೇವಲ 2 ಸ್ಥಾನಗಳನ್ನು ಮಾತ್ರ ಗೆಲ್ಲಲು ಸಾಧ್ಯವಾಯಿತು.

ಕರ್ನಾಟಕ ರಾಜ್ಯ ಕುಸ್ತಿ ಸಂಘದ ಅಧ್ಯಕ್ಷ ಬಿ.ಗುಣರಂಜನ್ ಶೆಟ್ಟಿ ಅವರು ಜಂಟಿ ಕಾರ್ಯದರ್ಶಿಯಾಗಿ ಆಯ್ಕೆ ಆಗಿದ್ದಾರೆ.

'ಜೈಪುರದಲ್ಲಿ ಜನವರಿಯಲ್ಲಿ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಸಲಾಗುವುದು ಎಂದು ತಾತ್ಕಾಲಿಕ ಸಮಿತಿ ಘೋಷಿಸಿತ್ತು. ಆದರೆ ಈ ನಿರ್ಧಾರವನ್ನು ರದ್ದುಗೊಳಿಸಲಾಗಿದೆ. ವಾಸ್ತವವಾಗಿ, ತಾತ್ಕಾಲಿಕ ಸಮಿತಿಯು ತೆಗೆದುಕೊಂಡ ಎಲ್ಲಾ ನಿರ್ಧಾರಗಳನ್ನು ರದ್ದುಪಡಿಸಲಾಗಿದೆ' ಎಂದು ಡಬ್ಲ್ಯುಎಫ್‌ಐ ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ.

'ತಾತ್ಕಾಲಿಕ ಸಮಿತಿಯು ಘೋಷಿಸಿದ ಒಲಿಂಪಿಕ್ಸ್ ಆಯ್ಕೆ ಟ್ರಯಲ್ಸ್ ಮಾನದಂಡಗಳು ಕೂಡ ರದ್ದಾಗಿವೆ. ಡಿಸೆಂಬರ್ 28 ರಿಂದ 30 ರವರೆಗೆ ಗೊಂಡಾದಲ್ಲಿ 15 ವರ್ಷದೊಳಗಿನ ಮತ್ತು ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಷಿಪ್ ಆಯೋಜಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಹೊಸದಾಗಿ ಆಯ್ಕೆಯಾದ ಫೆಡರೇಷನ್‌ನ ಮೊದಲ ಸಾಮಾನ್ಯ ಸಭೆ (ಜಿಬಿಎಂ) ಜನವರಿ 11 ಅಥವಾ 12 ರಂದು ನವದೆಹಲಿಯಲ್ಲಿ ನಡೆಯಲಿದೆ.

ಯುಡಬ್ಲ್ಯುಡಬ್ಲ್ಯು ನಿಷೇಧ ತೆರವಿಗೆ ದಾರಿ: ಹೊಸ ಕಾರ್ಯಕಾರಿ ಮಂಡಳಿಯ ಚುನಾವಣೆ ಫಲಿತಾಂಶ ಹೊರಬೀಳುತ್ತಿದ್ದಂತೆ ಜಾಗತಿಕ ಕುಸ್ತಿ ಸಂಸ್ಥೆಯು (ಯುಡಬ್ಲ್ಯುಡಬ್ಲ್ಯು) ಭಾರತೀಯ ಕುಸ್ತಿ ಫೆಡರೇಷನ್‌ಗೆ ವಿಧಿಸಿದ್ದ ನಿಷೇಧವನ್ನು ತೆಗೆದುಹಾಕಲು ದಾರಿ ಮಾಡಿಕೊಟ್ಟಿದೆ.

ಆಗಸ್ಟ್‌ನಲ್ಲಿ ನಿಗದಿಪಡಿಸಿದ ಗಡುವಿನೊಂದಿಗೆ ಚುನಾವಣೆಗಳನ್ನು ನಡೆಸಲು ವಿಫಲವಾದ ಕಾರಣ ಡಬ್ಲ್ಯುಎಫ್‌ಐ ಅಮಾನತು ಆಗಿತ್ತು. ಹೀಗಾಗಿ, 2023ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತೀಯ ಕುಸ್ತಿಪಟುಗಳು ತಟಸ್ಥ ಕ್ರೀಡಾಪಟುಗಳಾಗಿ ಸ್ಪರ್ಧಿಸಿದ್ದರು.



ಭಾರತ ಕುಸ್ತಿ ಫೆಡರೇಷನ್‌ನ ಅಧ್ಯಕ್ಷರಾಗಿ ಸಂಜಯ್ ಸಿಂಗ್ ಆಯ್ಕೆಯಾಗಿರುವುದಕ್ಕೆ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಬೆಂಬಲಿಗರೊಂದಿಗೆ ಸಂಭ್ರಮಿಸಿದರು. –ಪಿಟಿಐ ಚಿತ್ರ

ಸೇಡಿನ ರಾಜಕಾರಣ ಇಲ್ಲ: ಬ್ರಿಜ್‌ಭೂಷಣ್

ನವದೆಹಲಿ (ಪಿಟಿಐ): 'ನಾವು ಯಾವುದೇ ಸೇಡಿನ ರಾಜಕಾರಣ ಮಾಡುವುದಿಲ್ಲ. ಪ್ರತಿಭಟನನಿರತ ಕುಸ್ತಿಪಟುಗಳು ಕ್ರೀಡೆಯಲ್ಲಿ ಮುಂದುವರಿಯಲು ಬಯಸಿದರೆ ನ್ಯಾಯಯುತವಾದ ಅವಕಾಶ ನೀಡಲು ಬದ್ಧ' ಎಂದು ಡಬ್ಲ್ಯುಎಫ್‌ಐ ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ಹೇಳಿದ್ದಾರೆ.

ಗುರುವಾರ ಚುನಾವಣೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯಾವುದೇ ಪಕ್ಷಪಾತ ಇರುವುದಿಲ್ಲ. ಎಲ್ಲರಿಗೂ ಡಬ್ಲ್ಯುಎಫ್‌ಐ ಬೆಂಬಲ ಸಿಗಲಿದೆ. ನಾವು ಆಟವನ್ನು ನೋಡಿಕೊಳ್ಳಬೇಕೇ ಹೊರತು ಕುಸ್ತಿಪಟುಗಳ ತಪ್ಪುಗಳನ್ನಲ್ಲ' ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ನೂತನ ಅಧ್ಯಕ್ಷ ಸಂಜಯ್ ಸಿಂಗ್, 'ಕಳೆದ 7-8 ತಿಂಗಳುಗಳಲ್ಲಿ ತೊಂದರೆ ಅನುಭವಿಸಿದ ದೇಶದ ಸಾವಿರಾರು ಕುಸ್ತಿಪಟುಗಳಿಗೆ ಸಂದ ಗೆಲುವು ಇದಾಗಿದೆ' ಎಂದು ಸಂಜಯ್ ಸಿಂಗ್ ಹೇಳಿದರು.

'ನಾವು ರಾಜಕೀಯಕ್ಕೆ ರಾಜಕೀಯ ಮೂಲಕ ಮತ್ತು ಕುಸ್ತಿಗೆ ಕುಸ್ತಿ ಮೂಲಕ ಪ್ರತಿಕ್ರಿಯಿಸುತ್ತೇವೆ' ಎಂದು ಸಂಜಯ್ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬ್ರಿಜ್ ಭೂಷಣ್ ಬಣವುಎಲ್ಲ 4 ಉಪಾಧ್ಯಕ್ಷ ಸ್ಥಾನಗಳನ್ನು ಗೆದ್ದುಕೊಂಡಿತು. ದೆಹಲಿಯ ಜೈ ಪ್ರಕಾಶ್ (37), ಪಶ್ಚಿಮ ಬಂಗಾಳದ ಅಸಿತ್ ಕುಮಾರ್ ಸಹಾ (42), ಪಂಜಾಬ್‌ನ ಕರ್ತಾರ್ ಸಿಂಗ್ (44) ಮತ್ತು ಮಣಿಪುರದ ಎನ್ ಫೋನಿ (38) ಗೆದ್ದಿದ್ದಾರೆ.

ಬ್ರಿಜ್ ಭೂಷಣ್ ಬಣದ ಉತ್ತರಾಖಂಡದ ಸತ್ಯಪಾಲ್ ಸಿಂಗ್ ದೇಶ್ವಾಲ್ ನೂತನ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮಧ್ಯಪ್ರದೇಶದ ನೂತನ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಕೇವಲ ಐದು ಮತ ಪಡೆದಿದ್ದಾರೆ.

ಸಾಕ್ಷಿಯ ವಿದಾಯ ಪ್ರತಿಭಟನೆ

ಒಂದನೇ ಪುಟದಿಂದ

ದೀರ್ಘ ಅವಧಿಯವರೆಗೆ ನಡೆದ ಈ ಧರಣಿಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡಿತ್ತು. ಇದೀಗ ಈ ಪ್ರಕರಣವು ನ್ಯಾಯಾಲಯದಲ್ಲಿದೆ.

'ಫೆಡರೇಷನ್‌ಗೆ ಮಹಿಳೆಯೊಬ್ಬರು ಅಧ್ಯಕ್ಷರಾಗಬೇಕು ಎಂದು ಬಯಸಿದ್ದೆವು. ಅಧ್ಯಕ್ಷ ಸ್ಥಾನದಲ್ಲಿ ಮಹಿಳೆಯಿದ್ದರೆ ಶೋಷಣೆಗಳಿಗೆ ಕಡಿವಾಣ ಹಾಕಲು ಸಾಧ್ಯವಿತ್ತು. ಆದರೆ ಈಗ ಚುನಾಯಿತಗೊಂಡಿರುವ ಸಮಿತಿಯಲ್ಲಿ ಒಬ್ಬ ಮಹಿಳೆಯೂ ಇಲ್ಲ' ಎಂದು ಸಾಕ್ಷಿ ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿನೇಶಾ ಫೋಗಟ್, 'ಸಂಜಯ್ ಸಿಂಗ್ ಅವರಂತಹವರು ಅಧ್ಯಕ್ಷರಾಗಿರುವುದು ದುಃಖಕರ ಸಂಗತಿ. ಇದರಿಂದಾಗಿ ಕುಸ್ತಿಗೆ ಬರುವ ಮುಂದಿನ ಪೀಳಿಗೆಯ ಹೆಣ್ಣುಮಕ್ಕಳು ಶೋಷಣೆ ಅನುಭವಿಸುವುದು ಖಚಿತ. ಇಷ್ಟು ದಿನ ತೆರೆಮರೆಯಲ್ಲಿ ನಡೆಯುತ್ತಿದ್ದ ಘಟನೆಗಳು ಇನ್ನು ಮುಂದೆ ರಾಜಾರೋಷವಾಗಿ ನಡೆಯಲಿವೆ. ಈ ದೇಶದಲ್ಲಿ ನ್ಯಾಯ ಪಡೆಯುವುದು ಹೇಗೆಂದು ನನಗೆ ಗೊತ್ತಾಗುತ್ತಿಲ್ಲ. ದೇಶದ ಕುಸ್ತಿಯ ಭವಿಷ್ಯ ಕರಾಳವಾಗಿದೆ' ಎಂದರು.

'ಡಬ್ಲ್ಯುಎಫ್‌ಐ ಚುನಾವಣೆಯಲ್ಲಿ ಬ್ರಿಜ್‌ಭೂಷಣ್ ಆಪ್ತರು, ಸಂಬಂಧಿಕರು ಸ್ಪರ್ಧಿಸಲು ಬಿಡುವುದಿಲ್ಲ ಎಂದು ಸರ್ಕಾರ ಹೇಳಿತ್ತು. ಆದರೆ ತನ್ನ ಮಾತು ಉಳಿಸಿಕೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ' ಎಂದು ಬಜರಂಗ್ ಪೂನಿಯಾ ಅಸಮಾಧಾನ ವ್ಯಕ್ತಪಡಿಸಿದರು.

'ನಾವು ನಮ್ಮ ಸಹೋದರಿಯರು ಮತ್ತು ಹೆಣ್ಣುಮಕ್ಕಳ ಸತ್ಯ ಮತ್ತು ಗೌರವಕ್ಕಾಗಿ ಹೋರಾಡುತ್ತಿದ್ದೆವು. ಇದು ದೀರ್ಘಕಾಲದ ಯುದ್ಧವಾಗಿದೆ. ಮುಂದಿನ ಒಂದು ಅಥವಾ ಎರಡು ತಲೆಮಾರುಗಳು ನ್ಯಾಯ ಪಡೆಯಲು ಹೋರಾಟ ಮುಂದುವರಿಸಬೇಕಾಗಬಹುದು' ಎಂದರು.

ಕುಸ್ತಿಪಟುಗಳ ಪ್ರತಿಭಟನೆಯಿಂದ ಡಬ್ಲ್ಯುಎಫ್‌ಐ ಚುನಾವಣೆವರೆಗೆ



ನವದೆಹಲಿಯಲ್ಲಿ ನಡೆದಿದ್ದ ಪ್ರತಿಭಟನೆ –ಸಂಗ್ರಹ ಚಿತ್ರ

2023 ಜ.18: ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ಕಿರುಕುಳ ಮತ್ತು ಬೆದರಿಕೆ ಆರೋಪ ಹೊರಿಸಿ ಜಂತರ್ ಮಂತರ್‌ನಲ್ಲಿ ಕುಸ್ತಿಪಟುಗಳು ಪ್ರತಿಭಟನೆ ಆರಂಭಿಸಿದರು. ಸಿಂಗ್ ರಾಜೀನಾಮೆ ಮತ್ತು ಫೆಡರೇಷನ್ ವಿಸರ್ಜಿಸುವಂತೆ ಒತ್ತಾಯಿಸಿದರು.

ಜ.20: ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ. ಉಷಾ ಅವರಿಗೆ ದೂರು ನೀಡಿದ ಕುಸ್ತಿಪಟುಗಳು, ಲೈಂಗಿಕ ಕಿರುಕುಳ ಆರೋಪಗಳ ತನಿಖೆಗೆ ಸಮಿತಿ ರಚಿಸಲು ಒತ್ತಾಯಿಸಿದರು. ಕುಸ್ತಿಪಟುಗಳೊಂದಿಗೆ ಸಮಾಲೋಚಿಸಿ ಡಬ್ಲ್ಯುಎಫ್‌ಐಗೆ ಹೊಸ ಸಮಿತಿ ನೇಮಿಸಲು ಆಗ್ರಹಿಸಿದರು.

ಜ.21: ಕೇಂದ್ರ ಕೀಡಾ ಸಚಿವ ಅನುರಾಗ್ ಠಾಕೂರ್ ಅವರನ್ನು ಭೇಟಿಯಾದ ನಂತರ ಪ್ರತಿಭಟನೆ ವಾಪಸ್ ಪಡೆದ ಕುಸ್ತಿಪಟುಗಳು. (ಡಬ್ಲ್ಯುಎಫ್‌ಐನ ಎಲ್ಲ ಚಟುವಟಿಕೆಗಳನ್ನು ತಕ್ಷಣವೇ ಜಾರಿಗೆ ಬರುವಂತೆ ಸ್ಥಗಿತಗೊಳಿಸಲು ಕ್ರೀಡಾ ಸಚಿವಾಲಯ ಸೂಚನೆ, ಡಬ್ಲ್ಯುಎಫ್‌ಐನ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಅಮಾನತು)

ಜ.23: ಆರೋಪಗಳ ಪರಿಶೀಲನೆಗಾಗಿ ಮೇರಿ ಕೋಮ್ ನೇತೃತ್ವದಲ್ಲಿ 5 ಸದಸ್ಯರ ಮೇಲುಸ್ತುವಾರಿ ಸಮಿತಿ ರಚನೆ

ಏ.16: ಮೇಲುಸ್ತುವಾರಿ ಸಮಿತಿಯಿಂದ ಕ್ರೀಡಾ ಸಚಿವಾಲಯಕ್ಕೆ ವರದಿ ಸಲ್ಲಿಕೆ, ಡಬ್ಲ್ಯುಎಫ್‌ಐಗೆ ಮೇ 7ರಂದು ಚುನಾವಣೆ ನಡೆಸಲು ದಿನಾಂಕ ನಿಗದಿ

ಏ.23: ಅಪ್ರಾಪ್ತ ವಯಸ್ಸಿನವರೂ ಸೇರಿ ಏಳು ಮಹಿಳಾ ಕುಸ್ತಿಪಟುಗಳಿಂದ ಬ್ರಿಜ್ ಭೂಷಣ್ ವಿರುದ್ಧ ಪೊಲೀಸ್ ಠಾಣೆಯಲ್ಲಿ ಲೈಂಗಿಕ ಕಿರುಕುಳದ ದೂರು ದಾಖಲು. ಪೊಲೀಸರು ಎಫ್‌ಐಆರ್ ದಾಖಲಿಸಿಲ್ಲ ಎಂದು ಆರೋಪಿಸಿ ಜಂತರ್ ಮಂತರ್‌ನಲ್ಲಿ ಕುಸ್ತಿಪಟುಗಳ ಪ್ರತಿಭಟನೆ

ಏ.24: ಮೇ 7ಕ್ಕೆ ನಿಗದಿಯಾಗಿದ್ದ ಚುನಾವಣೆಗೆ ತಡೆ ನೀಡಿದ ಕ್ರೀಡಾ ಸಚಿವಾಲಯ

ಏ.25: ಬ್ರಿಜ್ ಭೂಷಣ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಮೊರೆ ಹೋದ ಕುಸ್ತಿಪಟುಗಳು, ದೆಹಲಿ ಪೊಲೀಸರಿಗೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ.

ಮೇ 3: ಕುಸ್ತಿಪಟುಗಳು ಮತ್ತು ದೆಹಲಿ ಪೊಲೀಸರ ನಡುವೆ ಘರ್ಷಣೆ, ಇಬ್ಬರು ಪ್ರತಿಭಟನಕಾರರ ತಲೆಗೆ ಪೆಟ್ಟು

ಮೇ 4: ಮಹಿಳಾ ಕುಸ್ತಿಪಟುಗಳು ನೀಡಿದ ದೂರಿನ ಅನ್ವಯ ಠಾಣೆಯಲ್ಲಿ ಎಫ್‌ಐಆರ್ ದಾಖಲು. 7 ದೂರುದಾರರಿಗೆ ಸೂಕ್ತ ಭದ್ರತೆ ಒದಗಿಸಿರುವುದರನ್ನು ಖಚಿತಪಡಿಸಿದ ಬಳಿಕ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯ ವಿಚಾರಣೆ ಮುಕ್ತಾಯ

ಮೇ 5: ಬ್ರಿಜ್ ಭೂಷಣ್ ವಿರುದ್ಧ ದೂರು ದಾಖಲಿಸಿದ ಕುಸ್ತಿಪಟುಗಳ ಹೇಳಿಕೆ ದಾಖಲಿಸಿದ ದೆಹಲಿ ಪೊಲೀಸರು

ಮೇ 11: ಬ್ರಿಜ್ ಭೂಷಣ್ ಹೇಳಿಕೆ ದಾಖಲಿಸಿದ ಪೊಲೀಸರು

ಮೇ 28: ಹೊಸ ಸಂಸತ್ ಭವನ ಉದ್ಘಾಟನೆ ಸ್ಥಳದತ್ತ ಮೆರವಣಿಗೆ ಹೊರಟ ವಿನೇಶಾ ಫೋಗಟ್, ಸಾಕ್ಷಿ ಮಲಿಕ್ ಮತ್ತು ಬಜರಂಗ್ ಪುನಿಯಾ ಹಾಗೂ ಇತರ ಪ್ರತಿಭಟನಕಾರರ ಮೇಲೆ ಗಲಭೆ ಮತ್ತು ಸಾರ್ವಜನಿಕ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಪ್ರಕರಣ ದಾಖಲು

ಜೂನ್ 7: ಬ್ರಿಜ್ ಭೂಷಣ್ ವಿರುದ್ಧದ ಪೊಲೀಸ್ ತನಿಖೆ ಮುಕ್ತಾಯ ಮತ್ತು ಜೂನ್ 30ರೊಳಗೆ ಡಬ್ಲ್ಯುಎಫ್‌ಐಗೆ ಚುನಾವಣೆ ನಡೆಸಲಾಗುವುದು ಎಂದು ಅನುರಾಗ್ ಠಾಕೂರ್ ಭರವಸೆ ನೀಡಿದ ನಂತರ ಪ್ರತಿಭಟನೆ ಸ್ಥಗಿತ

ಜೂನ್ 12: ಜಮ್ಮು ಕಾಶ್ಮೀರದ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಮಹೇಶ್ ಮಿತ್ತಲ್ ಕುಮಾರ್ ಅವರನ್ನು ಚುನಾವಣಾ ಅಧಿಕಾರಿಯಾಗಿ ನೇಮಿಸಿದ ಐಒಸಿ

ಜೂನ್ 23: ಡಬ್ಲ್ಯುಎಫ್‌ಐ ಚುನಾವಣೆ ಜುಲೈ 6ರಂದು ನಡೆಸಲು ನಿರ್ಧಾರ

ಜೂನ್ 15: ದೆಹಲಿ ಪೊಲೀಸರಿಂದ ನ್ಯಾಯಾಲಯಕ್ಕೆ ಚಾರ್ಜ್ ಶೀಟ್ ಸಲ್ಲಿಕೆ

ಜೂನ್ 21: ಡಬ್ಲ್ಯುಎಫ್‌ಐ ಚುನಾವಣೆ ಜುಲೈ 11ರಂದು ನಡೆಸಲು ಮರುನಿಗದಿ, ಆದರೆ ಐದು ರಾಜ್ಯ ಸಂಸ್ಥೆಗಳು ತಮಗೆ ಮತದಾನ ಹಕ್ಕು ಮೊಟಕುಗೊಂಡಿರುವುದನ್ನು ಪ್ರಶ್ನಿಸಿ ಕೋರ್ಟ್ ಮೊರೆಹೋದವು

ಜೂನ್ 22: ಏಷ್ಯನ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್ ಆಯ್ಕೆ ಟ್ರಯಲ್ಸ್ ಪ್ರಕ್ರಿಯೆಯಿಂದ ಆರು ಮಂದಿ ಕುಸ್ತಿಪಟುಗಳಿಗೆ ವಿನಾಯಿತಿ ನೀಡಿದ ಐಒಸಿ ಅಡ್‌ಹಾಕ್ ಸಮಿತಿ

ಜೂನ್ 25: ಅಸ್ಸಾಂ ಕುಸ್ತಿ ಸಂಸ್ಥೆಯ ಅರ್ಜಿಯ ಹಿನ್ನೆಲೆಯಲ್ಲಿ ಜುಲೈ 11ರಂದು ನಿಗದಿಯಾಗಿದ್ದ ಡಬ್ಲ್ಯುಎಫ್‌ಐ ಚುನಾವಣೆಗೆ ಗುವಾಹಟಿ ಹೈಕೋರ್ಟ್ ತಡೆಯಾಜ್ಞೆ

ಜುಲೈ 18: ಬ್ರಿಜ್ ಭೂಷಣ್ ಸಿಂಗ್‌ಗೆ ಮಧ್ಯಂತರ ಜಾಮೀನು ನೀಡಿದ ದೆಹಲಿ ಕೋರ್ಟ್

ಜುಲೈ 19: ಬಜರಂಗ್ ಮತ್ತು ವಿನೇಶಾ ಅವರಿಗೆ ನೇರ ಪ್ರವೇಶ ನೀಡಿದ ಕ್ರಮ ವಿರೋಧಿಸಿ ಯುವ ಕುಸ್ತಿಪಟುಗಳ ಪ್ರತಿಭಟನೆ. (ಡಬ್ಲ್ಯುಎಫ್‌ಐ ಚುನಾವಣೆ ಆಗಸ್ಟ್ 7ಕ್ಕೆ ಮರುನಿಗದಿ)

ಜುಲೈ 20: ವಿನೇಶ್ ಮತ್ತು ಬಜರಂಗ್‌ಗೆ ನೀಡಲಾದ ವಿನಾಯಿತಿ ಹಿಂಪಡೆಯಲು ಒತ್ತಾಯಿಸಿ ಐಒಎ ಪ್ರಧಾನ ಕಚೇರಿಗೆ ಮುತ್ತಿಗೆ ಹಾಕಿದ ಜೂನಿಯರ್ ಕುಸ್ತಿಪಟುಗಳು. (ಡಬ್ಲ್ಯುಎಫ್‌ಐ ಚುನಾವಣೆ ಆಗಸ್ಟ್ 12ಕ್ಕೆ ಮರುನಿಗದಿ)

ಆಗಸ್ಟ್ 11: ಹರಿಯಾಣ ಕುಸ್ತಿ ಸಂಸ್ಥೆಯ ಅರ್ಜಿಯ ಹಿನ್ನೆಲೆಯಲ್ಲಿ ಆ.12ರಂದು ನಡೆಯಬೇಕಿದ್ದ ಚುನಾವಣೆಗೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ತಡೆಯಾಜ್ಞೆ

ಆ.23: ಗಡುವಿನೊಂದಿಗೆ ಚುನಾವಣೆ ನಡೆಸಲು ವಿಫಲವಾದ ಕಾರಣ ಡಬ್ಲ್ಯುಎಫ್‌ಐ ಅಮಾನತು ಮಾಡಿದ ಜಾಗತಿಕ ಕುಸ್ತಿ ಸಂಸ್ಥೆ

ಡಿ.5: ಡಬ್ಲ್ಯುಎಫ್‌ಐ ಚುನಾವಣೆ ಡಿ.21ಕ್ಕೆ ಮರುನಿಗದಿ

ಡಿ.21: ಬ್ರಿಜ್ ಭೂಷಣ್ ಆಪ್ತ ಸಂಜಯ್ ಸಿಂಗ್ ಡಬ್ಲ್ಯುಎಫ್‌ಐ ನೂತನ ಅಧ್ಯಕ್ಷರಾಗಿ ಆಯ್ಕೆ

ಕ್ರಿಕೆಟ್: ಸಂಜು ಸ್ಯಾಮ್ಸನ್ ಶತಕ, ಅರ್ಷದೀಪ್ ಸಿಂಗ್ ಮಿಂಚು

ಭಾರತದ ಮುಡಿಗೆ ಸರಣಿ ಕಿರೀಟ

ಪಾರ್ಲ್, ದಕ್ಷಿಣ ಆಫ್ರಿಕಾ (ಪಿಟಿಐ): ಸಂಜು ಸ್ಯಾಮ್ಸನ್ ಶತಕ ಮತ್ತು ಅರ್ಷದೀಪ್ ಸಿಂಗ್ ಅವರ ಅಮೋಘ ಬೌಲಿಂಗ್ ಬಲದಿಂದ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರಿನ ಮೂರನೇ ಏಕದಿನ ಪಂದ್ಯದಲ್ಲಿ ಜಯಿಸಿತು.

ಗುರುವಾರ ಇಲ್ಲಿ ನಡೆದ ಪಂದ್ಯದಲ್ಲಿ 78 ರನ್‌ಗಳಿಂದ ಜಯಿಸಿದ ಕೆ.ಎಲ್. ರಾಹುಲ್ ಬಳಗವು 2–1ರಿಂದ ಸರಣಿ ಗೆದ್ದುಕೊಂಡಿತು.

ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸಂಜು (108; 114ಎ, 4X6, 6X3) ಚೆಂದದ ಶತಕ ದಾಖಲಿಸಿದರು. ಅವರು ಮತ್ತು ತಿಲಕ್ ವರ್ಮಾ (52; 77ಎ, 4X5, 6X1) ಜೊತೆಯಾಟದ ಬಲದಿಂದ ಭಾರತ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 296 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಆತಿಥೇಯ ತಂಡಕ್ಕೆ 45.5 ಓವರ್‌ಗಳಲ್ಲಿ 218 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಎಡಗೈ ವೇಗಿ ಅರ್ಷದೀಪ್ ಸಿಂಗ್ (30ಕ್ಕೆ4) ಅವರ ದಾಳಿ ರಂಗೇರಿತು. ಅವರಿಗೆ ಆವೇಶ್ ಖಾನ್ (45ಕ್ಕೆ2) ಮತ್ತು ವಾಷಿಂಗ್ಟನ್ ಸುಂದರ್ (38ಕ್ಕೆ2) ಉತ್ತಮ ಜೊತೆ ನೀಡಿದರು.

ಆತಿಥೇಯ ತಂಡಕ್ಕೆ ರೀಜಾ ಹೆನ್ರಿಕ್ಸ್ (19, 24ಎ) ಮತ್ತು ಟೋನಿ ಡಿ ಝೂರ್ಜಿ (81; 87ಎ, 4X6, 6X3) ಮೊದಲ ವಿಕೆಟ್‌ಗೆ 59 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಆದರೆ ಈ ಅಡಿಪಾಯದ ಮೇಲೆ ಗೆಲುವಿನ ಸೌಧ ಕಟ್ಟಲು ಉಳಿದ ಬ್ಯಾಟರ್‌ಗಳಿಗೆ ಭಾರತದ ಬೌಲಿಂಗ್ ಪಡೆ ಬಿಡಲಿಲ್ಲ.

ಇಬ್ಬರೂ ಆರಂಭಿಕ ಬ್ಯಾಟರ್‌ಗಳ ವಿಕೆಟ್ ಗಳಿಸಿದ ಅರ್ಷದೀಪ್ ಭಾರತದ ಗೆಲುವಿಗೆ ಮಹತ್ವದ ಕಾಣಿಕೆ ನೀಡಿದರು. ಇನ್ನೊಂದೆಡೆ ಸ್ಪಿನ್ನರ್ ಅಕ್ಷರ್ ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ ಕೂಡ ಪರಿಣಾಮಕಾರಿ ದಾಳಿ ನಡೆಸಿ, ಜೊತೆಯಾಟಗಳು ಕುದುರದಂತೆ ನೋಡಿಕೊಂಡರು.

ಸಂಜು–ವರ್ಮಾ ಜೊತೆಯಾಟ: ಋತುರಾಜ್ ಗಾಯಕವಾಡ್ ವಿಶ್ರಾಂತಿ ಪಡೆದ ಕಾರಣ ಸಾಯಿ ಸುದರ್ಶನ್ ಜೊತೆಗೆ ರಜತ್ ಪಾಟೀದಾರ್ ಇನಿಂಗ್ಸ್ ಆರಂಭಿಸಿದರು. ಆದರೆ ಎಂಟು ಓವರ್‌ಗಳಾಗುವಷ್ಟರಲ್ಲಿ ಇಬ್ಬರೂ ಔಟಾದರು. ಆಗ ತಂಡದ ಮೊತ್ತ ಕೇವಲ 49 ರನ್‌ಗಳಾಗಿದ್ದವು.

ಕ್ರೀಸ್‌ನಲ್ಲಿದ್ದ ಸಂಜು ಶಾಂತಚಿತ್ತರಾಗಿ ಇನಿಂಗ್ಸ್ ಕಟ್ಟುವತ್ತ ಮಗ್ನರಾದರು. ಅವರೊಂದಿಗೆ ಸೇರಿಕೊಂಡ ನಾಯಕ ಕೆ.ಎಲ್. ರಾಹುಲ್ (21; 35ಎ) ಉತ್ತಮ ಜೊತೆ ನೀಡಿದರು. ಇವರಿಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 52 ರನ್ ಸೇರಿಸಿದರು. 19ನೇ ಓವರ್‌ನಲ್ಲಿ ವಿಯಾನ್ ಮುಲ್ದರ್ ಬೌಲಿಂಗ್‌ನಲ್ಲಿ ರಾಹುಲ್ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು.

ಸಂಜು ಜೊತೆಗೆ ಸೇರಿಕೊಂಡ ತಿಲಕ್ ವರ್ಮಾ ಇನಿಂಗ್ಸ್‌ಗೆ ಬಲ ತುಂಬಿದರು. ಇವರಿಬ್ಬರ ಶತಕದ ಜೊತೆಯಾಟದಿಂದಾಗಿ ಹೋರಾಟದ ಮೊತ್ತ ಪೇರಿಸಲು ಸಾಧ್ಯವಾಯಿತು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 116 ರನ್ ಸೇರಿಸಿದರು.

ಸಂಜು ಶತಕ ಪೂರೈಸಿದರು. ಇನಿಂಗ್ಸ್‌ನಲ್ಲಿ ಇನ್ನೂ ಎಂಟು ಓವರ್‌ಗಳು ಬಾಕಿಯಿದ್ದ ಸಂದರ್ಭದಲ್ಲಿ ಕೇಶವ್ ಮಹಾರಾಜ್ ಎಸೆತದಲ್ಲಿ ವರ್ಮಾ ಔಟಾದರು. ಕ್ರೀಸ್‌ಗೆ ಬಂದ ರಿಂಕು ಸಿಂಗ್ 27 ಎಸೆತದಲ್ಲಿ 38 ರನ್ ಗಳಿಸಿದರು. ಎರಡು ಅಮೋಘ ಸಿಕ್ಸರ್ ಸಿಡಿಸಿ ಪ್ರೇಕ್ಷಕರನ್ನು ರಂಜಿಸಿದರು. ಇದರಿಂದಾಗಿ ತಂಡದ ಮೊತ್ತವೂ ಏರಿಕೆ ಕಂಡಿತು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 296 (ರಜತ್ ಪಾಟೀದಾರ್ 22, ಸಂಜು ಸ್ಯಾಮ್ಸನ್ 108, ಕೆ.ಎಲ್. ರಾಹುಲ್ 21, ತಿಲಕ್ ವರ್ಮಾ 52, ರಿಂಕು ಸಿಂಗ್ 38, ನಾಂಡ್ರೆ ಬರ್ಗರ್ 64ಕ್ಕೆ2, ಬೆರನ್ ಹೆನ್ರಿಕ್ಸ್ 63ಕ್ಕೆ3)

ದಕ್ಷಿಣ ಆಫ್ರಿಕಾ: 45.5 ಓವರ್‌ಗಳಲ್ಲಿ 218 (ಟೋನಿ ಡಿ ಝೂರ್ಜಿ 81, ಏಡನ್ ಮರ್ಕರಂ 36, ಹೆನ್ರಿಚ್ ಕ್ಲಾಸೆನ್ 21, ಅರ್ಷದೀಪ್ ಸಿಂಗ್ 30ಕ್ಕೆ4, ಆವೇಶ್ ಖಾನ್ 45ಕ್ಕೆ2, ವಾಷಿಂಗ್ಟನ್ ಸುಂದರ್ 38ಕ್ಕೆ2) **ಫಲಿತಾಂಶ:** ಭಾರತಕ್ಕೆ 78 ರನ್‌ಗಳ ಜಯ. 2–1ರಿಂದ ಸರಣಿ.



ಶತಕ ಗಳಿಸಿದ ಸಂಜು ಸ್ಯಾಮ್ಸನ್ (ಎಡ) ಅವರನ್ನು ಅಭಿನಂದಿಸಿದ ತಿಲಕ್ ವರ್ಮಾ –ಎಎಫ್‌ಪಿ ಚಿತ್ರ

ಪೂಜಾ, ಸ್ನೇಹಾ ದಾಳಿಗೆ ಕುಸಿದ ಆಸ್ಟ್ರೇಲಿಯಾ

ಟೆಸ್ಟ್ ಕ್ರಿಕೆಟ್: ಆತಿಥೇಯರಿಗೆ ಮೊದಲ ದಿನದ ಗೌರವ; ದೀಪ್ತಿಗೆ ಎರಡು ವಿಕೆಟ್

ಮುಖ್ಯಾಂಶಗಳು

- ಅರ್ಧಶತಕ ಗಳಿಸಿದ ತಹಲಿಯಾ ಮೆಕ್‌ಗ್ರಾ
- ಮೂರು ಕ್ಯಾಚ್ ಕೈಚೆಲ್ಲಿದ ಭಾರತದ ಫೀಲ್ಡರ್‌ಗಳು
- ಶಫಾಲಿ–ಸ್ಮೃತಿ ಜೊತೆಯಾಟದಲ್ಲಿ ಸೇರಿದ 90 ರನ್

ಮುಂಬೈ (ಪಿಟಿಐ): ಮಧ್ಯಮವೇಗಿ ಪೂಜಾ ವಸ್ತ್ರಾಕರ್ ಮತ್ತು ಆಫ್‌ಸ್ಪಿನ್ನರ್ ಸ್ನೇಹಾ ರಾಣಾ ಅವರ ಪರಿಣಾಮಕಾರಿ ದಾಳಿಯ ಮುಂದೆ ಆಸ್ಟ್ರೇಲಿಯಾ ಮಹಿಳಾ ಕ್ರಿಕೆಟ್ ತಂಡವು ಸಾಧಾರಣ ಮೊತ್ತಕ್ಕೆ ಕುಸಿಯಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ಮಹಿಳೆಯರ ಏಕೈಕ ಟೆಸ್ಟ್ ಪಂದ್ಯದ ಮೊದಲ ದಿನ ಟಾಸ್ ಗೆದ್ದ ಪ್ರವಾಸಿ ಆಸ್ಟ್ರೇಲಿಯಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಪೂಜಾ (53ಕ್ಕೆ4) ಮತ್ತು ಸ್ನೇಹಾ (56ಕ್ಕೆ3) ಅವರ ದಾಳಿಯ ಮುಂದೆ 77.4 ಓವರ್‌ಗಳಲ್ಲಿ 219 ರನ್ ಗಳಿಸಿದ ಆಸ್ಟ್ರೇಲಿಯಾ ಆಲೌಟ್ ಆಯಿತು. ಇದಕ್ಕುತ್ತರವಾಗಿ ಆತಿಥೇಯ ತಂಡವು ದಿನದಾಟದ ಮುಕ್ತಾಯಕ್ಕೆ 19 ಓವರ್‌ಗಳಲ್ಲಿ 1 ವಿಕೆಟ್‌ಗೆ 98 ರನ್ ಗಳಿಸಿತು.

ಶಫಾಲಿ ವರ್ಮಾ (40; 59ಎ, 4X8) ಮತ್ತು ಸ್ಮೃತಿ ಮಂದಾನ (ಬ್ಯಾಟಿಂಗ್ 43; 49ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 90 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ದಿನದಾಟ ಮುಗಿಯಲು ಇನ್ನೂ ಎರಡು ಓವರ್‌ಗಳು ಬಾಕಿಯಿದ್ದಾಗ ಶಫಾಲಿ ಅವರನ್ನು ಬೌಲರ್ ಜೆಸ್ ಜಾನ್ಸನ್ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

ಪೂಜಾ, ಸ್ನೇಹಾ ಮಿಂಚು: ಬ್ಯಾಟಿಂಗ್ ಆರಂಭಿಸಿದ ಆಸ್ಟ್ರೇಲಿಯಾಕ್ಕೆ ಮೊದಲ ಓವರ್‌ನಲ್ಲಿಯೇ ಆಘಾತ ಎದುರಾಯಿತು. ಜಿಮಿಮಾ ರಾಡ್ರಿಗಸ್ ಮತ್ತು ವಿಕೆಟ್‌ಕೀಪರ್ ಯಷ್ಟಿಕಾ ಭಾಟಿಯಾ ಅವರ ಚುರುಕಾದ ಫೀಲ್ಡಿಂಗ್‌ನಿಂದಾಗಿ ಬ್ಯಾಟರ್ ಪೊಯೆಬಿ ಲಿಚ್‌ಫೀಲ್ಡ್ ರನ್‌ಔಟ್ ಆದರು. ಅವರು ಒಂದೂ ಎಸೆತ ಎದುರಿಸಲಿಲ್ಲ.

ಎರಡನೇ ಓವರ್‌ನಲ್ಲಿ ಒಂದು ಬೌಂಡರಿ ಗಳಿಸಿದ್ದ ಎಲಿಸಾ ಪೆರಿ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದ ಪೂಜಾ ತಮ್ಮ ಖಾತೆ ಆರಂಭಿಸಿದರು. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಅನಾಬೆಲ್ ಸದರ್ಲೆಂಡ್ (16ರನ್), ಆ್ಯಷ್ಲೆ ಗಾರ್ಡನರ್ ಮತ್ತು 40 ರನ್ ಗಳಿಸಿದ್ದ ಆರಂಭಿಕ ಆಟಗಾರ್ತಿ ಬೆತ್ ಮೂನಿ ಅವರ ವಿಕೆಟ್‌ಗಳನ್ನೂ ಕಬಳಿಸಿದರು. ಇನ್ನೊಂದು ಬದಿಯಿಂದ ಸ್ನೇಹಾ ಕೂಡ ಪರಿಣಾಮಕಾರಿಯಾದರು. ಮೂವರು ಬ್ಯಾಟರ್‌ಗಳನ್ನು ಪೆವಿಲಿಯನ್‌ಗೆ ಕಳಿಸಿದರು.

ಇಂಗ್ಲೆಂಡ್ ವಿರುದ್ಧದ ಟೆಸ್ಟ್‌ನಲ್ಲಿ ಮಿಂಚಿದ್ದ ಸ್ಪಿನ್ನರ್ ದೀಪ್ತಿ ಶರ್ಮಾ ನಾಯಕಿ ಅಲಿಸಾ ಹೀಲಿ (38 ರನ್) ದೊಡ್ಡ ಇನಿಂಗ್ಸ್ ಆಡದಂತೆ ತಡೆಯೊಡ್ಡಿದರು. ಜೆಸ್ ಜಾನ್ಸನ್ (19 ರನ್) ಅವರನ್ನೂ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಇದೆಲ್ಲದರ ನಡುವೆ ಪ್ರವಾಸಿ ಬಳಗದ ತಹಲಿಯಾ ಮೆಕ್‌ಗ್ರಾ (50; 56ಎ) ಅವರು ಅರ್ಧಶತಕ ಗಳಿಸಿದರು. ಇದರೊಂದಿಗೆ ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಪ್ಪಿಸಿದರು. ಸ್ನೇಹ ರಾಣಾ ಮತ್ತು ರೇಣುಕಾ ಸಿಂಗ್ ಅವರು ತಲಾ ಒಂದು ಬಾರಿ ಮೆಕ್‌ಗ್ರಾ ಅವರ ಕ್ಯಾಚ್ ಕೈಚೆಲ್ಲಿದ್ದರು. ಬ್ಯಾಟರ್ ಕಿಮ್ ಗಾರ್ಥ್ ಅವರಿಗೂ ಒಂದು ಜೀವದಾನ ಲಭಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 77.4 ಓವರ್‌ಗಳಲ್ಲಿ 219 (ಬೆತ್ ಮೂನಿ 40, ತಹಲಿಯಾ ಮೆಕ್‌ಗ್ರಾ 50, ಅಲೀಸಾ ಹೀಲಿ 38, ಕಿಮ್ ಗಾರ್ಥ್ ಔಟಾಗದೆ 28, ಪೂಜಾ ವಸ್ತ್ರಾಕರ್ 53ಕ್ಕೆ4, ಸ್ನೇಹಾ ರಾಣಾ 56ಕ್ಕೆ3, ದೀಪ್ತಿ ಶರ್ಮಾ 45ಕ್ಕೆ2) ಭಾರತ: 19 ಓವರ್‌ಗಳಲ್ಲಿ 1 ವಿಕೆಟ್‌ಗೆ 98 (ಶಫಾಲಿ ವರ್ಮಾ 40, ಸ್ಮೃತಿ ಮಂದಾನ ಬ್ಯಾಟಿಂಗ್ 43, ಸ್ನೇಹಾ ರಾಣಾ ಬ್ಯಾಟಿಂಗ್ 4, ಜೆಸ್ ಜಾನ್ಸನ್ 4ಕ್ಕೆ1)



ವಿಕೆಟ್ ಗಳಿಸಿದ ಭಾರತದ ಬೌಲರ್ ಪೂಜಾ ವಸ್ತ್ರಾಕರ್ ಅವರನ್ನು ಅಭಿನಂದಿಸಿದ ಸಹ ಆಟಗಾರ್ತಿಯರು –ಪಿಟಿಐ ಚಿತ್ರ

ಖ್ವಾಜಾಗೆ ಐಸಿಸಿ ಛೀಮಾರಿ



ದುಬೈ (ರಾಯಟರ್ಸ್): ಇಸ್ರೇಲ್ ದಾಳಿಯಿಂದಾಗಿ ನಲುಗಿರುವ ಗಾಜಾದ ಸಂತ್ರಸ್ತರಿಗೆ ಬೆಂಬಲ ಸೂಚಿಸಿ ತಮ್ಮ ತೋಳಿಗೆ ಕಪ್ಪುಪಟ್ಟಿ ಧರಿಸಿ ಟೆಸ್ಟ್ ಪಂದ್ಯದಲ್ಲಿ ಆಡಿದ ಆಸ್ಟ್ರೇಲಿಯಾ ಆಟಗಾರ ಉಸ್ಮಾನ್ ಖ್ವಾಜಾ ಅವರಿಗೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಛೀಮಾರಿ ಹಾಕಿದೆ.

ಪಾಕಿಸ್ತಾನ ಎದುರಿನ ಸರಣಿಯ ಮೊದಲ ಪಂದ್ಯವು ಕಳೆದ ವಾರ ಪರ್ತ್‌ನಲ್ಲಿ ನಡೆದಿತ್ತು. ಅದರಲ್ಲಿ ಅವರು ತಮ್ಮ ತೋಳಿಗೆ ಕಪ್ಪು ಪಟ್ಟಿ ಧರಿಸಿದ್ದರು. ಪಂದ್ಯದ ಮುನ್ನಾ ದಿನ ಅಭ್ಯಾಸದ ಸಂದರ್ಭದಲ್ಲಿ ಖ್ವಾಜಾ ಅವರು, ಪ್ಯಾಲೆಸ್ಟೇನ್ ಧ್ವಜದ ಬಣ್ಣಗಳಲ್ಲಿ 'ಸ್ವಾತಂತ್ರ್ಯವು ಮಾನವ ಹಕ್ಕು' ಮತ್ತು 'ಎಲ್ಲಾ ಜೀವಗಳು ಸಮಾನ' ಎಂಬ ಸಂದೇಶಗಳನ್ನು ಬರೆದಿದ್ದ ಬೂಟುಗಳನ್ನು ಧರಿಸಿ ಗಮನ ಸೆಳೆದಿದ್ದರು. ಅದೇ ಬೂಟುಗಳನ್ನು ಧರಿಸಿ ಪಂದ್ಯದಲ್ಲಿ ಆಡುವ ಉದ್ದೇಶ ಅವರಿಗಿತ್ತು. ಆದರೆ ಅವರಿಗೆ ತಂಡದಿಂದ ಅನುಮತಿ ದೊರೆತಿಲ್ಲ ಎಂದು ಆಸ್ಟ್ರೇಲಿಯಾ ಮಾಧ್ಯಮಗಳಲ್ಲಿ ವರದಿಯಾಗಿತ್ತು.

'ಪಾಕಿಸ್ತಾನ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ವೇಳೆ ಉಸ್ಮಾನ್ ಅವರು ಕ್ರಿಕೆಟ್ ಆಸ್ಟ್ರೇಲಿಯಾ ಮತ್ತು ಐಸಿಸಿಯ ಪೂರ್ವಾನುಮತಿ ಪಡೆಯದೆ ವೈಯಕ್ತಿಕ ಸಂದೇಶ (ತೋಳಿಗೆ ಕಪ್ಪುಪಟ್ಟಿ) ಪ್ರದರ್ಶಿಸಿದ್ದಾರೆ. ಇದು ನಿಯಮ ಉಲ್ಲಂಘನೆಯಾಗಿದೆ ಮತ್ತು ಮೊದಲ ಅಪರಾಧಕ್ಕೆ ಛೀಮಾರಿ ಹಾಕಲಾಗಿದೆ' ಎಂದು ಐಸಿಸಿ ತಿಳಿಸಿದೆ.



ರಾಜ್ಯ ಆಹ್ವಾನಿತ ಸಬ್ ಜೂನಿಯರ್ (13 ವರ್ಷದೊಳಗಿನ) ಬಾಲಕಿಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ಆಲ್ ಸ್ಟಾರ್ ಬಿ.ಸಿ. ಮೈಸೂರು ತಂಡವು 40–39 ರಿಂದ ಯಂಗ್ ಓರಿಯನ್ಸ್ ತಂಡವನ್ನು ಮಣಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ. ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ, ಕೆಎಸ್‌ಬಿಬಿಎ ಅಧ್ಯಕ್ಷ ಕೆ.ಗೋವಿಂದರಾಜ್ ಟ್ರೋಫಿ ವಿತರಿಸಿದರು.

ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್: ಗುಕೇಶ್‌ಗೆ ಕಿರೀಟ



ಡಿ. ಗುಕೇಶ್

ಚೆನ್ನೈ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ. ಗುಕೇಶ್ ಅವರು ಗುರುವಾರ ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಏಳನೇ ಸುತ್ತಿನ ಪಂದ್ಯದ ಬಳಿಕ ಸಮಾನ ಪಾಯಿಂಟ್ಸ್ ಗಳಿಸಿದ್ದ ಅರ್ಜುನ್ ಇರಿಗೇಶ್ ಅವರನ್ನು ಟೈ ಬ್ರೇಕರ್‌ನಲ್ಲಿ ಗುಕೇಶ್ ಮಣಿಸುವ ಮೂಲಕ ತವರಿನಲ್ಲೇ ಚಾಂಪಿಯನ್ ಆದರು.

ಅಂತಿಮ ಸುತ್ತಿನಲ್ಲಿ ಭಾರತದ ಪಿ. ಹರಿಕೃಷ್ಣ ಅವರೊಂದಿಗೆ ಡ್ರಾ ಸಾಧಿಸಿದ ಗುಕೇಶ್ 4.5 ಅಂಕ ಪಡೆದರು. ಅರ್ಜುನ್ ಅವರು ಕೊನೆಯ ಸುತ್ತಿನಲ್ಲಿ ಹಂಗರಿಯ ಸನನ್ ಸುಗಿರೋವ್ ಅವರನ್ನು ಸೋಲಿಸಿ, 4.5 ಅಂಕಗಳೊಂದಿಗೆ ಗುಕೇಶ್ ಜತೆ ಅಗ್ರಸ್ಥಾನಕ್ಕೆ ಏರಿದರು.

ನಂತರ ಟೈ ಬ್ರೇಕ್ ಸ್ಕೋರ್‌ನ ಆಧಾರದ ಮೇಲೆ ಗುಕೇಶ್ ಮೇಲುಗೈ ಸಾಧಿಸಿದರು. ಈ ಮೂಲಕ ಮುಂದಿನ ವರ್ಷದ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯುವ ಅವಕಾಶ ಹೆಚ್ಚಿಸಿಕೊಂಡರು.

ಅರ್ಜುನ್ ರನ್ನರ್ ಅಪ್ ಆದರೆ, ಹರಿಕೃಷ್ಣ ಮೂರನೇ ಸ್ಥಾನ ಪಡೆದರು. ಹೀಗಾಗಿ, ಮೊದಲ ಮೂರು ಸ್ಥಾನಗಳು ಭಾರತದ ಆಟಗಾರರಿಗೆ ದೊರೆತವು.

'ಏಸ್' ಪ್ರಮಾಣಪತ್ರ ಪಡೆದಿರುವ ಫಿಟ್‌ನೆಸ್ ಕೋಚ್ ವಿವಿನ್ ವಿನ್ಸೆಂಟ್

ಕಬಡ್ಡಿಯಲ್ಲಿ ಮಿಶ್ರಕ್ರೀಡೆಗಳ ತಂತ್ರ ಪ್ರಯೋಗ

• ವಿಕ್ರಂ ಕಾಂತಿಕೆರೆ

ಪುಣೆ: ಎದುರಾಳಿಯನ್ನು ಚಿತ್ ಮಾಡಲು ಕುಸ್ತಿಯಲ್ಲಿ ಬಳಸುವ ಹಿಡಿತದ ತಂತ್ರ, ಟೆಕ್ವಾಂಡೊದಲ್ಲಿ ಮುಖಾಮುಖಿಯಾಗುವಾಗ ಬಳಸುವ ವೇಗ, ಬಾಕ್ಸಿಂಗ್‌ನಲ್ಲಿ ಯಶಸ್ಸು ತಂದುಕೊಡುವ ಪಾದಚಲನೆಯ ಶೈಲಿ, ಅಥ್ಲೆಟಿಕ್ಸ್‌ನ ಚುರುಕು...

ಇವೆಲ್ಲವನ್ನೂ ಸಂದರ್ಭಕ್ಕೆ ತಕ್ಕಂತೆ ಕಬಡ್ಡಿಯಲ್ಲಿ ಸಮಗ್ರವಾಗಿ ಬಳಕೆ ಮಾಡಿ ಯಶಸ್ಸು ಕಂಡಿದ್ದಾರೆ, ಬೆಂಗಳೂರಿನ ವಿವಿನ್ ವಿನ್ಸೆಂಟ್. ಆಟಗಾರರ ಫಿಟ್‌ನೆಸ್‌ಗೆ ಮಿಶ್ರ-ಕ್ರೀಡೆಗಳ ತಂತ್ರಗಳನ್ನು ಪ್ರಯೋಗ ಮಾಡುತ್ತಿರುವ ಅವರು ಕನ್ನಡಿಗ ಬಿ.ಸಿ. ರಮೇಶ್ ಅವರು ಕೋಚ್ ಆಗಿರುವ ಪುಣೇರಿ ಪಲ್ಟನ್ ತಂಡದ ಫಿಟ್‌ನೆಸ್ ತರಬೇತುದಾರ. 10ನೇ ಆವೃತ್ತಿಯ 3 ಲೆಗ್‌ಗಳ ಮುಕ್ತಾಯಕ್ಕೆ ಪುಣೇರಿ 26 ಪಾಯಿಂಟ್‌ಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ.

ಅಮೆರಿಕನ್ ಕೌನ್ಸಿಲ್ ಆಫ್ ಎಕ್ಸ್‌ರ್ಸೈಸ್‌ನಿಂದ (ಏಸ್) ಲೆವೆಲ್–2 ಪ್ರಮಾಣಪತ್ರ ಪಡೆದುಕೊಂಡಿರುವ ಅವರು ಇದಕ್ಕಾಗಿ ಅಧ್ಯಯನ ಮಾಡಿದ ವಿಷಯಗಳನ್ನು ಕಬಡ್ಡಿಯ ಮೌಲ್ಯವರ್ಧನೆಗಾಗಿ ಬಳಸಿಕೊಳ್ಳಲು ನಿರ್ಧರಿಸಿ ಪ್ರಯೋಗಗಳನ್ನು ಮಾಡುತ್ತಿದ್ದಾರೆ.

'ಪ್ರೊ ಕಬಡ್ಡಿ ಟೂರ್ನಿಯ ಕ್ರಾಂತಿಯಿಂದಾಗಿ ಕಬಡ್ಡಿಯ ಎಲ್ಲ ವಿಭಾಗಗಳಲ್ಲೂ ಮಹತ್ವದ ಬದಲಾವಣೆಗಳು ಆಗಿವೆ. ಫಿಟ್‌ನೆಸ್‌ಗೆ ಹೆಚ್ಚು ಆದ್ಯತೆ ಸಿಗುತ್ತಿದೆ. ಹಿಂದೆಲ್ಲ ಕಬಡ್ಡಿ ಆಟಗಾರರನ್ನು ಮರಳು ಮತ್ತು ಗುಡ್ಡಗಾಡು ಪ್ರದೇಶದಲ್ಲಿ ಓಡಿಸುತ್ತಿದ್ದರು. ಕಬಡ್ಡಿಯಲ್ಲಿ ಬಳಸುವ ತಾಕತ್ತು ವಿಶಿಷ್ಟ ಆಗಿರುವುದರಿಂದ ಆಟಗಾರರಿಗೆ ಬರೀ ಓಟದ ಅಭ್ಯಾಸ ಮಾತ್ರ ಸಾಕಾಗುವುದಿಲ್ಲ. ಆದ್ದರಿಂದ ಬಹುಶಿಸ್ತೀಯ ವ್ಯಾಯಾಮ ಹೇಳಿಕೊಡಲು ಮುಂದಾದೆ' ಎಂದು ವಿವಿನ್ ವಿನ್ಸೆಂಟ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕಬಡ್ಡಿಯಲ್ಲಿ ಪ್ರತಿ ರೇಡ್‌ನ ಅರ್ಧ ನಿಮಿಷವನ್ನು ಸದುಪಯೋಗ ಮಾಡಿಕೊಳ್ಳುವುದು ಮುಖ್ಯ. ಅದಕ್ಕೆ ವಿಶಿಷ್ಟ ಸಾಮರ್ಥ್ಯ ಬೇಕು. ಅದಕ್ಕೆ ವಿಶಿಷ್ಟವಾದ ಪರಿಶ್ರಮ ಬೇಕು, ಪರಿಣಿತಿ ಬೇಕು. ದೈಹಿಕ ಕ್ಷಮತೆಯೂ ಇರಬೇಕು. ಶಕ್ತಿ, ವೇಗ, ಕ್ಷಿಪ್ರವಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯ ಹೆಚ್ಚಬೇಕು. ಅದರಲ್ಲಿ ಯಶಸ್ವಿಯಾದರೆ ಉತ್ತಮ ಫಲಿತಾಂಶ ಸಿಗುತ್ತದೆ' ಎಂದು ವಿವರಿಸಿದರು.

ಲೀಗ್ ಆರಂಭವಾಗುವ ಮೊದಲು ಕೋಚ್ ಜೊತೆ ಚರ್ಚಿಸಿ ವರ್ಕೌಟ್ ಕಾರ್ಯಕ್ರಮವನ್ನು ಸಿದ್ಧಪಡಿಸಲಾಗುತ್ತದೆ. ಕುಸ್ತಿ, ಟೇಕ್ವಾಂಡೊ, ಬಾಕ್ಸಿಂಗ್ ಮುಂತಾದ ಕ್ರೀಡೆಗಳಿಂದ ಕಬಡ್ಡಿಗೆ ಪೂರಕವಾಗುವ ಅಂಶ ತೆಗೆದು ಕೊಂಡು ಸಮರ ಕಲೆಯ ಮಾದರಿಯನ್ನು ಸಿದ್ಧಪಡಿಸಿ ಆಟಗಾರರನ್ನು ಸಜ್ಜುಗೊಳಿಸಲಾಗುತ್ತದೆ' ಎಂದು ವಿವರಿಸಿದರು.

ಬೆಂಗಳೂರಿನ ಸುಲ್ತಾನ್ ಪಾಳ್ಯ ನಿವಾಸಿ ವಿವಿನ್ ಅವರಿಗೆ ಪ್ರೊ ಕಬಡ್ಡಿಯಲ್ಲಿ ಇದು ನಾಲ್ಕನೇ ಆವೃತ್ತಿ. 6ನೇ ಆವೃತ್ತಿಯಲ್ಲಿ ಪ್ರಶಸ್ತಿ ಗೆದ್ದ ಬೆಂಗಳೂರು ಬುಲ್ಸ್ ಮತ್ತು 7ನೇ ಆವೃತ್ತಿಯ ಚಾಂಪಿಯನ್ ಬೆಂಗಾಳ್ ವಾರಿಯರ್ಸ್ ತಂಡಗಳಲ್ಲಿ ಇದ್ದ ಅವರು ಕಳೆದ ಬಾರಿ ಗುಜರಾತ್ ಫಾರ್ಚೂನ್ ಜೈಂಟ್ಸ್ ಜೊತೆ ಇದ್ದರು.



ಫಿಟ್‌ನೆಸ್ ತರಬೇತಿ ನೀಡುತ್ತಿರುವ ವಿವಿನ್ ವಿನ್ಸೆಂಟ್

ತಳಮಟ್ಟದಲ್ಲಿ ಪ್ರಯೋಗ ಮಾಡುತ್ತ ಅನುಭವಿಗಳ ಸಂಪರ್ಕದ ಮೂಲಕ ಕಬಡ್ಡಿಯ ಆಳ ಅರಿತುಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಅದರಿಂದ ಹೆಚ್ಚು ಪ್ರಯೋಜನ ಆಗಿದೆ.

ವಿವಿನ್ ವಿನ್ಸೆಂಟ್
ಪುಣೇರಿ ಪಲ್ಟನ್ ಟ್ರೇನರ್

ವಿವಿನ್ ವಿನ್ಸೆಂಟ್ ಇದ್ದ ತಂಡಗಳ ಸಾಧನೆ

ಆವೃತ್ತಿ	ತಂಡದ ಹೆಸರು	ಯಶಸ್ವಿ ರೇಡ್	ಯಶಸ್ವಿ ಟ್ಯಾಕಲ್	ಸೂಪರ್ ಟ್ಯಾಕಲ್
ಆರು	ಬೆಂಗಳೂರು ಬುಲ್ಸ್	431	219	11
ಏಳು	ಬೆಂಗಾಳ್ ವಾರಿಯರ್ಸ್	414	217	12
ಒಂಬತ್ತು	ಗುಜರಾತ್ ಜೈಂಟ್ಸ್	420	177	3

777 ವಿವಿನ್ ಇದ್ದ 6ನೇ ಆವೃತ್ತಿಯಲ್ಲಿ ಅತ್ಯಧಿಕ ಪಾಯಿಂಟ್ಸ್ ಗಳಿಸಿದ ಬೆಂಗಳೂರು ಬುಲ್ಸ್

547 ವಿವಿನ್ ಇದ್ದ 6ನೇ ಆವೃತ್ತಿಯಲ್ಲಿ ಅತ್ಯಧಿಕ ರೇಡ್ಸ್ ಪಾಯಿಂಟ್ಸ್ ಗಳಿಸಿದ ಬುಲ್ಸ್


414 ವಿವಿನ್ ಇದ್ದ 7ನೇ ಆವೃತ್ತಿಯಲ್ಲಿ ಹೆಚ್ಚು ಯಶಸ್ವಿ ರೇಡ್ ಪಾಯಿಂಟ್ ಗಳಿಸಿದ 2ನೇ ತಂಡ ಬೆಂಗಾಲ್ ವಾರಿಯರ್ಸ್

ಬ್ಯಾಡ್ಮಿಂಟನ್: ಲಕ್ಷ್ಯಸೇನ್ ಆಕರ್ಷಿ ಕಶ್ಯಪ್ ಮುನ್ನಡೆ

ಗುವಾಹಟಿ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತ ಲಕ್ಷ್ಯ ಸೇನ್ ಮತ್ತು ಅಗ್ರ ಶ್ರೇಯಾಂಕದ ಆಕರ್ಷಿ ಕಶ್ಯಪ್ ಇಲ್ಲಿ ನಡೆಯುತ್ತಿರುವ 85ನೇ ಸಿನೀಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳಾ ಸಿಂಗಲ್ಸ್‌ನಲ್ಲಿ ಮೂರನೇ ಸುತ್ತಿಗೆ ಪ್ರವೇಶಿಸಿದ್ದಾರೆ.

ಸೇನ್ 21-8, 21-5ರಲ್ಲಿ ಟಿ. ಸಿದ್ಧಾರ್ಥ್ ವಿರುದ್ಧ ಗೆದ್ದರೆ, ಆಕರ್ಷಿ 21-18, 21-11 ಅಂತರದಲ್ಲಿ 32 ನಿಮಿಷಗಳಲ್ಲಿ ಗೆಲುವು ಸಾಧಿಸಿದರು.

ಸೇನ್ ಮತ್ತು ಸಿದ್ಧಾರ್ಥ್ ಮೊದಲ ಗೇಮ್‌ನಲ್ಲಿ ಪ್ರತಿ ಪಾಯಿಂಟ್‌ಗಾಗಿ ಹೋರಾಡಿದರು ಮತ್ತು ಅವರು 5-5 ರಲ್ಲಿ ಸಮಬಲ ಸಾಧಿಸಿದರು. ನಂತರ ಸೇನ್ ಮೊದಲ ಗೇಮ್ ಅನ್ನು 21-8 ರಲ್ಲಿ ಗೆದ್ದರು. ನಂತರ ಎರಡನೇ ಗೇಮ್‌ನಲ್ಲೂ ಸಂಪೂರ್ಣ ಪ್ರಾಬಲ್ಯ ಸಾಧಿಸಿ 21-5 ರಿಂದ ಗೆದ್ದರು.



Kia is all about you and making your experience with us better every day. That's why we're keeping our doors open after your working hours. Come visit us for a truly inspiring experience and get great benefits too!

Exclusive ownership benefits for the Sonet* up to ₹95 000

Special Customer Benefits	Extended Warranty	Maintenance Package	Competitive Interest Rate	Zero Down Payment
up to ₹ 58 229	for 5 years with benefits up to ₹ 20 072**	for 3 years with benefits up to ₹ 16 699#	8.65% onwards^	Nil processing/ part payment charges^

Exclusive ownership benefits for the Carens* up to ₹79 300

Special Customer Benefits	Special Accessories Festive Pack	Competitive Interest Rate	Zero Down Payment	Additional Benefits
up to ₹50 100	with benefits of ₹9 600~	8.65% onwards^	Nil processing/ part payment charges^	for select corporates up to ₹19 600

Book your favorite Kia Seltos in December and enjoy priority delivery.

Kia cars now available through Canteen Stores Department (CSD).

Book your favorite Kia at your convenience till midnight (from 20th Dec till 26th Dec)

For more information, visit our dealership or contact: 1800 108 5000 | 093195 91407 | www.kia.com/in | Book Kia | kiacare@kiaindia.net | Look for "Kia India" @

*T&C Apply. **Limited Period Offer. 3 year standard warranty & 2 year extended warranty. #Service inclusion as per periodic maintenance schedule defined in the owner's manual under normal driving conditions and applicable up to 3 years/ 30 000 km whichever is earlier. ^With select partners banks only. ~Special accessory package is applicable on all trims (chrome kit). The product shown is for representation purposes only. Actual features, colors and specifications may not be part of standard fitment and may vary. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications, and other details of any model as mentioned or to modify/ discontinue any offer/scheme/service without prior notice. For more details, visit your nearest Kia dealership. Kia urges you to follow traffic rules. These are meant to keep you safe on roads.

Advaith Kia: Lalbagh Main Road, Tel: 9611006006 **Epitome Kia:** Whitefield, Tel: 9606970216 | Yelahanka, Tel: 7406343339 | Kolar, Tel: 8951903224 **JSP Kia :** Hosur Road, Tel: 9606011244 | Bellandur, Tel: 9071077717 **Naara Kia:** J.P Nagar, Tel: 7406528200 **PPS Kia :** Mysore Road, Tel: 6309990010 | Tumkur, Tel: 6303622210 **Taapasi Kia:** Kalyan Nagar, Tel: 8095537777 **VST Kia :** Palace Road, Tel: 9606988123 | Yeshwanthpur, Tel: 9606988124



ಪರಿಣಿತರಿಂದ **ಉಚಿತ ವಿನಿಮಯ** ಮೌಲ್ಯಮಾಪನಕ್ಕಾಗಿ ನಿಮ್ಮ ಹಳೆಯ ಪೆಟ್ರೋಲ್ ಸ್ಕೂಟರ್ ತನ್ನಿ. ***ಎಕ್ಸ್-ಶೋರೂಮ್ ಬೆಲೆ ಕರ್ನಾಟಕ** | Book now at **www.chetak.com**

CHETAK EXPERIENCE CENTRES AT: INDIRANAGAR 6366817934 | RAJAJI NAGAR 6366817932 | CHANDRA LAYOUT 9886026943 | MEKRI CIRCLE 7406688896 HRBR LAYOUT 6366817933 | BANSHANKARI 6366817931 | ELECTRONIC CITY 7406688897 | MYSORE 6366948829 | MANGALORE 9606236517 | UDUPI 7204391777 HUBLI 9901698932 | BELGAUM 7349773954 | GULBARGA 9986191777 | DAVENGERE 7259137999 | HASSAN 9743808389 | BIJAPUR 8150008231

COMING SOON TO SHIMOGA: 9880737757

*FAME ಸಬ್ಸಿಡಿಯನ್ನು ಒಳಗೊಂಡಂತೆ ಪರಿಣಾಮಕಾರಿ ಎಕ್ಸ್ ಶೋ ರೂಂ ಬೆಲೆ. ಚೇತಕ್ ಚಿತ್ರವನ್ನು ಕೇವಲ ಜಾಹೀರಾತಿನ ಉದ್ದೇಶಕ್ಕಾಗಿ ಕಂಪ್ಯೂಟರ್ ಗ್ರಾಫಿಕ್ಸ್ ಸಹಾಯದಿಂದ ವಿವರಿಸಲಾಗಿದೆ. ತೋರಿಸಿರುವಂತೆ ವೈಶಿಷ್ಟ್ಯಗಳು, ವಿವರಣೆಗಳು ಮತ್ತು ಪರಿಕರಗಳು ಪ್ರಮಾಣಿತ ಫಿಟ್‌ಮೆಂಟ್‌ನ ಭಾಗವಾಗಿರದೇ ಇರಬಹುದು ಮತ್ತು ಬದಲಾಗಬಹುದು. ನಿಜವಾದ ಬಣ್ಣಗಳು ಮತ್ತು ಅಪ್‌ಹೋಲ್‌ಸ್ಟರಿ ಬದಲಾಗಬಹುದು. ಸವಾರಿ ಮಾಡುವಾಗ ದಯವಿಟ್ಟು RTO ಮಾರ್ಗಸೂಚಿಗಳನ್ನು ಅನುಸರಿಸಿ. **TecPac ಇದರೊಂದಿಗೆ ಲಭ್ಯ. #2 ವರ್ಷಗಳ ಪಾವತಿಸಿದ ವಿಸ್ತೃತ ವಾರಂಟಿಯನ್ನು ಆನ್‌ಲೈನ್‌ನಲ್ಲಿ ಖರೀದಿಸಬಹುದು. ^ವಿನಿಮಯ ಮೌಲ್ಯವು ಉಲ್ಲೇಖಕ್ಕಾಗಿ ಮಾತ್ರ ಅಂದಾಜು ಮಾಡಲಾದ 4 ವರ್ಷ ಹಳೆಯ ಪೆಟ್ರೋಲ್ ದ್ವಿಚಕ್ರ ವಾಹನ ಉತ್ತಮ ಸ್ಥಿತಿಯಲ್ಲಿರುವಂಥ. ಹಣಕಾಸುದಾರನ ಸ್ವಂತ ವಿವೇಚನೆಯಿಂದ ಹಣಕಾಸು.